

ಪ್ರತಿಯೊಬ್ಬ ವಿಶ್ವಾಸಿಯನ್ನು ಯೇಸು ಕ್ರಿಸ್ತನ
ಶಿಷ್ಯನನ್ನಾಗಿ ಪರಿವರ್ತಿಸುವುದು.

# ಅಸ್ತಿವಾರಗಳು

## ಭಾಗ 1

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಮೇ 2017

ಪೂರ್ಣಗೊಳಿಸಿದವರು : ಆಶಿಷ್ ರಾಯಚೂರ್, ಮುಖ್ಯ ಸಭಾಪಾಲಕರು
ವರ್ಣವಿನ್ಯಾಸ : ಬಿಜೋ ಥಾಮಸ್
ದೃಷ್ಟಾಂತಗಳು : ಅಶ್ವಿನಿ ಮ್ಯಾಥಿವ್
ಪುನರ್ ಪರಿಶೀಲಿಸಿದವರು: ರವಿಕುಮಾರ್ ಎಂ.

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Foundations Track - I)

# ಅಸ್ತಿವಾರಗಳು

ಭಾಗ - 1

# ಬಲಿಷ್ಟವಾದ ಅಸ್ತಿವಾರವನ್ನು ಕಟ್ಟುವುದು

ಪ್ರತಿಯೊಬ್ಬ ವಿಶ್ವಾಸಿಯು ಪ್ರೌಢತೆಯ ಸ್ಥಳಕ್ಕೆ ಬರಬೇಕು ಮತ್ತು ತಮ್ಮ ಪ್ರಪಂಚದ ಕೆಲಸದ ಸ್ಥಳಗಳು ಅಥವಾ ಬೇರೆ ಯಾವ ಕ್ಷೇತ್ರದಲ್ಲಿಯಾದರೂ ದೇವರ "ಸೇವಕರುಗಳಾಗಿ" ಬಿಡುಗಡೆಗೊಳ್ಳಬೇಕು. ಪ್ರತಿಯೊಬ್ಬ ವಿಶ್ವಾಸಿಯು ಸೇವಕನಾಗಿದ್ದಾನೆ ಮತ್ತು ದೇವರ ಕಾರ್ಯಗಳನ್ನು ಮಾಡಲು ಮತ್ತು ಈ ಪ್ರಪಂಚಕ್ಕೆ ಕ್ರಿಸ್ತನನ್ನು ಸತ್ಯವಾಗಿ ಪ್ರತಿನಿಧಿಸಲು, ದೇವರಿಂದ ಅಧಿಕಾರ ಕೊಡಲ್ಪಟ್ಟಿದೆ.

ಈ ಅಸ್ತಿವಾರಗಳ ಪಠ್ಯಕ್ರಮದ ಪುಸ್ತಕದ ರೂಪವು, ನಿಮ್ಮನ್ನು ದೇವರ ವಾಕ್ಯದಲ್ಲಿ ಮತ್ತು ಆತ್ಮನಿಂದ, ಬಲಗೊಳಿಸಿ ಅದರಿಂದ ಎಲ್ಲಾ ಒಳ್ಳೆಯ ಕಾರ್ಯಗಳನ್ನು ನೀವು ಮಾಡಲು ಪೂರ್ಣವಾಗಿ ತರಬೇತಿಗೊಳಿಸಲು ರಚಿಸಲ್ಪಟ್ಟಿದೆ.

ಪುಸ್ತಕದ ಭಾಗವು

1. ದೇವರ ಸಹಜ ಗುಣ 2. ರಕ್ಷಣೆ 3. ರಕ್ಷಣೆ ಮತ್ತು ಕ್ಷಮಾಪಣೆಯ ಭರವಸೆ 4. ಶೋಧನೆಯಿಂದ ಹೊರಬರುವುದು 5. ಪ್ರಾರ್ಥನೆ 6. ಸ್ತೋತ್ರ ಮತ್ತು ಆರಾಧನೆ 7. ದೇವರ ವಾಕ್ಯ 8. ಸ್ಥಳೀಯ ಸಭೆ 9. ಸಭೆಯ ಸಂಸ್ಕಾರಗಳು 10. ಕ್ರಿಸ್ತನಲ್ಲಿ 11. ಪವಿತ್ರಾತ್ಮನು 12. ನಂಬಿಕೆ 13. ಆರ್ಥಿಕ ಮನೆವಾರ್ತೆಯವರು 14. ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು. ಇಂತಹ ವಿಷಯಾಂಶಗಳನ್ನು ಈ ಪುಸ್ತಕದ ಪ್ರಥಮ ಭಾಗವು ಒಳಗೊಂಡಿದೆ.

ಈ ಅಧ್ಯಯನ ಕೈ ಪಿಡಿಯು, ದೇವರ ವಾಕ್ಯದಲ್ಲಿ ಹೇಗೆ ಬಲವಾದ ಅಸ್ತಿವಾರವನ್ನು ಕಟ್ಟುವುದು ಎಂಬುದರ ಬಗ್ಗೆ ನೆರವು ನೀಡಲು ಪಾಠಗಳ ಗಳಿಗಳಿಯಾದ ಭಾಗಗಳನ್ನು ಒದಗಿಸುತ್ತದೆ. ಜೊತೆಗೆ ಪ್ರತಿ ಅಧ್ಯಾಯನ ಅನ್ವಯದ ಭಾಗವು ವಿವಿಧ ಅಭ್ಯಾಸಿದ ವಿವಿಧ ವಿಷಯಾಂಶಗಳನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಲು ಮತ್ತು ನಿಮ್ಮ ತಿಳುವಳಿಕೆಯ ಮಾನದಂಡವನ್ನು ತಿಳಿಯಲು ಸಹಾಯ ಮಾಡುತ್ತದೆ.

ಈ ಪುಸ್ತಕವನ್ನು ಒಂದು ಸಾಧನವಾಗಿ ಬಳಸಬಹುದು:

- ಸ್ವಯಂ ಅಧ್ಯಯನ: ಈ ಗಳಿಗಳಿಯಾದ ಪಾಠಗಳು ದೇವರ ವಾಕ್ಯದಲ್ಲಿ ಬಲಿಷ್ಟವಾದ ಅಸ್ತಿವಾರ ಹಾಕಲು ಅಗತ್ಯ ನೆರವು ನೀಡುವುದಲ್ಲದೆ, ಪ್ರತಿ ಅಧ್ಯಾಯನದ ಅನ್ವಯದ ಭಾಗವು ವಿವಿಧ ಅಭ್ಯಾಸಿಸಿದ ವಿವಿಧ ವಿಷಯಾಂಶಗಳನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಲು ಮತ್ತು ನಿಮ್ಮ ತಿಳುವಳಿಕೆಯ ಮಟ್ಟವನ್ನು ತಿಳಿಯಲು ಸಹಾಯ ಮಾಡುತ್ತದೆ.
- ಗುಂಪು ಅಧ್ಯಯನ : ಸಣ್ಣ ಪ್ರಾರ್ಥನ ಗುಂಪು ಅಥವಾ ಸತ್ಯವೇದ ಅಧ್ಯಯನ ಗುಂಪುಗಳಲ್ಲಿ, ಪ್ರತಿ ಸದಸ್ಯನು ಪಾಠಗಳ ಸಮೀಕ್ಷೆಯನ್ನು ಗ್ರಹಿಸಿಕೊಂಡು, ಮುಂಚಿತವಾಗಿ ತಯಾರಿಸಿಗೊಳ್ಳಲು ಅವಕಾಶ ನೀಡುತ್ತದೆ. ವಿಷಯಾಂಶಗಳ ಮೇಲೆ ಬರುವ ಪ್ರಶ್ನೆಗಳನ್ನು ಗುರುತಿಸಿಕೊಳ್ಳುವುದು ಮತ್ತು ಅಧ್ಯಯನದ ಮೂಲಕ ಮತ್ತು ನಿಜ ಜೀವನಕ್ಕೆ ಅನ್ವಯದ ಕುರಿತ ಚರ್ಚೆಯನ್ನು ಸುಗಮವಾಗಿಸುತ್ತದೆ.

## ಆನ್‌ಲೈನ್‌ನಲ್ಲಿ ಅಸ್ತಿವಾರಗಳು

www.apcwo.org / foundations (ಅಸ್ತಿವಾರಗಳು)

ಅಸ್ತಿವಾರಗಳು ಪುಸ್ತಕದ ಪಿ.ಡಿ.ಎಫ್ ನ್ನು ಡೌನ್ ಲೋಡ್ ಮಾಡಿಕೊಳ್ಳಿರಿ ಪ್ರತಿ ಅಧ್ಯಾಯದ ನೇರ ಪ್ರಸಾರದ ವೀಡಿಯೋಗಳನ್ನು ನೋಡಿರಿ ಎಂ.ಪಿ.ತ್ರಿಯನ್ನು ನಿಮ್ಮ ಪುಸ್ತಕ ಕೈಪಿಡಿಯೊಂದಿಗೆ ಡೌನ್ ಲೋಡ್ ಮಾಡಿರಿ. ಎಲ್ಲವು ಉಚಿತವಾಗಿ www.apcwo.org/foundations ನಲ್ಲಿ ದೊರೆಯುತ್ತದೆ.

# ವಿಷಯ ಸೂಚಿ


| | | |
|---|---|---|
| 1. | ದೇವರ ಸಹಜ ಗುಣ | 1 |
| 2. | ರಕ್ಷಣೆ | 15 |
| 3. | ರಕ್ಷಣೆ ಮತ್ತು ಕ್ಷಮಾಪಣೆಗಳ ಭರವಸೆ | 27 |
| 4. | ಶೋಧನೆಯಿಂದ ಹೊರಬರುವುದು | 37 |
| 5. | ಪ್ರಾರ್ಥನೆ | 49 |
| 6. | ಸ್ತೋತ್ರ ಮತ್ತು ಆರಾಧನೆ | 61 |
| 7. | ದೇವರ ವಾಕ್ಯ | 73 |
| 8. | ಸ್ಥಳೀಯ ಸಭೆ | 83 |
| 9. | ಸಭೆಯ ಸಂಸ್ಕಾರಗಳು | 91 |
| 10. | ಕ್ರಿಸ್ತನಲ್ಲಿ | 99 |
| 11. | ಪವಿತ್ರಾತ್ಮನು | 107 |
| 12. | ನಂಬಿಕೆ | 117 |
| 13. | ಆರ್ಥಿಕ ಮನೆವಾರ್ತೆಯವರು | 125 |
| 14. | ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು | 137 |

# 1

# ದೇವರ ಸಹಜ ಗುಣ

ಈ ಪಾಠವು ದೇವರ ಸಹಜ ಗುಣವನ್ನು ಕಲಿಸಲು (ಬೋಧಿಸಲು) ಸಿದ್ಧಗೊಳಿಸಲಾಗಿದೆ. ಆತನ ಸೃಷ್ಟಿ, ಆತನ ವಾಕ್ಯ, ಆತನ ಮನೋಭಾವನೆಗಳು ಮತ್ತು ಆತನ ಹೆಸರುಗಳಲ್ಲಿ ನಮಗೆ ದೇವರ ಸಹಜ ಗುಣವು ಪ್ರಕಟವಾಗುತ್ತದೆ. ದೇವರ ವಾಕ್ಯವು ನಮಗೆ ಆತನ ಸಹಜ ಗುಣವನ್ನು ಪ್ರಕಟಿಸುತ್ತದೆ. ಯೇಸು ಕ್ರಿಸ್ತನು ಮಾಂಸಧಾರಿಯಾಗಿ ಬಂದ ದೇವರ ವಾಕ್ಯವಾಗಿದ್ದಾನೆ–ದೇವರ ಸಹಜ ಗುಣದ ಪರಿಪೂರ್ಣ ಅಭಿವ್ಯಕ್ತತೆ–ದೇವರ ಪ್ರತಿರೂಪ ಯೇಸು ಕ್ರಿಸ್ತನ ವ್ಯಕ್ತಿಯಲ್ಲಿ ದೇವರ ನಿಜ ಚಿತ್ರವು ಕಂಡು ಬರುತ್ತದೆ. ದೇವರ ಕುರಿತ ನಮ್ಮ ಚಿತ್ರವು ದೇವರ ಕಡೆಗೆ ನಮ್ಮ ಭಾವ, ನಿಲುವುಗಳ ಮೇಲೆ ಪರಿಣಾಮ ಬೀರುವುದಲ್ಲದೆ ಜನರ, ಪ್ರಪಂಚದ ಮತ್ತು ದೆವ್ವದ ಕಡೆಗೆ ಇರುವ ನಮ್ಮ ಭಾವ, ನಿಲುವುಗಳ ಮೇಲೆಯೂ ಪರಿಣಾಮವುಂಟು ಮಾಡುತ್ತದೆ.]

## "ದೇವರ ಸಹಜ ಗುಣ" ಎಂಬ ಪದದಿಂದ ನಾವು ಏನು ಅರ್ಥೈಸಿಕೊಳ್ಳುತ್ತೇವೆ?

- ದೇವರ ಸಹಜ ಗುಣವು ಆತನ ವಿಶೇಷ ಗುಣಗಳು, ಗುಣಲಕ್ಷಣಗಳು, ಸಹಜ ಧರ್ಮ ಮತ್ತು ಲಕ್ಷಣಗಳು. ಮೂಲತಃ ಆತನು ಯಾರಾಗಿದ್ದಾನೆ, ಆತನು ಏನು ಮಾಡುತ್ತಾನೆ ಎಂಬುವು.
- ದೇವರ ಸಹಜ ಗುಣವು ಆತನ ಗುಣಲಕ್ಷಣಗಳಲ್ಲಿ ಮತ್ತು ಆತನ ಹೆಸರುಗಳಲ್ಲಿ ಪ್ರಕಟವಾಗುತ್ತದೆ.
- ಸಮಸ್ತ ಸೃಷ್ಟಿಯು ದೇವರು ಯಾರಾಗಿದ್ದಾನೆ ಎಂದು ಪ್ರಕಟಿಸಿ ಆತನ ಮಹಿಮೆಯನ್ನು ಹೇಳುತ್ತದೆ.

  ರೋಮಾಪುರದವರಿಗೆ 1:20
  **ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯ ಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ.**

  ಕೀರ್ತನೆಗಳು 19:1
  **ಆಕಾಶವು ಆತನ ಪ್ರಭಾವವನ್ನು ಪ್ರಚುರ ಪಡಿಸುತ್ತದೆ; ಗಗನವು ಆತನ ಕೈ ಕೆಲಸವನ್ನು ತಿಳಿಸುತ್ತದೆ**

- ದೇವರ ವಾಕ್ಯವು ನಮಗೆ ಆತನ ಸಹಜ ಗುಣವನ್ನು ತಿಳಿಸುತ್ತದೆ.
- ಯೇಸು ಕ್ರಿಸ್ತನ, ಮಾಂಸಧಾರಿಯಾದ ವಾಕ್ಯ–ದೇವರ ಸಹಜ ಗುಣದ ಪರಿಪೂರ್ಣ ಅಭಿವ್ಯಕ್ತತೆ–ದೇವರ ಪ್ರತಿರೂಪ ದೇವರ ನಿಜ ಚಿತ್ರವು ಯೇಸು ಕ್ರಿಸ್ತನ ವ್ಯಕ್ತಿಯಲ್ಲಿ ಪ್ರಕಟವಾಗುತ್ತದೆ.

  ಯೋಹಾನ 1:1,14
  **ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು ಆ ವಾಕ್ಯವೆಂಬಾತನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆನು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು.**

  ಇಬ್ರಿಯರಿಗೆ 1:3
  **ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪ ವಿಶುದ್ಧಿ ಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು**

- ದೇವರ ವಾಕ್ಯ ಮತ್ತು ಆತನ ಕೆಲಸಗಳು ಯಾವಾಗಲೂ ಆತನ ವಾಕ್ಯದೊಂದಿಗೆ ಹೊಂದಿಕೆಯುಳ್ಳದ್ದಾಗಿರುತ್ತವೆ – ದೇವರು ಯಾರಾಗಿದ್ದಾನೋ ಅದಕ್ಕೆ ವಿರುದ್ಧವಾದದ್ದನ್ನು ಆತನು ಎಂದೂ ಹೇಳುವುದಿಲ್ಲ ಹಾಗೂ ಮಾಡುವುದಿಲ್ಲ. ಹೀಗಾಗಿ ಯಾವುದಾದರೂ ಒಂದು ವಿಷಯವನ್ನು ನಿಜವಾಗಿ ದೇವರಿಂದ ಬಂದದ್ದು ಎಂದು ತಿಳಿಯಲು ಮುಖ್ಯ ಪರೀಕ್ಷೆಯು– ಅದು ದೇವರ ಸಹಜ ಗುಣಕ್ಕೆ ಪರೀಕ್ಷೆಯು– ಅದು ದೇವರ ಸಹಜ ಗುಣಕ್ಕೆ ಸರಿಹೊಂದುತ್ತದೇ ಎಂದು ನೋಡುವುದಾಗಿದೆ.

  "ನೀವು ದೇವರ ಕುರಿತು ಏನು ತಿಳಿದಿದ್ದೀರೆಂದು ನೆನಸುತ್ತಿರೋ, ಅದನ್ನು ಯೇಸುಕ್ರಿಸ್ತನ ವ್ಯಕ್ತಿಯಲ್ಲಿ ನೀವು ಕಾಣದಿದ್ದರೆ, ನಿಮಗೆ ಅದನ್ನು ಪ್ರಶ್ನಿಸಲು ಕಾರಣವಿದೆ" – ಬಿಲ್ ಜಾನ್‌ಸನ್

  "ಯೇಸು ಕ್ರಿಸ್ತನು ಪರಿಪೂರ್ಣ (ದೋಷವಿಲ್ಲದ) ವೇದ ಶಾಸ್ತ್ರಿ" – ಬಿಲ್ ಜಾನ್‌ಸನ್

**ದೇವರು ನಿಜವಾಗಿ ಯಾರಾಗಿದ್ದಾನೆ ಎಂದು ನೋಡಿ ಆತನು ಯಾರಾಗಿದ್ದಾನೋ ಅದಕ್ಕಾಗಿ ಆತನನ್ನು ಆರಾಧಿಸಿರಿ.**

**ದೇವರ ಕುರಿತ ನಿಮ್ಮ ಚಿತ್ರವು ಜೀವನದ ಅನುಭವಗಳಿಂದ ಅಥವಾ ಜನರ ಅಭಿಪ್ರಾಯಗಳಿಂದ ಕಳಂಕಿತವಾಗಲು ಬಿಡಬೇಡಿರಿ.**

- ದೇವರ ಕುರಿತ ನಮ್ಮ ಚಿತ್ರವು ದೇವರ ಕಡೆಗೆ ನಮ್ಮ ಭಾವ, ನಿಲುವುಗಳ ಮೇಲೆ ಪ್ರಭಾವ ಬೀರುವುದಲ್ಲದೆ (ನಾವು ಪ್ರಾರ್ಥಿಸುವುದರ ಕಡೆಗೆ ಕೂಡ) ಜನರ, ಪ್ರಪಂಚದ ಮತ್ತು ದೆವ್ವದ ಕಡೆಗೆ ಇರುವ ನಮ್ಮ ಭಾವ, ನಿಯಮಗಳ ಮೇಲೆಯೂ ಪರಿಣಾಮವುಂಟು ಮಾಡುತ್ತದೆ.


**ದೇವರು ಯಾರೆಂಬ ಅತ್ಯಂತ ಶ್ರೇಷ್ಠ ಪ್ರಕಟನೆಯು ಯೇಸು ಕ್ರಿಸ್ತನೆಂಬ ವ್ಯಕ್ತಿಯಾಗಿದ್ದಾನೆ**

## ದೇವರ ಸಹಜ ಧರ್ಮಗಳು ಆತನ ಹೆಸರನ್ನು ಪ್ರಕಟಿಸುತ್ತವೆ

### ದೇವರು ಸೃಷ್ಟಿಕರ್ತನು ಮತ್ತು ನಿತ್ಯನು

ಆದಿಕಾಂಡ 21:33
**ಅಬ್ರಹಾಮನು ಬೇರ್ಷೆಬದಲ್ಲಿ ಪಿಚುಲ ವೃಕ್ಷವನ್ನು ನೆಟ್ಟು ನಿತ್ಯ ದೇವರಾದ ಯೆಹೋವನ ಹೆಸರನ್ನು ಹೇಳಿಕೊಂಡು ಆರಾಧಿಸಿದನು.**

ಕೀರ್ತನೆಗಳು 90:2
**ಬೆಟ್ಟಗಳು ಉಂಟಾಗುವದಕ್ಕಿಂತ, ಭೂಮಿಯೂ ಅದರ ದೇಶಗಳೂ ನಿರ್ಮಾಣವಾಗುವದಕ್ಕಿಂತ ಮುಂಚಿನಿಂದ ಯುಗಯುಗಾಂತರಗಳಲ್ಲಿಯೂ ನೀನೇ ದೇವರು.**




- ದೇವರನ್ನು ಯಾರು ಸೃಷ್ಟಿಸಲಿಲ್ಲ. ಆತನು ಯಾವಾಗಲೂ ಇದ್ದನು. ಅತನು ಸ್ವಯಂ ಇರುವಾತನು ಮತ್ತು ಸ್ವಯಂ ಸಂಪೂರ್ಣನು, ಯಾವುದರ ಮೇಲೂ ಆಧರಿಸದೆ ಇರುವಾತನು. ಒಂದು ಕಾಲಗತಿಯಲ್ಲಿ ಆತನು ನಮ್ಮನ್ನು ಸೃಷ್ಟಿಸಲು ತೀರ್ಮಾನಿಸಿ, ಅಂದಿನಿಂದ ಯಾವಾಗಲೂ ನಮ್ಮೊಂದಿಗೆ ಜೀವಿಸುತ್ತಾನೆ.
- ನಾವಾದರೋ ಆತನಂತೆ ಇರದೆ, ಎಲ್ಲರೂ ಸೃಷ್ಟಿಸಲ್ಪಟ್ಟ ನಮಗೆ ಒಂದು ಆರಂಭವಿದೆ.
- ಎಲ್ಲವುಗಳೂ ಆತನಲ್ಲಿ, ಆತನ ಮೂಲಕವಾಗಿ ಆತನಿಗಾಗಿ ಸೃಷ್ಟಿಸಲ್ಪಟ್ಟವು.

ಕೊಲೊಸ್ಸೆಯವರಿಗೆ 1:15-17
**ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ. ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವು ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕೂ ಮೊದಲು ಇದ್ದವನು, ಆತನು ಸಮಸ್ತಕ್ಕೂ ಆಧಾರಭೂತನು.**

1 ತಿಮೊಥೆಯನಿಗೆ 1:17
**ಸರ್ವಯುಗಗಳ ಅರಸನೂ ನಿರ್ಲಯನೂ ಅದೃಶ್ಯನೂ ಆಗಿರುವ ಏಕ ದೇವರಿಗೆ ಯುಗಯುಗಾಂತರಗಳಲ್ಲಿಯೂ ಮಾನ ಪ್ರಭಾವಗಳಿರಲಿ ಆಮೆನ್.**

### ಆತನು ಆತ್ಮ-ವ್ಯಕ್ತಿ


ಯೋಹಾನ 4:24
**ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು.**

**ನಾವು ಆತ್ಮಿಕ ವ್ಯಕ್ತಿಗಳಾಗಿದ್ದು ಇದರಿಂದಾಗಿ ಆತ್ಮಸ್ವರೂಪಿಯಾದ ದೇವರೊಂದಿಗೆ ಸಂಬಂಧಿಸಲು ಸಾಧ್ಯವಾಗಿದೆ.**

ಕೀರ್ತನೆಗಳು 139:7-10
**ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ? ಮೇಲಣ ಲೋಕಕ್ಕೆ ಏರಿ ಹೋದರೆ ಅಲ್ಲಿ ನೀನಿರುತ್ತೀ; ಪಾತಾಳಕ್ಕೆ ಹೋಗಿ ಮಲಗಿ ಕೊಂಡೇನಂದರೆ ಅಲ್ಲಿಯೂ ನೀನಿರುವ ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋಗಿ ಸಮುದ್ರದ ಕಟ್ಟಕಡೆಯಲ್ಲಿ. ವಾಸಮಾಡೇನೆಂದರೆ ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವದು; ನಿನ್ನ ಬಲಗೈ ನನ್ನನ್ನು ಹಿಡಿದಿರು.**

- ದೇವರಿಗೆ ನಮ್ಮಂತೆ ಒಂದು ಸಹಜ ಪ್ರಾಕೃತಿಕ ಮರ್ತ್ಯ ದೇಹವಿಲ್ಲ.

- ಹಾಗಿದ್ದಾಗ್ಯೂ, ಆತನು ಆಕಾರವಿಲ್ಲದ, ಘನಲೋಳೆ (ಅಂಬಲಿ) ಯಂತಿರುವ, ವ್ಯಕ್ತಿ ಸ್ವರೂಪವಿಲ್ಲದ, ಆತ್ಮ ಶಕ್ತಿಯಲ್ಲ. ಆತನಿಗೆ ನಮಗಿರುವಂಥ ಒಂದು ದೇಹವಿದೆ ಎಂದು ಸತ್ಯವೇದ ಹೇಳುತ್ತದೆ. ಆತನಿಗೆ ಕೈ ಕಣ್ಣು, ಕಿವಿ, ಕಾಲುಗಳೆಲ್ಲವೂ ಇದೆ. ಆತನಿಗೆ ನಮ್ಮಂತೆ ಭಾವಗಳೂ ಮನೋ ಭಾವಗಳೂ ಇದೆ- ಆತನು ಪ್ರೀತಿಸುತ್ತಾನೆ, ಚಿಂತಿಸುತ್ತಾನೆ, ನಗುತ್ತಾನೆ, ಅಳುತ್ತಾನೆ, ಆತನು ಸಿಟ್ಟುಗೊಳ್ಳುತ್ತಾನೆ. ಕ್ಷಮಿಸುತ್ತಾನೆ. ಆತನು ಒಬ್ಬ ವ್ಯಕ್ತಿ ಹಾಗಾಗಿ ಆತನು ಒಬ್ಬ ವೈಯಕ್ತಿಕ ದೇವರು.
- ಹೀಗಾಗಿ ದೇವರು ಸಂಬಂಧವನ್ನು ಅಪೇಕ್ಷಿಸುತ್ತಾನೆ. ಆತನು ತಂದೆ ಎಂದು ವಿಶ್ವಾಸಿಗಳಾದ ನಮ್ಮನ್ನು ಮಕ್ಕಳು ಮತ್ತು ಆತನ ಕುಟುಂಬದ ಒಂದು ಭಾಗ ಎಂದು ತಿಳಿಯುತ್ತಾನೆ.
- ಕೆಲವೊಮ್ಮೆ ವ್ಯವಹರಿಸಲು (ಏನನ್ನಾದರೂ ತಿಳಿಸಲು) ದೈಹಿಕ ರೂಪವನ್ನು ಪಡೆಯುತ್ತಾನೆ ಎಂದು ಬೈಬಲ್‌ನ ದಾಖಲೆಗಳು ಇವೆ. (ವೇದ ಶಾಸ್ತ್ರಜ್ಞರು ಇದನ್ನು ದೇವರ ಸಾಕ್ಷಾತ್ಕಾರ ಎಂದು ಕರೆಯುತ್ತಾರೆ. ಉದಾಹರಣೆ: ಮೋಶೆ (ವಿಮೋಚನಕಾಂಡ ಅಧ್ಯಾಯಗಳು 33.34).




## ಆತನು ಸರ್ವ ಶಕ್ತನು (ಆತನು ಬಲವುಳ್ಳವನು)

ದೇವರ ಸರ್ವಶಕ್ತತೆಯು ಆತನ ಮಾತಿನಲ್ಲಿ ನುಡಿ ವಾಕ್ಯದಲ್ಲಿ ಕ್ರೋಢೀಕೃತವಾಗಿದೆ. ಆತನ ಮಾತು ಶಕ್ತಿಯಾಗಿದೆ.

ಲೂಕ 1:37

**ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ. (ದೇವರಿಗೆ ಯಾವುದೂ ಅಸಾಧ್ಯವಲ್ಲ).**

- ದೇವರ ಶಕ್ತಿಗೆ ಮಿತಿಯೇ ಇಲ್ಲ. ಆದಾಗ್ಯೂ ಆತನು ಕೆಲವು ವಿಷಯಗಳನ್ನು ಮಾಡುವುದಿಲ್ಲ ಎಂದು ಪ್ರಕಟಿಸಿದ್ದಾನೆ. ಉದಾಹರಣೆಗಾಗಿ, ಆತನು ಎಂದೂ ಅಪನಂಬಿಗಸ್ತನಾಗುವುದಿಲ್ಲ. ಎಂದು ಸುಳ್ಳು ಹೇಳುವುದಿಲ್ಲ. ಪ್ರೀತಿಸುವುದನ್ನು ಎಂದೂ ಬಿಡುವುದಿಲ್ಲ ಎಂದು ಪ್ರಕಟ ಪಡಿಸಿದ್ದಾನೆ. ಇವು ಆತನ ಗುಣ ನಡತೆಗಳಿಗೂ, ಸಹಜಗುಣಕ್ಕೂ ವಿರುದ್ಧವಾಗಿರುವುದರಿಂದ ಆತನು ಇವುಗಳನ್ನು ಮಾಡಲಾರನು.
- ದೇವರು ಯಾವಾಗಲೂ ಶಕ್ತನು.
- ಆತನ ಶಕ್ತಿಯು ಆತನ ಮಾತಿನ (ವಾಕ್ಯದ ನುಡಿಯ) ಮೂಲಕ ಬಿಡುಗಡೆಯಾಗುತ್ತದೆ.

ಇಬ್ರಿಯರಿಗೆ 4:12

**ದೇವರ ವಾಕ್ಯವು ಸಜೀವವಾದದ್ದು, ಕಾರ್ಯ ಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು, ಹಾಗೂ ಪ್ರಾಣ ಆತ್ಮಗಳನ್ನೂ ಕೀಲು ಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದ್ದು, ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ.**

## ಆತನು ಸರ್ವಜ್ಞಾನಿ (ಎಲ್ಲವನ್ನು ತಿಳಿದಾತನು)

ಕೀರ್ತನೆಗಳು 147:5

**ನಮ್ಮ ಕರ್ತನು ದೊಡ್ಡವನು ಪರಾಕ್ರಮಿಯೂ ಆಗಿದ್ದಾನೆ, ಆತನ ಜ್ಞಾನವು ಅಪರಿಮಿತವಾಗಿದೆ.**

ಯೋಬನು 37:14-18

**ಯೋಬನೇ, ಇದನ್ನು ಕೇಳು ! ಸುಮ್ಮನೆ ನಿಂತು ದೇವರ ಅದ್ಭುತ ಕಾರ್ಯಗಳನ್ನು ಧ್ಯಾನಿಸು. ದೇವರು ಇವುಗಳಿಗೆ ನಿಯಮ ಮಾಡಿ ತನ್ನ ಮೇಘದ ಸಿಡಿಲು ಹೊಳೆಯ ಮಾಡುವ ರೀತಿ ನಿನಗೆ ಗೊತ್ತಿದೆಯೋ? ಮೋಡಗಳ ತೂಗಾಟವನ್ನು ಜ್ಞಾನ ಪೂರ್ಣನ ಅದ್ಭುತ ಕಾರ್ಯಗಳನ್ನೂ ತಿಳಿದು ಕೊಂಡಿದ್ದೀಯಾ? ಭೂಮಿಯು ತೆಂಕಣಗಾಳಿಯ ದೆಸೆಯಿಂದ ಸ್ತಬ್ಧವಾಗಿರುವ ಸಮಯದಲ್ಲಿ ಉಡುಪಿನ ಬಿಸಿಯನ್ನು ಅನುಭವಿಸಿದವನೇ, ತಗಡು ಬಡಿದು ಎರಕದ ದರ್ಪಣದಷ್ಟು ಗಟ್ಟಿಯಾಗಿರುವ ಆಕಾಶಮಂಡಲವನ್ನು ಆತನ ಹಾಗೆ ನಿರ್ಮಿಸ ಬಹುದೇ?**

ಯೆಶಾಯ 46:9,10

**ಪುರಾತನ ಹಳೇ ಸಂಗತಿಗಳನ್ನು ಜ್ಞಾಪಿಸಿಕೊಳ್ಳಿರಿ; ನಾನೇ ದೇವರು, ಇನ್ನು ಯಾರೂ ಅಲ್ಲ; ನಾನೇ ಪರಮ ದೇವರು, ನನಗೆ ಸರಿಸಮಾನರಲ್ಲ. ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ, ನನ್ನ ಸಂಕಲ್ಪವು ನಿಲ್ಲುವದು ನನ್ನ ಇಷ್ಟಾರ್ಥವನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನಕಾಲದಲ್ಲಿಯೇ ಅರುಹಿದ್ದೇನೆ.**

## ಆತನು ಎಲ್ಲಾ ಕಡೆಗಳಲೂ ಇದ್ದಾನೆ - ಸರ್ವವ್ಯಾಪಿ.

ಯೆರೆಮೀಯ 23:23, 24

**ಯೆಹೋವನು ಇಂತೆನ್ನುತ್ತಾನೆ - ನಾನು ಸಮೀಪದಲ್ಲಿ ಮಾತ್ರ ಇರುವ ದೇವರೋ? ದೂರದಲ್ಲಿಯೂ ಇರುವವನಲ್ಲವೋ? ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತಸ್ಥಳಗಳಲ್ಲಿ ತನ್ನನ್ನು ಮರೆಮಾಡಿ ಕೊಂಡಾನೇ? ನಾನು ಭೂಮ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನಲ್ಲವೇ.**

ಕೀರ್ತನೆಗಳು 139:7

**ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ?**

ಅಪೊಸ್ತಲರ ಕೃತ್ಯಗಳು 17:24

**ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನೂ ಉಂಟುಮಾಡಿದ ದೇವರು ಭೂಮ್ಯಾಕಾಶಗಳ ಒಡೆಯನಾಗಿರುವದರಿಂದ ಆತನು ಕೈಯಿಂದ ಕಟ್ಟಿರುವ ಗುಡಿಗಳಲ್ಲಿ ವಾಸಮಾಡುವವನಲ್ಲ.**

## ಆತನು ತ್ರೈಯೇಕನು

ಯೋಹಾನ 14:26

**ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿ ಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲದನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು.**

- ದೇವರು ಹೇಗೆ ಒಬ್ಬನಲ್ಲಿ ಮೂವರು ವ್ಯಕ್ತಿಗಳು ಎಂದು ಕ್ರಮವಾದ ವಿವರಣೆ ನೀಡದೆ ಸತ್ಯವೇದವು ಈ ಸತ್ಯವನ್ನು ನಮ್ಮ ಮುಂದಿಡುತ್ತದೆ.
- ತಂದೆಯಾದ ದೇವರು, ಮಗನಾದ ದೇವರು ಮತ್ತು ಆತ್ಮನಾದ ದೇವರ ಎಲ್ಲರು, ಸರಿಸಮಾನರು ಮತ್ತು ಆರಾಧಿಸಲ್ಪಡತಕ್ಕವರು.
- ದೈವತ್ವದ ಮೂವರು ವ್ಯಕ್ತಿಗಳು ಐಕ್ಯತೆಯಲ್ಲಿ ಮತ್ತು ಸಾಮರಸ್ಯತೆಯಲ್ಲಿ ಒಬ್ಬನೇ ಆಗಿ ಕೆಲಸ ಮಾಡುತ್ತಾರೆ.

ಕೀರ್ತನೆಗಳು 104:30

**ನೀನು ಜೀವಶ್ವಾಸವನ್ನು ಊದಲು ಅವು ಹೊಸದಾಗಿ ಹುಟ್ಟುತ್ತವೆ. ಭೂಮಿಯನ್ನು ನೂತನ ಪಡಿಸುತ್ತಿರುತ್ತೀ.**

ಯೋಬನು 33:4

**ನಾನು ದೇವರಾತ್ಮನಿಂದಲೇ ನಿರ್ಮಿತನಾಗಿದ್ದೇನೆ, ನನ್ನ ಜೀವವು ಸರ್ವಶಕ್ತನ ಶ್ವಾಸದಿಂದುಂಟಾಗಿದೆ.**

**ತಂದೆಯು ದೈವತ್ವದ ಜ್ಞಾನವನ್ನು ಪ್ರತಿನಿಧಿಸುತ್ತಾನೆ.ಆತನು ಮನಸ್ಸಿನಲ್ಲಿ ಭಾವಿಸಿ ರೂಪಿಸುತ್ತಾನೆ.**

**ಮಗನು ದೇವತ್ವದ ಅಧಿಕಾರವನ್ನು ಪ್ರತಿನಿಧಿಸುತ್ತಾನೆ. ಆತನು ಅಪ್ಪಣೆ ಕೊಡುತ್ತಾನೆ ಅಧಿಕಾರ ನಡಿಸುತ್ತಾನೆ.**

**ಆತ್ಮನು ದೈವತ್ವದ ಬಲವನ್ನು ಪ್ರತಿ ನಿಧಿಸುತ್ತಾನೆ. ಆತನು ಸೃಷ್ಟಿಸುತ್ತಾನೆ.**

- ಯೇಸು ಮತ್ತು ಪರಿಶುದ್ಧಾತ್ಮನು ಇಳಿದು ಬರುವುದು.

ಮತ್ತಾಯ 3:16, 17

**ಯೇಸು ಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವುದನ್ನು ಕಂಡನು. ಆಗ - ಈತನು ಪ್ರಿಯನಾಗಿರುವ ನನ್ನ ಮಗನು."ಈತನನ್ನು ನಾನು ಮೆಚ್ಚಿದ್ದೇನೆ" ಎಂದು ಆಕಾಶವಾಣಿ ಆಯಿತು.**

- ತಂದೆ + ಮಗ + ಪರಿಶುದ್ಧಾತ್ಮ

ಯೋಹಾನ 16:15

**ತಂದೆಗೆ ಇರುವದೆಲ್ಲಾ ನನ್ನದು; ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದನು.**

- ಎಲ್ಲಾ ವಿಶ್ವಾಸಿಗಳಗೋಸ್ಕರ ಯೇಸು ತಂದೆಗೆ ಪ್ರಾರ್ಥಿಸಿದನು.

ಯೋಹಾನ 17:21
**ನೀನು ನನ್ನನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ.**

### ಆತನು ಅನಂತನು

ಕೀರ್ತನೆಗಳು 147:5
**ನಮ್ಮ ಕರ್ತನು ದೊಡ್ಡವನೂ ಪರಾಕ್ರಮಿಯೂ ಆಗಿದ್ದಾನೆ; ಆತನ ಜ್ಞಾನವು ಅಪರಿಮಿತವಾಗಿದೆ.**

ರೋಮಾಪುರದವರಿಗೆ 1:20
**ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿಗೆ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ.**

- ಮಿತಿಯಿಲ್ಲದ: ಆತನನ್ನು ಅಳೆಯಲು, ಹಿಡಿದಿಡಲು ಅಥವಾ ಸಂಪೂರ್ಣವಾಗಿ ತಿಳಿಯುವುದಕ್ಕಾಗದು.
- ಪರಮನು: ಆತನು ಎಲ್ಲರಿಗಿಂತಲೂ ಮೇಲಾದ ವ್ಯಕ್ತಿಯಲ್ಲ, ಆತನು ಪರಮ ವ್ಯಕ್ತಿ.
- ನಿತ್ಯನು: ಆತನು ಯಾವಾಗಲೂ ಇದ್ದಾತನು ಮತ್ತು ಯಾವಾಗಲೂ ಇರುವಾತನು.

## ಆತನು ಪರಿಶುದ್ಧನು ಮತ್ತು ನೀತಿವಂತನು

- ದೇವರ ಸರ್ವಸಂಪೂರ್ಣತೆಯು ನಮ್ಮ ನೈತಿಕ ಗುಣಲಕ್ಷಣಗಳಿಗೂ ಮತ್ತು ನಮ್ಮ ಜೀವನ ಶೈಲಿಗೆ ಮಟ್ಟವಾಗದೆ. ನಮ್ಮ ನೈತಿಕ ನಿಯಮಗಳು ಆತನ ಪರಿಶುದ್ಧತೆಯ ಮಟ್ಟವನ್ನು ಅನುಸರಿಸತಕ್ಕದ್ದು.

1 ಪೇತ್ರನು 1:16
**"ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು" ಎಂದು ಬರೆದಿದ್ದೆಯಲ್ಲಾ**

ಇಬ್ರಿಯ ಪರಿಶುದ್ಧ "ಖ್ವದಾಸ್" – ಸಾಮಾನ್ಯ ಉಪಯೋಗಕ್ಕೆ ಬಳಸದೆ ವಿಶೇಷ ಎಚ್ಚರಿಕೆಯಿಂದ ಕಾಣುವಂಥದ್ದು.

- ಯಾವ ರೀತಿಯ ಕೆಟ್ಟದ್ದೂ ಆತನನ್ನು ಸ್ಪರ್ಶಿಸಲಾರದು ಹಾಗೂ ಆತನಿಗೆ ಕಳಂಕವನ್ನೂ ಉಂಟು ಮಾಡಲಾರದು.

ಇಬ್ರಿಯರಿಗೆ 1:13
**ಆದರೆ ದೇವದೂತರಲ್ಲಿ ಯಾವನ ವಿಷಯದಲ್ಲಿಯಾದರೂ: "ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು" ಎಂಬದಾಗಿ ಎಂದಾದರೂ ಹೇಳಿದ್ದಾನೋ?**

ಯಾಕೋಬನು 1:13
**ಯಾವಾನಾದರೂ ಪಾಪ ಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ – "ಈ ಪ್ರೇರಣೆಯು ನನಗೆ ದೇವರಿಂದುಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ: ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ.**

- ದೇವರು ನೀತಿನ್ಯಾಯಗಳಲ್ಲಿ ಆನಂದಿಸುತ್ತಾನೆ.

ಯೆರೆಮೀಯ 9:24
**"ಹೆಚ್ಚಳ ಪಡುವವನು ತಾನು ನನ್ನನ್ನು ತಿಳಿದು ನಾನು ಲೋಕದಲ್ಲಿ ಪ್ರೀತಿ ನೀತಿನ್ಯಾಯಗಳನ್ನು ತೋರ್ಪಡಿಸುವ ಯೆಹೋವನಾಗಿರುವೆನು ಎಂದು ಗ್ರಹಿಸಿಕೊಂಡಿದ್ದೇನೆ ಎಂಬುದಕ್ಕೆ ಹೆಚ್ಚಳ ಪಡಲಿ; ಪ್ರೀತಿ ನೀತಿ ನ್ಯಾಯಗಳೇ ನನಗೆ ಆನಂದವೆಂದು ಯೆಹೋವನು ಅನ್ನುತ್ತಾನೆ.**

- ಆತನ ಸ್ವಂತ ನಿಯಮಕ್ಕನುಸಾರವಾಗಿ ಇರುವುದನ್ನೇ ಆತನು ಮಾಡುತ್ತಾನೆ ಮತ್ತು ಇತರರೂ ಯಾವುದು ಆತನ ಸ್ವಂತ ನಿಯಮಕ್ಕನುಸಾರವಾಗಿ ಹಾಗೆಯೇ ಮಾಡಬೇಕೆಂದು ಆತನು ಆಜ್ಞಾಪಿಸುತ್ತಾನೆ.



ಆದಿಕಾಂಡ 18:25
**"ಆ ರೀತಿಯಾಗಿ ದುಷ್ಟರಿಗೂ ಶಿಷ್ಟರಿಗೂ ಭೇದಮಾಡದೆ ದುಷ್ಟರ ಸಂಗಡ ನೀತಿವಂತರನ್ನೂ ಸಂಹರಿಸುವದು ನಿನ್ನಿಂದ ಎಂದಿಗೂ ಆಗಬಾರದು; ಸರ್ವಲೋಕಕ್ಕೆ ನ್ಯಾಯ ತೀರಿಸುವವನು ನ್ಯಾಯವನ್ನೇ ನಡಿಸುವನಲ್ಲವೇ?'**

## ಆತನು ಸಾರ್ವಭೌಮನು

- ಸಾರ್ವಭೌಮನಾಗಿ – ಆತನು ಸರ್ವೋಚ್ಛ ಯಜಮಾನನು, ರಾಜನು, ಕರ್ತನು ಮತ್ತು ಎಲ್ಲವೂ ಆತನ ಅಧಿಕಾರಕ್ಕೆ ಒಳಗಾಗಿ ಆತನ ಮುಂದೆ ಅಡ್ಡ ಬೀಳುತ್ತದೆ.

  1 ತಿಮೊಥೆಯನಿಗೆ 1:17
  **ಸರ್ವಯುಗಗಳ ಅರಸನು ನಿರ್ಲಯನೂ ಅದೃಶ್ಯನೂ ಆಗಿರುವ ಏಕ ದೇವರಿಗೆ ಯುಗಯುಗಾಂತರಗಳಲ್ಲಿಯೂ ಮಾನ ಪ್ರಭಾವಗಳಿರಲಿ ಆಮೆನ್.**

- ಆತನ ಸೌರ್ವಭೌಮತ್ವದಲ್ಲಿ – ಮನುಷ್ಯನಿಗೆ ಇಚ್ಛಾಸ್ವಾತಂತ್ರವನ್ನು ಕೊಟ್ಟು ಮನುಷ್ಯನ ಆಯ್ಕೆಯನ್ನು ಒಪ್ಪಿಕೊಳ್ಳುವ ಆಯ್ಕೆ ಮಾಡಿದ್ದಾನೆ.
- ದೇವರ ಸಾರ್ವಭೌಮತ್ವದ ಸುಭದ್ರತೆಯಿಂದಾಗಿ ಆತನು ಅಧಿಕಾರವನ್ನು ಇತರರಿಗೆ ಕೊಡಲು ಅಂಜುವುದಿಲ್ಲ. ಮನುಷ್ಯನ " ಇಚ್ಛಾ ಸ್ವಾತಂತ್ರದ" ಕುರಿತು ವಿಷಯದಲ್ಲಿ ದೇವರು ಅಧಿಕಾರ ಬಿಟ್ಟುಕೊಟ್ಟಿದ್ದಾನೆ.
- ಮನುಷ್ಯನ ಇಚ್ಛಾ ಸ್ವಾತಂತ್ರ ಮತ್ತು ಅದರಿಂದಾಗಿ ಅವನು ಮಾಡುವ ಆಯ್ಕೆಗಳು, ದೇವರ ಉದ್ದೇಶಗಳಿಗೆ ವಿರುದ್ಧವಾಗಿದ್ದರೂ, ಅವು ಆತನ ಸಾರ್ವಭೌಮತ್ವವನ್ನು ಎಂದು ಕಡಿಮೆ ಮಾಡುವುದಿಲ್ಲ ಅಥವಾ ನಿರ್ಬಲಗೊಳಸುವುದಿಲ್ಲ. ದೇವರು ಇನ್ನೂ ಅಧಿಕಾರ ಸ್ಥಾನದಲ್ಲೋ ಇದ್ದಾರೆ.

**ದೇವರು ಸಾರ್ವಭೌಮತ್ವದಲ್ಲಿ ನಮ್ಮ ಜೀವನಗಳಿಗೆ ಬರುವಾಗ ಆತನ ಅಧಿಕಾರವನ್ನು ಬಿಟ್ಟುಕೊಡುವಷ್ಟು ಸುಭದ್ರ ನಾಗಿದ್ದಾನೆ ಅಧಿಕಾರ ವಹಿಸುವ ಸಾಮರ್ಥ್ಯವನ್ನು ನಮ್ಮ ಕೈಗೆ ಕೊಟ್ಟಿದ್ದಾನೆ ಇದನ್ನೇ 'ಇಚ್ಛಾಸ್ವಾತಂತ್ರ' ಎನ್ನುವುದು!**

**ದೇವರು ನಮ್ಮ ಆಯ್ಕೆಯನ್ನು ಗೌರವಿಸುತ್ತಾನೆ!**

- ಹಾಗಿದ್ದಾಗ್ಯೂ ಮನುಷ್ಯನ ಆಯ್ಕೆಗಳು ಅವುಗಳದೇ ಪರಿಣಾಮವುಳ್ಳವುಗಳಾಗಿವೆ.

## ಆತನು ನ್ಯಾಯವಂತನು

- ದೇವರು ಪ್ರತಿಯೊಬ್ಬ ವ್ಯಕ್ತಿಯ ಆಯ್ಕೆಗಳನ್ನು ಗೌರವಿಸುತ್ತಾನೆ ಮತ್ತು ಆ ಆಯ್ಕೆಗಳಿಗೆ ಮತ್ತು ಕ್ರಿಯೆಗಳಿಗೆ ಅನುಸಾರವಾಗಿ ಪ್ರತಿಫಲ ಕೊಡುತ್ತಾನೆ. ಆತನು ಯಾರನ್ನೂ ಗೌರವಿಸುವುದಿಲ್ಲ. ಹಾಗೂ ಯಾರನ್ನೂ ಭೇದ ಮಾಡುವುದಿಲ್ಲ.

**ದೇವರು ನ್ಯಾಯವಂತನು ಮತ್ತು ನ್ಯಾಯ ಸಮರ್ಥಿಸುವಾತನು.**

- ದೇವರ ನ್ಯಾಯವು ನ್ಯಾಯತೀರ್ಪನ್ನೂ ಒಳಗೊಂಡಿದೆ.

  ಕೀರ್ತನೆಗಳು 94: 1–3
  **ಯೆಹೋವನೇ, ಮುಯ್ಯಿತೀರಿಸುವ ದೇವರೇ, ಮುಯ್ಯಿ ತೀರಿಸುವ ದೇವರೇ, ಪ್ರಕಾಶಿಸು. ಲೋಕದ ನ್ಯಾಯಾಧಿಪತಿಯೇ ಏಳು; ಗರ್ವಿಷ್ಟರಿಗೆ ಪ್ರತಿಫಲವನ್ನು ಕೊಡು. ಯೆಹೋವನೇ, ದುಷ್ಟರು ಎಲ್ಲಿಯವರೆಗೆ, ದುಷ್ಟರು ಎಲ್ಲಿಯವರೆಗೆ ಹಿಗ್ಗುತ್ತಿರಬೇಕು?**

  ....... ಮತ್ತು ನ್ಯಾಯವಾದ ಮಾರ್ಗದಲ್ಲಿದ್ದು ಯಾವುದು ಮೂಲತಃ ಸರಿಯೇ ಅದನ್ನು ಮಾಡುತ್ತದೆ.

  ಆದಿಕಾಂಡ 18:25
  **ಆ ರೀತಿಯಾಗಿ ದುಷ್ಟರಿಗೂ ಶಿಷ್ಟರಿಗೂ ಭೇದಮಾಡದೆ ದುಷ್ಟರ ಸಂಗಡ ನೀತಿವಂತರನ್ನೂ ಸಂಹರಿಸುವದು ನಿನ್ನಿಂದ ಎಂದಿಗೂ ಆಗಬಾರದು; ಸರ್ವಲೋಕಕ್ಕೆ ನ್ಯಾಯ ತೀರಿಸುವವನು ನ್ಯಾಯವನ್ನೇ ನಡಿಸುವನಲ್ಲವೇ?**

- ಅದು ದೇವರ ಸಹಜ ಗುಣದ ಒಂದು ಅಂಶ ಅದು ದೇವರಿಂದ ಹೊರಗೆ ಇದ್ದು ಅದರಂತೆ ಆತನು ನಡೆಯ ಬೇಕಾದದ್ದಲ್ಲ.

  ಕೀರ್ತನೆಗಳು 97:2
  **ಮುಗಿಲೂ ಕಾರ್ಗತ್ತಲೆಯೂ ಆತನ ಸುತ್ತಲೂ ಇರುತ್ತವೆ; ನೀತಿನ್ಯಾಯಗಳು ಆತನ ಸಿಂಹಾಸನದ ಅಸ್ತಿವಾರ.**

- ಯೇಸುವನ್ನು ನಮ್ಮ ರಕ್ಷಕನಾಗಿ ಕಳುಹಿಸುವುದರಲ್ಲಿ ದೇವರು ನ್ಯಾಯವಂತನೂ ಪಾಪ ಮಾಡಿದವರ ನ್ಯಾಯ ತೀರಿಸುವವನೂ ಆಗಿದ್ದಾನೆ.

  ರೋಮಾಪುರದವರಿಗೆ 3:26
  **ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೇ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿ ಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ.**

## ಆತನು ಸತ್ಯವಂತನು ಮತ್ತು ನ್ಯಾಯಸ್ವರೂಪಿ

- ಯೇಸು ಸ್ವತಃ ಸತ್ಯವಾಗಿದ್ದಾನೆ.

ಯೋಹಾನ 14:6
**ಯೇಸು ಅವನಿಗೆ "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರು ತಂದೆಯ ಬಳಿಗೆ ಬರುವದಿಲ್ಲ" ಎಂದು ಹೇಳಿದನು.**

1 ಯೋಹಾನ 5:20
**ದೇವರ ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬದು ನಮಗೆ ಗೊತ್ತದೆ. ಮತ್ತು ನಾವು ದೇವರ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಆತನು ಸತ್ಯದೇವರೂ ನಿತ್ಯ ಜೀವವೂ ಆಗಿದ್ದಾನೆ.**

- ದೇವರ ವಾಕ್ಯವೇ ಸತ್ಯವು

ಯೋಹಾನ 17:17
**ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು. ನಿನ್ನ ವಾಕ್ಯವೇ ಸತ್ಯವು**

- ದೇವರು ಸತ್ಯವಂತನು ಮತ್ತು ಆತನು ಸುಳ್ಳು ಹೇಳುವವನಲ್ಲ.

ಅರಣ್ಯಕಾಂಡ 23:19
**ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ. ತಾನು ಹೇಳಿದ ಮೇರೆಗೆ ನಡೆಯುವದಿಲ್ಲವೋ? ಮಾತುಕೊಟ್ಟ ನಂತರ ನೆರವೇರಿಸುವದಿಲ್ಲವೋ?**

ತೀತನಿಗೆ 1:2
**ಸುಳ್ಳಾಡದ ದೇವರು ಆ ನಿತ್ಯಜೀವವನ್ನು ಕೊಡುತ್ತೇನೆಂದು ಅನಾದಿಕಾಲದಲ್ಲಿ ವಾಗ್ದಾನ ಮಾಡಿ ತನ್ನ ಕ್ಲುಪ್ತ ಸಮಯದಲ್ಲಿ ವಾಗ್ದಾನ ನೆರವೇರಿಸಿ ಪ್ರಸಂಗದ ಮೂಲಕ ಪ್ರಕಟಿಸಿದನು.**

ಇಬ್ರಿಯರಿಗೆ 6:18
**ಆಶ್ರಯವನ್ನು ಹೊಂದಬೇಕೆಂದು ಓಡಿಬಂದು ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯನ್ನು ಹಿಡಿದುಕೊಂಡವರಾದ ನಮಗೆ ಎರಡು ನಿಶ್ಚಲವಾದ ಆಧಾರಗಳು ಇರುವ ಕಾರಣ ಬಲವಾದ ಧೈರ್ಯವುಂಟಾಯಿತು.**

- ಆದುದರಿಂದ ಆತನು ಹೇಳುವದೆಲ್ಲವೂ ಸಂಪೂರ್ಣ (ಶುದ್ಧ) ಸತ್ಯ.
- ಆತನು ನಂಬಿಗಸ್ತನು. ಆತನು ತನ್ನ ವಾಗ್ದಾನವನ್ನು ನೆರವೇರಿಸುತ್ತಾನೆ.

ಧರ್ಮೋಪದೇಶಕಾಂಡ 7:8,9
**ಯೆಹೋವನು ನಿಮ್ಮನ್ನು ಪ್ರೀತಿಸಿ ತಾನು ನಿಮ್ಮ ಪಿತೃಗಳಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಬೇಕೆಂದು ಐಗುಪ್ತ್ಯರ ಅರಸನಾದ ಫರೋಹನ ಕೈಕೆಳಗೆ ದಾಸರಾಗಿದ್ದ ನಿಮ್ಮನ್ನು ಬಿಡುಗಡೆ ಮಾಡಿ ತನ್ನ ಭುಜಬಲವನ್ನು ಪ್ರಯೋಗಿಸಿ ಆ ದೇಶದೊಳಗಿಂದ ಬರಮಾಡಿದನು. ಆದದರಿಂದ ನಿಮ್ಮ ದೇವರಾದ ಯೆಹೋವನೊಬ್ಬನೇ ದೇವರೆಂದು, ತಿಳಿದುಕೊಳ್ಳಬೇಕು. ಆತನು ನಂಬಿಗಸ್ತನಾದ ದೇವರು ತನ್ನನ್ನು ಪ್ರೀತಿಸಿ ತನ್ನ ಆಜ್ಞೆಗಳನ್ನು ಅನುಸರಿಸುವವರಿಗೆ ಮಾಡಿದ ವಾಗ್ದಾನವನ್ನೂ ಕೃಪೆಯನ್ನೂ ಅವರ ಸಂತತಿಯವರಲ್ಲಿ ಸಾವಿರ ತಲೆಗಳವರೆಗೂ ನೆರವೇರಿಸುವವನಾಗಿಯೂ.**

- ನಂಬಿಗಸ್ತಿಕೆಯು ತರ್ಕಬದ್ಧವಾಗಿ ಮಾರ್ಪಾಟಾಗದಿರುವುದರಿಂದ ಬರುತ್ತದೆ ಯಾಕೆಂದರೆ ದೇವರು ಮಾರ್ಪಾಟಾಗದವನಾಗಿದ್ದರೆ ಆತನು ಅಪನಂಬಿಗಸ್ತನಾಗಲು ಆಗುವುದಿಲ್ಲ.
- ದೇವರು ಸತ್ಯವೆಂದು ನೀವು ತಿಳಿದಿರುವುದರಿಂದ, ನೀವು ಆತನ ವಾಕ್ಯದ ಮೇಲೆ ಸಂಪೂರ್ಣವಾಗಿ ಆಧಾರ ಮಾಡ ಬಹುದೆಂದು ತಿಳಿದಿದ್ದೀರಿ.
- ದೇವರು ನಂಬಿಗಸ್ತನೆಂದು ನೀವು ತಿಳಿದಿರುವುದರಿಂದ, ಆತನು ನಿಮ್ಮನ್ನು ಎಂದಿಗೂ ಕೈ ಬಿಡುವುದಿಲ್ಲ. ಎಂದಿಗೂ ತೊರೆಯುವುದಿಲ್ಲ ಎಂದು ನೀವು ತಿಳಿದಿದ್ದೀರಿ.

## ಆತನು ಪ್ರೀತಿಸುವ ಒಳ್ಳೆಯ ದೇವರು.

- ದೇವರು ಪ್ರೀತಿ ಸ್ವರೂಪಿಯು

1 ಯೋಹಾನ 4:8-10
**ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕೆಂದರೆ ದೇವರು ಪ್ರೀತಿ ಸ್ವರೂಪಿಯು. ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದ್ದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿ ಬರುತ್ತವೆ.**

ನಿಮ್ಮ ದೇವರು ಎಷ್ಟು ಒಳ್ಳೆಯವನು?

ದೇವರ ಒಳ್ಳೆಯತನದ ಕುರಿತ ನಿಮ್ಮ ಭರವಸವು ಪರಿಪೂರ್ಣವಾಗಿರಬೇಕು!

ದೇವರು ಒಳ್ಳೆಯವನು, ಎಲ್ಲಾ ವೇಳೆಯಲ್ಲೂ!!!

- ಪ್ರೀತಿ ಪ್ರತ್ಯಕ್ಷ ಪಡಿಸಲ್ಪಟ್ಟದ್ದು

ರೋಮಾಪುರದವರಿಗೆ 5:6-8
**ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿ ಹೀನರಿಗೋಸ್ಕರ ಪ್ರಾಣಕೊಟ್ಟನು. ನೀತಿವಂತನಿಗೋಸ್ಕರ ಯಾರಾದರೂ ಪ್ರಾಣಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣ ಕೊಡುವದಕ್ಕೆ ಯಾವನಾದರೂ ಧೈರ್ಯ ಮಾಡಿದರೂ ಮಾಡಾನು ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ.**

ಯೋಹಾನ 3:16
**ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.**

- ದೇವರು ಪರಿಪೂರ್ಣ ಒಳ್ಳೆಯವನು ಎಲ್ಲಾ ಕಾಲದಲ್ಲೂ. ದೇವರು ನನಗೆ ವಿರೋಧವಾಗಿ ತಪ್ಪು ಮಾಡದಷ್ಟು ಒಳ್ಳೆಯವನು. ಆತನು ನನ್ನನ್ನು ತಿದ್ದುವಾಗಲೂ, ತನ್ನ ಒಳ್ಳೆಯತನದಿಂದಲೇ ನನಗೆ ಹಾಗೆ ಮಾಡುತ್ತಾನೆ.

## ಆತನು ಕರುಣೆಯುಳ್ಳವನೂ ಕೃಪಾಪೂರ್ಣನೂ ಆಗಿದ್ದಾನೆ.

- ಇದು ಅರ್ಹವಲ್ಲದ ದಯೆ ಮತ್ತು ಒಳ್ಳೆಯತನವಾಗಿದೆ ಆತನು ಅದನ್ನು ತನ್ನ ಒಳ್ಳೆಯತನ ಮತ್ತು ಉದಾರತೆಯ ಆದಾರದ ಮೇಲೆ ತೋರಿಸುತ್ತಾನೆ.
- ಹೀಗೆ ದೇವರ ಒಳ್ಳೆಯ ತನದ ಕುರಿತು ನಮಗೆ ಸರಿಯಾದ ತಿಳುವಳಿಕೆಯಿದ್ದರೆ, ನಾವು ದೃಢನಿಶ್ಚಯದಿಂದ ಕೆಳಗಿನ ವಚನವನ್ನು ಹೇಳಲು ಸಾಧ್ಯವಾಗುವುದು.

ರೋಮಾಪುರದವರಿಗೆ 8:28
**ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತಿದೆ.**

- ದೇವರ ಕರುಣೆಯು ಒಂದು ತಾತ್ಕಾಲಿಕ ವಿಷಯ ಅಥವಾ ಮನಸ್ಥಿತಿ ಯಾಗಿರದೆ ಅದು ದೇವರ ಒಂದು ಸಹಜ ಗುಣವಾಗಿದೆ. ದೇವರು ಯಾವಾಗಲೂ ಕೃಪಾಳುವೂ ಕರುಣಾಳುವೂ ಆಗಿದ್ದಾನೆ.

ಲೂಕ1:50
**ಆತನಲ್ಲಿ ಭಯ ಭಕ್ತಿಯುಳ್ಳವರ ಮೇಲೆ ಆತನ ದಯವು ತಲತಲಾಂತರದವರೆಗೂ ಇರುವದು.**

**ದೇವರು ಕರುಣಾಳುವೂ ನೀತಿ ಸ್ವರೂಪನೂ. ಆದರೆ ದೇವರಲ್ಲಿ ಆತನ ಕರುಣೆಯು ಆತನ ನ್ಯಾಯ ತೀರ್ಪಿನ ಮೇಲೆ ಜಯಗಳಿಸುತ್ತದೆ.**

- ಕೃಪೆಯು ದೇವರ ಒಂದು ವರವಾಗಿದೆ.

ಎಫೆಸದವರಿಗೆ 2:8
**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ ವರವೇ.**

- ಆತನ ಎಲ್ಲಾ ಕೆಲಸಗಳು (ಸೃಷ್ಟಿಯ) ಮೇಲೆ ಆತನ ಕರುಣೆಯು ಯಥೇಚ್ಛವಾಗಿ ಸುರಿಸಲ್ಪಟ್ಟಿದೆ.

ಕೀರ್ತನೆಗಳು 145:9, 10
**ಯೆಹೋವನು ಸರ್ವೋಪಕಾರಿಯೂ ತಾನು ನಿರ್ಮಿಸಿದವುಗಳನ್ನೆಲ್ಲಾ ಕರುಣಿಸುವಾತನೂ ಆಗಿದ್ದಾನೆ. ಯೆಹೋವನೇ, ನಿನ್ನಸೃಷ್ಟಿಯೆಲ್ಲವು ನಿನ್ನನ್ನು ಸ್ತುತಿಸುವದು; ನಿನ್ನ ಭಕ್ತರು ನಿನ್ನನ್ನು ಕೊಂಡಾಡುವರು**

ಎಫೆಸದವರಿಗೆ 1:7, 8
**ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ. ಆತನು ರಹಸ್ಯವಾದ ತನ್ನ ಸಂಕಲ್ಪವನ್ನು ನಮಗೆ ತಿಳಿಯಪಡಿಸುವದರ ಮೂಲಕ ವಿಶೇಷವಾದ ಜ್ಞಾನವನ್ನೂ ಬುದ್ಧಿಯನ್ನು ಕೊಟ್ಟು ಆ ಕೃಪೆಯನ್ನು ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ.**

- ಆತನ ಕರುಣೆಯು ನಮಗೆ ರಕ್ಷಣೆಯನ್ನು ಕೊಡುತ್ತದೆ.

ತೀತನಿಗೆ 2:11
**ಯಾಕೆಂದರೆ ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟು ಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು.**

- ಕರುಣೆಯು ನ್ಯಾಯತೀರ್ಪಿನ ಮೇಲೆ ಜಯಗಳಿಸುತ್ತದೆ (ಯಾಕೋಬನ 2:13) ನಾವು ಏನು ಬಿತ್ತುತ್ತೇವೋ ಅದನ್ನೇ ಕೊಯ್ಯುತ್ತೇವೆ. (ಗಲಾತ್ಯ 6:7,8) ಎಂಬದು ಸತ್ಯವಾದರೂ, ನಾವು ಬಿತ್ತಿದ ಎಲ್ಲಾ ಕೆಟ್ಟದ್ದಕ್ಕೆ ಎಲ್ಲಾ ಕೆಟ್ಟದ್ದನ್ನು ಕೊಯ್ಯುವುದನ್ನು "ತೆಗೆದು ಹಾಕುವುದು" ಅಥವಾ "ಪರಿಹಾರ ಮಾಡುವುದು" ಆತನ ಕರುಣೆಯೇ ಆಗಿದೆ ನಾವು ಉಳಿದಿರುವದು ಯೆಹೋವನ ಕರುಣೆಯೇ (ಪ್ರಲಾಪಗಳು 3:22). ಆತನು ನಮ್ಮ ಪಾಪಗಳಿಗೆ ಸರಿಯಾಗಿ ನಮ್ಮನ್ನು ಶಿಕ್ಷಿಸುವುದಿಲ್ಲ, ಬದಲಾಗಿ ತನ್ನ ಕರುಣೆಯನ್ನು ಸುರಿಯುತ್ತಾನೆ (ಕೀರ್ತನೆಗಳು 103:10, 17). ಶಿಲುಬೆಯು ಇದರ ಅತ್ಯಂತ ಶ್ರೇಷ್ಠ ಅಭಿವ್ಯಕ್ತತೆ ಯಾಗಿದೆ. ನಾವು ಪಶ್ಚಾತಾಪ ಪಟ್ಟಾಗ, ಆತನ ಕರುಣೆಯನ್ನು ಹೊಂದಲು ಆತನ ಮುಂದೆ ನಿಲ್ಲುತ್ತೇವೆ.

**ಆತನ ಸಹಜ ಗುಣಕ್ಕೆ ಹೊಂದಿಕೊಳ್ಳಲು ಅಪೇಕ್ಷಿಸಿರಿ! ನಮ್ಮ ಮೂಲಕ ತನ್ನ ಸಹಜ ಗುಣವನ್ನು ಅಭಿವ್ಯಕ್ತ ಗೊಳಿಸಲು ಆತನು ಅಪೇಕ್ಷಿಸುತ್ತಾನೆ.**

**ಆತನ ಸಹಜ ಗುಣಕ್ಕೆ ಸರಿಹೊಂದುವ ನಿರ್ಧಾರಗಳನ್ನೂ ಆಯ್ಕೆಗಳನ್ನೂ ಮಾಡಲು ನಿರ್ಧರಿಸಿರಿ.**

**ದೇವರ ಸಹಜಗುಣಕ್ಕೇ – ಕ್ಷಮೆ, ಪ್ರೀತಿ, ಸಮಾಧಾನ, ನ್ಯಾಯ ಸರಿಹೊಂದುವ ಜನರೊಂದಿಗೆ ಸಂಬಂಧಿಸಿರಿ.**

### ಆತನು ಮಾರ್ಪಡುವುದಿಲ್ಲ


ಮಲಾಕಿಯ 3:6

**ಯೆಹೋವನಾದ ನಾನು ಮಾರ್ಪಟ್ಟಿಲ್ಲ ಆದದರಿಂದ ಯಾಕೋಬ ಸಂತತಿಯವರೇ ನೀವು ನಾಶವಾಗಲಿಲ್ಲ.**

ಇಬ್ರಿಯರಿಗೆ 13:8

**ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು.**

- ದೇವರ ಸಹಜ ಗುಣವು ಹಳೆ ಒಡಂಬಡಿಕೆಯಿಂದ ಹೊಸ ಒಡಂಬಡಿಕೆಯವರೆಗೂ ಬದಲಾಗುವುದಿಲ್ಲ. ಕಾಲದ ಪರ್ಯಂತರಕ್ಕೂ ಆತನು ಅದೇ ದೇವರಾಗಿದ್ದಾನೆ. ಬದಲಾಗುವುದು ಮನುಷ್ಯನು ದೇವರೊಂದಿಗೆ ಸಂಬಂಧಿಸುವ "ಒಡಂಬಡಿಕೆಗಳು"– ಇವು ಹಳೆ ಒಡಂಬಡಿಕೆಯಿಂದ ಹೊಸ ಒಡಂಬಡಿಕೆಯ ಉದ್ದದವರೆಗೆ ಬದಲಾಗುತ್ತವೆ. ಹಳೆ ಒಡಂಬಡಿಕೆಯು ಮನುಷ್ಯನು ನ್ಯಾಯ ಪ್ರಮಾಣದ ಕ್ರಿಯೆಗಳ ಆಧಾರದಲ್ಲಿ ದೇವರೊಂದಿಗೆ ವ್ಯವಹರಿಸಿದರೆ ಮನುಷ್ಯನು ಏನು ಅನುಭವಿಸುವನೆಂದು – ಅಂದರೆ ಮನುಷ್ಯನು ದೇವರಿಗೆ ಏನನ್ನು ಸಮರ್ಪಿಸಲು ಸಾಧ್ಯವೋ ಅದರ ಆಧಾರದಲ್ಲಿ – ಪ್ರಕಟಿಸುತ್ತದೆ. ಹೊಸ ಒಡಂಬಡಿಕೆಯು ಮನುಷ್ಯನು ದೇವರ ಉಚಿತ ದಾನ/ವರವಾದ ಕೃಪೆಯ ಆಧಾರದಲ್ಲಿ ದೇವರೊಂದಿಗೆ ಸಂಬಂಧಿಸಿದರೆ ಏನನ್ನು ಅನುಭವಿಸುವನೆಂದು ಪ್ರಕಟಿಸುತ್ತದೆ – ಅಂದರೆ ದೇವರು ಮನುಷ್ಯನಿಗೆ ಏನನ್ನು ನೀಡುವನೋ ಅದರ ಅಧಾರದಲ್ಲಿ.
- ಆತನು ಇಂದು ಹಳೆ ಒಡಂಬಡಿಕೆಯಲ್ಲಿ ಪ್ರಕಟಿಸಲ್ಪಟ್ಟಂತೆಯೇ ಆತನು ಈಗಲೂ ಹಾಗೆಯೇ ಇದ್ದಾನೆಂದು ಯೇಸು ಹೊಸ ಒಡಂಬಡಿಕೆಯಲ್ಲಿ ಪ್ರಕಟಿಸಿದಂತೆಯೇ ಇದ್ದಾನೆ.




### ದೇವರ ಹೆಸರುಗಳು ಆತನು ಸಹಜಗುಣವನ್ನು ಪ್ರಕಟಿಸುತ್ತವೆ.

ದೇವರನ್ನು ವಿವರಿಸಲು ಉಪಯೋಗಿಸಲಾದ ಹೆಸರುಗಳು ಆತನ ಗುಣಸ್ವಭಾವ ಮತ್ತು ವ್ಯಕ್ತಿಯ ಕುರಿತು ನಮಗೆ ಹೆಚ್ಚು ತಿಳಿಸುತ್ತವೆ.

**ಅಡೊನೈ,** "ಕರ್ತನು" ಅಥವಾ "ಸಾರ್ವಭೌಮ"

ಆದಿಕಾಂಡ 19:2

**ಸ್ವಾಮಿಗಳೇ, ನಿಮ್ಮ ದಾಸನ ಮನೆಗೆ ಬಂದು ಇಳುಕೊಂಡು ಕಾಲುಗಳನ್ನು ತೊಳಕೊಳ್ಳಿರಿ; ಬೆಳಗ್ಗೆ ನಿಮ್ಮ ಮಾರ್ಗ ಹಿಡುಕೊಂಡು ಹೋಗ ಬಹುದು ಅಂದನು. ಅವರು – ಹಾಗಲ್ಲ, ಬೀದಿಯಲ್ಲೆ ರಾತ್ರಿ ಕಳೆಯುತ್ತೇವೆ ಅನ್ನಲು.**

ಯೋಹಾನ 4:11

**ಆ ಹೆಂಗಸು ಆತನಿಗೆ, "ಅಯ್ಯಾ, ಸೇದುವದಕ್ಕೇ ನಿನ್ನಲ್ಲಿ ಏನೂ ಇಲ್ಲ, ಬಾವಿ ಆಳವಾಗಿದೆ; ಹೀಗಿರುವಾಗ, ಆ ಜೀವಕರವಾದ ನೀರು ನಿನಗೆ ಎಲ್ಲಿಂದ ಬಂತು?.**

ಹೀಗೆ, ಅಯ್ಯಾ, ಎಂಬ ಪದವು ಗಂಡಸರಿಗೆ ಕೂಡ ಉಪಯೋಗಿಸಲ್ಪಡುತ್ತದೆ. (ಅಂದರೆ, ಯಜಮಾನನ ಅಥವಾ ಒಡೆಯ, ಅಧಿಕಾರಗಳು ಮತ್ತು ಶ್ರೇಷ್ಠತೆ)

**ಎಲೋಹಿ**, ಎಲ್ಲಾ ಸೃಷ್ಟಿಯ ಮೂಲ, ಉಗಮ, ಶಕ್ತಿಯುಳ್ಳ ದೇವರು

ಆದಿಕಾಂಡ 1:1

**ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು**

(ಇದು ಏಕವಚನದಲ್ಲಿ ಅಭಿವ್ಯಕ್ತಗೊಂಡಿಲ್ಲ, ಇದು ಸಾರ್ವ ಭೌಮತ್ವದ ಬಹುವಚನ),

## ಥಿಯೊಸ್

ಯೋಹಾನ 1:1

**ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು.**

ಇದು ಎಲೋಹಿ ಎಂಬ ಪದದ ಗ್ರೀಕ್ ಸಮಾನಾರ್ಥಪದ. ಇದನ್ನು ದೇವರಿಗಲ್ಲದೆ ಮತ್ತಾರಿಗೂ ಎಂದೂ ಉಪಯೋಗಿಸಲಾಗದು.

## ಎಲ್. ದೇವರು

**ಎಲ್‌ಷಡಾಯ್,** ಸರ್ವಶಕ್ತ, ಔದಾರ್ಯದ, ಸರ್ವಸಂಪನ್ನ.

ಆದಿಕಾಂಡ 17:1

**ಅಬ್ರಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ ದರ್ಶನಕೊಟ್ಟು – ನಾನು ಸರ್ವ ಶಕ್ತನಾದ ದೇವರು; ನನಗೆ ನಡಕೊಂಡು ದೋಷವಿಲ್ಲದವನಾಗಿರು ಎಂದು ಹೇಳಿದನು.**

**ಎಲ್. ಎಲಿಯೋನ್,** ಪರಾತ್ಪರನಾದ ದೇವರು

ಆದಿಕಾಂಡ 14:19

**ಅಬ್ರಾಮನನ್ನು ಆಶೀರ್ವದಿಸಿ – ಭೂಮ್ಯಾಕಾಶಗಳನ್ನು ನಿರ್ಮಾಣ ಮಾಡಿದ ಪರಾತ್ಪರನಾದ ದೇವರ ಆಶೀರ್ವಾದವು ಅಬ್ರಾಮನಿಗೆ ಆಗಲಿ**

**ಎಲ್. ಓಲಮ್** – ನಿತ್ಯನಾದ ದೇವರು

ಆದಿಕಾಂಡ 21:33

**ಅಬ್ರಹಾಮನು ಬೇರ್ಷೆಬದಲ್ಲಿ ಪಿಚುಲ ವೃಕ್ಷವನ್ನು ನೆಟ್ಟು ನಿತ್ಯ ದೇವರಾದ ಯೆಹೋವನ ಹೆಸರನ್ನು ಹೇಳಿಕೊಂಡು ಆರಾಧಿಸಿದನು**

## ಇರುವಾತನು

ವಿಮೋಚನಕಾಂಡ 3:14

**ದೇವರು ಮೋಶೆಗೆ– ಇರುವಾತನೇ ಆಗಿದ್ದೇನೆ. ನೀನು ಇಸ್ರಾಯೇಲ್ಯರಿಗೆ ಇರುವಾತನೆಂಬವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು ಎಂದು ಹೇಳಬೇಕು**

ಈ ಸತ್ಯವೇದ ವಚನವು ದೇವರು ನಿತ್ಯನು, ಸರ್ವಸಂಪನ್ನನು, ಮತ್ತು ಸ್ವ–ಇರುವಾತನು ಎಂದು ಪ್ರಕಟಿಸುತ್ತದೆ.

**ಯಾಹ್ವೆ** "ಕರ್ತನು""

ಆದಿಕಾಂಡ 4:1

**ಆದಾಮನು ತನ್ನ ಹೆಂಡತಿಯಾದ ಹವ್ವಳನ್ನು ಕೂಡಲು ಅವಳು ಗರ್ಭಿಣಿಯಾಗಿ ಕಾಯಿನನ್ನನ್ನು ಹೆತ್ತು ಯೆಹೋವನ ಅನುಗ್ರಹದಿಂದ ಗಂಡು ಮಗುವನ್ನು ಪಡೆದಿದ್ದೇನೆ ಎಂದು ಹೇಳಿದಳು.**

**ಯೆಹೋವ ರಾಫ** : ಯೆಹೋವನೆ ನಮಗೆ ಆರೋಗ್ಯದಾಯಕನು

ವಿಮೋಚನಕಾಂಡ 15:26

**ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ, ಆತನ ದೃಷ್ಟಿಗೆ ಸರಿಬೀಳುವದನ್ನು ಮಾಡಿ ಆತನ ಆಜ್ಞೆಗಳಿಗೆ ವಿಧೇಯರಾಗಿದ್ದು ಆತನ ಕಟ್ಟಳೆಗಳನ್ನೆಲ್ಲಾ ಅನುಸರಿಸಿ ನಡೆದರೆ ನಾನು ಐಗುಪ್ತ್ಯರಿಗೆ ಉಂಟು ಮಾಡಿದ ವ್ಯಾಧಿಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವದಿಲ್ಲ. ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು.**

**ಯೆಹೋವ ನಿಸ್ಸಿ :** ಯೆಹೋವನೇ ನಮ್ಮ ಜಯಧ್ವಜ / ವಿಜಯ

ವಿಮೋಚನಕಾಂಡ 17:15

**ಆ ಸ್ಥಳದಲ್ಲಿ ಮೋಶೆಯು ಯಜ್ಞವೇದಿಯನ್ನು ಕಟ್ಟಿಸಿ ಅದಕ್ಕೆ ಯೆಹೋವ ನಿಸ್ಸಿ, ಯೆಹೋವನೇ ನಮ್ಮ ಜಯಧ್ವಜ ಎಂದು ಹೆಸರಿಟ್ಟನು.**

**ಯೆಹೋವ ಯೀರೆ:** ಯೆಹೋವನು ಒದಗಿಸುವನು

ಆದಿಕಾಂಡ 22:14

**ಅಬ್ರಹಾಮನು ಆ ಸ್ಥಳಕ್ಕೆ ಯೆಹೋವ ಯಿರೆ ಎಂದು ಹೆಸರಿಟ್ಟನು ಯೆಹೋವನ ಬೆಟ್ಟದಲ್ಲಿ ಒದಗುವದು ಎಂಬದಾಗಿ ಇಂದಿನವರೆಗೂ ಹೇಳುವದುಂಟಲ್ಲಾ.**

**ಯೆಹೋವ ಷಾಲೋಮ್** : ಯೆಹೋವನು ಸಮಾಧಾನಪ್ರದನು.

ನ್ಯಾಯಸ್ಥಾಪಕರು 6:24

**ಗಿದ್ಯೋನನು ಅಲ್ಲಿ ಯೆಹೋವನಿಗೋಸ್ಕರ ಒಂದು ಯಜ್ಞವೇದಿಯನ್ನು ಕಟ್ಟಿ ಅದಕ್ಕೆ ಯೆಹೋವ ಷಾಲೋಮ್ ಎಂದು ಹೆಸರಿಟ್ಟನು; ಅದು ಈ ವರೆಗೂ ಅಬೀಯೆಜರ್ ಗೋತ್ರದವರ ಒಫ್ರದಲ್ಲಿರುತ್ತದೆ.**

**ಯೆಹೋವ ಸಬ್ಬೊತ್**: ಸೈನ್ಯಾಧೀಶ್ವರನಾದ ಯೆಹೋವನು.

1 ಸಮುವೇಲನು 1:3

**ಅವನು ಪ್ರತಿ ವರುಷವೂ ಸೈನ್ಯಾಧೀಶ್ವರನಾದ ಯೆಹೋವನಿಗೆ ಯಜ್ಞವನ್ನು ಸಮರ್ಪಿಸಿ ಆತನನ್ನು ಆರಾಧಿಸುವದಕ್ಕೋಸ್ಕರ ತನ್ನ ಊರಿನಿಂದ ಶೀಲೋವಿಗೆ ಹೋಗುತ್ತಿದ್ದನು. ಅಲ್ಲಿ ಏಲಿಯ ಮಕ್ಕಳಾದ ಹೊಫ್ನಿ, ಫಿನೆಹಾಸ್ ಎಂಬವರು ಯೆಹೋವನ ಯಾಜಕರಾಗಿದ್ದರು.**

ಕೀರ್ತನೆಗಳು 24:10

**ಮಹಾ ಪ್ರಭಾವವುಳ್ಳ ಈ ಅರಸನು ಯಾರು? ಸೇನಾಧೀಶ್ವರನಾದ ಯೆಹೋವನೇ: ಮಹಾ ಪ್ರಭಾವವುಳ್ಳ ಅರಸನು ಈತನೇ.**

**ಯೆಹೋದ ಮಕ್ಕಡೆಶೆಮ್** – ನಿಮ್ಮನ್ನು ಶುದ್ಧೀಕರಿಸುವ ಕರ್ತನು.

ವಿಮೋಚನ ಕಾಂಡ 31:13

**ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸಬೇಕಾದದ್ದೇನಂದರೆ – ನಾನು ನೇಮಿಸಿರುವ ಸಬ್ಬತ್ ದಿನಗಳನ್ನು ನೀವು ತಪ್ಪದೆ ಆಚರಿಸಬೇಕು. ನಿಮ್ಮನ್ನು ದೇವಜನರನ್ನಾಗಿ ಮಾಡಿರುವ ಯೆಹೋವನು ನಾನೇ ಎಂದು ನೀವು ತಿಳುಕೊಳ್ಳುವಂತೆ ಇದೇ ನನಗೂ ನಿಮಗೂ ನಿಮ್ಮ ಸಂತತಿಯವರಿಗೂ ಇರುವ ಗುರುತು."**

**ಯೆಹೋವ ರೋಹಿ** : ಯೆಹೋವನು ನನಗೆ ಕುರುಬನು

ಕೀರ್ತನೆಗಳು 23:1

**ಯೆಹೋವನು ನನಗೆ ಕುರುಬನು, ಕೊರತೆ ಪಡೆನು.**

**ಯೆಹೋವ ಚಿದ್ಕೇನು**: ಯೆಹೋವನೇ ನಮ್ಮ ಸದ್ಧರ್ಮ

ಯೆರೆಮೀಯ 23:6

**ಅವನ ಕಾಲದಲ್ಲಿ ಯೆಹೂದ್ಯರು ಸುರಕ್ಷಿತರಾಗಿರುವರು ಇಸ್ರಾಯೇಲ್ಯರು ನೆಮ್ಮದಿಯಾಗಿ ವಾಸಿಸುವರು; ಯೆಹೋವ ಚಿದ್ಕೇನು (ಅಂದರೆ ಯೆಹೋವನೇ ನಮ್ಮ ಸದ್ಧರ್ಮ) ಎಂಬ ಹೆಸರು ಅವನಿಗಾಗುವದು.**

**ಯೆಹೋವ ಶಾಮ್ಮ :** ಯೆಹೋವನ ನೆಲೆ

ಯೆಹೆಜ್ಕೇಲನು 48:35

**ಪಟ್ಟಣದ ಸುತ್ತಳತೆಯು ಹದಿನೆಂಟು ಸಾವಿರ ಮೊಳ; ಅದನ್ನು ನಿರ್ಮಿಸಿದಂದಿನಿಂದ ಆ ಪಟ್ಟಣಕ್ಕೆ ಯೆಹೋವನ ನೆಲೆ ಎಂಬ ಹೆಸರಾಗುವದು.**

**ಮುಖ್ಯ ಕಂಠಪಾಠ ವಚನಗಳು**

ರೋಮಾಪುರದವರಿಗೆ 1:20

**ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ.**

ಕೊಲೊಸ್ಸೆಯವರಿಗೆ 1:15–17

**ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ. ಭೂ ಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವೂ ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂ ಆಧಾರ ಭೂತನು.**

**ನಮ್ಮ ತಂದೆ: ಪ್ರಾಯಶಃ ನಾವು ತಿಳಿಯ ಬೇಕಾದ ದೇವರ ಸಹಜಗುಣದ ಅತಿ ಶ್ರೇಷ್ಟ ಕ್ಷೇತ್ರವು ಆತನು "ತಂದೆ" ಎಂಬುದು.**

**ದೇವರು ನಮ್ಮ ತಂದೆ!**

**ಅಂತಿಮ ತಂದೆ!**

**ಪರಿಪೂರ್ಣ ತಂದೆ!**

## ಅನ್ವಯ

1. ದೇವರ ವಿಷಯವಾದ ನನ್ನ ತಿಳಿವು ಬದಲಾಗುವಂತೆ ನಾನು ಈ ಅಧ್ಯಯನದಿಂದ ಆತನ ಕುರಿತು ಯಾವ ಹೊಸ ಸಹಜ ಗುಣಗಳನ್ನು ಕಂಡುಕೊಂಡೆನು?

2. ದೇವರ "ಇರುವಾತನು" ಎಂಬ ವಿವಿಧ ಹೆಸರುಗಳನ್ನೂ ಅವುಗಳ ಅರ್ಥಗಳನ್ನು ಪಟ್ಟಿಮಾಡಿ, ಆತನು ಯಾರಾಗಿದ್ದಾನೋ ಅದರ ಬೆಳಕಿನಲ್ಲಿ ನಿಮ್ಮ ಜೀವನದ ವಿವಿಧ ಪರಿಸ್ಥಿತಿಗಳನ್ನು ಹೇಗೆ ನೋಡಬಹುದು ಎಂದು ಚಿಂತನೆಮಾಡಿರಿ (ಉದಾ: ಅಸ್ವಸ್ಥವಿದ್ದರೆ – ಆತನು ನಿಮ್ಮ ಆರೋಗ್ಯದಾಯಕನಾಗಿ, ಆಗತ್ಯವಿದ್ದರೆ – ನಿಮ್ಮ ಸಹಾಯಕವಾಗಿ, ತೊಂದರೆಯಿದ್ದರೆ – ನಿಮ್ಮ ಧ್ವಜವಾಗಿ, ನಿಮ್ಮ ಜಯದ ಮೂಲವಾಗಿ...)

# 2

# ರಕ್ಷಣೆ

ಈ ಪಾಠವು ದೇವರ ಪ್ರೀತಿಯನ್ನು ಮನುಷ್ಯನ ರಕ್ಷಣೆಗಾಗಿ ದೇವರ ಯೋಜನೆಯನ್ನೂ ನಮಗೆ ತಿಳಿಸಲು ರೂಪಿಸಲ್ಪಟ್ಟಿದೆ. ನೀವು ರಕ್ಷಣೆಯ ಸಿದ್ಧಾಂತವನ್ನು ಕಲಿತು ಹೊಸ ಒಡಂಬಡಿಕೆಯ ರಕ್ಷಣೆಯು ಕ್ಷಮಾಪಣೆ, ಸ್ವಸ್ಥತೆ, ವಿಮೋಚನೆ, ಸಂರಕ್ಷಣೆ ಮತ್ತು ಬಿಡುಗಡೆಗಳ ಒಂದು 'ಕಂತೆ' (ಕಟ್ಟು) ಆಗಿದ್ದು, ಇವುಗಳನ್ನು ನಾವು ಉಚಿತವಾಗಿ ನಂಬಿಕೆಯ ಮೂಲಕ ಕೃಪೆಯಿಂದಲೇ ಹೊಂದುತ್ತೇವೆ ಎಂದು ಕಂಡುಕೊಳ್ಳುತ್ತೇವೆ. ಈ ಪಾಠ ವಿಶ್ವಾಸಿಗಳಾದ ನಾವು ದೇವರ ಪ್ರೀತಿ ಮತ್ತು ರಕ್ಷಣಾ ಕೃಪೆಯನ್ನು ಚೆನ್ನಾಗಿ ತಿಳಿದು ಅದರಲ್ಲಿ ಬಲಗೊಳ್ಳುವಂತೆ ಮಾಡುತ್ತದೆ.

### ದೇವರ ಪ್ರೀತಿ

ಯೇಸು ಕ್ರಿಸ್ತನ ಮೂಲಕ ಪ್ರಕಟಿಸಲ್ಪಟ್ಟ ದೇವರ ಪ್ರೀತಿಯು ನಮ್ಮ ರಕ್ಷಣೆಯ ಆಧಾರವಾಗಿದೆ.

### ಪ್ರೀತಿ ಎಂದರೆ ಏನು?

- ವೆಬ್‌ಸ್ಟರ್ ನಿಘಂಟು ಪ್ರೀತಿಯು ಒಬ್ಬರ ಮೇಲೊಬ್ಬರಿಗೆ ರಕ್ತಸಂಬಂಧ ಅಥವಾ ವೈಯಕ್ತಿಕ ಬಂಧಗಳಿಂದ ಉಂಟಾಗುವ ಒಂದು ಬಲವಾದ ಮಮತೆ, ಉತ್ಸಾಹ ಅಥವಾ ನಿಶಬ್ದತೆ, ನಿಸ್ವಾರ್ಥ, ನಂಬಿಗಸ್ತ, ತ್ಯಾಗದ ಚಿಂತೆ ಎಂದು ನಿರೂಪಿಸುತ್ತದೆ.
- ದೇವರಿಗೆ ನಮ್ಮೊಂದಿಗಿರುವ ಸಂಬಂಧದಿಂದ ಈ ಪ್ರೀತಿ ಬರುತ್ತದೆ.
- ಮನುಷ್ಯ ಜಾತಿಗೆ ಪ್ರೀತಿಯು ಒಂದು ಮುಖ್ಯ ಅಗತ್ಯತೆ.
- ಮನುಷ್ಯನ ಪ್ರಜ್ಞಾಪೂರ್ವಕ ಶಕ್ತಿಯಲ್ಲಿ ಬಹುಭಾಗ ನಿಜ ಪ್ರೀತಿಯ ಮುಗಿಯದ ಅರಸುವಿಕೆ ಮತ್ತು ಸ್ವೀಕರಿಸಲ್ಪಡುವಿಕೆಯಲ್ಲಿ ಕಳೆಯುತ್ತದೆ.
- ಪ್ರೀತಿಯ ನಮ್ಮ ಅಗತ್ಯತೆಯು (ನಿರಂತರ) ಶಾಶ್ವತವಾಗಿರುವುದರಿಂದ, ಅದರ ಮೂಲವೂ (ನಿರಂತರ) ಶಾಶ್ವತವಾದದ್ದಾಗಿರಬೇಕು.

### ದೇವರು ನಮ್ಮನ್ನು ಯಾಕೆ ಪ್ರೀತಿಸುತ್ತಾನೆ?

- ಆತನು ನಮ್ಮನ್ನು ಸೃಷ್ಟಿಸಿದನು.
- ಪ್ರೀತಿಸುವುದು ದೇವರ ಗುಣಲಕ್ಷಣವಾಗಿದೆ.

  1 ಯೋಹಾನ 4:8
  **ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕೆಂದರೆ ದೇವರು ಪ್ರೀತಿ ಸ್ವರೂಪಿಯು.**

### ದೇವರ ಪ್ರೀತಿಯ ಗುಣಲಕ್ಷಗಳಾವುವು?

**<u>ದೇವರು ಸ್ಥಾಪಿಸಿದ ಪ್ರೀತಿಯ ಸಂಬಂಧ.</u>**

- ದೇವರು ನಮ್ಮನ್ನು ಪ್ರೀತಿಸುವ ಆಯ್ಕೆ ಮಾಡಿದನು (ದೈವ ಚಿತ್ತ). ಆತನ ಪ್ರೀತಿಯಿಂದ ಸ್ವತಃ ಆತನೇ ನಮ್ಮೊಂದಿಗೆ ಒಂದು ಸಂಬಂಧ ಸ್ಥಾಪಿಸಿದನು.

**<u>ಒಂದು ಅನರ್ಹವಾದ ದತ್ತಿ</u>:**

- ನಾವು ಇರುವಂತೆಯೇ ಆತನು ನಮ್ಮನ್ನು ಪ್ರೀತಿಸುತ್ತಾನೆ. ದೇವರು ನಮ್ಮನ್ನು ಪ್ರೀತಿಸಲು ನಾವು ಇನ್ನೊಬ್ಬರಾಗುವ ಅಗತ್ಯವಿಲ್ಲ. ದೇವರ ಪ್ರೀತಿಯು ತೀಕ್ಷ್ಣವಾದದ್ದೂ ಶ್ರೇಷ್ಠವಾದದ್ದೂ, ಸಂಪೂರ್ಣವಾದದ್ದೂ ಆಗಿದೆ.
- ದೇವರ ಪ್ರೀತಿಯನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ! ಅದು ನಮ್ಮ ಲೌಕಿಕ ಸೊತ್ತುಗಳ / ಪ್ರಾಪಂಚಿಕ ಗುಣಲಕ್ಷಣಗಳ ಮೇಲೆ ಆಧರಿಸಿ ಇಲ್ಲ.

**ಪ್ರಿಯ ದೇವರೇ,**

**ನಾನು ನಿನಗೆ ನನ್ನ ಎಲ್ಲಾ ಮಿಠಾಯಿಗಳನ್ನು ಕೊಟ್ಟರೆ, ಈ ಹೊತ್ತು ನೀನು ನನ್ನನ್ನು ಹೆಚ್ಚು ಪ್ರೀತಿಸುವಿಯೇ?**



- ದೇವರ ಪ್ರೀತಿಯು ಷರತ್ತಿಲ್ಲದ್ದು, ಅದನ್ನು ಸಂಪಾದಿಸಲಾಗದು ಅದು ಉಚಿತದಾನ (ವರ)!
- ದೇವರು ಹೆಚ್ಚು ಪ್ರೀತಿಸಲು ನಾವು ಮಾಡುವಂತದ್ದು ಏನೂ ಇಲ್ಲ. ದೇವರು ನಮ್ಮನ್ನು ಕಡಿಮೆ ಪ್ರೀತಿಸುವಂತೆಯೂ ಏನೂ ಮಾಡಲಾಗದು.
- ಇಸ್ರಾಯೇಲ್ಯರ ಮೇಲೆ ದೇವರಿಗಿರುವ ಪ್ರೀತಿಯು ಪತಿ–ಪತ್ನಿಯರ ಸಂಬಂಧದಂತಿದೆ. ಅವರು ಪಾಪ ಮಾಡಿದಾಗ್ಯೂ ದೇವರು ಅವರನ್ನು ಪ್ರೀತಿಸಿದನು (ಯೆಹೆಜ್ಕೆಲನು 16).

### ಅದು ಪರಮ ಶ್ರೇಷ್ಠ ಪ್ರೀತಿ.

- **ತ್ಯಾಗಮಯ**

ದೇವರ ಪ್ರೀತಿ ಪರಮ ಶ್ರೇಷ್ಠ ತ್ಯಾಗಮಯ ಪ್ರೀತಿ.

ಯೋಹಾನ 3:16
**ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.**

- **ಕ್ರಿಯೆಯಲ್ಲಿ**

ದೇವರ ಪ್ರೀತಿಯು ಬರೀ ಮಾತಿನಲ್ಲಿ ಅಲ್ಲ. ಆತನ ಮಗನಾದ ಯೇಸು ಕ್ರಿಸ್ತನನ್ನು ನಮಗಾಗಿ ಸಾಯುವದಕ್ಕೋಸ್ಕರವಾಗಿ ಕಳುಹಿಸುವುದರಷ್ಟರ ಮಟ್ಟಿಗೆ ಅದನ್ನು ನಡಿಸಿದನು.

ಯೋಹಾನ 15:13
**ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ.**

- **ಕ್ಷಮಿಸುವ ಪ್ರೀತಿ**

ನಮ್ಮ ದೇವರು ಕ್ಷಮಿಸುವ ದೇವರಾಗಿದ್ದಾನೆ.

ಯೆರೆಮೀಯ 31:34

**ನೆರೆಹೊರೆಯವರೂ ಅಣ್ಣ ತಮ್ಮಂದಿರೂ ಒಬ್ಬರಿಗೊಬ್ಬರು ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸ ಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು. ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ತನ್ನ ನೆನಪಿಗೆ ಎಂದಿಗೂ ತರುವದಿಲ್ಲ.**

ಯೆಶಾಯ 43:25
**ನಾನಾಗಿ ನಾನೇ ನನಗೋಸ್ಕರ ನಿನ್ನ ದ್ರೋಹಗಳನ್ನು ಅಳಿಸಿಬಿಡುತ್ತೇನೆ. ನಿನ್ನ ಅಪರಾಧಗಳನ್ನು ನನ್ನ ನೆನಪಿನಲ್ಲಿಡೆನು.**

### ಅದು ಶಾಶ್ವತ ಪ್ರೀತಿ

ಯೆರೆಮೀಯ 31:3
**ಯೆಹೋವನು ದೂರದಿಂದ ಬಂದು ಅದಕ್ಕೆ ದರ್ಶನಕೊಟ್ಟು ಹೀಗನ್ನುವನು – ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ; ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದು ಕೊಂಡಿದ್ದೇನೆ.**

- ದೇವರ ಪ್ರೀತಿಯು ತಾತ್ಕಾಲಿಕ / ಕಾಲೋಚಿತವಲ್ಲ.
- ಅದು ಶಾಶ್ವತವಾದದ್ದು.
- ಆತನ ಪ್ರೀತಿಯಲ್ಲಿ ಪಕ್ಷಪಾತವಿಲ್ಲ.
- ಆತನು ಎಲ್ಲರನ್ನೂ ಸಮಾನವಾಗಿ ಪ್ರೀತಿಸುತ್ತಾನೆ.
- ದೇವರು ನಂಬಿಗಸ್ತನು. ಆತನು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ.

**ದೇವರ ಪ್ರೀತಿಯ ಗುಣಲಕ್ಷಣಗಳು**

**1) ದೇವರು ಸ್ಥಾಪಿಸಿದ ಪ್ರೀತಿ**____________

**2) ದೇವರ ಪ್ರೀತಿಯು**________________

**3) ದೇವರ ಪ್ರೀತಿಯು**________________

**4) ದೇವರ ಪ್ರೀತಿಯು**________________

## ರಕ್ಷಣೆಯ ಯೋಜನೆ

### ಮನುಷ್ಯನಿಗಾಗಿ ದೇವರ ಮಾಡಿದ್ದ ಮೂಲ ಯೋಜನೆ

ಪ್ರಕಟನೆ 4:11
**ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವೂ ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು.**

## ಮನುಷ್ಯನು ಸೃಷ್ಟಿಸಲ್ಪಟ್ಟನು

- ದೇವರನ್ನು ಮಹಿಮೆ ಪಡಿಸಲು.

  1 ಕೊರಿಂಥದವರಿಗೆ 11:7
  **ಪುರುಷನು ದೇವರ ಪ್ರತಿರೂಪನೂ ಪ್ರಭಾವವೂ ಆಗಿರುವದರಿಂದ ತಲೆಯನ್ನು ಮುಚ್ಚಿಕೊಳ್ಳಕೂಡದು; ಸ್ತ್ರೀಯಾದರೋ ಪುರುಷನ ಪ್ರಭಾವವಾಗಿದ್ದಾಳೆ.**

- ಆತನೊಂದಿಗೆ ಅನ್ಯೋನ್ಯತೆ ಹೊಂದಲೂ
- ಫಲಭರಿತರಾಗಿ, ಬಹುಸಂತಾನವುಳ್ಳವರಾಗಿ ಎಲ್ಲವುಗಳ ಮೇಲೂ ದೊರೆತನ ಮಾಡಲು

  ಆದಿಕಾಂಡ 1:26-28
  **ಆ ಮೇಲೆ ದೇವರು "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿ ಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ" ಅಂದನು. ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು; ದೇವ ಸ್ವರೂಪದಲ್ಲಿ ಅವನನ್ನ ಉಂಟು ಮಾಡಿದನು; ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು. ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ - "ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ" ಎಂದು ಹೇಳಿದನು.**

## ಮನುಷ್ಯನ ಅವಿಧೇಯತೆ ಮತ್ತು ದೇವರ ವಿರುದ್ಧ ಬಂಡಾಯ (ತಿರುಗಿ ಬೀಳುವುದು)

ಅವಿಧೇಯತೆ ಮತ್ತು ತಿರುಗಿ ಬೀಳುವುದು ದೇವರಿಗೆ ವಿರುದ್ಧವಾದ ಪಾಪ

1 ಸಮುವೇಲನು 15:21, 23
**ಆದರೆ ಜನರು ಸಂಪೂರ್ಣವಾಗಿ ಸಂಹರಿಸಬೇಕಾದ ಕೊಳ್ಳೆಯಲ್ಲಿ ಉತ್ತಮವಾದ ಕುರಿದನಗಳನ್ನು ನಿನ್ನ ದೇವರಾದ ಯೆಹೋವನಿಗೆ ಗಿಲ್ಗಾಲಿನಲ್ಲಿ ಯಜ್ಞಾರ್ಪಣೆ ಮಾಡುವದಕ್ಕಾಗಿ ಉಳಿಸಿ ತಂದರು ಎಂದು ಉತ್ತರ ಕೊಟ್ಟನು, ಅವಿಧೇಯತ್ವವು ಮಂತ್ರತಂತ್ರಗಳಷ್ಟು ಕೆಟ್ಟದ್ದಾಗಿರುವದು; ಹಟವು ಮಿಥ್ಯಾಭಕ್ತಿಗೂ ವಿಗ್ರಹಾರಾಧನೆಗೂ ಸಮಾನವಾಗಿರುವುದು.**

## ಪಾಪ ಮತ್ತು ಅದರ ಪರಿಣಾಮಗಳು

ನಾವು ದೇವರ ಮಹಿಮೆಯನ್ನು ಕಳಕೊಂಡಿದ್ದೇವೆ.

ರೋಮಾಪುರದವರಿಗೆ 3:23
**ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.**

## ಪಾಪ ಎಂದರೆ ಏನು? (ಪಾಪ ಏನಾಗಿದೆ?)

ಗ್ರೀಕ್ ಭಾಷೆಯಲ್ಲಿ ಪಾಪವೆಂದರೆ "ಗುರಿ ತಪ್ಪುವುದು" ಒಬ್ಬ ಮನುಷ್ಯನ ಪಾಪವು ಅವನ ದೇವರು ಕೊಟ್ಟ ಕರ್ತವ್ಯವನ್ನು ನೆರವೇರಿಸಲು ವಿಫಲನಾಗುವುದು ಆಗಿದೆ.

**ಪರಿಣಾಮಗಳು**

ಇದು 'ಬಿದ್ದು ಹೋದ ಮನುಷ್ಯನ' ಸ್ಥಿತಿ (ರಕ್ಷಿಸಲ್ಪಡದ ಒಬ್ಬ ವ್ಯಕ್ತಿ)

- ನಮ್ಮಲ್ಲಿ ದೇವರ ಗುಣ ಮತ್ತು ಸ್ವಭಾವ (ಲಕ್ಷಣ) ಇಲ್ಲದ ಆಂತರ್ಯದ ಮರಣ.

  ಎಫೆಸದವರಿಗೆ 4:18
  **ಅವರು ನಿಷ್ಪ್ರಯೋಜನವಾದ ಬುದ್ಧಿವುಳ್ಳವರಾಗಿ ನಡೆದುಕೊಳ್ಳುತ್ತಾರೆ ಅವರ ಮನಸ್ಸು ಮೊಬ್ಬಾಗಿ ಹೋಗಿದೆ. ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ.**

  ರೋಮಾಪುರದವರಿಗೆ 5:12
  **ಹೇಗೆಂದರೆ, ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು.**

- ದೇವರಿಂದ ಬೇರ್ಪಡಿಸಲ್ಪಡುವಿಕೆ

  ಯೆಶಾಯ 59:1,2
  **ಇಗೋ ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೊಟುಗೈಯಲ್ಲ; ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ. ಆದರೆ ನಿಮ್ಮ ಅಪರಾಧಗಳೆ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ.**

- ದೇಹದ ದೈಹಿಕ ಮರಣ

ಇಬ್ರಿಯರಿಗೆ 9:27
**ಒಂದೇ ಸಾರಿ ಸಾಯುವದೂ ಆ ಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ನೇಮಕನಾಗಿದೆಯೋ...**


- ದೇವರ ಪ್ರಸನ್ನತೆಯಿಂದ ಶಾಶ್ವತವಾಗಿ ಪಾತಾಳವೆಂಬ ಸ್ಥಳಕ್ಕೆ ಕಳುಹಿಸಲ್ಪಡುವುದು.

ಮತ್ತಾಯ 25:41
**ಆಮೇಲೆ ಆತನು ಎಡಗಡೆಯಲ್ಲಿರುವವರಿಗೆ – "ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧ ಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ"**

ಪ್ರಕಟನೆ 20:12–15
**ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು. ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿತು; ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು. ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳ ಪ್ರಕಾರ ನ್ಯಾಯ ತೀರ್ಪಾಯಿತು. ಆಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು.**

- ದೇವರ ಆಶೀರ್ವಾದಗಳನ್ನು ದೂರವಿರಿಸುವುದು.

ಯೆರೆಮೀಯ 5:24,25
**ಮುಂಗಾರು, ಹಿಂಗಾರು ಅಂತು ಸಕಾಲದ ಮಳೆಯನ್ನು ದಯಪಾಲಿಸಿ ಸುಗ್ಗಿಯ ಕ್ಲುಪ್ತವಾರಗಳನ್ನು ನಮಗಾಗಿ ಪ್ರತ್ಯೇಕ ಪಡಿಸುವ ನಮ್ಮ ದೇವರಾದ ಯೇಹೋವನಲ್ಲಿ ಭಯ ಭಕ್ತಿಯಿಡೋಣ ಎಂದು ಮನದಲ್ಲಿ ಅಂದು ಕೊಳ್ಳುವದಿಲ್ಲ. ನಿಮ್ಮ ಅಪರಾಧಗಳು ಇವುಗಳನ್ನು ತಪ್ಪಿಸಿ ಬಿಟ್ಟಿವೆ, ನಿಮ್ಮ ಪಾಪಗಳು ನಿಮಗೆ ಮೇಲನ್ನು ತಡೆದಿವೆ.**




ಪಾಪವು ಆಶೀರ್ವಾದಕ್ಕೆ - ತಡೆ

- ನಮ್ಮನ್ನು ದಾಸರನ್ನಾಗಿ ಮಾಡಿ ಬಂಧಿಸುತ್ತವೆ.

ಜ್ಞಾನೋಕ್ತಿಗಳು 5:22
**ದುಷ್ಟನ ದುಷ್ಕೃತ್ಯಗಳೇ ಅವನನ್ನು ಆಕ್ರಮಿಸುವವು ಅವನ ಪಾಪ ಪಾಶಗಳೇ ಅವನನ್ನು ಬಂಧಿಸುವವು.**

ಯೋಹಾನ 8:34
**ಯೇಸು –"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಪಾಪ ಮಾಡುವವರೆಲ್ಲರು ಪಾಪಕ್ಕೆ ದಾಸರಾಗಿದ್ದಾರೆ" ಎಂದು ಹೇಳಿದನು.**

- ನಮ್ಮ ಜೀವನವನ್ನು ದೆವ್ವದ ಅಧಿಕಾರಕ್ಕೆ ತೆರೆದುಕೊಡುತ್ತದೆ – ರೋಗ ಮತ್ತು ಮರಣ.

ಎಫೆಸದವರಿಗೆ 2:1, 2
**ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ.**

## ಮನುಷ್ಯನು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರನು

ದೇವರ ಪ್ರಸನ್ನತೆಯಿಂದ ಬಹಿಷ್ಕರಿಸಲ್ಪಡಲು ಆದಾಮ ಮತ್ತು ಹವ್ವಳಿಗೆ ಎಷ್ಟು ಪಾಪಗಳನ್ನು ಅದು ತೆಗೆದುಕೊಂಡಿತ್ತು?

- ನಮ್ಮ ಎಲ್ಲಾ ಒಳ್ಳೆ ಕ್ರಿಯೆಗಳು ನಮ್ಮನ್ನು ರಕ್ಷಿಸಲಾರವು – ಯಾಕೆಂದರೆ ಒಂದೇ ಒಂದು ಪಾಪವು ನಮ್ಮನ್ನು ದೇವರ ಸನ್ನಿಧಾನದಿಂದ ಹೊರಡಿಸಿ ಬಿಡುವುದು ಆದಾಮನು ಒಮ್ಮೆ ಪಾಪ ಮಾಡಿದನು – ಇದು ಅವನ ಬೀಳುವಿಕೆಗೆ ಮತ್ತು ಹಾನಿಕಾರಕವಾದ ಎಲ್ಲಾ ಪರಿಣಾಮಗಳಿಗೆ ನಡಿಸಿತು.

- ನಮ್ಮ ಸತ್ಕಾರ್ಯಗಳು ದೇವರ ಮುಂದೆ ಹೊಲೆಯ ಬಟ್ಟೆಯಂತಿವೆ.

ಯೆಶಾಯ 64:6
**ನಾವೆಲ್ಲರು ಅಶುದ್ಧನ ಹಾಗಿದ್ದೇವೆ. ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ; ನಾವೆಲ್ಲರೂ ತರಗೆಲೆಯೋಪಾದಿಯಲ್ಲಿ ಒಣಗಿ ಹೋಗಿದ್ದೇವೆ; ನಮ್ಮ ಅಪರಾಧಗಳು ಬಿರುಗಾಳಿಯ ಪ್ರಕಾರ ನಮ್ಮನ್ನು ಬಡಿದುಕೊಂಡು ಹೋಗಿವೆ.**

- ಎಲ್ಲರೂ ಪಾಪ ಮಾಡಿದ್ದರಿಂದ ಬೇರೆ ಯಾವ ಮನುಷ್ಯನೂ ನಮಗೋಸ್ಕರವಾಗಿ ಮಧ್ಯಸ್ತಿಕೆ ಮಾಡಲು ಆಗದು.

  ರೋಮಾಪುರದವರಿಗೆ 3: 10
  **ಶಾಸ್ತ್ರದಲ್ಲಿ ಬರೆದಿರುವಂತೆ "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ."**

## ಕ್ರಿಸ್ತನ ಮರಣದ ಮತ್ತು ಪುನರುತ್ಥಾನದ ಉದ್ದೇಶ:

- ನಮ್ಮ ಮೇಲೆ ದೇವರಿಗಿರುವ ಪ್ರೀತಿಯನ್ನು ಪ್ರದರ್ಶಿಸಲು

  ರೋಮಾಪುರದವರಿಗೆ 5:8
  **ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನು ಸಿದ್ಧಾಂತ ಪಡಿಸಿದ್ದಾನೆ.**

- ಪಾಪಿಗಳನ್ನು ರಕ್ಷಿಸುವುದು

  1 ತಿಮೊಥೆಯನಿಗೆ 1:15
  **ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬ ವಾಕ್ಯವು ನಂಬತಕ್ಕದ್ದಾಗಿಯೂ ಸರ್ವಾಂಗೀಕಾರಕ್ಕೆ ಯೋಗ್ಯವಾದದ್ದಾಗಿಯೂ ಅದೆ; ಆ ಪಾಪಗಳಲ್ಲಿ ನಾನೇ ಮುಖ್ಯನು.**

  1 ಯೋಹಾನ 4:14
  **ತಂದೆಯು ತನ್ನ ಮಗನನ್ನು ಲೋಕ ರಕ್ಷಕನನ್ನಾಗಿ ಕಳುಹಿಸಿ ಕೊಟ್ಟಿರುವುದನ್ನು ನಾವು ನೋಡಿದ್ದೇವೆ, ಅದರ ವಿಷಯದಲ್ಲಿ ಸಾಕ್ಷಿ ಹೇಳುತ್ತೇವೆ.**

- ನಮ್ಮನ್ನು ದೇವರ ಬಳಿಗೆ ತರುವುದು

  1 ಪೇತ್ರನು 3:18
  **ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವದಕ್ಕಾಗಿ ಒಂದೇ ಸಾರಿ ಪಾಪ ನಿವಾರಣಕ್ಕೋಸ್ಕರ ಬಾಧೆ ಪಟ್ಟು ಸತ್ತನು. ಆತನು ಶರೀರ ಸಂಬಂಧದಲ್ಲಿ ಕೊಲ್ಲಲ್ಪಟ್ಟನು ಆತ್ಮ ಸಂಬಂಧದ್ದಲ್ಲಿ ತಿರಿಗಿ ಬದುಕುವವನಾದನು.**

- ಸೈತಾನನ ಕ್ರಿಯೆಗಳನ್ನು ನಾಶಗೊಳಸುವುದು

  1 ಯೋಹಾನ 3:8
  **ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪ ಮಾಡುವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು.**

  1 ಯೋಹಾನ 3:8
  **ಒಂದೇ ಸಾರಿ ಎಲ್ಲರಿಗೋಸ್ಕರ ತನ್ನನ್ನು ತಾನೇ ಸಮರ್ಪಿಸಿಕೊಂಡು ಪಾಪವನ್ನು ತೆಗೆದುಹಾಕಲು ಯೇಸುವು ಕಾಣಿಸಿಕೊಂಡನು**

  ಇಬ್ರಿಯರಿಗೆ 9:26
  **ಆತನು ಲೋಕಾದಿಯಿಂದ ಎಷ್ಟೋ ಸಾರಿ ಬಾಧೆಪಟ್ಟು ಸಾಯಬೇಕಾಗಿತ್ತು. ಆದರೆ ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞ ಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು.**

- ಯೇಸು ಕ್ರಿಸ್ತನು ನಂಬಿಕೆಯಿಂದ ಆತನ ಬಳಿಗೆ ಬರುವವರೆಲ್ಲರನ್ನೂ ರಕ್ಷಿಸಲು ಶಕ್ತನಾಗಿದ್ದಾನೆ.

  ಇಬ್ರಿಯರಿಗೆ 7:25
  **ಆದಕಾರಣ ಆತನು ತನ್ನ ಮೂಲಕವಾಗಿ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದ್ದಕ್ಕೆ ಶಕ್ತನಾಗಿದ್ದಾನೆ. ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.**

## ಯೇಸುವನ್ನು ನಂಬಿದರಿಗೆ

- ಪಾಪಗಳ ಕ್ಷಮಾಪಣೆ

  ಅಪೊಸ್ತಲರ ಕೃತ್ಯಗಳು 10:43
  **ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರೂ ಸಾಕ್ಷಿ ಹೇಳಿದ್ದಾರೆ ಅಂದನು.**

  1 ಯೋಹಾನ 2:12
  **ಪ್ರಿಯರಾದ ಮಕ್ಕಳೇ, ಕ್ರಿಸ್ತನ ಹೆಸರಿನ ನಿಮಿತ್ತ ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದರಿಂದ ನಿಮಗೆ ಬರೆಯುತ್ತೇನೆ.**

**ಕ್ರೈಸ್ತತ್ವವು ಒಂದು ಧರ್ಮವಲ್ಲ.**
**ಕ್ರೈಸ್ತತ್ವವು ಕ್ರಿಸ್ತನ ಶಿಲುಬೆಯ ಮುಖಾಂತರವಾಗಿ ನೀವೂ ದೇವರೊಂದಿಗೆ ಸಂಬಂಧವನ್ನು ಹೊಂದುವಂತೆ ಮಾಡುತ್ತದೆ!**

- ನಿತ್ಯ ಜೀವವನ್ನು ಪಡೆಯುತ್ತಾರೆ (ದೇವರ ಜೀವ ಮತ್ತು ಸಹಜಗುಣ)

  1 ಯೋಹಾನ 5:11,12
  **ಆ ಸಾಕ್ಷಿ ಯಾವದಂದರೆ ದೇವರು ನಮಗೆ ನಿತ್ಯ ಜೀವವನ್ನು ಅನುಗ್ರಹಿಸಿದನು. ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೂ ಅವನಿಗೆ ಆ ಜೀವವಿಲ್ಲ.**

- ರಕ್ಷಣೆ

  ರೋಮಾಪುರದವರಿಗೆ 10:9,10
  **ಅದೇನಂದರೆ, ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ.**

- ಅಂಧಕಾರದಿಂದ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ತಂದನು.

  ಕೊಲೊಸ್ಸೆಯವರಿಗೆ 1:13-14.
  **ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.**

- ದೇವರ ಮಕ್ಕಳಾಗಿ ಮಾಡಿದನು.

  ಯೋಹಾನ 1:12
  **ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.**

- ನೂತನ ಸೃಷ್ಟಿಯಾದರು

  2 ಕೊರಿಂಥದವರಿಗೆ 5:17
  **ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**

- ......ಇನ್ನೆಷ್ಟೋ ಅಧಿಕವಾಗಿ.......

## ಯೇಸುಕ್ರಿಸ್ತನ ಮುಖಾಂತರವಾಗಿ ಹೊರತು ರಕ್ಷಣೆಯಿಲ್ಲ

ಅಪೊಸ್ತಲರ ಕೃತ್ಯಗಳು 4:12
**ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆ ಯಾಗುವದಿಲ್ಲ.**

ಯೋಹಾನ 14:6
**ಯೇಸು ಅವನಿಗೆ –"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಗೆ ಬರುವದಿಲ್ಲ"**

## ಆತನ ಪ್ರೀತಿಯ ಮೂಲಕವಾಗಿ ಒದಗಿಸಲಾದ ರಕ್ಷಣೆಯನ್ನು ನಾನು ಹೇಗೆ ಪಡೆಯುವುದು?

> ರಕ್ಷಣೆಯು ಗ್ರಹಿಸತಕ್ಕದಾಗಿರುವ ಒಂದು (ಕಟ್ಟು) ಕಂತೆ.

- ಪಶ್ಚಾತಾಪ ಪಟ್ಟು ಕರ್ತನಾದ ಯೇಸು ಕ್ರಿಸ್ತನು ಶಿಲುಬೆಯಲ್ಲಿ ಮಾಡಿದ್ದರ ಮೇಲೆ ನಂಬಿಕೆಯಿಡು.

  ಅಪೊಸ್ತಲರ ಕೃತ್ಯಗಳು 16:31
  **ಅವರು –"ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು" ಎಂದು ಹೇಳಿದರು.**

- ಆತನನ್ನು ನಿಮ್ಮ ಜೀವನದ ಒಬ್ಬನೇ ಕರ್ತನೂ (ಪ್ರಭುವೂ) ರಕ್ಷಕನೂ ಎಂದು ಒಪ್ಪಿ ಅರಿಕೆಮಾಡಿರಿ.

  ರೋಮಾಪುರದವರಿಗೆ 10:9,10
  **ಅದೇನಂದರೆ– ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೋಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ.**

- ಆತನನ್ನು ನಿಮ್ಮ ಜೀವನದೊಳಗೆ ಸ್ವಾಗತಿಸಿರಿ (ಅಂಗೀಕರಿಸಿರಿ)

  ಯೋಹಾನ 1:12
  **ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.**

- ಈ ಅನುಭವವನ್ನು ಬೈಬಲ್ "ಹೊಸದಾಗಿ ಹುಟ್ಟುವುದು" ಎಂದು ಕೂಡ ಕರೆಯುತ್ತದೆ.

  ಯೋಹಾನ 3:3
  **ಯೇಸು ಅವನಿಗೆ – "ನಾನು ನಿನಗೆ ನಿಜ ನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು" ಅಂದನು**

### ರಕ್ಷಣೆಯು (ಸೋಜೊ) ಒಂದು ಸಂಪೂರ್ಣ ಗ್ರಹಿಸತಕ್ಕದಾದ ಒಂದು ಕಟ್ಟು (ಕಂತೆ) ಆಗಿದೆ.

ಸೋಜೋವು ಒಂದು ಗ್ರೀಕ್ ಪದವಾಗಿದ್ದು ಅದು ನಮ್ಮ ಹೊಸ ಒಡಂಬಡಿಕೆಯಲ್ಲಿ 110 ಬಾರಿಗೂ ಹೆಚ್ಚು ಕಂಡುಬರುತ್ತದೆ.


**ರಕ್ಷಣೆಗೆ** ಸೋಜೋ ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿ ಅತ್ಯಧಿಕವಾಗಿ ಉಪಯೋಗಿಸಲ್ಪಟ್ಟಿದೆ.

ಸೋಜೋ ಒಂದು ಕ್ರಿಯಾಪದ; ಕ್ರಿಯೆಯನ್ನು ಸೂಚಿಸುವ ಪದ. ನಡೆದ ಏನೋ ಒಂದು ವಿಷಯ ದೇವರ ಒಂದು ಕೆಲಸದಿಂದಾಗಿ ಏನೋ ನಡೆಯುವ ವಿಷಯ.

ಸೋಜೋ ಎಂಬ ಪದವು ಆತ್ಮಿಕ ರಕ್ಷಣೆಯನ್ನೊಳ ಗೊಂಡಿರುವ ಗ್ರಹಿಸತಕ್ಕ ಒಂದು ಕಟ್ಟು: ಅಂದರೆ, ಪಾಪಗಳ ಕ್ಷಮಾಪಣೆ, ರೋಗಗಳನ್ನು ವಾಸಿಮಾಡುವಿಕೆ, ವೈರಿಯ ಪ್ರತಿಯೊಂದು. ಕೆಲಸದಿಂದ ವಿಮೋಚನೆ, ಗಂಡಾಂತರ ಮತ್ತು ಹಾನಿಗಳಿಂದ ಬಿಡಿಸುವುದು ಅಥವಾ ಅದರಲ್ಲಿ ಕಾಪಾಡುವುದು, ಮತ್ತು ಪೂರ್ಣ ಸಂಪೂರ್ಣತೆ.

ಇದರ ಅರ್ಥ ರಕ್ಷಣೆ, ಗುಣ ಹೊಂದುವಿಕೆ, ವಿಮೋಚಿಸಲ್ಪಡುವಿಕೆ ಜಯ, ಬಿಡುಗಡೆ, ಕಾಪಾಡಲ್ಪಡುವಿಕೆ. ಇವೆಲ್ಲವೂ ಏಕ ಕಾಲದಲ್ಲಿ ನಡೆಯುವುದು.

ಸೋಜೋ ಎಂದರೆ ದೆವ್ವದ ಶಕ್ತಿಯ ಅಧೀನತೆಯಿಂದ ರಕ್ಷಿಸಲ್ಪಟ್ಟು ದೇವರ ಆತ್ಮನ ಬಲದಿಂದ ದೇವರ ಕ್ರಮ, ವ್ಯವಸ್ಥೆ ಮತ್ತು ಸಂಪೂರ್ಣತೆಗೆ ಪುನಃ ಸೇರಿಸಲ್ಪಡುವುದು.




ಸೋಜೋ ಎಂದರೆ ಆತ್ಮಿಕ ರಕ್ಷಣೆ – ಪಾಪಗಳ ಕ್ಷಮಾಪಣೆ.

ಮತ್ತಾಯ 1:21
**ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೆ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು.**

ಅಪೊಸ್ತಲರ ಕೃತ್ಯಗಳು 4:12

**ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ.**

ರೋಮಾಪುರದವರಿಗೆ 10:9
**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು.**

ಎಫೆಸದವರಿಗೆ 2:8
**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ.**

ಸೋಜೋ ಎಂದರೆ ದೈಹಿಕ ಸ್ವಸ್ಥತೆ ಹೊಂದುವಿಕೆ

ಮತ್ತಾಯ 9:22
**ರಕ್ತಸ್ರಾವವಿದ್ದ ಸ್ತ್ರೀ (ಸೋಜೋ) ಹೊಂದಿದಳು. ಆಗ ಯೇಸು ಹಿಂತಿರುಗಿ ಆಕೆಯನ್ನು ನೋಡಿ – " ಮಗಳೆ, ಧೈರ್ಯವಾಗಿರು, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿತು (ಸೋಜೋ) ಅಂದನು. ಆ ಕ್ಷಣವೇ ಆ ಹೆಂಗಸು ಸ್ವಸ್ಥ (ಸೋಜೋ) ವಾದಳು.**

ಮಾರ್ಕ 6:56
ಗೆನೆಜರೇತ್ ಸೀಮೆಯ ಜನರೆಲ್ಲರೂ ದೈವಿಕ ಸೋಜೋದಿಂದ ಸ್ಪರ್ಶಿಸಲ್ಪಟ್ಟರು (ಮುಟ್ಟಲ್ಪಟ್ಟರು).

**"ಆತನು ಯಾವ ಗ್ರಾಮಗಳಿಗೂ ಯಾವ ಊರು ಹಳ್ಳಿಗಳಿಗೂ ಹೋದನೋ ಅಲ್ಲಿಯವರು ರೋಗಿಗಳನ್ನ ಪೇಟೆಗಳಲ್ಲಿ ಇಟ್ಟು – ನಿನ್ನ ಉಡುಪಿನ ಗೊಂಡೆಯನ್ನಾದರೂ ಮುಟ್ಟಗೊಡಿಸಬೇಕೆಂದು ಆತನನ್ನು ಬೇಡಿಕೊಂಡರು; ಆತನನ್ನು ಮುಟ್ಟಿದವರೆಲ್ಲರೂ ಸ್ವಸ್ಥರಾದರು" (ಸೋಜೋ)**

ಮಾರ್ಕ 10:52
ಕುರುಡನಾದ ಬಾರ್ತಿಮಾಯನು ಸೋಜೋ ತಿಳಿದನು.
**ಯೇಸು ಅವನಿಗೆ –"ಹೋಗು, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿ ಅದೆ ಎಂದು ಹೇಳಿದನು" ಅಂದನು. ಕೂಡಲೇ ಅವನಿಗೆ ಕಣ್ಣು ಬಂದವು; ಅವನು ಆ ದಾರಿಯಲ್ಲಿ ಆತನ ಹಿಂದೆ ಹೋದನು.**

ಯಾಕೋಬನು 5:13–16
**ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು (ಸೋಜೋ)**

ಸೋಜೋ ಎಂದರೆ ದೆವ್ವಗಳ ಶಕ್ತಿಯಿಂದ ಬಿಡುಗಡೆ

ಲೂಕ 8: 36

ಗೆರಸೇನ ಸೀಮೆಯ ದೆವ್ವ ಪೀಡಿತನನ್ನು ಬಿಡುಗಡೆ ಮಾಡಿದ್ದು ದೇವರ ಸೋಜೋ.

**"ನಡೆದ ಸಂಗತಿಯನ್ನು ನೋಡಿದ್ದವರು ಆ ದೆವ್ವ ಹಿಡಿದಿದ್ದವನಿಗೆ ಬಿಡುಗಡೆಯಾದ ರೀತಿಯನ್ನು (ಸೋಜೋವನ್ನು) ಜನರಿಗೆ ತಿಳಿಸಿದರು."**

ಯೂದನು 1:5

ಮತ್ತು ಯೂದನಿಗೆ ಇದು ತಿಳಿದಿತ್ತು.

**"ನೀವು ಸಮಸ್ತವನ್ನು ಮೊದಲೇ ತಿಳಿದವರಾಗಿದ್ದರೂ ನಾನು ಮುಂದಣ ಕೆಲವು ಸಂಗತಿಗಳನ್ನು ನಿಮ್ಮ ಜ್ಞಾಪಕಕ್ಕೆ ತರಬೇಕೆಂದು ಅಪೇಕ್ಷಿಸುತ್ತೇನೆ. ಅವು ಯಾವವೆಂದರೆ – ಕರ್ತನು ತನ್ನ ಪ್ರಜೆಯನ್ನು ಐಗುಪ್ತ ದೇಶದೊಳಗಿಂದ ಬಿಡಿಸಿದ (ಸೋಜೋ) ತರುವಾಯ ಅವರೊಳಗೆ ನಂಬದೆ ಹೋದವರನ್ನು ನಾಶಮಾಡಿದನು."**

ಸೋಜೋ ಎಂದರೆ ಬಿಡುಗಡೆ ಮಾಡು/ ಆಪತ್ತಿನಲ್ಲಿ ಸಂರಕ್ಷಿಸು

ಮತ್ತಾಯ 8:25
ಸಮುದ್ರದಲ್ಲಿ ಮುಳುಗುತ್ತಿರುವ ತಮ್ಮನ್ನು ರಕ್ಷಿಸಬೇಕೆಂದು ಶಿಷ್ಯರು ಕೂಗಿದರು.

**ಅವರು ಹತ್ತಿರ ಬಂದು ಆತನನ್ನು ಎಬ್ಬಿಸಿ – ಸ್ವಾಮೀ ಕಾಪಾಡು. (ಸೋಜೋ) ಸಾಯುತ್ತೇವೆ! ಅನ್ನಲಾಗಿ.**

2 ತಿಮೊಥೆಯನಿಗೆ 4:18
ಪೌಲನು ಅವನ ಸ್ನೇಹಿತವಾದ ತಿಮೊಥೆಯನಿಗೆ ದೇವರ ಕಾಪಾಡುವ (ಸೋಜೋ) ಶಕ್ತಿಯ ಕುರಿತು ಬರೆದನು
**"ನಾನು ಯಾವ ದುಷ್ಕೃತ್ಯವನ್ನೂ ಮಾಡದಂತೆ ಕರ್ತನು ನನ್ನನ್ನು ಕಾಪಾಡಿ (ಸೋಜೋ) ತನ್ನ ಬಳಿಗೆ ಪರಲೋಕ ರಾಜ್ಯಕ್ಕೇ ಸೇರಿಸುವನು. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ. ಆಮೇನ್."**

**ಸೋಜೋ ಪ್ರತಿಯೊಬ್ಬನಿಗಾಗಿದೆ**

ಸೋಜೋ ಪ್ರತಿಯೊಬ್ಬನಿಗಾಗಿದೆ

ಮತ್ತಾಯ 18:11
**"ಮನುಷ್ಯಕುಮಾರನು ಕಳೆದು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೋಸ್ಕರ ಬಂದನು"**

ಸೋಜೋವನ್ನು ನಂಬಿಕೆಯ ಮೂಲಕ ಕೃಪೆಯಿಂದ ಹೊಂದುತ್ತೇವೆ.

ಮತ್ತಾಯ 9: 21–22
**ಒಬ್ಬ ಹೆಂಗಸು – "ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು ಎಂದು ಮನಸ್ಸಿನಲ್ಲಿ ಅಂದುಕೊಂಡು "ಹಿಂದಿನಿಂದ ಬಂದು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದಳು. ಆಗ ಯೇಸು ಹಿಂತಿರುಗಿ ಆಕೆಯನ್ನು ನೋಡಿ "ಮಗಳೇ, ಧೈರ್ಯವಾಗಿರು; ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು" ಅಂದನು. ಆ ಕ್ಷಣವೆ ಆ ಹೆಂಗಸು ಸ್ವಸ್ಥವಾದಳು.**

ಎಫೆಸದವರಿಗೆ 2:8,9
**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಟಾದದ್ದಲ್ಲ, ಅದು ದೇವರ ವರವೇ; ಅದು ಪುಣ್ಯಕ್ರಿಯೆಗಳಿಂದುಂಟಾದದ್ದಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ.**

ನೀವು ನಿಮ್ಮ ಹೃದಯದಿಂದ ನಂಬಿ ಬಾಯಿಂದ ಅರಿಕೆ ಮಾಡಿದಾಗ ಸೋಜೋ ಸಂಭವಿಸುತ್ತದೆ.

ರೋಮಾಪುರದವರಿಗೆ 10:9,10
**ಅದೇನಂದರೆ, ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ"**

## ರಕ್ಷಣೆಯ ಸಿದ್ಧಾಂತ

ಒಬ್ಬನು ರಕ್ಷಣೆಯ ಸಿದ್ಧಾಂತವನ್ನು ಇನ್ನೊಬ್ಬನಿಗೆ ತಿಳಿಯ ಹೇಳ ಬೇಕಾದರೆ ಮೊದಲು ಅವನು ರಕ್ಷಣೆಯ ಸಿದ್ಧಾಂತವನ್ನು ತಿಳಿದು ಕೊಳ್ಳಬೇಕು. ಒಬ್ಬನನ್ನು ಪರಿಣಾಮಕಾರಿಯಾಗಿ ಕ್ರಿಸ್ತನ ಬಳಿಗೆ ನಡಿಸಬೇಕಾದರೆ ಅವನು ಈ ಅಸ್ತಿವಾರದ ಸತ್ಯಗಳನ್ನ ತಿಳಿದಿರತಕ್ಕದ್ದು

ರಕ್ಷಣೆಯ ಸಿದ್ಧಾಂತ ಐದು ಮುಖ್ಯ ಭಾಗಗಳುಳ್ಳದ್ದಾಗಿದೆ: **ದೇವರು, ಮನುಷ್ಯನು, ಕ್ರಿಸ್ತನು, ಕೃಪೆ, ನಂಬಿಕೆ.**

## ದೇವರು


ನ್ಯಾಯವಂತನು – ಅದುದರಿಂದ ಪಾಪವನ್ನು ಶಿಕ್ಷಿಸಬೇಕು.

ಯೆಹೆಜ್ಕೇಲನು 18:4
**ಪಾಪ ಮಾಡಿದ ಪ್ರಾಣಿಯೇ ಸಾಯುವನು**

ಕರುಣೆಯುಳ್ಳವನು – ಆದುದರಿಂದ ನಮ್ಮನ್ನ ಶಿಕ್ಷಿಸಲು ಇಷ್ಟ ಪಡುವುದಿಲ್ಲ.

1 ಯೊಹಾನ 4:8
**ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕೆಂದರೆ ದೇವರು ಪ್ರೀತಿ ಸ್ವರೂಪಿಯು.**

**ಹೀಗೆ ಇವೆಲ್ಲವು ನನ್ನನ್ನು ಪರಲೋಕಕ್ಕೆ ಒಯ್ಯುವುದಿಲ್ಲ?**




## ಮನುಷ್ಯನು

ಒಬ್ಬ ಪಾಪಿ

ರೋಮಾಪುರದವರಿಗೆ 3:23
**ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.**

ತನ್ನನ್ನು ರಕ್ಷಿಸಿಕೊಳ್ಳಲಾರನು

ಎಫೆಸದವರಿಗೆ 2:8–9
**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ; ಅದು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ.**

## ಕ್ರಿಸ್ತನು

ಆತನು ಅನಂತನಾದ ದೇವ – ಮಾನವನು

ಯೋಹಾನ 1:1
**ಆದಿಯಲ್ಲಿ ವಾಕ್ಯವಿತ್ತು ; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು.**

ಯೋಹಾನ 1:14
**ಆ ವಾಕ್ಯವೆಂಬವನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು.**

ನಮ್ಮ ಪಾಪಗಳಿಗೆ ಆತನು ಪ್ರಾಯಶ್ಚಿತ್ತ ಕೊಟ್ಟು ನಮಗಾಗಿ ಪರಲೋಕದಲ್ಲಿ ಸ್ಥಳವನ್ನು ಸಿದ್ಧಮಾಡಿ ಅದನ್ನು ನಮಗೆ ಉಚಿತದಾನವಾಗಿ ನೀಡುತ್ತಿದ್ದಾನೆ.

ಯೆಶಾಯ 53:6
**ನಾವೆಲ್ಲರೂ ಕುರಿಗಳಂತೆ ದಾರಿ ತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು.**

## ಕೃಪೆ

ರಕ್ಷಣೆಯು ಒಂದು ಉಚಿತವಾದ ವರ(ದಾನ)

ರೋಮಾಪುರದವರಿಗೆ 6:23
**ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿರುವ ನಿತ್ಯಜೀವ.**

## ನಂಬಿಕೆ

ಅದು ಏನು ಆಗಿಲ್ಲ – ಅದು ಬರೇ ಬೌದ್ಧಿಕ, ಮಾನಸಿಕ ಒಪ್ಪಿಗೆ ಅಥವಾ ಸಹಜ. ನಂಬಿಕೆಯಲ್ಲ.

ಅದು ಏನಾಗಿದೆ – "ರಕ್ಷಣೆಗಾಗಿ ಯೇಸು ಕ್ರಿಸ್ತನಲ್ಲಿ ಮಾತ್ರ ನಂಬಿಕೆಯಿಡುವುದು."

**ನಿಮ್ಮ ನಂಬಿಕೆಯ ಗುಣ ಮಟ್ಟದಿಂದ ನೀವು ರಕ್ಷಿಸಲ್ಪಡುವುದಿಲ್ಲ, ಆದರೆ ಯಾವುದರಲ್ಲಿ ನಂಬಿಕೆಯಿಟ್ಟಿದ್ದೀರೋ ಅದರ ಮೂಲಕವಾಗಿ!**


ಎಫೆಸದವರಿಗೆ 2:8
**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದ್ದೀರಿ.**

ರೋಮಾಪುರದವರಿಗೆ 10:9
**ಅದೇನಂದರೆ, ನೀನು "ಯೇಸುವನ್ನೇ ಕರ್ತನೆಂದು" ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು.**

**ನಿರ್ಧರಿಸುವ ಅಂಶ**

- ಎಲ್ಲರಿಗೂ ರಕ್ಷಣೆಯನ್ನು ಒದಗಿಸಲು ಆತನು ಮಾಡಬೇಕಾದವುಗಳೆಲ್ಲವನ್ನೂ ಈಗಾಗಲೇ ಮಾಡಿದ್ದಾನೆ. ಕ್ರಿಸ್ತನು ಪ್ರತಿಯೊಬ್ಬ ಮಾನವ ಜೀವಿಗಾಗಿ ಸತ್ತನು.
- ಎಲ್ಲರೂ ರಕ್ಷಣೆ ಹೊಂದಬೇಕೆಂಬುದು ಆತನ ಚಿತ್ತವಾಗಿದೆ ಮತ್ತು ಆತನು ಎಲ್ಲರಿಗೂ ತನ್ನ ಕೃಪೆಯನ್ನು ನೀಡುತ್ತಾನೆ.

- ಪ್ರತಿಯೊಬ್ಬ ವ್ಯಕ್ತಿಗೂ ಈಗ ಉಳಿದಿರುವ ಒಂದೇ ವಿಷಯವೇನೆಂದರೆ ದೇವರು ತನ್ನ ಅತಿಶಯವಾದ ಪ್ರೀತಿ ಮತ್ತು ಕೃಪೆಗಳಿಂದ ನಮಗೆ ಉಚಿತವಾಗಿ ಕೊಡುತ್ತಿರುವ ಈ ದಾನವನ್ನು ನಂಬಿಕೆಯಿಂದ ಸ್ವೀಕರಿಸುವುದು.




## ತಪ್ಪು ಕಲ್ಪನೆಗಳು

"ನಾನು ಯೇಸುವಿನಲ್ಲಿ ನಂಬಿಕೆ ಇಟ್ಟಿದ್ದೇನೆ ಆದರೆ ನಾನು ಇತರ ಸಂತರನ್ನು ಮರಿಯಳನ್ನು, ಗುರುಗಳನ್ನೂ ಸಹ ನಂಬುತ್ತೇನೆ."

ಬೈಬಲ್‌ನ ಉತ್ತರ :

ಅಪೊಸ್ತಲರ ಕೃತ್ಯಗಳು 4:12
**ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ.**

ಸೇರ್ಪಡೆಯ ಸಿದ್ಧಾಂತ

ಯೇಸು ಪ್ರತಿಯೊಬ್ಬನಿಗಾಗಿಯೂ ಸತ್ತದ್ದರಿಂದ ಪ್ರತಿಯೊಬ್ಬನೂ ಸ್ವಯಂಚಾಲಿತವಾಗಿ ರಕ್ಷಿಸಲ್ಪಡುತ್ತಾನೆ.

ಬೈಬಲ್‌ನ ಉತ್ತರ :

ಯೋಹಾನ 3:16
**ನಾನು ರಕ್ಷಿಸಲ್ಪಡಬೇಕಾದರೆ ನಾವು ಪಶ್ಚಾತಾಪ ಪಟ್ಟು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡಬೇಕು.**

**ದೇವರು ರಕ್ಷಣೆಗಾಗಿ ಮಾಡ ಬೇಕಾದದ್ದೆಲ್ಲವನ್ನು ಮಾಡಿದ್ದಾನೆ. ನಿಮ್ಮ ವಿಷಯವೇನು?**

ಪೂರ್ವ ಸಂಕಲ್ಪ ಸಿದ್ಧಾಂತದ ಒಂದು ತಪ್ಪು ತಿಳುವಳಿಕೆ

"ಯಾರು ರಕ್ಷಿಸಲ್ಪಡುವರು ಯಾರು ರಕ್ಷಿಸಲ್ಪಡುವುದಿಲ್ಲ ಎಂಬದಾಗಿ ದೇವರು ಈಗಾಗಲೇ ನಿರ್ಧರಿಸಿದ್ದಾನೆ."

ಬೈಬಲ್‌ನ ಉತ್ತರ:

**ದೈವ ನಿರ್ಣಯ ಪೂರ್ವ ನಿರ್ಣಯ ಅಲ್ಲ**

ರೋಮಾಪುರದವರಿಗೆ 8:29, 30
ಪ್ರತಿಯೊಬ್ಬನು ಮಾಡುವ ತೀರ್ಮಾನವನ್ನು ದೇವರು ಮೊದಲೇ ತಿಳಿದಿದ್ದಾನೆ. ಆದರೂ ನಾವು ಮಾಡುವ ಆಯ್ಕೆಯನ್ನು ಮೊದಲೇ ನಿರ್ಧರಿಸುವುದಿಲ್ಲ. ಮಾಡುವ ಆಯ್ಕೆಯು ಇನ್ನೂ ನಮ್ಮದೇ. ನಾವು ಏನಾಗಬೇಕೆಂದು ಆತನು ನಿರ್ಧರಿಸಿದ್ದಾನೋ ಅದು ಪೂರ್ವ ಸಂಕಲ್ಪ ತನ್ನ ಮಗನ ಸಾರೂಪ್ಯವುಳ್ಳವರಾಗಬೇಕೆಂದು ಮೊದಲೇ ನಿರ್ಧರಿಸಿದ್ದು – ನಾವು ಮಾಡುವ ಆಯ್ಕೆಯಲ್ಲ.

ಮುಖ್ಯ ಕಂಠಪಾಠ ವಚನಗಳು

ಅಪೊಸ್ತಲರ ಕೃತ್ಯಗಳು 4:12
**"ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆ ಯಾಗುವದಿಲ್ಲ."**

ಇಬ್ರಿಯರಿಗೆ 7:25
**"ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ. ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ"**

ರೋಮಾಪುರದವರಿಗೆ 10:9,10
**"ಅದೇನಂದರೆ ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ. ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ."**

# ಅನ್ವಯ

1. ನೀವು ಯೇಸು ಕ್ರಿಸ್ತನನ್ನು ನಿಮ್ಮ ರಕ್ಷಕನೆಂದು ಆತನಲ್ಲಿ ಭರವಸೆಯಿಟ್ಟು ನಿಮ್ಮ ಜೀವನವನ್ನು ಆತನಿಗೆ ಒಪ್ಪಿಸಿದ್ದೀರೋ? ಆ ತೀರ್ಮಾನವನ್ನು ಮಾಡಿದ ದಿನ ನಿಮಗೆ ಯಾವ ಅನುಭವವಾಯಿತೆಂದು ಕೆಲವು ವಾಕ್ಯಗಳಲ್ಲಿ ವಿವರಿಸಿ ಬರೆಯಿರಿ.

2. ರಕ್ಷಣೆಯ ಯೋಜನೆಯನ್ನು ನಾನು ಇನ್ನೊಬ್ಬರಿಗೆ ವಿವರಿಸಿ ಹೇಳಲು ಸಾಧ್ಯವಾಗುವಂತೆ ನಾನು ಈ ಯೋಜನೆಯನ್ನು ಸ್ಪಷ್ಟವಾಗಿ ತಿಳಿದಿದ್ದೇನೋ? ನನ್ನ ಆಪ್ತ ಸ್ನೇಹಿತನಿಗೆ ನಾನು ರಕ್ಷಣೆಯ ಈ ಯೋಜನೆಯನ್ನು ಹಂಚಿಕೊಳ್ಳಲಾಗುವಂತೆ ನಾನು ಸಂಭಾಷಣೆಯನ್ನು ಪ್ರಾರಂಭಿಸಬಹುದಾದ ಕೆಲವು ರೀತಿಗಳಾವುವು?

3. ರಕ್ಷಣೆಯು – ಮನುಷ್ಯನ ಬೀಳುವಿಕೆ ಮತ್ತು ಅದರ ಪರಿಣಾಮಗಳಿಂದ ಸಂಪೂರ್ಣ ವಿಮೋಚನೆಯ – ನಾನು ಗ್ರಹಿಸತಕ್ಕ ಒಂದು ಸಂಪೂರ್ಣ ಕಟ್ಟು ಎಂದು ನಾನು ತಿಳಿಯುತ್ತೇನೋ? ಸೋಜೋ ಪದವು ಕೊಡುವ ಅದರ ಎಲ್ಲಾ ಅಭಿಪ್ರಾಯಗಳನ್ನು ಕೆಳಗೆ ಪಟ್ಟಿ ಮಾಡಿರಿ.

# 3

# ರಕ್ಷಣೆ ಮತ್ತು ಕ್ಷಮಾಪಣೆಗಳ ಭರವಸೆ

ಕ್ರಿಸ್ತನಲ್ಲಿ ಭರವಸೆವಿಡುವ (ನಂಬಿಕೆಯಿಡುವ) ಪ್ರತಿಯೊಬ್ಬ ವಿಶ್ವಾಸಿಯು ದೇವರಿಂದ ಉಚಿತವಾದ ರಕ್ಷಣೆ ಮತ್ತು ಪಾಪ ಕ್ಷಮಾಪಣೆಯ ಭರವಸೆ ಹೊಂದಿದ್ದಾನೆ ಎಂಬ ಸತ್ಯವನ್ನು ನಮಗೆ ಕಲಿಸಲು ಈ ಪಾಠವು ರಚಿಸಲ್ಪಟ್ಟಿದೆ. ವಿಶ್ವಾಸಿಗಳು ತಾವು ರಕ್ಷಿಸಲ್ಪಟ್ಟಿದ್ದಾರೆ. ಅಲ್ಲದೆ ಅಪರಾಧದ ಭಾವನೆ, ನಾಚಿಕೆ ಮತ್ತು ಖಂಡನೆಗಳನ್ನೂ ಜಯಿಸಿದ್ದಾರೆ ಎಂದು ಖಚಿತವಾಗಿ ತಿಳಿದುಕೊಳ್ಳಬಹುದು.

## ರಕ್ಷಣೆಯ ಭರವಸೆ

ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಮತ್ತು ನೀವು ನಿಶ್ಚಯವಾಗಿ ರಕ್ಷಣೆ ಹೊಂದಿದ್ದೀರಿ ಎಂದು ನೀವು ತಿಳಿದುಕೊಳ್ಳಲು ಸಾಧ್ಯವೋ? ನೀವು ಪರಲೋಕದ ದಾರಿಯಲ್ಲಿದ್ದೀರಿ ಎಂದು ಖಚಿತವಾಗಿ ತಿಳಿಯಬಹುದೋ? ಪಾಪದ ಶಾಶ್ವತ ಪರಿಣಾಮಗಳಿಂದ ದೇವರು ನಿಮ್ಮನ್ನು ರಕ್ಷಿಸಿದ್ದಾನೆ ಎಂದು ನಿಸ್ಸಂದೇಹವಾಗಿ ತಿಳಿಯ ಬಹುದೋ?

### ರಕ್ಷಣೆಯ ಭರವಸೆಯ ಅಸ್ತಿವಾರದ ಮೂಲವಸ್ತು (ಮೂಲ ವಿಷಯ)

ನೀವು ರಕ್ಷಿಸಲ್ಪಟ್ಟಿದ್ದೀರಿ ಎಂದು ನೀವು ನಿಶ್ಚಯವಾಗಿ ತಿಳಿಯ ಬಹುದು. ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ, ನೀವು ರಕ್ಷಣೆ ಹೊಂದಿದ್ದೀರಿ ನಿಸ್ಸಂದೇಹ ಭರವಸೆ ಅಥವಾ ಭದ್ರತೆ ನೀನು ಹೊಂದಬಹುದು.

ಈ ಮೂಲ ವಿಷಯಗಳು ನಿಮ್ಮ ಭರವಸಕ್ಕೆ ಒಳನೋಟ ಒದಗಿಸುತ್ತವೆ.

- ಸತ್ಯವೇದದ ಅಧಿಕಾರ
- ಕ್ರಿಸ್ತನ ಸಾಧಿಸಿ ಮುಗಿಸಿದ ಕೆಲಸ
- ಕ್ರಿಸ್ತನಲ್ಲಿ ನಿಮ್ಮ ನಂಬಿಕೆ
- ಪವಿತ್ರಾತ್ಮನ ಭರವಸೆ
- ಮಾರ್ಪಾಟಾದ ಜೀವನದ ಸಾಕ್ಷಿ.

### ಸತ್ಯವೇದದ ಅಧಿಕಾರ

ದೇವರು ಆತನ ವಾಕ್ಯದಲ್ಲಿ ಒಂದು ದೃಢವಾದ ಅಸ್ತಿವಾರವನ್ನು ಒದಗಿಸಿದ್ದಾನೆ. ಆತನ ವಾಕ್ಯವು ಸತ್ಯವಾಗಿದೆ (ಯೋಹಾನ 17:17) ಆತನ ವಾಗ್ದಾನದ ವಾಕ್ಯವು ನಮ್ಮ ರಕ್ಷಣೆಯ ಭದ್ರತೆ (ಭರವಸೆ).

> 1 ಯೋಹಾನ 5:11–13
> **ಆ ಸಾಕ್ಷಿ ಯಾವದಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು ಆ ಜೀವವು ಆತನ ಮಗನಲ್ಲಿ ಇದೆ ಎಂಬದೇ ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲ್ಲಿಲ್ಲವೋ ಅವನಿಗೆ ಆ ಜೀವವಿಲ್ಲ. ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ.**

> ಯೋಹಾನ 5:24
> **ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ.**

### ಕ್ರಿಸ್ತನು ಸಾಧಿಸಿ ಮುಗಿಸಿದ ಕೆಲಸ

ಶಿಲುಬೆಯ ಮೇಲೆ ಯೇಸು "......ತೀರಿತು..........." ಎಂದು ಹೇಳಿದನು. (ಯೋಹಾನ 19:30).

ರಕ್ಷಣೆ ಪಡೆಯಲು ಇನ್ನೇನೂ ಅಗತ್ಯವೂ ಇಲ್ಲ, ಮಾಡಬೇಕಾದ ಅಗತ್ಯವೂ ಇಲ್ಲ.

ಇಬ್ರಿಯರಿಗೆ 9:12
**ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿ ಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು.**

ಇಬ್ರಿಯರಿಗೆ 10:14
**ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.**

ಇಬ್ರಿಯರಿಗೆ 10:18
**ಪಾಪಗಳು ಪರಿಹಾರವಾದಲ್ಲಿ ಇನ್ನೂ ಅವುಗಳ ವಿಷಯದಲ್ಲಿ ಸಮರ್ಪಣೆ ಮಾಡುವುದು ಅವಶ್ಯವಿಲ್ಲ.**

ಎಫೆಸದವರಿಗೆ 2:8,9
**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ; ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ.**

## ಕ್ರಿಸ್ತನಲ್ಲಿ ನಿಮ್ಮ ನಂಬಿಕೆ

ದೇವರು ನಮ್ಮಿಂದ ಅಪೇಕ್ಷಿಸುವುದು ನಾವು ಯೇಸು ಕ್ರಿಸ್ತನಲ್ಲಿ ನಮ್ಮ ರಕ್ಷಕನನ್ನಾಗಿ ನಂಬಿಕೆಯಿಟ್ಟು ಆ ನಂಬಿಕೆಯನ್ನು ಪ್ರತ್ಯಕ್ಷ ಪಡಿಸಬೇಕೆಂಬದಾಗಿಯೇ.

ಯೋಹಾನ 3:16
**ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.**

1 ಯೋಹಾನ 5:1
**ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ.**




ನಂಬಿಕೆಯು ಒಂದು ಭಾವನೆಯಲ್ಲ. ಕೆಲವೊಮ್ಮೆ ನೀವು ರಕ್ಷಿಸಲ್ಪಟ್ಟಿದ್ದೀರಿ ಎಂದು 'ಭಾವಿಸ' ಬಹುದು ಕೆಲವೊಮ್ಮೆ ಏನೂ 'ಭಾವನೆ'ಯಾಗದಿರ ಬಹುದು.

ನಂಬಿಕೆಯು ನಮ್ಮ ಒಳ್ಳೇ ಕ್ರಿಯೆಗಳ ಮೇಲೆ ಆಧರಿಸಿಕೊಂಡಿರುವುದಲ್ಲ. ನಂಬಿಕೆಯು ನಾವು ದೇವರನ್ನು ಭರವಸೆ ಮಾಡಿಕೊಳ್ಳಲು ಮಾಡುವ ಒಂದು ಆಯ್ಕೆ.

ನಂಬಿಕೆಯು ಸರಳವಾಗಿದೆ ಆದಾಗ್ಯೂ ಅದು ದೇವರು ಯಾರಾಗಿದ್ದಾನೋ ಅವಕ್ಕಾಗಿ (ಆತನು ಸುಳ್ಳುಹೇಳುವವನಲ್ಲ) ಆತನಲ್ಲಿ ನಮ್ಮ ಪೂರ್ಣ ಭಾರವನ್ನು ಇಡುವುದಾಗಿದೆ, ಆತನ ಮಾತಿನಲ್ಲಿ (ಆತನ ಮಾತು ಅಂತಿಮವಾದದ್ದು) ಮತ್ತು ಶಿಲುಬೆಯ ಮೇಲೆ ಆತನು ಮಾಡಿ ತೀರಿಸಿದ್ದರಲ್ಲಿ.

## ಆತ್ಮನ ಭರವಸೆ

ಪವಿತ್ರಾತ್ಮನು ನಮಗೆ ಆಳವಾದ, ಗಾಢವಾದ ರಕ್ಷಣೆಯ ಒಂದು ಭರವಸೆ ತಂದು ಕೊಡುತ್ತಾನೆ. ನಮಗೆ ರಕ್ಷಣೆಯಾಗಿದೆ ಎಂದು ನಾವು ತಿಳಿಯುತ್ತೇವೆ.

ರೋಮಾಪುರದವರಿಗೆ 8:15,16
**ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು "ಅಪ್ಪಾ ತಂದೆಯೇ' ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**

ಗಲಾತ್ಯದವರಿಗೆ 4:6
**ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು.**

1 ಯೋಹಾನ 3:24
**ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು.**

1 ಯೋಹಾನ 5:10
**ದೇವರ ಮಗನಲ್ಲಿ ನಂಬಿಕೆ ಇಟ್ಟವನು ಆ ಸಾಕ್ಷಿಯನ್ನು ತನ್ನಲ್ಲೆ ಹೊಂದಿದ್ದಾನೆ. ದೇವರನ್ನು ನಂಬದವನು ಆತನನ್ನು ಸುಳ್ಳುಗಾರನನ್ನಾಗಿ ಮಾಡಿದ್ದಾನೆ. ಹೇಗೆಂದರೆ ದೇವರು ತನ್ನ ಮಗನ ವಿಷಯವಾಗಿ ಹೇಳಿರುವ ಸಾಕ್ಷಿಯಲ್ಲಿ ಅವನು ನಂಬಿಕೆಯಿಡಲಿಲ್ಲ.**

## ರೂಪಾಂತರ ಹೊಂದಿದ ಜೀವನದ ಸಾಕ್ಷಿ

ನಾವು ಕ್ರಿಸ್ತನ ಸಾರೂಪ್ಯಕ್ಕೆ ಸತತವಾಗಿ ಮುಂದುವರಿಯುತ್ತಾ ಇರುವುದು ನಾವು ಆತನಲ್ಲಿರುವುದಕ್ಕೆ ಸಾಕ್ಷಿಯಾಗಿದೆ.

> 2 ಕೊರಿಂಥದವರಿಗೆ 5:17
> **ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**

ದೇವರು ನಮ್ಮಲ್ಲಿ ಕೆಲಸ ನಡಿಸುತ್ತಾ ನಮ್ಮ ರಕ್ಷಣೆಯನ್ನು ನಾವು ಸಾಧಿಸಿಕೊಳ್ಳಲಿಕ್ಕಾಗುವಂತೆ ನಮ್ಮನ್ನು ಬಲಪಡಿಸುತ್ತಾನೆ – ನಾವು ರಕ್ಷಿಸಲ್ಪಟ್ಟವರೆಂದು ತೋರಿಸಿ, ರಕ್ಷಿಸಲ್ಪಟ್ಟವರಂತೆ ನಡೆಯಬೇಕು.

> ಫಿಲಿಪ್ಪಿಯವರಿಗೆ 2:12, 13
> **ಹೀಗಿರುವಲ್ಲಿ ನನ್ನ ಪ್ರಿಯರೇ, ನೀವು ನನ್ನ ಮಾತನ್ನು ಯಾವಾಗಲೂ ಕೇಳಿದಂತೆ ಈಗಲೂ ಕೇಳಿರಿ. ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ ನಾನಿಲ್ಲದಿರುವಾಗಲೂ ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ. ಯಾಕೆಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ.**

> 1 ಯೋಹಾನ 3:6-9
> **ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು; ಪಾಪಮಾಡುವವನು ಆತನನ್ನು ಕಂಡವನೂ ಅಲ್ಲ. ತಿಳಿದವನೂ ಅಲ್ಲ. ಪ್ರಿಯರಾದ ಮಕ್ಕಳೇ, ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವದಕ್ಕೆ ಯಾರಿಗೂ ಅವಕಾಶ ಕೊಡಬೇಡಿರಿ. ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ. ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪ ಮಾಡುವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು. ದೇವರಿಂದ ಹುಟ್ಟಿದವನು ಪಾಪ ಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು.**

ಇದರ ಅರ್ಥ ನಾವು 'ಪರಿಪೂರ್ಣರೂ', 'ಕುಂದಿಲ್ಲದವರೂ' ಎಂದಲ್ಲ. ನಾವು ಪಾಪದಲ್ಲಿ' ಮುಂದುವರಿಯುವವರೂ' ಹಿಂದೆ ಜೀವಿಸಿದಂತೆ ಈಗ 'ಜೀವಿಸುವವರೂ ಅಲ್ಲ' ಎಂದು ಇದರ ಅರ್ಥ.

> 1 ಯೋಹಾನ 5:18
> **ದೇವರಿಂದ ಹುಟ್ಟಿರುವವನು ಪಾಪಮಾಡುವವನಲ್ಲವೆಂಬುದು ನಮಗೆ ಗೊತ್ತದೆ. ದೇವರಿಂದ ಹುಟ್ಟಿದಾತನು ಆವನನ್ನು ಕಾಪಾಡುವನು: ಕೆಡುಕನು ಅವನನು ಹಿಡಿಯುವದಿಲ್ಲ.**

## ಪಾಪ ಕ್ಷಮಾಪಣೆಯ ಭರವಸೆ

ನಾವು ಪಾಪ ಮಾಡಿದಾಗ –ದೇವರ ದೃಷ್ಟಿಯಲ್ಲಿ ಸರಿಯಲ್ಲ ಎಂದು ನಾವು ತಿಳಿದಿರುವವುಗಳನ್ನು ಮಾಡಿದಾಗ – ನಮ್ಮೊಳಗಿರುವ ಪವಿತ್ರಾತ್ಮನನ್ನು ನಾವು ದುಃಖ ಪಡಿಸುತ್ತೇವೆ ಮತ್ತು ಆತನು ನಮಗೆ ಅದನ್ನು ತಿಳಿಯಪಡಿಸುತ್ತಾನೆ. ಹೀಗೆ ನಾವು ಪವಿತ್ರಾತ್ಮನಿಂದ 'ಪಾಪದ ಅರುಹನ್ನು' ಪಡೆಯುತ್ತೇವೆ.

> ಎಫೆಸದವರಿಗೆ 4:29-32
> **ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತೂ ಹೊರಡಬಾರದು, ಭಕ್ತಿಯನ್ನು ವೃದ್ಧಿ ಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ. ದೇವರ ಪವಿತ್ರಾತ್ಮನನ್ನು ದುಃಖ ಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ. ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನೂ ಸಕಲವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ. ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ. ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ.**

**ಪಾಪವು ಒಂದು ಆಜ್ಞೆಗೆ ವಿರೋಧವಾದದ್ದಲ್ಲ. ಅದು ದೇವರಿಗೆಯೇ ವಿರುದ್ಧವಾದದ್ದು.**

ಹಾಗಿದ್ದರೂ, ನಾವು ಪಾಪ ಮಾಡಿದಾಗ ನಾವು ತಪ್ಪು ಮಾಡಿದೆವೆಂದು ಗ್ರಹಿಸುತ್ತೇವೆ, ಅದರಲ್ಲಿ ಮುಂದುವರಿಯದಿರಲು ಆಯ್ಕೆ ಮಾಡುತ್ತೇವೆ, ಮತ್ತು ಕರ್ತನನ್ನು ಕ್ಷಮಿಸಲು ಪ್ರಾರ್ಥಿಸುತ್ತೇವೆ.

> 1 ಯೋಹಾನ 1:7-9
> **ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳುತ್ತೇವೆ. ಮತ್ತು ಸತ್ಯವೆಂಬದು ನಮ್ಮಲಿಲ್ಲ ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.**

ನೀವು ಒಮ್ಮೆ ಪಾಪವನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ – ನೀವು ಕ್ಷಮಿಸಲ್ಪಟ್ಟಿರಿ ಎಂದು ನೀವು ತಿಳಿಯುತ್ತೀರಿ. ಅದು ಕ್ಷಮಿಸಲ್ಪಟ್ಟಿತು.

> 1 ಯೋಹಾನ 2:12
> **ಪ್ರಿಯರಾದ ಮಕ್ಕಳೇ, ಕ್ರಿಸ್ತನ ಹೆಸರಿನ ನಿಮಿತ್ತ ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದರಿಂದ ನಿಮಗೆ ಬರೆಯುತ್ತೇನೆ.**

ಪಾಪಕ್ಷಮಾಪಣೆಯು ಒಂದು ಸಾಲವನ್ನು ಪ್ರೀತಿಯಿಂದ ಸ್ವಯಂ ಪ್ರೇರಣೆಯಿಂದ, ತನ್ನಿಂದ ತಾನೇ, ಬಿಟ್ಟು ಬಿಡುವುದು (ಪರಿಹರಿಸುವುದು).

ಕ್ಷಮಾಪಣೆಯು ಸಂಬಂಧದ ಪುನಃ ಸ್ಥಾಪನೆಗೂ ನವೀಕರಣಕ್ಕೂ ನಡಿಸುತ್ತದೆ.

## ಕ್ಷಮಾಪಣೆಯ ಮೂಲಭೂತ ಅಂಶಗಳು

- ಪ್ರೀತಿಯ ತಳಹದಿಯ ಮೇಲಿದೆ
- ಯೇಸು ಸಂದಾಯ ಮಾಡಿದ ಬೆಲೆಯ
- ಪಾಪವು ಸಂಪೂರ್ಣವಾಗಿ ಶುಚಿಯಾಗಿ ಅಳಿಸಲ್ಪಟ್ಟಿತು
- ಮುಂದುವರಿಯುತ್ತಿರುವ ಕ್ಷಮಾಪಣೆ

ನಮ್ಮ ಪಾಪಕ್ಷಮಾಪಣೆಗಾಗಿ ಸಂದಾಯ ಮಾಡಿದ ಬೆಲೆಯು ಒಂದೇ ಬಾರಿ ಕೊಡಲ್ಪಟ್ಟ ಒಂದು ಘಟನೆ. ಯೇಸು ಒಂದು ಸಾರಿ ಸತ್ತನು. ಆದಾಗ್ಯೂ, ನಾವು ಪಶ್ಚಾತ್ತಾಪ ಪಟ್ಟು ಪಾಪದ ಅರಿಕೆ ಮಾಡಿದಾಗ ಕ್ಷಮಾಪಣೆ ಹೊಂದುತ್ತೇವೆ.

1 ಯೋಹಾನ 1:9
**ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು.**

## ಒಬ್ಬನು ಹೇಗೆ ಪಾಪಕ್ಷಮಾಪಣೆ ಹೊಂದುತ್ತಾನೆ?

## ಪಶ್ಚಾತ್ತಾಪ ಮತ್ತು ನಂಬಿಕೆ

ನಮ್ಮ ಪಾಪದ ಮಾರ್ಗದಿಂದ ನಾವು ತಿರುಗಿ ಕೊಳ್ಳುತ್ತೇವೆ.


ಯೆಶಾಯ 55:6, 7
**ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ, ಆತನು ಸಮೀಪದಲ್ಲಿರುವಾಗ ಆತನಿಗೆ ಬಿನ್ನಹ ಮಾಡಿರಿ. ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ; ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ, ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾಕೃಪೆಯಿಂದ ಕ್ಷಮಿಸುವನು.**

ಜ್ಞಾನೋಕ್ತಿಗಳು 28:13
**ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು; ಅವುಗಳನ್ನು ಒಪ್ಪಿಕೊಂಡು ಬಿಟ್ಟು ಬಿಡುವವನಿಗೆ ಕರುಣೆ ದೊರೆಯುವದು.**

ಕೀರ್ತನೆಗಳು 38:18
**ನಾನು ಅಪರಾಧಿಯೇ ಹೌದೆಂದು ಒಪ್ಪಿಕೊಳ್ಳುತ್ತೇನೆ; ನನ್ನ ಪಾಪದ ದೆಸೆಯಿಂದಲೇ ನನಗೆ ವ್ಯಸನವುಂಟಾಯಿತು.**

ಕೀರ್ತನೆಗಳು 51:17
**ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವುದಿಲ್ಲ.**

ಮಾಡಿದ ತಪ್ಪುಗಳಿಗೆ ಕರುಣೆಯನ್ನು ಕೇಳಿಕೊಳ್ಳುವಾಗ, ನಿಜವಾಗಿ ಪಶ್ಚಾತ್ತಾಪ ಪಡುವಾಗ, ಯಾವ ಹಕ್ಕುಗಳನ್ನೂ ಕೇಳುವುದಿಲ್ಲ. ನಿಜ ಪಶ್ಚಾತ್ತಾಪವು ಮುರಿದ, ಯಾವ ಷರತ್ತೂ ಇಲ್ಲದ ಹೃದಯ.




ಅಪೊಸ್ತಲರ ಕೃತ್ಯಗಳು 10:43
**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ.**

ದೇವರು ಪ್ರೀತಿಸ್ವರೂಪಿಯಾದ ದೇವರಲ್ಲವೋ? ಪಶ್ಚಾತ್ತಾಪ ಪಡದೆ ಆತನ ಬಳಿಗೆ ಬರುವವರಿಗೆ ಯಾವ ಷರತ್ತೂ ಇಲ್ಲದೆ ಎಲ್ಲಾ ಪಾಪಗಳನ್ನು ಉಚಿತವಾಗಿ ಕ್ಷಮಿಸಿಬಿಡುವದಿಲ್ಲವೋ? **ಇಲ್ಲ.**

- ಆತನು ನಮಗೆ ರಕ್ಷಣೆಯಲ್ಲಿ ಮೊದಲು ಪಾಪಕ್ಷಮಾಪಣೆ ಕೊಡುವಾಗ, ನಮ್ಮ ಪಶ್ಚಾತ್ತಾಪಕ್ಕೆ ಪ್ರತ್ಯುತ್ತರವಾಗಿ ಆತನು ಹಾಗೆ ಮಾಡುತ್ತಾನೆ.
- ಕ್ರಿಸ್ತನು ಮಾತ್ರವೇ ಆತನ ಯಜ್ಞ ಮತ್ತು ಜೀವದಿಂದ ನಮ್ಮನ್ನು ರಕ್ಷಿಸುವುದು ಸಾಧ್ಯ ಎಂದು ನಾವು ನಂಬಿಕೆ ಇಡಲು ಪ್ರಾರಂಭಿಸಿ ಆತನ ಬಳಿಗೆ ಬಂದಾಗ ಆತನು ನಮ್ಮನ್ನು ಕ್ಷಮಿಸುತ್ತಾನೆ.

1 ಯೋಹಾನ 1:9
**ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.**

## ಖಂಡನೆಯ ಭಾವನೆಗಳಿಂದ ಹೊರಬರುವುದು

ಕ್ಷಮಾಪಣೆಯು ದೇವರು ಕೊಡುವಂಥದ್ದು. ಅದರ ಬೇರು ನಮ್ಮ ಮನೋಭಾವಗಳಲ್ಲಿ ಇಲ್ಲ. ಅದು ನಮ್ಮನ್ನು ನಾವು ಕ್ಷಮಿಸುತ್ತೇವೋ ಎಂಬದರ ಮೇಲೆ ಆಧರಿಸಿಲ್ಲ. ಅದು ದೇವರು ಪರಲೋಕಗಳಲ್ಲಿರುವ ಆತನ ಪುಸ್ತಕಗಳಲ್ಲಿ ನಮ್ಮ ಹೆಸರಿನ ಎದುರಿಗಿರುವ ಪಾಪದ ಸಾಲದ ಪಕ್ಕದಲ್ಲಿ "ಪರಿಹಾರವಾಯಿತು (ಸಂದಿತು)" ಎಂದು ಬರೆಯುವಂಥದ್ದು. ನಮಗೆ ನ್ಯಾಯಬದ್ಧವಾಗಿ ಬಿಡುಗಡೆಯಾಯಿತು ಎಂದು ಬರೆದಾಗ ನಾವು ಕ್ಷಮಿಸಲ್ಪಡುತ್ತೇವೆ. ನಮ್ಮ ಪಾಪಗಳ ದೆಸೆಯಿಂದ ಆ ಕ್ಷಣದಲ್ಲಿ ನಮಗೆ ಏನೇ ಭಾವನೆಗಳಾಗುತ್ತಿದ್ದರೂ.

ನಮ್ಮಲ್ಲಿ ಬಹಳ ಜನರು ಅಪರಾಧ ಮತ್ತು ನಾಚಿಕೆಯ ಭಾವನೆಗಳೊಂದಿಗೆ ಹೋರಾಡುತ್ತಿದ್ದೇವೆ. ನಮ್ಮ ಪಾಪಗಳನ್ನು ದೇವರಿಗೆ ಅರಿಕೆ ಮಾಡಿಕೊಂಡು ಬಹಳ ಅನಂತರವೂ ನಮಗೆ ಕ್ಷಮಾಪಣೆಯಾಗಲಿಲ್ಲ ಎಂಬ ಭಾವನೆ ಬರಬಹುದು. ನಾವು ದೇವರಿಂದ ತಿರಸ್ಕರಿಸಲ್ಪಟ್ಟಿದ್ದೇವೆ ಎಂದು ಭಯ ಪಡಲೂಬಹುದು.

## ಪಾಪಕ್ಷಮಾಪಣೆಯ ಭರವಸೆಯನ್ನು ಕೊಡುವ ಚಿತ್ರಗಳು

ದೇವರು ನಮ್ಮ ಎಲ್ಲಾ ಪಾಪಗಳನ್ನು ಒಂದು ಚೀಲದಲ್ಲಿ ತುಂಬಿ ಅದನ್ನು ದೂರ ಬಿಸಾಡಿ ಬಿಡುವನು.

> ಯೋಬನು 14:17
> **ನನ್ನ ದ್ರೋಹವನ್ನು ಚೀಲದಲ್ಲಿಟ್ಟು ಮುದ್ರಿಸಿ ನನ್ನ ದೋಷವನ್ನು ಭದ್ರವಾಗಿ ಕಟ್ಟಿದ್ದೀ.**

ದೇವರು ಪಾಪದ ಬಂಧನವನ್ನು ದೂರಕ್ಕೆ ಊದಿ ಬಿಡುತ್ತಾನೆ.

> ಯೆಶಾಯ 44:22
> **ನಿನ್ನ ದ್ರೋಹಗಳನ್ನು ಮಂಜಿನಂತೆ ಪರಿಹರಿಸಿದ್ದೇನೆ, ನಿನ್ನ ಪಾಪಗಳನ್ನು ಮೋಡದಂತೆ ಹಾರಿಸಿದ್ದೇನೆ.........**

> ಕೀರ್ತನೆಗಳು 103:12
> **ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ ನಮ್ಮ ದ್ರೋಹಗಳನ್ನು ನಮ್ಮಿಂದ ತೆಗೆದು ಅಷ್ಟು ದೂರ ಮಾಡಿದ್ದಾನೆ.**

> ದೇವರು ನಮ್ಮ ಪಾಪಗಳನ್ನು ಸೋಲಿಸಲ್ಪಟ್ಟ ವೈರಿಯಂತೆ ನಡಿಸಿಕೊಳ್ಳುತ್ತಾನೆ.

> ಮೀಕನು 7:19
> **ಆತನು ನಮ್ಮ ಕಡೆಗೆ ತಿರುಗಿಕೊಂಡು ನಮ್ಮನ್ನು ಕನಿಕರಿಸುವನು, ನಮ್ಮ ಅಪರಾಧಗಳನ್ನು ಅಣಗಿಸುವನು (ದೇವರೇ,) ನಿನ್ನ ಜನರ ಪಾಪಗಳನ್ನೆಲ್ಲಾ ಸಮುದ್ರದ ತಳಕ್ಕೆ ಬಿಸಾಡಿಬಿಡುವಿ.**




ದೇವರು ನಮ್ಮ ಪಾಪಗಳನ್ನು ಆತನ ದೃಷ್ಟಿಯಿಂದ ಬಿಸಾಡಿಬಿಡುತ್ತಾನೆ.

> ಯೆಶಾಯ 38:17
> **ಆಹಾ, ನಾನು ಪಟ್ಟ ದುಃಖವು ನನ್ನ ಸುಖಕ್ಕಾಗಿಯೇ ಆಯಿತು. ನನ್ನ ಆತ್ಮವನ್ನು ನಾಶಕೂಪದಿಂದ ರಕ್ಷಿಸಿದ್ದು ನಿನ್ನ ಪ್ರೀತಿಯೇ ನನ್ನ ಪಾಪಗಳನ್ನೆಲ್ಲಾ ನಿನ್ನ ಬೆನ್ನ ಹಿಂದೆ ಹಾಕಿ ಬಿಟ್ಟಿದ್ದೀ.**

ದೇವರು ನಮ್ಮ ಪಾಪಗಳನ್ನು ಆತನ ಮನಸ್ಸಿನಿಂದಲೇ ತೆಗೆದು ಹಾಕುತ್ತಾನೆ.

> ಯೆರೆಮೀಯ 31:34
> **........ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ.**

ದೇವರು ನಮ್ಮ ಪಾಪದ ಸಾಲವನ್ನು ಅಳಿಸಿಬಿಡುತ್ತಾನೆ.

> ಯೆಶಾಯ 43:25
> **ನಾನಾಗಿ ನಾನೇ ನನಗೋಸ್ಕರ ನಿನ್ನ ದ್ರೋಹಗಳನ್ನು ಅಳಿಸಿ ಬಿಡುತ್ತೇನೆ, ನಿನ್ನ ಪಾಪಗಳನ್ನು ನನ್ನ ನೆನಪಿನಲ್ಲಿಡೆನು.**

ದೇವರು ಪಾಪದ ಕಲೆಯನ್ನು ತೆಗೆದು ಹಾಕುತ್ತಾನೆ ಮತ್ತು ಶುದ್ಧತೆಯನ್ನು ಮರಳಿಕೊಡುತ್ತಾನೆ.

> ಯೆಶಾಯ 1:18
> **.....ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು ಕಿರಮಂಜಿ ಬಣ್ಣವಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವವು.**

ದೇವರು ನಮ್ಮ ಪಾಪಗಳನ್ನು ಮರುದಿನ ಕಡಲಲ್ಲಿ ಹೂತುಬಿಡುತ್ತಾನೆ.

ಮೀಕ 7:19
**........ನಿನ್ನ ಜನರ ಪಾಪಗಳನ್ನೇಲ್ಲಾ ಸಮುದ್ರದ ತಳಕ್ಕೆ ಬಿಸಾಡಿಬಿಡುವಿ.**

ರೋಮಾಪುರದವರಿಗೆ 8:1, 4
**ಆದದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ, ಅವರು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮನನುಸಾರವಾಗಿ ನಡೆಯುವವರಾದರು**

'ಪಾಪದ ಅರುಹು' ಮತ್ತು ಖಂಡನೆ'ಗಳ ನಡುವೆ ಒಂದು ವ್ಯತ್ಯಾಸವಿದೆ ಪವಿತ್ರಾತ್ಮನು ಪಾಪದ ಅರುಹನ್ನು ಹುಟ್ಟಿಸುತ್ತಾನೆ, ಆದರೆ ಆತನು ಖಂಡಿಸುವುದಿಲ್ಲ. 'ಸಹೋದರರ ಆಪಾದಕನಾದ' ದೆವ್ವವು ಖಂಡನೆಯ ಭಾವನೆ, ಅಯೋಗ್ಯನೆಂಬ ಭಾವನೆಗಳು ಇತ್ಯಾದಿಗಳಿಂದ ನಮ್ಮನ್ನು ಖಂಡಿಸುತ್ತಿರುವುದು.

ಪ್ರಕಟನೆ 12:10
**ಆಗ ಪರಲೋಕದಲ್ಲಿ ಮಹಾಶಬ್ದವನ್ನು ಕೇಳಿದೆನು ಅದು ಈಗ ಜಯವು ಶಕ್ತಿಯೂ ರಾಜ್ಯವೂ ನಮ್ಮ ದೇವರಿಗೆ ಉಂಟಾಯಿತು; ಆತನು ಅಭಿಷೇಕಿಸಿದವನ ಅಧಿಕಾರವು ಈಗ ಸ್ಥಾಪಿತವಾಯಿತು; ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ.**

ವೈರಿಯು ಉಂಟುಮಾಡುವ ಖಂಡನೆಯನ್ನು ಎದುರಿಸಿರಿ.

ದೈವಿಕ ಅಧಿಕಾರದಿಂದ ಕೊಡಲ್ಪಟ್ಟದ್ದು ಸಂದೇಹವಲ್ಲ!

ಪಕ್ಕದ ಟಿಪ್ಪಣಿ:

- ಪಾಪಕ್ಷಮಾಪಣೆಯು ಪಾಪದಲ್ಲಿ ಮುಂದುವರಿಯಲು ಅನುಮತಿ ಪತ್ರವಲ್ಲ.
- ನಾವು ಪಾಪದಲ್ಲಿ ಮುಂದುವರಿದರೆ, ನಾವು ಸರಿಯಾದದ್ದನ್ನು ಮಾಡದೆ ಇದ್ದೇವೆ ಎಂದು ನಮಗೆ ತಿಳಿದಿರುವುದರಿಂದ, ಅದು ಕರ್ತನೊಂದಿಗೆ ನಾವು ಸಂಪರ್ಕಿಸಿಕೊಳ್ಳುವ ಸಾಮರ್ಥ್ಯಕ್ಕೆ ಅಡ್ಡಿಯುಂಟುಮಾಡುತ್ತದೆ.

  1 ಯೋಹಾನ 1:6,7
  **ನಾವು ದೇವರ ಸಂಗಡ ಅನ್ಯೋನ್ಯತೆಯಲ್ಲಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ. ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ.**

  1 ಯೋಹಾನ 3:21
  **ಪ್ರಿಯರೇ, ನಮ್ಮ ಹೃದಯವು ನಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ ನಮಗೆ ದೇವರ ವಿಷಯದಲ್ಲಿ ಧೈರ್ಯಉಂಟು.**

- ನಮ್ಮಲ್ಲಿ ಕೆಲವರು ಹಲವು ದುಶ್ಚಟಗಳಿಗೆ ದಾಸರಾಗಿರಬಹುದು, ಮತ್ತು ಬಿಡುಗಡೆ ಹೊಂದಲು ನಮಗೆ ಹೆಚ್ಚಿನ ಸಹಾಯವು ಬೇಕಾದೀತು.

## ಸಮಾಪ್ತಿ

ಭಾವನೆಗಳು ಉಷ್ಣ ಮಾಪನಗಳಂತಿವೆ. ಅವು ಹೆಚ್ಚು ಕಡಿಮೆಯಾಗುತ್ತವೆ. ಕೆಲವೊಮ್ಮೆ ನಿಮಗೆ ಉತ್ತಮರೆಂಬ ಭಾವನೆ ಕೆಲವೊಮ್ಮೆ ಕೀಳೆಂಬ ಭಾವನೆ ಬರುತ್ತದೆ. ನಮ್ಮ ಈ ಲೋಕದ ಪೌರತ್ವವು ಹೇಗೆ ನಮ್ಮ ಭಾವನೆಯ ಮೇಲೆ ಇಲ್ಲವೋ ಅದೇ ರೀತಿ **ನಮ್ಮ ರಕ್ಷಣೆಯು ಕೂಡಾ ನಮ್ಮ ಭಾವನೆಯ ಮೇಲೆ ಇಲ್ಲ. ಆದರೆ ದೇವರ ವಾಗ್ದಾನಗಳ ಮೇಲಿದೆ.**

ಒಬ್ಬನು ಕ್ರಿಸ್ತನಲ್ಲಿದ್ದರೆ, ಅವನು ಸುರಕ್ಷಿತನಾಗಿರುತ್ತಾನೆ. ಸಂದೇಹ ಮತ್ತು ಅಸ್ಪಷ್ಟ ಚಿತ್ರಗಳ ಮೂಲಕ ದೆವ್ವವು ಅವನನ್ನು ಚಿಂತೆಗೊಳಪಡಿಸಬಹುದು, ಅಷ್ಟೆ ನಿಮ್ಮ ಭರವಸೆಯನ್ನು ನೀವು ಸಂದೇಹಿಸುವ ಸಮಯಗಳೂ ಇರಬಹುದು.

ನಿಮ್ಮ ಭಾವನೆಗಳ ಮೇಲೆ ಆಧರಿಸದಿರಿ-ಬದಲಾಗಿ ಆತನ ವಾಕ್ಯ, ಆತನು ಮಾಡಿ ತೀರಿಸಿದ ಕೆಲಸ ಮತ್ತು ನಿಮ್ಮ ಜೀವನದಲ್ಲಿ ಪವಿತ್ರಾತ್ಮನ ಭರವಸೆಗಳ ಅಸ್ತಿವಾರದ ಮೇಲೆ ನಿಲ್ಲುವ ಆಯ್ಕೆ ಮಾಡಿರಿ.

**ಕೊಳೆಯುವ ಅವಸ್ಥೆಯನ್ನು ತಪ್ಪಿಸಿರಿ. ನಿಮ್ಮ ಬೈಬಲನ್ನು ಪ್ರತಿದಿನವೂ ಓದಿರಿ!**

ಭರವಸೆವನ್ನು ಸ್ಥಿರವಾಗಿಟ್ಟು ಕೊಳ್ಳಲು ಕೆಳಗಿನವುಗಳನ್ನು ಗಮನಿಸಿರಿ.

- ನಿಮ್ಮ ಬೈಬಲನ್ನು ಓದಿರಿ, ನಿಮ್ಮ ರಕ್ಷಣೆಯು ನಿಂತಿರುವ ಭದ್ರವಾದ ಅಸ್ತಿವಾರವನ್ನು ನಿಮ್ಮ ಜ್ಞಾಪಕಕ್ಕೆ ತನ್ನಿರಿ.
- ಪ್ರಾರ್ಥನೆಯ ಮೂಲಕ ದೇವರೊಂದಿಗೆ ಸಂಪರ್ಕಿಸಿರಿ ಮತ್ತು ನಿಮಗೆ ತಿಳಿದಿರುವ ಪ್ರತಿಯೊಂದು ಪಾಪವನ್ನು ಒಪ್ಪಿಕೊಂಡು ಅರಿಕೆ ಮಾಡಿರಿ.
- ದೇವರ ಆಜ್ಞೆಗಳಿಗೆ ವಿಧೇಯರಾಗಿ ಮತ್ತು ಸರಿಯಾದವುಗಳು ಯಾವುವೆಂದು ತಿಳಿದವುಗಳನ್ನು ಮಾಡಿರಿ.
- ಬಲವಾದ ಕ್ರೈಸ್ತರೊಂದಿಗೆ ಸಮಯ ಕಳೆಯಿರಿ ಮತ್ತು ಅವರ ಪ್ರೀತಿಯು ನಿಮಗೆ ಸಹಾಯಮಾಡಲಿ.
- ನೀವು ಇತರರನ್ನು ಪ್ರೀತಿಸುವ ಕಾರಣಕ್ಕಾಗಿ ಹೃದಯ ಭಾರದಿಂದ ಅವರ ಸಹಾಯಕ್ಕೆ ಹೋಗಿರಿ.
- ನಿಮ್ಮ ಸಂದೇಹಗಳು ಮತ್ತು ಮನಃ ಕುಗ್ಗುವಿಕೆಗಳು ಅಧಿಕವಾದ ಭಾವನೆಗಳು ಆದರೆ ಆತ್ಮಿಕವಾದವುಗಳಲ್ಲ ಎಂದು ಗುರುತಿಸಿರಿ. ನಿಮಗೆ ನಂಬಿಕೆಯಿಲ್ಲ ಎಂದು ನೀವು ಭಾವಿಸಿಕೊಂಡದ್ದರಿಂದ ಬರುವ ಅನಗತ್ಯ ಸಂದೇಹದ ಭಾವನೆಗಳನ್ನು ತಪ್ಪಿಸಲು ಇದು ನಿಮಗೆ ಸಹಾಯ ಮಾಡುವುದು.

ಈ ಪಾಠದಲ್ಲಿ ನಾವು "ಒಬ್ಬ ಕ್ರೈಸ್ತನು ಅವನ ರಕ್ಷಣೆಯನ್ನು ಕಳಕೊಳ್ಳಬಹುದೋ?" ಎಂಬ ಪ್ರಶ್ನೆಯನ್ನು ಚರ್ಚಿಸುವುದಿಲ್ಲ. ಇದರ ಚರ್ಚೆಗೆ ಸಂಪೂರ್ಣ ಪರಿಶೀಲನೆ ಮತ್ತು ಕಾಲಾವಕಾಶ ಬೇಕು. ಆದಾಗ್ಯೂ, ಒಬ್ಬ ವಿಶ್ವಾಸಿಯು "ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ" (ಫಿಲಿಪ್ಪಿಯವರಿಗೆ 2:12) ಮತ್ತು ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧತೆಯನ್ನು ಹೊಂದುವದಕ್ಕೂ ಪ್ರಯತ್ನ ಮಾಡಿರಿ (ಇಬ್ರಿಯರಿಗೆ 12:14) ಎಂಬದನ್ನು ನಾವು ತಿಳಿಯಬೇಕಾಗಿದೆ. ದೇವರ ರಾಜ್ಯದ ವಿಷಯಗಳನ್ನು ರುಚಿಸಿದವರು ಬಿದ್ದು ಹೋಗುವರು (ಇಬ್ರಿಯರಿಗೆ 6:4-6), ಅಯೋಗ್ಯನೆನಿಸಿಕೊಳ್ಳುವರು (1 ಕೊರಿಂಥದವರಿಗೆ 9:27), ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿ ಬಿಟ್ಟು ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇರುವರು (1 ತಿಮೊಥೆಯನಿಗೆ 1:19), ಹಿಂತೆಗೆಯುವವರಾಗಿ ಇರುವರು (ಇಬ್ರಿಯರಿಗೆ 10:26, 38,39) ಮತ್ತು ಮರಣಕರವಾದ ಪಾಪ ಮಾಡುವ (1 ಯೋಹಾನ 5:16,17) ಸಾಧ್ಯತೆಗಳು ಇವೆ.

## ಮುಖ್ಯ ಕಂಠಪಾಠ ವಚನಗಳು

ರೋಮಾಪುರದವರಿಗೆ 8:1

**ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. ಯಾಕೆಂದರೆ ಜೀವವನ್ನುಂಟು ಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತಯೇಸುವಿನ ಮೂಲಕ ಬಿಡಿಸಿತು.**

ರೋಮಾಪುರದವರಿಗೆ 8:15, 16

**ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನ ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**

ಕೀರ್ತನೆಗಳು 103:12

**ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ ನಮ್ಮ ದ್ರೋಹಗಳನ್ನು ನಮ್ಮಿಂದ ತೆಗೆದು ಅಷ್ಟು ದೂರ ಮಾಡಿದ್ದಾನೆ.**

# ಅನ್ವಯ

1. ಕ್ರಿಸ್ತನಲ್ಲಿ ನಿಮ್ಮ ರಕ್ಷಣೆಯ ಭರವಸೆಯನ್ನು ಖಚಿತ ಪಡಿಸುವ ಅಸ್ತಿವಾರದ ಮೂಲ ವಸ್ತುಗಳನ್ನು ಪಟ್ಟಿ ಮಾಡಿರಿ.

2. "ಕ್ಷಮಾಪಣೆಯ ನಿಶ್ಚಯತ್ವವನ್ನು ಖಚಿತ ಪಡಿಸುವ ಚಿತ್ರಗಳ" ಭಾಗವನ್ನಾಧರಿಸಿ, ಖಂಡನೆಯು ಭಾವನೆಗಳನ್ನು ಜಯಿಸಲು ನಿಮಗೆ ಯಾವದು ಸಹಾಯಮಾಡಬಹುದೆಂದು ಕೆಳಗೆ ಬರೆಯಿರಿ.

# 4

# ಶೋಧನೆಯಿಂದ ಹೊರಬರುವುದು

(ಈ ಪಾಠವು ನಮಗೆ ಶೋಧನೆಯ ಕೆಲವು ನೈಜತೆಗಳನ್ನು ಕಲಿಸಿ ಶೋಧನೆಯನ್ನು ಜಯಿಸಿ ಜಯಪ್ರದ ಕ್ರೈಸ್ತ ಜೀವನವನ್ನು ನಡಿಸಲು ದೇವರು ನಮ್ಮನ್ನು ಹೇಗೆ ಬಲಪಡಿಸುತ್ತಾನೆ ಎಂದು ಕಲಿಸುವುದು).

## ಶೋಧನೆಯಿಂದ ಹೊರಬರುವುದು

ನಾವೆಲ್ಲರೂ ಶೋಧನೆಯನ್ನು ಎದುರಿಸುತ್ತೇವೆ. ಶೋಧನೆಯು ಮುಖ್ಯವಾಗಿ ಪಾಪಮಾಡಲು ಪ್ರೇರಣೆಯಾಗಿದೆ. ಅದು ದೇವರು ನಮಗೆ ಸಿದ್ಧಮಾಡಿಟ್ಟಿರುವ ಅತ್ಯುತ್ತಮವಾದವುಗಳಿಂದ ನಮ್ಮನ್ನು ದೂರಕ್ಕೆ ಒಯ್ಯುತ್ತದೆ ಒಂದು ವಿಧದ ಶೋಧನೆಗೆ ಸತತವಾಗಿ ಅಧೀನರಾಗುವುದು ನಮ್ಮನ್ನು ಅದರ ದಾಸತ್ವಕ್ಕೆ ನಡಿಸಿ ಅದು ನಮಗೆ ಒಂದು ವ್ಯಸನದಂತೆ ರೂಢಿಯಾಗಿ ನಮ್ಮನ್ನು ದಾಸತ್ವದ ಬಂಧನಕ್ಕೆ ನಡಿಸುತ್ತದೆ (ಅಂದರೆ ವೈರಿಯ ಹತೋಟಿಯಲ್ಲಿರುವ ಯೋಚನೆಯ ಕ್ಷೇತ್ರ ಅಥವಾ ರೂಢಿ) ಆದಾಗ್ಯೂ, ನಾವು ಶೋಧನೆಯನ್ನು ಜಯಿಸಿ ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಜಯಪ್ರದ ಜೀವನವನ್ನು ನಡಿಸಬಹುದು.

## ಶೋಧನೆಯ ಮೂರು ಮೂಲಗಳು

### ಲೋಕದ ಶೋಧನೆಗಳು

1 ಯೋಹಾನ 2:15, 16
**ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ.**

ಲೋಕವೆಂಬ ಪಾರಿಭಾಷಿಕ ಪದವು ಸಾಮಾನ್ಯವಾಗಿ ದೇವರಿಗೆ ತಿರುಗಿ ಬೀಳುವ ಆತ್ಮವನ್ನು ಹೊಂದಿದ ಪಾಪಮಯ ಮಾನವ ಸಮಾಜವನ್ನು ಹೇಳುತ್ತದೆ.

1 ಯೋಹಾನ 5:19
**ನಾವು ದೇವರಿಂದ ಹುಟ್ಟಿದವರೆಂದೂ ಲೋಕವೆಲ್ಲವೂ ಕೆಡುಕನ ವಶದಲ್ಲಿ ಬಿದ್ದಿದೆ ಎಂದೂ ನಮಗೆ ಗೊತ್ತದೆ.**

ದೇವರಿಗೆ ವಿರೋಧವಾಗಿರುವ ಕಾರಣ ಲೋಕವು ದೇವರ ಚಿತ್ತಕ್ಕೆ ವಿರೋಧವಾಗಿರುವ: "ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನ ಡಂಬ"ಗಳಂಥವುಗಳಿಗೆ ಬೆಲೆ ಕೊಡುತ್ತದೆ.

1 ಯೋಹಾನ 2:16
**ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ, ಬದುಕು ಬಾಳಿನಾಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ.**

ಹೀಗೆ, ವಿಶ್ವಾಸಿಗೆ ಬರುವ ಶೋಧನೆಗಳು ಎರಡು ವಿಧಗಳಾಗಿವೆ: ಶರೀರದಾಶೆ ಮತ್ತು ಬದುಕುಬಾಳಿನ ಡಂಬ.

ಲೋಕದವುಗಳ ಮೇಲಣ ಆಶೆಗಳು ವಿಶ್ವಾಸಿಯು ಲೋಕದ ಪದ್ಧತಿಗಳಲ್ಲಿ ಆಸಕ್ತನಾಗುವ ಶೋಧನೆಯನ್ನು ಉಂಟು ಮಾಡುತ್ತದೆ.

ಯಾಕೋಬನು 4:4
**ವ್ಯಭಿಚಾರಿಗಳು ನೀವು; ಇಹಲೋಕ ಸ್ನೇಹವು ದೇವ ವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ.**

ಯಾಕೋಬನು 1:27
**ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ.**

## ಶರೀರದ (ಮಾಂಸದ) ಶೋಧನೆಗಳು

"ಶರೀರದ" ಬೈಬಲ್‌ನ ಅರ್ಥವು, ಶರೀರದ ಮತ್ತು ಪ್ರಾಣದ (ಮನಸ್ಸು, ಚಿತ್ತ ಮತ್ತು ಮನೋಭಾವಗಳ) ಕೆಟ್ಟ ಆಶೆಗಳನ್ನು ಹೇಳುತ್ತದೆ. ನಾವು ಇನ್ನೂ ಒಂದು ಭೌತಿಕ ಶರೀರದಲ್ಲಿ ಜೀವಿಸುತ್ತೇವೆ. ಹೀಗಾಗಿ ಇನ್ನೂ ಇವುಗಳನ್ನು ಎದುರಿಸುತ್ತೇವೆ.

ಇವುಗಳಲ್ಲಿ ಕೆಲವನ್ನು ಪಟ್ಟಿ ಮಾಡಲಾಗಿದೆ

> ಗಲಾತ್ಯದವರಿಗೆ 5:19-21
> **ಶರೀರ ಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಯಾವವೆಂದರೆ - ಜಾರತ್ವ, ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ, ಹಗೆತನ, ಜಗಳ, ಹೊಟ್ಟೇಕಿಚ್ಚು, ಸಿಟ್ಟು, ಕಕ್ಷಭೇಧ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತಣ ಇಂಥವುಗಳೇ ಇವುಗಳ ವಿಷಯದಲ್ಲಿ - ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ.**
>
> ಯಾಕೋಬನು 1:13-16
> **ಯಾವನಾದರೂ ಪಾಪ ಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ - ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನೂ ಸಂಬಂಧ ಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ, ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ; ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ. ನನ್ನ ಪ್ರಿಯ ಸಹೋದರರೇ, ಮೋಸಹೋಗಬೇಡಿರಿ.**

ಕಾರ್ಯಗತಿ:

- ನಮ್ಮ ಆಶಾಪಾಶಗಳಿಂದ ಸೆಳೆಯಲ್ಪಡುತ್ತೇವೆ.
- ಮರುಳಾಗುತ್ತೇವೆ - ನಮ್ಮ ಚಿತ್ತವು ಬಲಹೀನವಾಗುತ್ತದೆ (ಗ್ರೀಕ್ ಪದ ಎಂಟ್ರಾಪ್).
- ಆಶೆಯು ಬಸುರಾಗುತ್ತದೆ - ಆಶೆಗೆ ಒಳಗಾಗುತ್ತದೆ. ಇದು ಪಾಪದಲ್ಲಿ ಪರಿಣಮಿಸುತ್ತದೆ.

ಒಂದು ತಪ್ಪಾದದ್ದರ ಕಡೆಗೆ ಆಶೆಯು ತಲೆದೋರಿ ನನ್ನ ಸ್ವಂತ ಅಪೇಕ್ಷೆಯಿಂದ ಅದರ ಕಡೆಗೆ ಸೆಳೆಯಲ್ಪಟ್ಟರೆ ಅದು ಪಾಪವಲ್ಲ. ನಾನು ಮರುಳುಗೊಳ್ಳುವುದಕ್ಕೆ ಸಮೀಪಿಸಬಹುದು, ಇನ್ನೂ ಇದು ಪಾಪವಲ್ಲ ನಾನು ಅಪೇಕ್ಷೆಗೆ ಒಳಪಟ್ಟಾಗ ಮಾತ್ರ ಅದು ಪಾಪ, ಆಗ ನಾನು ಪಾಪ ಮಾಡಿದ್ದೇನೆ.

ಅನೇಕ ಕ್ರೈಸ್ತರು ಅನಗತ್ಯವಾಗಿ ತಮ್ಮನ್ನ ಖಂಡಿಸಿಕೊಳ್ಳುತ್ತಾರೆ- ಕೆಟ್ಟ ಅಪೇಕ್ಷೆಗಳು ಅವರಲ್ಲಿ ಹುಟ್ಟುವ ಕಾರಣಕ್ಕಾಗಿ. ಅದರಷ್ಟಕ್ಕೆ ಇದು ಪಾಪವಲ್ಲ. ಆ ಅಪೇಕ್ಷೆಗಳಿಗೆ ನೀವು ಒಳಗಾದಾಗ ಮಾತ್ರ ಆ ತಪ್ಪನ್ನು ಕಾರ್ಯದಲ್ಲಿ ಮಾಡುವ ಮೂಲಕ ಅಥವಾ ಚಿತ್ತ ಪೂರ್ವಕವಾಗಿ ಆ ಅಪೇಕ್ಷೆಗಳನ್ನೇ ಪರ್ಯಾಲೋಚಿಸುವ ಮೂಲಕ ತಪ್ಪಿತಸ್ಥರಾಗುತ್ತೀರಿ.




## ಸೈತಾನನಿಂದ ಬರುವ ಶೋಧನೆಗಳು


> ಮತ್ತಾಯ 4:3
> **ಆಗ ಶೋಧಕನು ಆತನ ಬಳಿಗೆ ಬಂದು ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು ಎಂದು ಹೇಳಲು.**
>
> 1 ಥೆಸಲೋನಿಕದವರಿಗೆ 3:5
> **ಆದದರಿಂದ ನಾನು ಇನ್ನು ತಡೆಯಲಾರದೆ ಒಂದು ವೇಳೆ ಶೋಧಕನು ನಿಮ್ಮನ್ನು ಶೋಧಿಸಿದ್ದರಿಂದ ನಮ್ಮ ಪ್ರಯಾಸವು ವ್ಯರ್ಥವಾಯಿತೋ ಏನೋ ಎಂದು ನಿಮ್ಮ ನಂಬಿಕೆಯ ವಿಷಯದಲ್ಲಿ ತಿಳಿದುಕೊಳುವದಕ್ಕೆ ಅವನನ್ನು ಕಳುಹಿಸಿದೆನು.**


ಸೈತಾನನು ಶೋಧಕನು.

ಸೈತಾನನು ನಮ್ಮನ್ನು ಮೂರು ಕ್ಷೇತ್ರಗಳಲ್ಲಿ ಶೋಧಿಸುತ್ತಾನೆ.

- ಕಣ್ಣಿನಾಶೆ, ಶರೀರದಾಶೆ, ಬದುಕುಬಾಳಿನ ಡಂಬ.

**ಮರಳುಗೊಳಿಸುವುದು, ಶೋಧನೆಯನ್ನಿಡುವುದರಲ್ಲಿ ಸೈತಾನನ ಮೂಲ ಪದ್ಧತಿಯಾಗಿದೆ.**




ಆದಿಕಾಂಡ 3:6

**ಆಗ ಸ್ತ್ರೀಯು –ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು.**

1 ಯೋಹಾನ 2:16

**ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವೂ ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ.**

ಆಹಾರಕ್ಕೆ ಒಳ್ಳೆಯದು ⟶ "ಶರೀರದಾಶೆ"

ನೋಡುವದಕ್ಕೆ ರಮ್ಯವಾದದ್ದು ⟶ "ಕಣ್ಣಿನಾಶೆ"

ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದು ⟶ "ಬದುಕುಬಾಳಿನ ಡಂಬ"

2 ಕೊರಿಂಥದವರಿಗೆ 11:3

**ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟು ಹೋದೀತೆಂದು ನನಗೆ ಭಯವುಂಟು.**

ಪ್ರಕಟನೆ 12:9

**ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟ ಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು; ಅವನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು.**

## ಯೇಸುವು ಶೋಧನೆಗೊಳಗಾದನು ಮತ್ತು ಶೋಧನೆಯಿಂದ ಹೊರಬಂದನು

ಮತ್ತಾಯ 4:1–11

**ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು. ಆತನು ನಾಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದು ತರುವಾಯ ಆತನಿಗೆ ಹಸಿವಾಯಿತು. ಆಗ ಆ ಶೋಧಕನು ಆತನ ಬಳಿಗೆ ಬಂದು – ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆ ಕೊಡು ಎಂದು ಹೇಳಲು ಆತನು – ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ. ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರೆದದೆ ಅಂದನು. ಆಗ ಸೈತಾನನು ಆತನನ್ನು ಪರಿಶುದ್ಧ ಪಟ್ಟಣಕ್ಕೆ ಕರಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ – ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ದುಮುಕು; ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು; ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು ಎಂಬದಾಗಿ ಬರೆದದೆಯಲ್ಲಾ ಎಂದು ಹೇಳಿದನು. ಅದಕ್ಕೆ ಯೇಸು – ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರದು ಎಂಬದಾಗಿ ಸಹ ಬರೆದದೆ ಅಂದನು. ಬಳಿಕ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನೂ ಆತನಿಗೆ ತೋರಿಸಿ – ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು ಅಂದನು. ಯೇಸು ಅವನಿಗೆ – ಸೈತಾನನೇ ನೀನು ತೊಲಗಿ ಹೋಗು. ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡ ಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು ಎಂಬದಾಗಿ ಬರೆದದೆ ಎಂದು ಹೇಳಿದನು. ಆಗ ಸೈತಾನನು ಆತನನ್ನು ಬಿಟ್ಟು ಬಿಟ್ಟನು. ಮತ್ತು ದೇವದೂತರು ಬಂದು ಆತನಿಗೆ ಉಪಚಾರ ಮಾಡಿದರು.**

ಇಬ್ರಿಯರಿಗೆ 4:15

**ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ.**

ಇಬ್ರಿಯರಿಗೆ 2:18

**ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯಮಾಡುವದಕ್ಕೆ ಶಕ್ತನಾಗಿದ್ದಾನೆ.**

ವೈರಿಯು ನಮ್ಮನ್ನು ಹೇಗೆ ಶೋಧನೆಗೊಳಪಡಿಸುತ್ತಾನೆ ಎಂದು ಒಂದು ತ್ವರಿತ ನೋಟ:

ಅವನ ಉಪಾಯಗಳು ನಿಜವಾಗಿಯೂ ಮನಸ್ಸಿನ ಆಟಗಳು ಅವುಗಳು ಮನಸ್ಸಿಗೆ ವಿರುದ್ಧವಾಗಿ ಬರುವವುಗಳು.

ಯೇಸು ಎಲ್ಲಾ ಕ್ಷೇತ್ರಗಳಲ್ಲಿ ಶೋಧನೆಗೆ ಒಳಗಾದನು, ಅದೇ ರೀತಿ ನಾವೂ ಶೋಧನೆಗೆ ಒಳಗಾಗುತ್ತೇವೆ.

ಸೈತಾನನು ಒಂದು ಕ್ಷಣ ಮಾತ್ರದಲ್ಲಿ ಯೇಸುವಿಗೆ ಪ್ರಪಂಚದ ಎಲ್ಲಾ ರಾಜ್ಯಗಳನ್ನು ತೋರಿಸಬಹುದಾದ ಮಾರ್ಗವು ಆತನ ಯೋಚನೆಗಳ ಮೂಲಕವಾಗಿತ್ತು.

ಯೇಸು ಅರಣ್ಯ ಪ್ರದೇಶದಲ್ಲಿದ್ದನು. ಆದುದರಿಂದ ಸೈತಾನನು ಯೇಸುವನ್ನು ಯೆರೂಸಲೇಮಿಗೆ ಕೊಂಡೊಯ್ದು ದೇವಾಲಯದ ಗೋಪುರದ ಶಿಖರದ ಮೇಲೆ ನಿಲ್ಲಿಸುವ ಏಕೈಕ ಮಾರ್ಗವು ಆತನ ಯೋಚನೆಯ ಮೂಲಕವಾಗಿತ್ತು.

ಆದುದರಿಂದ ನಾವು, ಸೈತಾನನು ನಮಗೆ ವಿರುದ್ಧವಾಗಿ ಕೆಲಸ ಮಾಡುವ ಮುಖ್ಯ ಮಾರ್ಗವು ನಮ್ಮ ಮನಸ್ಸಿನ ಕ್ಷೇತ್ರದ ಮೂಲಕವಾಗಿ ಎಂದು ಹೇಳಬಹುದು – ನಮ್ಮ ಸಹಜವಾದ ಯೋಚನಾ ಕಾರ್ಯಗತಿಯನ್ನು ಅವನ ಆಲೋಚನೆಗಳ, ಯೋಚನೆ, ಸಲಹೆಗಳ, ಚಿತ್ರಗಳ ಇತ್ಯಾದಿಗಳ ಮೂಲಕ ಅವನೆಡೆಗೆ ತಿರುಗಿಸುವುದು.

ನಮ್ಮ ಮನಸ್ಸಿಗೆ ಬರುವ ಸೈತಾನನ ಆಲೋಚನೆಗಳು, ಚಿತ್ರಗಳು, ಯೋಚನೆಗಳು ನಮ್ಮ ಶರೀರದ ಆಶೆಗಳು, ರುಚಿಗಳು ಮತ್ತು ದುರಿಚ್ಛೆಗಳನ್ನು ಹೊಡೆದೆಬ್ಬಿಸುತ್ತವೆ. ನಮ್ಮ ಸ್ವಂತ ಆಶೆ, ಅಪೇಕ್ಷೆಗಳು ಹೊಡೆದೆದ್ದಾಗ, ನಾವು ಅವುಗಳ ಕಡೆಗೆ ಸೆಳೆಯಲ್ಪಟ್ಟು, ಅವುಗಳನ್ನು ಎದುರಿಸುವ ನಮ್ಮ ಚಿತ್ತವು ನಿರ್ಬಲವಾಗಿ ಅವುಗಳ ಮೇಲೆ ಹತೋಟಿ ಸಾಧಿಸಲು ವಿಫಲರಾದರೆ, ನಾವು ಅವುಗಳಿಗೆ ಒಳಗಾಗಿ, ಅವು ನಮ್ಮನ್ನು ಪಾಪಕ್ಕೆ ನಡಿಸುತ್ತವೆ.

ನಮ್ಮ ಮನಸ್ಸಿಗೆ ಬಿದ್ದ ಒಂದು ಕೆಟ್ಟ ಆಲೋಚನೆ, ಚಿತ್ರ ಅಥವಾ ಯೋಚನೆ ಪಾಪವೆಂದು ಪರಿಗಣಿಸ್ಪಡುವುದಿಲ್ಲ. ಅವರ ಕುರಿತು ಆಲೋಚಿಸುತ್ತಿರುವುದು ಅಥವಾ ಅದನ್ನು ಕಾರ್ಯ ರೂಪಕ್ಕೆ ತರುವುದು ಪಾಪವಾಗಿದೆ.

ಈ ಯೋಚನೆಗಳು ಬರುವುದನ್ನು ನೀವು ತಪ್ಪಿಸಲಾಗದು ಆದರೆ ಅವು ಮನಸ್ಸಿನಲ್ಲಿ ಉಳಿದುಕೊಳ್ಳುವುದನ್ನು ನೀವು ತಪ್ಪಿಸಬಹುದು.


## ನಾವು ಶೋಧನೆಯಿಂದ ಹೊರಬರಬಹುದು ಮತ್ತು ಜಯಶಾಲಿಗಳಾಗಿ ಜೀವಿಸಬಹುದು

1 ಕೊರಿಂಥದವರಿಗೆ 10:12, 13
**ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ. ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ಥನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು.**

ಎಫೆಸದವರಿಗೆ 4:23, 24
**ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ.**

2 ಪೇತ್ರನು 1:3
**ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವು ದೊರೆಯಿತೆಂದು ಬಲ್ಲೇವಷ್ಟೆ.**

1 ಯೋಹಾನ 5:1,4
**ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ. ಯಾಕೆಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ.**




ನಾವು ಆಂತರ್ಯದಲ್ಲಿ ನೂತನ ಸೃಷ್ಟಿಗಳಾಗಿದ್ದೇವೆ ಮತ್ತು ದೇವರ ಜೀವವೂ ಗುಣಸ್ವಭಾವವು ನಮ್ಮಲ್ಲಿವೆ. ನಾವು ಜಯಿಸಲು ಹುಟ್ಟಿದ್ದೇವೆ.

ನಾವು ಜಯಶಾಲಿಗಳಾಗಲು ದೇವರು ನಮಗೆ ಆಯುಧಗಳನ್ನು ಕೊಟ್ಟಿದ್ದಾನೆ.

2 ಕೊರಿಂಥದವರಿಗೆ 10:3-6 ರ ಒಂದು ಪ್ರಗತಿಯತ್ತ ಒಂದು ತ್ವರಿತ ನೋಟ.
**ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ಧ ಮಾಡುವವರಲ್ಲ. ನಾವು ಉಪಯೋಗಿಸುವ ಆಯುಧಗಳು ಲೋಕ ಸಂಬಂಧವಾದ ಆಯುಧಗಳಲ್ಲ. ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಜನೆಗಳನ್ನು ಕ್ರಿಸ್ತನಿಗೆ ವಿಧೇಯರಾಗುವಂತೆ ಸೆರೆಹಿಡಿದು ನಿಮ್ಮ ವಿಧೆಯತ್ವವು ಪರಿಪೂರ್ಣವಾದ ಮೇಲೆ ಎಲ್ಲಾ ಅವಿಧೇಯತ್ವಕ್ಕೆ ಶಿಕ್ಷೆ ಮಾಡುವದಕ್ಕೆ ಸಿದ್ಧರಾಗಿದ್ದೇವೆ.**

## ದೇಹವನ್ನು (ಶರೀರವನ್ನು, ಶರೀರಾಭಿಲಾಷೆಗಳನ್ನು) ಶಿಲುಬೆಗೆ ಹಾಕಿ, ಮನಸ್ಸನ್ನು ನೂತನ ಪಡಿಸಿರಿ.

ವಿಶ್ವಾಸಿಗಳಾಗಿ ನಮ್ಮ ಮಹಾಯುದ್ಧವು ಶರೀರಾಭಿಲಾಷೆಗಳೊಂದಿಗೆ - ದೇವರಿಗೊಪ್ಪದ ಮತ್ತು ಮನಸ್ಸಿನ ಅಭಿಲಾಷೆಗಳು.

ನಾವು ಜಯಶಾಲಿಗಳಾಗಿ ಜೀವಿಸಲು ಸತತವಾಗಿ ಶರೀರಾಭಿಲಾಷೆಗಳನ್ನು ಶಿಲುಬೆಗೆ ಹಾಕಿ ಮನಸ್ಸನ್ನು ನೂತನ ಪಡಿಸಿಕೊಂಡು ಜಯಿಸಬೇಕು.

**ಯಾವುದನ್ನು ಸಹಿಸುತ್ತಿರೋ ಅದು ನಿಮ್ಮ ಮೇಲೆ ಅಧಿಕಾರ ನಡಿಸುವುದು.**

## ಶೋಧನೆಗಳಿಂದ ಜಯಶಾಲಿಯಾಗಿ ಹೊರಬರಲು ಇರುವ ಆಯುಧಗಳು.

### (ಅ.) ಶಿಲುಬೆಯ ಬಲ.

ಶಿಲುಬೆಯ ಮೇಲೆ ಯೇಸು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತವನ್ನು ಕೊಟ್ಟದ್ದಲ್ಲದೆ ಆತನು ಜೀವನಗಳಲ್ಲಿ ಜಯ ಹೊಂದುವಂತೆ ಪಾಪದ ಬಲವನ್ನೂ ಮುರಿದು ಹಾಕಿದನು.

ರೋಮಾಪುರದವರಿಗೆ 6:6,14
**ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿಸಿದ್ದೇವೆ. ಯಾಕೆಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು.**

ಶಿಲುಬೆಯ ಮೇಲಿನ ಕ್ರಿಸ್ತನ ಕಾರ್ಯದಿಂದಾಗಿ, ಕ್ರೈಸ್ತನು ಪಾಪದ ಪರಿಣಾಮಗಳಿಂದಲೂ ಪಾಪದ ಬಲದಿಂದಲೂ ಬಿಡುಗಡೆ ಹೊಂದಿದ್ದಾನೆ.

ಈ ಸತ್ಯವನ್ನು ತಿಳಿದು, ಗ್ರಹಿಸಿ ಅದಕ್ಕೆ ಅಧೀನರಾಗುವುದು ಜಯಶಾಲಿಗಳಾದ ಜೀವನದ ತಳಹದಿ.

"ಪಾಪಕ್ಕೂ ಪಾಪಮಯ ರೂಢಿಗಳಿಗೂ ನನ್ನ ಮೇಲೆ ಅಧಿಕಾರವಿಲ್ಲ. ನಾನು ಪಾಪದ ಅಧಿಕಾರದಿಂದ ಬಿಡುಗಡೆ ಹೊಂದಿದ್ದೇನೆ,"

### (ಆ.) ಮೀಸಲಾಗಿಡುವುದರ (ಪ್ರತಿಷ್ಠಿಸಿ ಕೊಳ್ಳುವುದರ ಪವಿತ್ರರಾಗಿರುವುದರ) ಬಲ

1 ಕೊರಿಂಥದವರಿಗೆ 6:9-11
**ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? ಮೋಸ ಹೋಗಬೇಡಿರಿ. ಜಾರರು, ವಿಗ್ರಹಾರಾಧಕರು, ವ್ಯಭಿಚಾರಿಗಳು, ಪುರುಷಗಾಮಿಗಳು, ಕಳ್ಳರು, ಲೋಭಿಗಳು, ಕುಡಿಕರು ಬೈಯುವವರು, ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕೆ ಭಾಧ್ಯರಾಗುವದಿಲ್ಲ. ನಿಮ್ಮಲ್ಲಿ ಕೆಲವರು ಅಂಥವರಾಗಿದ್ದಿರಿ; ಆದರೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿರಿ.**

ಕ್ರಿಸ್ತನಲ್ಲಿ ನಾವು ದೇವ ಜನರಾದೆವು (ಮೀಸಲಾದ ಜನರಾದೆವು)

ಮೀಸಲಾಗಿಡುವಿಕೆಯು (ಪ್ರತ್ಯೇಕಿಸಿಡುವುದು, ಪ್ರತಿಷ್ಠೆ ಪಡಿಸಿ ಕೊಳ್ಳುವುದು, ಪವಿತ್ರರಾಗುವುದು) ದೇವರು ಕ್ರಿಸ್ತನಲ್ಲಿ ನನಗಾಗಿ ಮಾಡಿದ್ದು.

ನಾನು ಸಹಜತೆಯಲ್ಲಿ, ಆತ್ಮನಲ್ಲಿ ಈಗಾಗಲೇ ಸಾಧಿಸಲ್ಪಟ್ಟದ್ದರಲ್ಲಿ, ನಡೆಯುವಂತೆ ನನ್ನನು ಪವಿತ್ರವಾಗಿಟ್ಟು ಕೊಳ್ಳುವುದು ಮೀಸಲಾಗಿಡುವುದಾಗಿದೆ.

ದೇವರು ನಮ್ಮ ಚಿತ್ತವನ್ನು ಗೌರವಿಸುತ್ತಾನೆ. ಆತನು ನಮ್ಮ ಚಿತ್ತವನ್ನು ಮೀರಿ ಕಾರ್ಯನಡಿಸುವುದಿಲ್ಲ (ಆದಾಮನು ಮತ್ತು ಹವ್ವಳು).

ನನ್ನ ಚಿತ್ತವು ಒಳಪಟ್ಟಿದೆ. ನನ್ನ ಚಿತ್ತವನ್ನು ನಾನು ದೇವರ ಚಿತ್ತಕ್ಕೆ ಸರಿಹೊಂದಿಸಿಕೊಳ್ಳುತ್ತೇನೆ.

ನಿಮ್ಮ ದೇಹದ ಸ್ನಾಯುವಿನಂತೆ, ನಿಮ್ಮ ಚಿತ್ತವು ನಿಮ್ಮ ಮನೋಭಾವದ ಸ್ನಾಯುವಾಗಿದೆ. ನಿಮ್ಮ ದೇಹದ ಸ್ನಾಯುವನ್ನು ನೀವು ಬಲಗೊಳಿಸುವಂತೆಯೇ ನಿಮ್ಮ ಚಿತ್ತವನ್ನೂ ಬಲಗೊಳಿಸ ಬಹುದು. ಯಾವುದನ್ನಾದರೂ ಎದುರಿಸಲು ದೇವರ ವಾಕ್ಯದಿಂದ, ಪವಿತ್ರಾತ್ಮನ ಬಲದಿಂದ, ಪ್ರಾರ್ಥನೆಯಿಂದ ಅದನ್ನು ಪ್ರಕಟಿಸುವುದರಿಂದ, ಮತ್ತು ಸತತವಾದ ಪ್ರಯತ್ನದಿಂದ ನಿಮ್ಮ ಚಿತ್ತವನ್ನು ಬಲಗೊಳಿಸಬಹುದು.

ಎಫೆಸದವರಿಗೆ 4:27
**ಸೈತಾನನಿಗೆ ಅವಕಾಶಕೊಡಬೇಡಿರಿ.**

ಸೈತಾನನಿಗೆ ಪ್ರವೇಶ ಕೊಡಬೇಡಿರಿ. ಎಲ್ಲಾ ಬಾಗಿಲುಗಳನ್ನು ಮುಚ್ಚಿರಿ.

ಕೊಲೊಸ್ಸೆಯವರಿಗೆ 3:12

> **ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವುದರಿಂದ ಮೇಲಿನವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ.**

ದೇವರಿಗೆ ಸಂಬಂಧಿಸಿದವುಗಳ ಮೇಲೆ ಮನಸ್ಸಿಡುವ ಆಯ್ಕೆ ಮಾಡಿರಿ.

ಉದಾಹರಣೆ: ನಾನು ಪ್ರಾರ್ಥಿಸಿ," ದೇವರೇ, ನಾನು ನನ್ನ ಮನಸ್ಸು ನನ್ನ ಮನೋಭಾವಗಳು, ನನ್ನ ಅಪೇಕ್ಷೆಗಳು, ನನ್ನ ಲೈಂಗಿಕ ಇಚ್ಛೆಗಳನ್ನು ಮೀಸಲಾಗಿಟ್ಟು ಪವಿತ್ರಗೊಳಸಲು ನಿನಗೆ ಸಮರ್ಪಿಸುತ್ತೇನೆ." ಈ ರೀತಿಯಾಗಿ ನನ್ನ ಮನಸ್ಸು, ಮನೋಭಾವಗಳು, ಅಪೇಕ್ಷೆಗಳು, ಲೈಂಗಿಕ ಇಚ್ಛೆಗಳು ಎಲ್ಲವನ್ನೂ ಪ್ರತ್ಯೇಕಿಸಿಟ್ಟು ದೇವರು ಪವಿತ್ರಗೊಳಸಲೆಂದು ಪ್ರಕಟಿಸುತ್ತೇನೆ.

ಅನುದಿನದ ಜೀವನದಲ್ಲಿ ಮೀಸಲಿಡುವುದು:

## ದೂರವಿರ್ರಿ

ನೀವು ಮೊದಲ ತುತ್ತನ್ನು ತೆಗೆದುಕೊಳ್ಳದಿದ್ದರೆ, ಇನ್ನೊಂದು ತುತ್ತು ಬೇಡ ಉಪವಾಸವು ನಿಮ್ಮ ದೇಹದ ಇಚ್ಛೆಗಳನ್ನು ಕೆಲವು ದಿನ ದೂರ ವಿರಿಸಬಹುದು. ಆದರೆ ಉಪವಾಸವಿದ್ದ ಜೀವನವು ದೇವರಿಗೊಪ್ಪದ ಅಪೇಕ್ಷೆಗಳನ್ನು ಸತತವಾಗಿ ಮುಚ್ಚಿಡುತ್ತದೆ.

- ಶೋಧನೆ ಇದೆ ಎಂದು ತಿಳದ ಕ್ಷೇತ್ರಗಳಂದ ದೂರವಿರ್ರಿ.

  ಕೀರ್ತನೆಗಳು 101:3
  **ಯಾವ ನೀಚವಾದ ಕಾರ್ಯವನ್ನು ದೃಷ್ಟಿಸುವದಿಲ್ಲ; ದುರಾಚಾರವನ್ನು ಹಗೆ ಮಾಡುತ್ತೇನೆ, ಅದರ ಗೊಡವೆಯೇ ನನಗೆ ಬೇಡ.**

ನಿನ್ನ ಕಣ್ಣುಗಳ ಮೇಲೆ ಎಚ್ಚರವಿಡು

> ಮತ್ತಾಯ 5:27-30.
> **ವ್ಯಭಿಚಾರ ಮಾಡಬಾರದೆಂದು ಹೇಳಯದೆ ಎಂಬುದಾಗಿ ನೀವು ಕೇಳದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ - ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು. ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ.**

> 1 ಥೆಸಲೋನಿಕದವರಿಗೆ 5:22
> **ಸಕಲ ವಿಧವಾದ ಕೆಟ್ಟತನಕ್ಕೆ ದೂರವಾಗಿರಿ.**


## ಸ್ವರಕ್ಷಣೆಯ ವಿಧಾನ

ನಿಮ್ಮನ್ನು ರಕ್ಷಿಸಲು ಕೆಲವು ಮೇರೆಗಳನ್ನು ಇಟ್ಟುಕೊಳ್ಳರಿ.

ಅಂಗವಿಕಲತೆ ಪಾಪಮಯವಾದದ್ದೇನಾದರೂ ಇದ್ದರೆ ಅದರೊಂದಿಗೆ ಕಠಿಣವಾಗಿ ವ್ಯವಹರಿಸಿರಿ. ಸ್ವಲ್ಪ ಅದು ನೋವುಂಟು ಮಾಡಬಹುದು, ಆದರೆ ಗಾಯವು ವಾಸಿಯಾಗುವುದು.

ಬೀಳಬಹುದಾದ / ಒಳಗಾಗಬಹುದಾದ ಸಂದರ್ಭದಲ್ಲಿ ಹೆಚ್ಚು ಜಾಗರೂಕರಾಗಿರ್ರಿ.

ದೊಡ್ಡ ಸಂದಿಗ್ಧ ಪರಿಸ್ಥಿತಿಗಳಲ್ಲಿ, ಮಹಾ ಜಯದಲ್ಲಿ, ಮನಃ ಕುಗ್ಗುವಿಕೆಯಲ್ಲಿ, ಒಂಟಿಗತನದಲ್ಲಿ, ನೋವಿನಲ್ಲಿ, ಘಾಸಿಗೊಂಡಲ್ಲಿ, ದೊಡ್ಡ ಅಗತ್ಯದ ಸಂದರ್ಭದಲ್ಲಿ ಇತ್ಯಾದಿಗಳಲ್ಲಿ ನೀವು ಬಿದ್ದು ಹೋಗಬಹುದಾದ ಸಾಧ್ಯತೆಗಳವೆ.



ನಿಮ್ಮ ತರ್ಕಿಸುವ ಸಾಮರ್ಥ್ಯ ಕುಗ್ಗುತ್ತದೆ. ಒಮ್ಮೆ ತಪ್ಪು ಎಂದನಿಸಿದ್ದು ಸರಿಯೆನಿಸುತ್ತದೆ. ನಿಮ್ಮ ಚಿತ್ತವು ಅತ್ಯಂತ ದುರ್ಬಲವಾಗಿರುತ್ತದೆ. ಆದುದರಿಂದ ಅಂಥಾ ಸಂದರ್ಭಗಳಲ್ಲಿ ಎಚ್ಚರವಾಗಿರ್ರಿ.

ನೀವು ಬಲವಿಲ್ಲದವರಾಗಿರುವುದನ್ನು ತಿಳುಕೊಳ್ಳಿರಿ ಮತ್ತು ಅಥವಾ ಸಂದರ್ಭಗಳಲ್ಲಿ ಯಾವೋಂದೂ ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳದಿರಿ, ಶೋಧನೆಗೊಳ್ಳಬೇಡಿರಿ. ಅಂಥ ಕ್ಷಣಗಳಲ್ಲಿ ಸೈತಾನನ ಕುಯುಕ್ತಿಗಳು ಪ್ರಬಲವಾಗಿರುತ್ತವೆ. ಸುಳ್ಳು ಸತ್ಯದಂತೆ ತೋರುವ ಸಂದರ್ಭ ಆದಾಗಿದೆ.

2 ಸಮುವೇಲನು 11:1

**ಮರುವರುಷ ಅರಸರು ಯುದ್ಧಕ್ಕೆ ಹೊರಡುವ ಸಮಯದಲ್ಲಿ ದಾವೀದನು ಯೋವಾಬನನ್ನೂ ತನ್ನ ಸೇವಕರನ್ನೂ ಎಲ್ಲಾ ಇಸ್ರಾಯೇಲ್ಯರನ್ನೂ ಯುದ್ಧಕ್ಕೆ ಕಳುಹಿಸಿದನು. ಇವರು ಹೋಗಿ ಅಮ್ಮೋನಿಯರ ಪ್ರಾಂತಗಳನ್ನು ಹಾಳುಮಾಡಿ ರಬ್ಬಕ್ಕೆ ಮುತ್ತಿಗೆ ಹಾಕಿದರು. ದಾವೀದನು ಯೆರೂಸಲೇಮಿನಲ್ಲಿಯೇ ಇದ್ದನು.**

## (ಇ.) ವಾಕ್ಯದ ಬಲ

ಕೀರ್ತನೆಗಳು 17:4

**ನಾನಂತೂ ಲೋಕ ವ್ಯವಹಾರಗಳಲ್ಲಿ ಬಲಾತ್ಕಾರಿಗಳಂತೆ ನಡೆಯದೆ ನಿನ್ನ ಮಾತನ್ನೇ ಅನುಸರಿಸಿದ್ದೇನೆ.**

ಕೀರ್ತನೆಗಳು 119:9

**ಯೌವನಸ್ಥನು ತನ್ನ ನಡತೆಯನ್ನು ಶುದ್ಧ ಪಡಿಸಿಕೊಳ್ಳುವದು ಯಾವದರಿಂದ? ನಿನ್ನ ವಾಕ್ಯವನ್ನು ಗಮನಿಸಿ ನಡೆಯುವವರಿಂದಲೇ.**

ವಾಕ್ಯವು ಬೆಂಕಿಯಂತಿದೆ – ಅದು ಶುದ್ಧ ಮಾಡುತ್ತದೆ.

ವಾಕ್ಯವು ಸುತ್ತಿಗೆಯಂತಿದೆ – ಅದು ನನ್ನಲ್ಲಿರುವ ಕಠಿನವಾದ ಮತ್ತು ಕಷ್ಟಕರವಾದ ಭಾಗಗಳನು ಒಡೆಯುತ್ತದೆ.

ವಾಕ್ಯವು ನೀರಿನಂತಿದೆ – ಅದು ನನ್ನನ್ನು ತೊಳೆದು ಶುದ್ಧಮಾಡುತ್ತದೆ.

...........ಮತ್ತು ಇನ್ನೂ ಅಧಿಕವಾಗಿ...............

ದೇವರ ವಾಕ್ಯದಿಂದ ನಿಮ್ಮ ಮನಸ್ಸನ್ನು ನೂತನಗೊಳಿಸಿರಿ

ರೋಮಾಪುರದವರಿಗೆ 8:5–8

**ಶರೀರಭಾವವನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ, ಪವಿತ್ರಾತ್ಮನ್ನನನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧ ಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ ಶರೀರ ಭಾವದವುಗಳ ಮೇಲೆ ಮನಸ್ಸಿಡುವದು ಮರಣ; ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಯಾಂತಿಯೂ ಆಗಿದೆ. ಯಾಕೆಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು; ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ ಒಳಪಡುವದಕ್ಕಾಗುವದೂ ಇಲ್ಲ. ಶರೀರಭಾವಾಧೀನರು ದೇವರಿಗೆ ಮೆಚ್ಚಿಗೆಯಾಗಿರಲಾರರು.**

**ನಿಮ್ಮ ಮನಸ್ಸುಗಳನ್ನು ಕಾಪಾಡಿಕೊಳ್ಳಲು ಪರಿಶುದ್ಧ ಗ್ರಂಥದ ವಚನಗಳನ್ನು ಉಪಯೋಗಿಸಿರಿ.**

**ಕೆಟ್ಟ ಯೋಚನೆಗಳಂದ ನಿಮ್ಮ ಮನಸ್ಸುಗಳನ್ನು ಕಾಪಾಡಿಕೊಳ್ಳಿರಿ.**

ಶರೀರಾಧೀನ ಮನಸ್ಸು ಶರೀರಕ್ಕೆ ಸಂಬಂಧ ಪಟ್ಟವುಗಳನ್ನು ಅಪೇಕ್ಷಿಸುತ್ತದೆ –ಆದರೆ ನೂತನಗೊಂಡ ಮನಸ್ಸು ಪವಿತ್ರಾತ್ಮನಿಗೆ ಸಂಬಂಧ ಪಟ್ಟವುಗಳನ್ನು ಅಪೇಕ್ಷಿಸುತ್ತದೆ.

### ಮನಸ್ಸು

ಫಿಲಿಪ್ಪಿಯವರಿಗೆ 4:8

**ಕಡೇ ಮಾತೇನಂದರೆ, ಸಹೋದರರೇ, ಯಾವದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೋ ಮನೋಹರವೂ ಆಗಿದೆಯೋ, ಯಾವದು ಸದ್ಗುಣವಾಗಿದೆಯೇ, ಯಾವದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ.**

### ಸ್ತ್ರೀಯರು

ಮತ್ತಾಯ 5:27–30

**ವ್ಯಭಿಚಾರ ಮಾಡಬಾರದೆಂದು ಹೇಳಿಯದೆ ಎಂಬದಾಗಿ ನೀವು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ – ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು. ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೊಗುವದು ನಿನಗೆ ಹಿತವಲ್ಲವೇ.**

ನನ್ನ ಹೋರಾಟಕ್ಕೆ ಸಂಬಂಧಿಸಿದ ಕ್ಷೇತ್ರದ ಕುರಿತ ವಾಕ್ಯವನ್ನು ನಾನು ಧ್ಯಾನಿಸುತ್ತೇನೆ. ನಾನು ವಾಕ್ಯವನ್ನು ಬಾಯಿಂದ ಅರಿಕೆ ಮಾಡುತ್ತೇನೆ.

ಜ್ಞಾನೋಕ್ತಿಗಳು 6:25
**ನಿನ್ನ ಹೃದಯವು ಅವಳ ಬೆಡಗನ್ನು ಮೋಹಿಸದಿರಲಿ; ಅವಳು ತನ್ನ ಕಣ್ಣು ರೆಪ್ಪೆಗಳಿಂದ ನಿನ್ನನ್ನು ವಶ ಮಾಡಿಕೊಂಡಾಳು ನೋಡಿಕೋ.**

## (ಈ.) ಪವಿತ್ರಾತ್ಮನ ಬಲ

ಪವಿತ್ರಾತ್ಮನು, ಸ್ವನಿಯಂತ್ರಣ ಅಥವಾ ಶಿಸ್ತುಕ್ರಮ, ಸ್ವ ಆಡಳಿತದ ಸಾಮರ್ಥ ಹೊಂದಲು ಬಲಗೊಳಿಸುತ್ತಾನೆ. ನನ್ನ ದೇಹವನ್ನು ನಿರ್ವಹಿಸಲು ಮತ್ತು ಕ್ರಮಗೊಳಿಸಲು ಬಲವನ್ನು ನೀಡುತ್ತನೆ.

ಗಲಾತ್ಯದವರಿಗೆ 5:22, 23 (ಸ್ವ-ನಿಯಂತ್ರಣ)
**ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನಂದರೆ – ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಯೆ ಇಂಥವುಗಳೇ.**

2 ತಿಮೊಥೆಯನಿಗೆ 1:7 (ಸ್ವಯಂ ನಿಯಂತ್ರಣ ಅಥವಾ ಶಿಸ್ತು)
**ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮನೇ ಹೊರತು ಹೇಡಿತನದ ಆತ್ಮವಲ್ಲ.**

ರೋಮಾಪುರದವರಿಗೆ 8:1-13, 26
**ಆದದರಿಂದ ಕ್ರಿಸ್ತಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. ಯಾಕೆಂದರೆ ಜೀವವನ್ನುಂಟು ಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು. ಧರ್ಮ ಶಾಸ್ತ್ರವು ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪ ನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣ ದಂಡನೆಯನ್ನು ವಿಧಿಸಿದನು ಹೀಗಿರಲು ಶರೀರ ಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮನನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು. ಶರೀರ ಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧ ಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪವಿತ್ರಾತ್ಮನನ್ನನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರಭಾವದವುಗಳ ಮೇಲೆ ಮನಸ್ಸಿಡುವದು ಮರಣ; ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು, ಜೀವವೂ ಮನಶ್ಶಾಂತಿಯೂ ಆಗಿದೆ. ಯಾಕೆಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು; ಅಂಥ ಮನಸ್ಸು ದೇವರ ನಿಯಮಕ್ಕೆ ಒಳ ಪಡುವದೂ ಇಲ್ಲ, ಒಳಪಡುವದಕ್ಕಾಗುವದೂ ಇಲ್ಲ. ಶರೀರ ಭಾವಾಧೀನರು ದೇವರಿಗೆ ಮೆಚ್ಚಿಗೆಯಾಗಿರಲಾರರು. ನೀವಾದರೋ ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ. ಆದರೆ ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯ ದೆಸೆಯಿಂದ ಜೀವಸ್ವರೂಪವಾಗಿದೆ. ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮೃತ್ಯರ್ದೇಹಗಳನ್ನು ಸಹ ಬದುಕಿಸುವನು. ಹೀಗಿರಲಾಗಿ ಸಹೋದರರೇ, ನಾವು ಹಂಗಿನಲ್ಲಿದ್ದೇವೆ; ಆದರೆ (ಪವಿತ್ರಾತ್ಮನನುಸಾರ ನಡೆಯುವ ಹಂಗಿನಲ್ಲಿದ್ದೇವೆಯೇ ಹೊರತು) ಶರೀರಭಾವವನ್ನು ಅನುಸರಿಸಿ ಬದುಕಬೇಕೆಂಬ ಹಂಗಿನಲ್ಲಿಲ್ಲ. ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ.**

ರೋಮಾಪುರದವರಿಗೆ 8:26
**ಹಾಗೆ ಪವಿತ್ರಾತ್ಮನು ಸಹ ನಮ್ಮ ಆಸಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ – ಹೇಗೆಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ.**

### ಪವಿತ್ರಾತ್ಮನ ಸಹಾಯದಿಂದ ನಾನು ನನ್ನ ದೇಹದಲ್ಲಿರುವ ದೇವರಿಗೆ ಇಷ್ಟವಾಗದ ಅಪೇಕ್ಷೆಗಳನ್ನು ಮರಣಕ್ಕೆ ಒಳಪಡಿಸುತ್ತೇನೆ.

ಪವಿತ್ರಾತ್ಮನು ನಮ್ಮನ್ನು ಶರೀರಭಾವದ ಕೆಲಸಗಳಿಗೆ ವಿರುದ್ಧವಾಗಿ ಎತ್ತಿ ಹಿಡಿಯುತ್ತಾನೆ.

ಗಲಾತ್ಯದವರಿಗೆ 5:16, 24, 25
**ನಾನು ಹೇಳುವದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ. ಕ್ರಿಸ್ತ ಯೇಸುವಿನವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಶೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು. ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ.**

ನಡೆ – ನಿಮ್ಮ ಪೂರ್ಣ ಜೀವನವನ್ನು ಸರಿಪಡಿಸಿಕೊಳ್ಳಿರಿ – ದೇವರಾತ್ಮನಿಗೆ ಅಧೀನರಾಗಿ.

ನಾನು ಅನೇಕ ಬಾರಿ ಪ್ರಾರ್ಥಿಸಿದ ಒಂದು ಚಿಕ್ಕ ಪ್ರಾರ್ಥನೆ: "ಪವಿತ್ರಾತ್ಮನೆ, ದಯವಿಟ್ಟು ನನಗೆ ಸಹಾಯ ಮಾಡು!"


ಎಲ್ಲಾ ಸಮಯಗಳಲ್ಲೂ ಶಾಂತವಾಗಿರ್ರಿ. ಇದು ದೇವರ ಆತ್ಮನಿಗೆ ಅಧೀನವಾಗಿ ಇರಲು ಅಗತ್ಯವಾಗಿದೆ.

ದೇವರ ಆತ್ಮನು ಬೆಂಕಿಯ ಹಾಗೆ – ಆತನ ಪ್ರಸನ್ನತೆಯು ನನ್ನಲ್ಲಿರುವ ಅಶುದ್ಧತ್ವವನ್ನು ಸುಟ್ಟು ಹಾಕುತ್ತದೆ. ಹೀಗಾಗಿ ನಾನು ಬೆಂಕಿಯು ನನ್ನಲ್ಲಿ ಉರಿಯುತ್ತಿರಲು ದೇವರಾತ್ಮನನ್ನು ಹೆಚ್ಚೆಚ್ಚಾಗಿ ಕೇಳಿಕೊಳ್ಳುತ್ತೇನೆ.

ಮತ್ತಾಯ 3:11
**ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಶಕ್ತನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು.**

ಮಲಾಕಿಯ 3:2-4
**ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು? ಆತನು ಅಕ್ಕಸಾಲಿಗನ ಬೆಂಕಿಗೂ ಅಗಸನ ಚೌಳಿಗೂ ಸಮಾನನಾಗಿದ್ದಾನೆ: ಬೆಳ್ಳಿಯನ್ನು ಶೋಧಿಸುವ ಅಕ್ಕ ಸಾಲಿಗನಂತೆ ಕುಳಿತು ಲೇವಿವಂಶದವರನ್ನು ಶೋಧಿಸಿ ಬೆಳ್ಳಿ ಬಂಗಾರಗಳನ್ನೋ ಎಂಬಂತೆ ಶುದ್ಧೀಕರಿಸುವನು; ಅವರು ಸದ್ಧರ್ಮಿಗಳಾಗಿ ಯೆಹೋವನಿಗೆ ನೈವೇದ್ಯಗಳನ್ನು ತಂದೊಪ್ಪಿಸುವರು. ಆಗ ಯೆಹೂದದ ಮತ್ತು ಯೆರೂಸಲೇಮಿನ ನೈವೇದ್ಯವು ಪೂರ್ವದಿನಗಳಲ್ಲಿ ಪುರಾತನ ಕಾಲದಲ್ಲಿ ಯೆಹೋವನಿಗೆ ಮೆಚ್ಚಿಕೆಯಾಗಿದ್ದಂತೆ ಆಗಿರುವದು.**

- ಅಭಿಷೇಕವು ನೊಗವನ್ನು ಮುರಿದು ಹೊರೆಯನ್ನು ತೆಗೆದು ಹಾಕುತ್ತದೆ.
- ಒಂದು ಕ್ಷಣದಲ್ಲಿ ನೀವು ಬಿಡುಗಡೆ ಹೊಂದುವಿರಿ– ಆದರೆ ನೀವು ಬಿಡುಗಡೆ ಹೊಂದಿದವರಾಗಿ ಉಳಿಯಲು ಈ ಆತ್ಮಿಕ ಸತ್ಯತೆಗಳಲ್ಲಿ ನಡೆದು ಮುಂದುವರಿಯಬೇಕು.
- ಪ್ರಾರ್ಥನೆಯು ನಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಸರಿಹೊಂದಿಸುತ್ತದೆ.




ಇಬ್ರಿಯರಿಗೆ 5:7–9

**ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡಿ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯ ಭಕ್ತಿಯ ನಿಮಿತ್ತ ಕೇಳಲ್ಪಟ್ಟನು. ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು.**

ಮತ್ತಾಯ 26:38, 39, 42

**ಮತ್ತು ಅವರಿಗೆ – ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗದೆ; ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ ಬೋರಲ ಬಿದ್ದು – ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದನು. ತಿರುಗಿ ಎರಡನೆಯ ಸಾರಿ ಹೋಗಿ – ನನ್ನ ತಂದೆಯೇ ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗ ಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ ಎಂದು ಪ್ರಾರ್ಥನೆ ಮಾಡಿದನು.**

ಯೇಸುವಿನಂತೆ ನಮ್ಮ ಜೀವನಗಳಲ್ಲಿ ಕೂಡ, ನಮ್ಮ ಚಿತ್ತವು ಸಂಪೂರ್ಣವಾಗಿ ಆತನ ಚಿತ್ತಕ್ಕೆ ಸರಿಹೊಂದದಿರುವಾಗ, ನಾವು ಪ್ರಾರ್ಥನೆ ಮಾಡಬಹುದು. ತಂದೆಯ ಪ್ರಸನ್ನತೆಯಲ್ಲಿ ನಾವು ಹಾಗೆ ಪ್ರಾರ್ಥಿಸುವಾಗ ಅನೇಕ ವೇಳೆ ನಾನು ದೇವರ ಚಿತ್ತಕ್ಕೆ ನಮ್ಮ ಚಿತ್ತವನ್ನು ಸಂಪೂರ್ಣ ಸರಿಹೊಂದಿಸಿಕೊಂಡು ಹೊರ ಬರುವೆವು. ನಾವು ಪ್ರಾರ್ಥನೆಯಿಂದ, "ನಿನ್ನ ಚಿತ್ತದಂತಾಗಲಿ" ಎನ್ನುತ್ತಾ ಬೇಡುವೆವು. ಪ್ರಾರ್ಥನೆಯು ನಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಸರಿಹೊಂದಿಸಿಕೊಳ್ಳಲು ಸಹಾಯ ಮಾಡುವುದು, ಇದರಿಂದ ಈ ಭೂಮಿಯ ಮೇಲೆ ನಾವು ಆತನ ಉದ್ದೇಶಗಳನ್ನು ನೆರವೇರಿಸಲು ಸಿದ್ಧರಾಗುವೆವು.

ರೋಮಾಪುರದವರಿಗೆ 8:26, 27

**ಹಾಗೆ ಪವಿತ್ರಾತ್ಮನು ಸಹ ನಮ್ಮ ಆಸಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ. ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.**

ಯೇಸುವಿನ ರಕ್ತವು ನಿಮಗೆ ಮಾಡಿದೆಲ್ಲವನ್ನು **ಘೋಷಿಸಿರಿ**

ಆತನ ಶೋಧನೆಯ ಅವದಿಯಲ್ಲಿ "ಇದು ಬರೆದಿದೆಯಲ್ಲ..." ಎಂಬುದಾಗಿ ಆತನು ಪ್ರತಿಕ್ರಿಯಿಸಿದನು

ನುಡಿಯಲ್ಪಟ್ಟ ಮಾತುಗಳು ಆತ್ಮನ ಕತ್ತಿಯಾಗಿದೆ ನಾವು ಅದನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು.

## (ಉ.) ಪ್ರಕಟನೆಯ ಬಲ

ಪ್ರಕಟನೆ 12:1

**ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು.**

1 ಪೇತ್ರನು 5:8, 9

**ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ.. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ; ಲೋಕದಲ್ಲಿರುವ ನಿಮ್ಮ ಸಹೋದರರೂ ಅಂಥ ಬಾಧೆಗಳನ್ನೇ ಅನುಭವಿಸುತ್ತಿದ್ದಾರೆಂದು ನಿಮಗೆ ತಿಳಿದದೆಯಲ್ಲಾ.**




ಯಾಕೋಬನು 4:7

**ಹೀಗಿರಲಾಗಿ ದೇವರಿಗೆ ಒಳಗಾಗಿರಿ. ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು.**

ಯಾಕೋಬನು 3:3–6

**ನಾವು ಕುದುರೆಗಳನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದಿರುವಾಗ ಅವುಗಳ ಬಾಯಿಗೆ ಕಡಿವಾಣ ಹಾಕುತ್ತೇವಲ್ಲಾ; ಆಗ ಅವುಗಳ ದೇಹವನ್ನೆಲ್ಲಾ ತಿರುಗಿಸುವದಕ್ಕೆ ಆಗುತ್ತದೆ. ಹಡಗುಗಳನ್ನು ನೋಡಿರಿ. ಅವು ಬಹು ದೊಡ್ಡವು, ಬಲವಾದ ಗಾಳಿಯಿಂದ ಬಡಿಸಿಕೊಂಡು ಹೋಗುತ್ತವೆ ಆದರೂ ನಡಿಸುವವನು ಬಹು ಸಣ್ಣ ಚುಕ್ಕಾಣಿಯಿಂದ ಅವುಗಳನ್ನು ತನ್ನ ಮನಸ್ಸಿಗೆ ಬಂದಕಡೆಗೆ ತಿರುಗಿಸುತ್ತಾನೆ. ಹಾಗೆಯೇ ನಾಲಿಗೆಯು ಕೂಡ ಚಿಕ್ಕ ಅಂಗವಾಗಿದ್ದರೂ ದೊಡ್ಡ ಕಾರ್ಯಗಳನ್ನು ಕೊಚ್ಚಿಕೊಳ್ಳುತ್ತದೆ. ಎಷ್ಟು ಕೊಂಚ ಕಿಚ್ಚು ಎಷ್ಟು**

**ದೊಡ್ಡ ಕಾಡನ್ನು ಉರಿಸುತ್ತದೆ ನೋಡಿರಿ. ನಾಲಿಗೆಯೂ ಕಿಚ್ಚೇ. ನಾಲಿಗೆಯು ಅಧರ್ಮ ಲೋಕ ರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿ ಹತ್ತಿಸಿಕೊಳ್ಳತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿ ಹಚ್ಚುತ್ತದೆ.**

ನಾಲಿಗೆಯ ಬಲವನ್ನು ತಿಳುಕೊಳ್ಳಿರಿ. ನಾಲಿಗೆಯು ಒಂದು ಚುಕ್ಕಾಣಿಯಂತೆ, ಅಥವಾ ಒಂದು ಕುದುರೆಯ ಕಡಿವಾಣದಂತಿದೆ.

ಅಪೇಕ್ಷಿತ ಪರಿಶುದ್ಧತ್ವ ಮತ್ತು ಶುದ್ಧತ್ವಗಳು ಪರಿಣಯಿಸುವಂತೆ ಮಾತಾಡಿರಿ

ನಿಮ್ಮ ದೇಹದೊಂದಿಗೆ ಅದು ಪವಿತ್ರಗೊಳಿಸಲ್ಪಟ್ಟದ್ದು ಮತ್ತು ಪವಿತ್ರವಾದದ್ದು ಎಂಬಂತೆ ಮಾತಾಡಿರಿ. ನಿಮ್ಮ ಮನೋಭಾವಗಳು ನಿಮ್ಮ ಲೈಂಗಿಕ ಬಯಕೆಗಳು ದೈಹಿಕ ಇಚ್ಛೆಗಳು ದೇವರಿಂದ ಪವಿತ್ರಗೊಳಿಸಲ್ಪಟ್ಟ ಮೀಸಲಾಗಿಟ್ಟವುಗಳೆಂದು ಅವುಗಳೊಂದಿಗೆ ಮಾತಾಡಿರಿ.

## (ಊ.) ಗುಣಾತ್ಮಕ ಪ್ರಭಾವಗಳ ಬಲ

1 ಕೊರಿಂಥದವರಿಗೆ 15:33
**ಮೋಸಹೋಗಬೇಡಿರಿ; "ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ."**

ಎಫೆಸದವರಿಗೆ 5:11
**ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ.**




1 ಕೊರಿಂಥದವರಿಗೆ 5:11
**ಆದರೆ ಕ್ರೈಸ್ತ ಸಹೋದರನೆನಿಸಿಕೊಂಡವನು ಜಾರನಾದರೂ, ಲೋಭಿಯಾದರೂ, ವಿಗ್ರಹಾರಾಧಕನಾದರೂ, ಬೈಯುವವನಾದರೂ, ಕುಡಿಕನಾದರೂ, ಸುಲುಕೊಳ್ಳವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟ ಮಾಡಲೂ ಬಾರದು ಎಂದು ಬರೆದಿದ್ದೆನು.**

ನೀವು ಕೇಳುವ ಮಾತುಗಳು, ನಿಮ್ಮ ಸುತ್ತಲಿರುವ ತರ್ಕಗಳು, ಅವರ ಮಟ್ಟ, ವರ್ತನೆ, ಉಡುಪುಗಳು – ಕೂಡ ನಿಮ್ಮ ಮೇಲೆ ಪ್ರಭಾವ ಬೀರುತ್ತವೆ.

ನಿಮ್ಮ ಮುಂದೆ ಸಾಗಿ ಹೋದವರ ಮಾದರಿಯನ್ನು ಅನುಸರಿಸಿರಿ – ನೀವು ಈಗ ಇರುವದಕ್ಕಿಂತಲೂ ಉತ್ತಮವಾಗಲು ನಿಮಗೆ ಸವಾಲಾಗಿರುವವರು.

ನಿಮ್ಮನ್ನು ಹತೋಟಿಯಲ್ಲಿಟ್ಟಿದ್ದ ಬಹು ದಿನಗಳ ಪಾಪಗಳಿಂದ ನೀವು ಹೊರ ಬರಬಹುದು. ಶೋಧನೆಯು ಎದುರಾದಾಗ – ಅದನ್ನು ಜಯಿಸಲು ಈ ಸತ್ಯವನ್ನು ಉಪಯೋಗಿಸಿರಿ – ಹೋರಾಟವಿಲ್ಲದೆ ಜಯವು ತನ್ನಿಂದ ತಾನೇ ಬರುವುದಿಲ್ಲ.

"ದಾಸ್ಯದ" ಕೆಲವು ಕ್ಷೇತ್ರಗಳಿಂದ ಹೊರಬರಲು ಹೆಚ್ಚಿನ ಸಹಾಯವು ಬೇಕಾಗಬಹುದು (ಪಾಪಮಯ ನಡತೆ, ವ್ಯಸನಗಳು). ನಿಮ್ಮ ಲೈಫ್ ಗ್ರೂಪ್ ನಾಯಕನೊಂದಿಗೆ, ಸಭಾಪಾಲಕರೊಂದಿಗೆ, ಅಥವಾ ಮುಂದಾಳುವಿನೊಂದಿಗೆ ಅದರಿಂದ ಹೊರಬರಲು ಸಹಾಯಕ್ಕಾಗಿ ಮಾತಾಡಿರಿ.

## ಮುಖ್ಯ ಕಂಠಪಾಠ ವಚನಗಳು

1 ಯೋಹಾನ 2:15, 16
**ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ, ಬದುಕುಬಾಳಿನಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ.**

1 ಕೊರಿಂಥದವರಿಗೆ 10:12, 13
**ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ಥನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿ ಕೊಳ್ಳುವ ಮಾರ್ಗವನ್ನು ಸಿದ್ಧ ಮಾಡುವನು.**

ಎಫೆಸದವರಿಗೆ 4:23, 24
**ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟದೆ.**

## ಅನ್ವಯ

1. ಶೋಧನೆಯನ್ನು ಜಯಿಸಲು ನೀವು ಹೇಗೆ ನಿಮ್ಮನ್ನು ಅತ್ಯುತ್ತಮವಾಗಿ ಸಜ್ಜುಗೊಳಿಸಬಹುದು?

2. ನಿಮ್ಮ ಜೊತೆಗಾರರಿಂದಾಗಿ / ಸ್ನೇಹಿತರಿಂದಾಗಿ ನೀವು ಶೋಧನೆಗೊಳಗಾಗುವ / ಪಾಪ ಮಾಡುವ ಕ್ಷೇತ್ರಗಳಿವೆಯೋ? ಪಾಪದಲ್ಲಿ ಬೀಳದಂತೆ ನೀವು ಯಾವ ಬದಲಾವಣೆಗಳನ್ನು ಮಾಡಬಹುದು?

# 5

# ಪ್ರಾರ್ಥನೆ

(ನಮಗೆ ಪ್ರಾರ್ಥನೆಯ ಮೂಲ ವಿಷಯಗಳನ್ನು ಕಲಿಸಲು ಮತ್ತು ಬಲವಾದ ಪ್ರಾರ್ಥನಾ ಜೀವನವನ್ನು ಬೆಳೆಸಲು ನಮ್ಮನ್ನು ಪ್ರೋತ್ಸಾಹ ಗೊಳಿಸಲು ಈ ಪಾಠವು ಸಿದ್ಧಗೊಳಿಸಲ್ಪಟ್ಟಿದೆ.)

## ಪ್ರಾರ್ಥನೆಯು ದೇವರೊಂದಿಗೆ ಅನ್ಯೋನ್ಯತೆಯಾಗಿದೆ

ಪ್ರಾರ್ಥನೆಯು ಸರಳವಾದ ದೇವರೊಂದಿಗೆ ಅನ್ಯೋನ್ಯತೆ – ನೀವು ದೇವರೊಂದಿಗೆ ಮಾತಾಡಿ ನಿಮ್ಮ ಹೃದಯದಲ್ಲಿರುವುದನ್ನು ಆತನಿಗೆ ತಿಳಿಸುವುದು ಮತ್ತು ದೇವರು ಆತನ ಹೃದಯದಲ್ಲಿರುವದನ್ನು ನಿಮಗೆ ತಿಳಿಸುವುದಾಗಿದೆ. ಅದು ಎರಡು ಮಾರ್ಗಗಳುಳ್ಳ ಸಂಪರ್ಕವಾಗಿದೆ.

## ಪ್ರಾರ್ಥನೆಯು ದೇವರೊಂದಿಗೆ ಒಂದು ಅನ್ಯೋನ್ಯತೆಯ ಸ್ಥಾನಕ್ಕೆ ಆತನು ಕೊಡುವ ಆಮಂತ್ರಣ

ಲೂಕ 11:1

**ಆತನು ಒಂದಾನೊಂದು ಸ್ಥಳದಲ್ಲಿ ಪ್ರಾರ್ಥನೆ ಮಾಡಿ ಮುಗಿಸಿದಾಗ ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ – "ಸ್ವಾಮೀ, ಯೋಹಾನನು ತನ್ನ ಶಿಷ್ಯರಿಗೆ ಕಲಿಸಿದ ಹಾಗೆ ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು" ಎಂದು ಕೇಳಿದನು.**

ಲೂಕ 18:1

**ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು.**

ದೇವರು ಪ್ರಾರ್ಥನೆಯ ವ್ಯವಸ್ಥೆಯ ಕ್ರಮವನ್ನು ಕೊಟ್ಟನು. ನಾವು ಆತನೊಂದಿಗೆ ಅನ್ಯೋನ್ಯವಾಗಿರಲು, ಆತನನ್ನು ತಿಳಿಯಲು, ಆತನಿಗಾಗಿ ಕಾದಿರಲು ಮತ್ತು ಆತನ ಬಲದಿಂದ ನೂತನ ಬಲವನ್ನು ಹೊಂದಲು ದೇವರು ನಮ್ಮನ್ನು ಪ್ರಾರ್ಥನೆಗೆ ಕರೆಯುತ್ತಾನೆ, ದೇವರು ಉತ್ತರ ಕೊಡುವುದಾಗಿ ವಾಗ್ದಾನ ಮಾಡಿದ್ದಾನೆ.

ಪ್ರಾರ್ಥನೆಯ ಮನುಷ್ಯನಾಗಲು ಸ್ವತಃ ಯೇಸುವೇ ನಮಗೆ ಅತ್ಯುತ್ತಮ ಮಾದರಿ.

ಮಾರ್ಕ 1:35

**ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು.**

ಲೂಕ 6:12

**ಆ ದಿವಸಗಳಲ್ಲಿ ಆತನು ಪ್ರಾರ್ಥನೆ ಮಾಡುವದಕ್ಕಾಗಿ ಬೆಟ್ಟಕ್ಕೆ ಹೋಗಿ ರಾತ್ರಿಯನ್ನೆಲ್ಲಾ ಪ್ರಾರ್ಥನೆಯಲ್ಲೇ ಕಳೆದನು.**

ಪ್ರಾರ್ಥನೆಯು ಒಂದು ಆತ್ಮಿಕ ಚಟುವಟಿಕೆಯಾಗಿರುವುದರಿಂದ ಪ್ರಾರ್ಥನೆಯಲ್ಲಿ ಭಂಗಿಯು ನಿರ್ಧಿಷ್ಟವಾಗಿರಬೇಕಾಗಿಲ್ಲ. ನಾವು ಮೊಣಕಾಲೂರ ಬಹುದು, ಕೂತುಕೊಳ್ಳಬಹುದು, ನಿಲ್ಲಬಹುದು. ಪ್ರಾರ್ಥನೆಯಲ್ಲಿ ನಾವು ರೋಸರಿಯನ್ನು ಉಪಯೋಗಿಸುವುದಿಲ್ಲ. ಪ್ರಾರ್ಥನೆಯಲ್ಲಿ ಯಾವ ಒಬ ಸಂತನನ್ನು ಆರಾಧಿಸುವ ಮೂಲಕ ಪ್ರಾರ್ಥಿಸುವುದಿಲ್ಲ. ನಮಗೆ ಒಂದು ಚಿತ್ರ ಒಂದು ಮೂರ್ತಿ ಅಥವಾ ವಿಗ್ರಹವು ಅಗತ್ಯವಿಲ್ಲ. ವ್ಯರ್ಥವಾಗಿ ಹೇಳಿದ್ದನ್ನೇ ಹೇಳುತ್ತಾ, ಹಾಡಿನಂತೆ ಪ್ರಾರ್ಥಿಸಬೇಕಾಗಿಲ್ಲ. ಪ್ರಾರ್ಥನೆಯ ಪುಸ್ತಕದಲ್ಲಿರುವ ಒಂದು ಪ್ರಾರ್ಥನೆಯನ್ನು, ನಮ್ಮ ಹೃದಯವನ್ನು ಅದರಲ್ಲಿರಿಸದೆ, ಹೆಸರಿಗೆ ಮಾತ್ರ ಅದನ್ನು ಓದುವುದಿಲ್ಲ.

## ನಾವು ಪ್ರಾರ್ಥಿಸುವಾಗ ದೇವರು ಕೇಳುತ್ತಾನೆ.

1 ಪೇತ್ರನು 3:12

**ಯಾಕೆಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ, ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ.**

ಯೆರೆಮೀಯನು 29:12

**ನೀನು ನನಗೆ ಮೊರೆಯಿಡುವಿರಿ, ನನ್ನನ್ನು ಪ್ರಾರ್ಥಿಸಲು ಹೋಗುವಿರಿ; ನಾನು ಕಿವಿಗೊಡುವೆನು.**

ಕೀರ್ತನೆಗಳು 65:2
**ಪ್ರಾರ್ಥನೆಯನ್ನು ಕೇಳುವವನೇ, ನರರೆಲ್ಲರು ನಿನ್ನ ಬಳಿಗೆ ಬರುವರು.**

ಜ್ಞಾನೋಕ್ತಿಗಳು 15:29
**ಯೆಹೋವನು ದುಷ್ಟರಿಗೆ ದೂರ, ಶಿಷ್ಟ ಜಿನ್ನಹಕ್ಕೆ ಹತ್ತಿರ.**

ಕೀರ್ತನೆಗಳು 141:2
**ನನ್ನ ಪ್ರಾರ್ಥನೆಯು ಧೂಪದಂತೆಯೂ ನಾನು ಕೈಯೆತ್ತುವದು ಸಂಧ್ಯಾ ನೈವೇದ್ಯದಂತೆಯೂ ನಿನಗೆ ಸಮರ್ಪಕವಾಗಲಿ.**

## ನಾವು ಪ್ರಾರ್ಥಿಸುವಾಗ ದೇವರು ಉತ್ತರ ಕೊಡುವ ವಾಗ್ದಾನ ಮಾಡಿದ್ದಾನೆ.

ಮತ್ತಾಯ 7:7-11
**ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು; ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು ನಿಮ್ಮಲ್ಲಿ ಯಾವಾನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ.**

ಮತ್ತಾಯ 21:22
**ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ ಅಂದನು.**

ಪ್ರತಿ ಪ್ರಾರ್ಥನೆಯು ಉತ್ತರಿಸಲ್ಪಡುವ ಪ್ರಾರ್ಥನೆಯ ಸ್ಥಳಕ್ಕೆ ನಾವು ಬರಬೇಕೆಂಬುದಾಗಿ ದೇವರು ಬಯಸುತ್ತಾನೆ. ಯೇಸು ನಮ್ಮ ಮಾದರಿ - ಗುಣಮಟ್ಟ. ಉತ್ತರಿಸಲ್ಪಡದ ಪ್ರಾರ್ಥನೆಯನ್ನು ಆತನು ಮಾಡಲೇ ಇಲ್ಲ.

ಪ್ರಾರ್ಥನೆಯಲ್ಲಿ ಏನು ವಿಫಲತೆಯಾದರೂ ಅದನ್ನು ದೇವರು ಮಾಡಿದ್ದೆಂದು ಹೇಳಲಾಗದು. ವಿಫಲತೆಯು ಮನುಷ್ಯನಿಂದಾಗಿಯೇ ಆಗುವುದು. ನಾವು ಮಾಡಿದ ಪ್ರಾರ್ಥನೆಗೆ ಉತ್ತರ ಅಥವಾ ಆ ಸಮಯಕ್ಕೆ ಉತ್ತರ ದೊರೆಯದಿದ್ದರೂ ಅದು ಏಕೆ ಹಾಗಾಯಿತೆಂದು ಹೇಳಲು ನಮಗೆ ಆಗುವುದಿಲ್ಲ ಎಂದು ನಾವು ಒಪ್ಪಿಕೊಳ್ಳಬೇಕಾಗಿದೆ. ನಮ್ಮ ವಿಫಲತೆಯನ್ನು ವಿವರಿಸಲು ನಾವು ಒಂದು "ಸತ್ಯ"ವನ್ನು ಬದಲಿಸಲಾಗುವುದಿಲ್ಲ. ನಾವು ಪರಿಣಾಮಕಾರಿಯಾಗಿ ಹೇಗೆ ಪ್ರಾರ್ಥಿಸುವುದೆಂದು ಇನ್ನೂ ಕಲಿಯುತ್ತಿದ್ದೇವೆ ಎಂದು ನಾವು ಒಪ್ಪಿಕೊಳ್ಳಬೇಕಾಗಿದೆ ಹೀಗೆ ವಿಫಲತೆಯ ಮಧ್ಯದಲ್ಲೂ, ನಾವು ದೇವರ ವಾಕ್ಯದಲ್ಲಿ ಪ್ರಕಟವಾದ ಪ್ರಾರ್ಥನೆಯ ಕುರಿತ ಸತ್ಯಗಳಿಗನುಸಾರವಾಗಿ ಪ್ರಾರ್ಥನೆಯ ಪ್ರಯಾಣದ ಪ್ರಾರ್ಥನೆಯ ಪ್ರಯಾಣವನ್ನು ಮುಂದುವರಿಸುತ್ತೇವೆ.

## ಪ್ರಾರ್ಥನೆಯು ನಮ್ಮನ್ನು ಬದಲಾಯಿಸುತ್ತದೆ.

- ನಮ್ಮ ಬಲವು ನೂತನಗೊಂಡಿದೆ
- ನಮ್ಮ ಚಿತ್ತವು ದೇವರ ಚಿತ್ತದೊಡನೆ ಸಮಾನಾಂತರಗೊಂಡಿದೆ.
- ನಮ್ಮ ಇಚ್ಛೆಗಳು ಮತ್ತು ಆಕರ್ಷಣೆಗಳು ಬದಲಾಗುತ್ತವೆ.



**ಓ ಕರ್ತನೇ, ನನಗೆ ತುಂಬಾ ಹಣ ಬೇಕು, ಮತ್ತು ಒಂದು ಹೊಸ ಕಾರು, ಮತ್ತು ನನ್ನ ಎಲ್ಲಾ ಸ್ನೇಹಿತರು ನನ್ನ ಕುರಿತು ನಿಜವಾಗಿಯೂ ಹೊಟ್ಟೆಕಿಚ್ಚು ಪಡಬೇಕು....**



**ನಿಜವಾಗಿಯೂ, ಎಲ್ಲಾ ವಿಷಯಗಳಲ್ಲಿ ನಾನು ನಿನ್ನನ್ನು ಮುಂದಿಡುವಂತೆ ದಯವಿಟ್ಟು ನನಗೆ ಸಹಾಯ ಮಾಡು.**

**ಪ್ರಾರ್ಥನೆಯು ನಮ್ಮ ಸುತ್ತಲಿನ ಪ್ರಪಂಚವನ್ನು ರೂಪಿಸಿ ಇತಿಹಾಸ ನಿರ್ಮಾಣದಲ್ಲಿ ದೇವರೊಂದಿಗೆ ಪಾಲ್ಗೊಳ್ಳುವುದು.**

- ನಮ್ಮ ಸನ್ನಿವೇಶಗಳಲ್ಲಿ ದೇವರು ಮಧ್ಯಪ್ರವೇಶಿಸುತ್ತಾನೆ.
- ಪ್ರಾರ್ಥನೆಯು ನಮ್ಮ ಪ್ರಪಂಚದಲ್ಲಿ ದೇವರು ತನ್ನ ರಾಜ್ಯವನ್ನೂ ಅಧಿಕಾರವನ್ನೂ ಸ್ಥಾಪಿಸಲು ಆತನನ್ನು ಅಮಂತ್ರಿಸಿ, ಅದರಲ್ಲಿ ಆತನೊಂದಿಗೆ ಪಾಲ್ಗೊಳ್ಳುವುದು.

## ಪ್ರಾರ್ಥನೆಯಲ್ಲಿ ನಾನು ಏನು ಮಾಡಬಹುದು?

### ಯಾಕೆ ಪ್ರಾರ್ಥಿಸುವುದು?

ಪ್ರಾರ್ಥನೆಯ ಅಭ್ಯಾಸವು ನಾವು ಅದನ್ನು ಕಡೆಗಣಿಸದಷ್ಟು ಅಥವಾ ಆಲಕ್ಷಿಸದಷ್ಟು ಮಹತ್ವವುಳ್ಳ ನಮಗೆ ಕೊಡಲ್ಪಟ್ಟ ಬಾಧ್ಯತೆಯಾಗಿದೆ.

> ಮತ್ತಾಯ 6:9–13
> **ಆದದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು – ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು. ಯಾಕೆಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲವೂ ನಿನ್ನವೇ. ಆಮೆನ್.**

- ಆತನೊಂದಿಗೆ ಅನ್ಯೋನ್ಯವಾಗಿರಲು / ಸಂಬಂಧಿಸಲು ಪ್ರಾರ್ಥಿಸಿರಿ: ಪರಲೋಕದಲ್ಲಿರುವ ನಮ್ಮ ತಂದೆಯೇ.
- ಆತನನ್ನು ಭಕ್ತಿ ವಿಶ್ವಾಸಗಳಿಂದ ಕಾಣಲು, ಆರಾಧಿಸಲು ಮತ್ತು ಗೌರವಿಸಲು: ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ.
- ಆತನ ರಾಜ್ಯವೂ ಅಧಿಕಾರವೂ ಈ ಭೂಮಿಯ ಮೇಲೆ ಸ್ಥಾಪಿಸಲ್ಪಡಲು: ನಿನ್ನ ರಾಜ್ಯವು ಬರಲಿ.
- ಆತನ ಚಿತ್ತವು, ಉದ್ದೇಶವು ಮತ್ತು ಯೋಜನೆಯು ಸ್ಥಾಪಿಸಲ್ಪಡಲು – ನಿನ್ನ ಚಿತ್ತವು ಪರಲ್ಕದಲ್ಲಿ ನೆರೆವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.
- ಎಲ್ಲಾ ಅಗತ್ಯತೆಗಳಿಗಾಗಿ ಪ್ರಾರ್ಥಿಸಲು – ಆತ್ಮಿಕ, ಮಾನಸಿಕ, ದೈಹಿಕ, ಆರ್ಥಿಕ ಮತ್ತು ಇತರ ಅಗತ್ಯತೆಗಳು: ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು.
- ಕ್ಷಮಾಪಣೆಗಾಗಿಯೂ ಶುದ್ಧೀಕರಣಕ್ಕಾಗಿಯೂ ಪ್ರಾರ್ಥಿಸಲು: ನಮ್ಮ ಪಾಪಗಳನ್ನು ನಮಗೆ ಕ್ಷಮಿಸು.
- ಇತರರನ್ನು ಕ್ಷಮಿಸಲು ಪ್ರಾರ್ಥಿಸಲು: ನಮಗೆ ತಪ್ಪು ಮಾಡಿದವರನ್ನು (ನಮ್ಮ ಸಾಲಗಾರರನ್ನು) ನಾವು ಕ್ಷಮಿಸಿದಂತೆ.
- ಶೋಧನೆಯನ್ನು ಜಯಿಸಲು ಪ್ರಾರ್ಥಿಸಲು: ನಮ್ಮನ್ನು ಶೋಧನೆಯೊಳಗೆ ಸೇರಿಸದೆ.
- ಸೈತಾನನ ವಿರೋಧಗಳನ್ನು ಜಯಿಸಲು ಮತ್ತು ಅದರಲ್ಲಿ ಜಯ ಶಾಲಿಗಳಾಗಲು ಪ್ರಾರ್ಥಿಸಲು: ಕೇಡಿನಿಂದ (ಕೆಡುಕನಿಂದ) ನಮ್ಮನ್ನು ತಪ್ಪಿಸು.
- ದೇವರಿಗೆ ಎಲ್ಲಾ ಮಹಿಮೆಯನ್ನು ಸ್ತೋತ್ರವನ್ನೂ ಸಲ್ಲಿಸಲು ಪ್ರಾರ್ಥಿಸಲು; ಯಾಕೆಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲವೂ ನಿನ್ನವೇ ಆಮೆನ್.


### ವಿವಿಧ ರೀತಿಯ ಪ್ರಾರ್ಥನೆಗಳು

> ಎಫೆಸದವರಿಗೆ 6:18
> **ನೀವು ಪವಿತ್ರಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲ ವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣಸ್ಥಿರ ಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರ್ರಿ.**

**ಯಾವಾಗಲೂ ಎಲ್ಲಾ ವಿಧವಾದ ಪ್ರಾರ್ಥನೆಯಿಂದಲೂ ಪ್ರಾರ್ಥಿಸುತ್ತಿರುವುದು ಎಂದು ಇದರ ಅರ್ಥ.**

> 1 ತಿಮೊಥೆಯನಿಗೆ 2:1
> **ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾ ಸ್ತುತಿಗಳನ್ನೂ ಮಾಡಬೇಕೆಂದು ನಿಮಗೆ ಬೋಧಿಸುತ್ತೇನೆ.**
>
> ಇಲ್ಲಿ ನಾವು ವಿವಿಧ ಅಭಿವ್ಯಕ್ತತೆಗಳ ಪ್ರಾರ್ಥನೆಯನ್ನು ನೋಡುತ್ತೇವೆ. ವಿಜ್ಞಾಪನೆಗಳು, ಪ್ರಾರ್ಥನೆಗಳು, ಮನವಿಗಳು, ಕೃತಜ್ಞತಾ ಸ್ತುತಿಗಳು ಮತ್ತಿತರ.

ಪರಿಶುದ್ಧ ಗ್ರಂಥದಲ್ಲಿ ನಾವು ನೋಡುವ ಕೆಲವು ವಿಧದ ಪ್ರಾರ್ಥನೆಗಳು,




## ಕೇಳುವ ಮತ್ತು ಹೊಂದುವ ಪ್ರಾರ್ಥನೆ

ನಾವು ದೇವರಿಂದ ಒಂದು ನಿರ್ಥಿಷ್ಟ ವಿಷಯವನ್ನು ಕೇಳಿಕೊಳ್ಳುವಾಗ ಈ ವಿಧದ ಪ್ರಾರ್ಥನೆಯನ್ನು ಉಪಯೋಗಿಸುತ್ತೇವೆ.

ಮತ್ತಾಯ 7:7–11

**ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು; ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು ನಿಮ್ಮಲ್ಲಿ ಯಾವಾನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ.**

ಮಾರ್ಕ 11:24

**ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.**

ಯೋಹಾನ 16:23 –24

**ಆ ದಿನದಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನೂ ಮಾಡುವದಿಲ್ಲ. ನಿಮಗೆ ನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನೂ ಬೇಡಿಕೊಂಡಿಲ್ಲ; ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು.**

## ಉಪಕಾರ ಸ್ತುತಿಯ ಪ್ರಾರ್ಥನೆ

ಇದು ದೇವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸಲು ಇಷ್ಟಪಟ್ಟಾಗ, ಆತನು ನಮಗಾಗಿ ಒಂದು ಕಾರ್ಯವನ್ನು ಮಾಡಿದ್ದಾನೆಂದು ತಿಳಿದಾಗ ಅದನ್ನು ಹೊಂದುವ ಮೊದಲೇ ದೇವರಿಗೆ ಕೃತಜ್ಞತಾಸ್ತುತಿ ಸಲ್ಲಿಸುವ ಪ್ರಾರ್ಥನೆ.

1 ತಿಮೊಥೆಯನಿಗೆ 2:1

**ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾಸ್ತುತಿಗಳನ್ನೂ ಮಾಡಬೇಕೆಂದು ಬೋಧಿಸುತ್ತೇನೆ.**

ಫಿಲಿಪ್ಪಿಯರಿಗೆ 4:6

**ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ಬೇಕಾದದ್ದನ್ನು ತಿಳಿಯ ಪಡಿಸಿರಿ.**

ರೋಮಾಪುರದವರಿಗೆ 4:20

**ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲ ಚಿತ್ತನಾಗಲಿಲ್ಲ.**

## ಪ್ರತಿಷ್ಠೆಯ ಪ್ರಾರ್ಥನೆ

ಇದು ನಾವು ನಮ್ಮ ಚಿತ್ತವನ್ನು ಸಂಪೂರ್ಣವಾಗಿ ದೇವರ ಮಾರ್ಗದರ್ಶನಕ್ಕೂ ನಡಿಸುವಿಕೆಗೂ ಒಳಪಡಿಸಿ ಅಧೀನರಾದಾಗ ಮಾಡುವ ಪ್ರಾರ್ಥನೆ.

ಮತ್ತಾಯ 26:37–44

**ಪೇತ್ರನನ್ನೂ ಜೆಬೆದಾಯನ ಇಬ್ಬರು ಮಕ್ಕಳನ್ನೂ ಕರಕೊಂಡು ಹೋಗಿ ದುಃಖಪಟ್ಟು ಮನಗುಂದಿದವನಾದನು ಮತ್ತು ಅವರಿಗೆ – ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ; ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ ಬೋರಲ ಬಿದ್ದು ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದನು ಆ ಮೇಲೆ ಆ ಶಿಷ್ಯರ ಬಳಿಗೆ ಬಂದು ಅವರು ನಿದ್ದೆ ಮಾಡುವದನ್ನು ಕಂಡು ಪೇತ್ರನಿಗೆ – ಹೀಗೋ? ಒಂದು ಗಳಿಗೆಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರಾ? ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲ ಸಾಲದು ಎಂದು ಹೇಳಿದನು. ತಿರಿಗಿ ಎರಡನೆಯ ಸಾರಿ ಹೋಗಿ – ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗ ಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ ಎಂದು ಪ್ರಾರ್ಥನೆ ಮಾಡಿದನು. ಆತನು ತಿರಿಗಿ ಬಂದಾಗ ಅವರು ನಿದ್ದೆ ಮಾಡುವದನ್ನು ಕಂಡನು; ಅವರ ಕಣ್ಣುಗಳು ಭಾರವಾಗಿದ್ದವು ಆ ಮೇಲೆ ತಿರಿಗಿ ಅವರನ್ನು ಬಿಟ್ಟು ಹೋಗಿ ತಿರಿಗಿ ಅದೇ ಮಾತನ್ನು ಹೇಳುತ್ತಾ ಮೂರನೆಯ ಸಾರಿ ಪ್ರಾರ್ಥಿಸಿದನು.**

## ಒಂದೇ ಮನಸ್ಸು ಹೊಂದಿರುವ ಪ್ರಾರ್ಥನೆ

ಒಂದು ನಿರ್ಥಿಷ್ಟ ವಿಷಯವು ಭೂಮಿಯ ಮೇಲೆ ಸ್ಥಾಪಿಸಲ್ಪಡಬೇಕೆಂಬದಕ್ಕಾಗಿ ನಾನು ಇತರರೊಂದಿಗೆ ಸೇರಿಕೊಂಡು ಮಾಡುವ ಪ್ರಾರ್ಥನೆ ಇದಾಗಿದೆ.

ಮತ್ತಾಯ 18:19
**ಇದಲ್ಲದೆ ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವದೆಂದು ನಿಮಗೆ ಹೇಳುತ್ತೇನೆ.**

ಅಪೊಸ್ತಲರ ಕೃತ್ಯಗಳು 1:14
**ಇವರೆಲ್ಲರು ಏಕಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಕೆಲವು ಮಂದಿ ಹೆಂಗಸರೂ ಯೇಸುವಿನ ತಾಯಿಯಾದ ಮರಿಯಳೂ ಆತನ ತಮ್ಮಂದಿರೂ ಅವರ ಸಂಗಡ ಇದ್ದರು.**

ಅಪೊಸ್ತಲರ ಕೃತ್ಯಗಳು 2:1
**ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು.**

ಅಪೊಸ್ತಲರ ಕೃತ್ಯಗಳು 4:2
**ಸತ್ತವರು ಜೀವಿತರಾಗಿ ಏಳುವರು ಎಂಬದನ್ನು ಯೇಸುವಿನ ದೃಷ್ಟಾಂತದಿಂದ ಸಾರುತ್ತಾ ಇದ್ದದ್ದಕ್ಕೆ ಯಾಜಕರೂ ದೇವಾಲಯದ ಅಧಿಪತಿಯೂ ಸದ್ದುಕಾಯರೂ ಅಸಮಾಧಾನಪಟ್ಟು.....**

## ಪಶ್ಚಾತ್ತಾಪದ / ಪಾಪದ ಅರಿಕೆಯ ಪ್ರಾರ್ಥನೆ

ನಾವು ತಪ್ಪು ಮಾಡಿದ್ದೇವೆಂದು ಒಪ್ಪಿಕೊಂಡು ಅರಿಕೆ ಮಾಡಿ ನಂಬಿಕೆಯಿಂದ ದೇವರ ಕ್ಷಮಾಪಣೆಯನ್ನೂ ತೊಳೆಯುವಿಕೆಯನ್ನೂ ಹೊಂದುವ ಪ್ರಾರ್ಥನೆ ಇದು.

1 ಯೋಹಾನ 1:7-9
**ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳುತ್ತೇವೆ ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಅಳಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು.**

## ಮಧ್ಯಸ್ಥಿಕೆಯ ಪ್ರಾರ್ಥನೆ (ಪರಾರ್ಥ ಪ್ರಾರ್ಥನೆ) / ಇತರರಿಗಾಗಿ ಪ್ರಾರ್ಥನೆ

ಎಫೆಸದವರಿಗೆ 6:18
**ನೀವು ಪವಿತ್ರಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲ ವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲೆ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯವಾಗಿ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರ್ರಿ.**

1 ತಿಮೊಥೆಯನಿಗೆ 2:1
**ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾ ಸ್ತುತಿಗಳನ್ನು ಮಾಡಬೇಕೆಂದು ಬೋಧಿಸುತ್ತೇನೆ.**

ಯೋಬನು 9:32
**ಆತನು ನನ್ನಂಥವನಲ್ಲ, ಮನುಷ್ಯನಲ್ಲ. ನಾನು ಆತನೊಂದಿಗೆ ವಾದಿಸುವದು ಹೇಗೆ? ಇಬ್ಬರೂ ನ್ಯಾಯಾಸನದ ಮುಂದೆ ಕೂಡುವದು ಹೇಗೆ?**

ಯೋಬನು 16:21
**ನನ್ನ ನ್ಯಾಯವನ್ನು ದೇವರ ಮುಂದೆಯೂ ಮಾನವನ ನ್ಯಾಯವನ್ನು ಅವನ ಮಿತ್ರನ ಮುಂದೆಯೂ ಸ್ಥಾಪಿಸಲಿ ಎಂದು ದೇವರಿಗೇನೇ ಕಣ್ಣೀರು ಸುರಿಸುತ್ತೇನೆ.**

## ಆತ್ಮನಲ್ಲಿ ಪ್ರಾರ್ಥನೆ (ಅನ್ಯಭಾಷೆಗಳಲ್ಲಿ)

1 ಕೊರಿಂಥದವರಿಗೆ 14:2, 15, 28
**ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವದಿಲ್ಲ. ಆವನು ಆತ್ಮ ಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ. ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು, ಬುದ್ಧಿಯಿಂದಲೂ ಹಾಡುವೆನು. ಮತ್ತು ಒಬ್ಬನೇ ಅರ್ಥವನ್ನು ಹೇಳಬೇಕು. ಅರ್ಥವನ್ನು ಹೇಳುವವನಿಲ್ಲದಿದ್ದರೆ ವಾಣಿಯನ್ನಾಡುವವನು ಸಭೆಯಲ್ಲಿ ಸುಮ್ಮಗಿರಲಿ, ತನ್ನೊಂದಿಗೆಯೂ ದೇವರೊಂದಿಗೆಯೂ ಮಾತಾಡಿಕೊಳ್ಳಲಿ.**

## ಸ್ವಸ್ಥತೆಗಾಗಿ ನಂಬಿಕೆಯ ಪ್ರಾರ್ಥನೆ

ಯಾಕೋಬನು 5:14
**ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ ಅವನು ಸಭೆಯ ಹಿರಿಯರನ್ನು ಕರೇಕಳುಹಿಸಲಿ; ಅವರು ಕರ್ತನ ಹೆಸರಿನಿಂದ ಅವರಿಗೆ ಎಣ್ಣೆ ಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ.**

**ಕಳುಹಿಸಲ್ಪಡುವಾಗ ಪ್ರಾರ್ಥನೆ** – ಜನರನ್ನು ಸೇವೆಗೆ ನೇಮಿಸುವಾಗ ಅಥವಾ ಕಳುಹಿಸಿಕೊಡುವಾಗ ಮಾಡುವ ಪ್ರಾರ್ಥನೆ

ಅಪೊಸ್ತಲರ ಕೃತ್ಯಗಳು 13:3
**ಆಗ ಅವರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣ ಮಾಡಿ ಅವರನ್ನು ಕಳುಹಿಸಿಕೊಟ್ಟರು**

ಅಪೊಸ್ತಲರ ಕೃತ್ಯಗಳು 14:23
**ಇದಲ್ಲದೆ ಪ್ರತಿಸಭೆಯಲ್ಲಿ ಸಭೆಯವರ ಸಮ್ಮತಿಯಿಂದ ಹಿರಿಯರನ್ನು ಗೊತ್ತು ಮಾಡಿ ನೇಮಿಸಿ ಉಪವಾಸವಿದ್ದು ಪ್ರಾರ್ಥನೆಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು.**

### ಅನ್ಯೋನ್ಯತೆಯ ಪ್ರಾರ್ಥನೆ

ಈ ಪ್ರಾರ್ಥನೆಯು ನೀವು ನಿಮ್ಮ ಹೃದಯವನ್ನು ಯೋಚನೆಗಳನ್ನು, ಭಾವನೆಗಳನ್ನು ದೇವರೊಂದಿಗೆ ಹಂಚಿಕೊಂಡು ಆತನು ನಿಮ್ಮೊಂದಿಗೆ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿ / ಸಂಪರ್ಕಿಸಿಕೊಳ್ಳುವುದು.

> ಕೀರ್ತನೆಗಳು 62:8
> **ಜನರೇ, ಯಾವಾಗಲೂ ಆತನನ್ನೇ ನಂಬಿ ನಿಮ್ಮ ಹೃದಯವನ್ನು ಆತನ ಮುಂದೆ ಬಿಚ್ಚಿರಿ; ಆತನು ನಮ್ಮ ಆಶ್ರಯವು.**

> 1 ಯೋಹಾನ 1:3
> **ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿ ಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡವೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡವೂ ಇರುವಂಥದು.**

ಈ ವಿವಿಧ ವಿಧದ ಪ್ರಾರ್ಥನೆಗಳು – ಪ್ರತಿಯೊಂದು ವಿವಿಧ ಉದ್ದೇಶಗಳನ್ನು ಹೊಂದಿದ್ದು ವಿವಿಧ ಸಮಯಗಳಲ್ಲಿ ವಿವಿಧ ಸನ್ನಿವೇಶಗಳಲ್ಲಿ ಉಪಯೋಗಿಸ ಬಹುದಾಗಿದೆ.

ವಿವಿಧ ವಿಧದ ಪ್ರಾರ್ಥನೆಗಳಲ್ಲಿ ವಿವಿಧ 'ನಿಯಮ'ಗಳನ್ನು ಉಪಯೋಗಿಸಬೇಕು – ಅಂದರೆ, ಎಲ್ಲಾ ವಿಧದ ಪ್ರಾರ್ಥನೆಗಳನ್ನು ನಾವು ಒಂದೇ ರೀತಿಯಲ್ಲಿ ಮಾಡುವುದಿಲ್ಲ.

### ಪ್ರಾರ್ಥನೆಗೆ ಅಸ್ತಿವಾರಗಳು

ಪ್ರಾರ್ಥನೆಗೆ ಮೂರು ಮುಖ್ಯ ಅಸ್ತಿವಾರಗಳಿವೆ:

- ದೇವರು ಯಾರೆಂದು ತಿಳಿಯುವುದು – ದೇವರ ಸಹಜಸ್ವಭಾವವನ್ನು ತಿಳಿಯುವುದು
- ನೀವು ಕ್ರಿಸ್ತನಲ್ಲಿ ಯಾರೆಂದು ತಿಳಿಯುವುದು – ಕ್ರಿಸ್ತನಲ್ಲಿ ನಿಮಗಿರುವ ಬಾಧ್ಯತೆಗಳು ಮತ್ತು ಅಧಿಕಾರ.
- ನಂಬಿಕೆ – ದೇವರಲ್ಲಿ ನಂಬಿಕೆ ಇಡುವುದರ ಮೂಲಕ ಹೇಗೆ ಹೊಂದುವುದೆಂದು ತಿಳಿಯುವುದು.

**ದೇವರ ಚಿಕ್ಕ ರಾಜಕುಮಾರಿ**



### ದೇವರು ಯಾರೆಂದು ತಿಳಿಯುವುದು

ದೇವರು ಯಾರೆಂದು ನಾವು ತಿಳಿಯುವ ಅಗತ್ಯವಿದೆ – ಆತನ ಗುಣಸ್ವಭಾವವನ್ನು ನಾವು ತಿಳಿದು ಸರಿಯಾಗಿ ಪ್ರಾರ್ಥಿಸುವುದಕ್ಕಾಗಿ ನಾವು ಆತನ ವಾಕ್ಯದ ಮೂಲಕವಾಗಿ ದೇವರನ್ನು, ಆತನ ಗುಣಸ್ವಭಾವವನ್ನು ಮತ್ತು ಆತನ ಗುಣಲಕ್ಷಣಗಳನ್ನು ತಿಳಿಯುತ್ತೇವೆ.

ದೇವರು ಯಾರೆಂದು ನೀವು ತಿಳಿದಾಗ ಆತನ ಉದ್ದೇಶ ಏನಿರಬಹುದೆಂದು ಅದಕ್ಕನುಸಾರವಾಗಿ ಪ್ರಾರ್ಥಿಸುವುದು ಸುಲಭ.

### ಕ್ರಿಸ್ತನಲ್ಲಿ ನೀವು ಯಾರೆಂದು ತಿಳಿಯುವುದು.

ಕ್ರಿಸ್ತನಲ್ಲಿ ನಮಗಿರುವ ಬಾಧ್ಯತೆಗಳು ಮತ್ತು ಅಧಿಕಾರವನ್ನು ನಾವು ತಿಳಿಯುವುದು ಅಗತ್ಯ. ಇದು ನಮಗೆ ಪ್ರಾರ್ಥನೆಯಲ್ಲಿ ಭರವಸವನ್ನು ಕೊಡುತ್ತದೆ – ದೇವರ ಮುಂದೆ ಮತ್ತು ಕಷ್ಟಗಳ ಮಧ್ಯೆ.

ಪ್ರಾರ್ಥನೆಯು ಭೂಮಿಯ ಮೇಲೆ ನಮ್ಮ ಅಧಿಕಾರವನ್ನು ಸ್ಥಾಪಿಸುವ ವಿಧಗಳಲ್ಲಿ ಒಂದು.

### ನಂಬಿಕೆ

> ಯಾಕೋಬನು 1:5–7
> **ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ. ಸ್ವಲ್ಪವೂ ಸಂದೇಹ ಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹ ಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವೆನೆಂದು ಭಾವಿಸದೆ ಇರಲಿ.**

ನಮ್ಮ ಪ್ರಾರ್ಥನೆಯ ಫಲವನ್ನು ನಾವು ಹೊಂದುವೆವೆಂದು ನಿರೀಕ್ಷಿಸಬೇಕಾದರೆ ನಾವು ನಂಬಿಕೆಯಿಂದಿರಬೇಕು.

## "ಬೇಡಿಕೊಳ್ಳುವ ಮತ್ತು ಹೊಂದುವ ಪ್ರಾರ್ಥನೆ"ಯನ್ನು ಹೇಗೆ ಮಾಡುವುದು.

ನಾವೆಲ್ಲರೂ ಸಾಮಾನ್ಯವಾಗಿ ಮಾಡುವ ಪ್ರಾರ್ಥನೆಯನ್ನು "ಹೇಗೆ ಮಾಡುವುದು" ಎಂದು ಅಥವಾ ಅದರ ಮಾರ್ಗದರ್ಶಕಗಳನ್ನು ನೋಡಬೇಕಾಗಿದೆ.

### "ಯೇಸು'ವಿನ ಹೆಸರಿನಲ್ಲಿ ತಂದೆಗೆ ಪ್ರಾರ್ಥಿಸಿರಿ.

ಯೋಹಾನ 16:23, 24

**ಆ ದಿನಗಳಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನೂ ಮಾಡುವದಿಲ್ಲ. ನಿನಗೆ ನಿಜ ನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನೂ ಬೇಡಿಕೊಂಡಿಲ್ಲ; ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು.**

ಯೇಸುವಿನ ಹೆಸರಿನಲ್ಲಿ ತಂದೆಗೆ ಪ್ರಾರ್ಥಿಸಿರಿ.

ನಾವು ಯಾವ ಸಂತನಿಗಾದರೂ, ಗುರುವಿಗಾದರೂ, ಮರಿಯಳಿಗಾದರೂ ಪ್ರಾರ್ಥಿಸುವ ಅಗತ್ಯವಿಲ್ಲ,

ನೇರವಾಗಿ ಯೇಸುವಿನೊಂದಿಗೆ ಮತ್ತು ಪವಿತ್ರಾತ್ಮನೊಂದಿಗೆ ಮಾತಾಡುವುದು ಸರಿಯಾದದ್ದಾಗಿದೆ. ಯಾಕೆಂದರೆ ನಾವು ಯೇಸು ಕ್ರಿಸ್ತನೊಂದಿಗೆ ಅನ್ಯೋನ್ಯತೆ ಮಾಡುತ್ತಿರುವುದು (1 ಕೊರಿಂಥದವರಿಗೆ 1:9) ಮತ್ತು ಪವಿತ್ರಾತ್ಮನೊಂದಿಗೆ (2 ಕೊರಿಂಥದವರಿಗೆ 13:14)

### ದೇವರ ಪ್ರಕಟಿಸಲ್ಪಟ್ಟ ಚಿತ್ತಾನುಸಾರವಾಗಿ ಪ್ರಾರ್ಥಿಸಿರಿ.

1 ಯೋಹಾನ 5:14, 15

**ಮತ್ತು ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ.**

ಯಾಕೋಬನು 4:3

**ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸ ಬೇಕೆಂಬ ದುರಾಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೆಯುವದಿಲ್ಲ.**

ದೇವರ ವಾಕ್ಯದ ಆಧಾರದಿಂದಲೂ ಆತನು ಯಾರೆಂದು ತಿಳಿದದ್ದರಿಂದಲೂ ನಮಗೆ ದೇವರ ಪ್ರಕಟಿತ ಚಿತ್ತವು ತಿಳಿದಿದೆ.

ದೇವರ ಚಿತ್ತವನ್ನು ತಿಳಿಯದ ಜೀವನದ – ಸನ್ನಿವೇಶಗಳಲ್ಲಿ, ಪವಿತ್ರಾತ್ಮನ ಆಂತರ್ಯದ ನಡಿಸುವಿಕೆಯಿಂದ ದೈವಿಕ ಜ್ಞಾನ ಮತ್ತು ಸಲಹೆಗಳಿಂದ ನಾವು ಮೊದಲು ಆತನ ಚಿತ್ತವನ್ನು ತಿಳಿಯಲು ಪ್ರಯತ್ನಿಸಿ ಬಳಿಕ ನಾವು ಆತನು ಪ್ರಕಟಿಸಿದ್ದರ ಆಧಾರದಿಂದ ಪ್ರಾರ್ಥಿಸುತ್ತೇವೆ.

### ನಿರ್ಮಲ ಮನಸ್ಸಾಕ್ಷಿಯುಳ್ಳವರಾಗಿ ಪ್ರಾರ್ಥಿಸಿರಿ.

ಕೀರ್ತನೆಗಳು 66:18

**ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ.**

1 ಯೋಹಾನ 3:21, 22

**ಪ್ರೀಯರೇ, ನಮ್ಮ ಹೃದಯವು ನಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ ನಮಗೆ ದೇವರ ವಿಷಯದಲ್ಲಿ ಧೈರ್ಯವುಂಟು ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವರಾದವರಿಂದ ಏನು ಬೇಡಿಕೊಂಡರೂ ಆತನಿಂದ ಹೊಂದುವೆವು.**

### ನಂಬಿಕೆಯಿಂದ ಪ್ರಾರ್ಥಿಸಿರಿ – ನೀವು ಬೇಡಿದ್ದನ್ನು ಹೊಂದಿದ್ದೀರೆಂದು ನಂಬಿರಿ.


ಮಾರ್ಕ 11:24

**ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.**

ಇಬ್ರಿಯರಿಗೆ 11:2

**ನಂಬಿಕೆಯೇ ನಾವು ನಿರೀಕ್ಷಿಸುವುಗಳ ವಿಷಯವಾಗಿ ಭರವಸೆಯಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ. ನಮ್ಮ ಪೂರ್ವಿಕರು ನಂಬಿಕೆಯುಳ್ಳವರಾಗಿದ್ದದರಿಂದಲೇ ಒಳ್ಳೇ ಹೆಸರನ್ನು ಹೊಂದಿದರು.**

ಹೊರಗಿನ ಕ್ಷೇತ್ರದಲ್ಲಿ ಅದು ಕಂಡು ಬರದಿದ್ದರೂ ನಮ್ಮ ಹೃದಯಗಳಲ್ಲಿ ಒಂದು ವಿಷಯವನ್ನು ತೀರ್ಮಾನಿಸಿಕೊಳ್ಳಲು ನಂಬಿಕೆಯು ನಮಗೆ ಸಹಾಯ ಮಾಡುತ್ತದೆ.



ರೋಮಾಪುರದವರಿಗೆ 4:17–21

**ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು. ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವದು ಎಂದು ತನಗೆ ಹೇಳಲ್ಪಟ್ಟ ಮತ್ತು ನೆರವೇರುವದಕ್ಕೆ ಮಾರ್ಗ ತೋರದೆ ಇರುವದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು. ಅವನು ಹೆಚ್ಚು ಕಡಿಮೆ ನೂರು ವರುಷದವನಾಗಿದ್ದು ತನ್ನದೇಹವು ಆಗಲೇ ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದು ಹೋಯಿತೆಂದೂ ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ... ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢ ನಂಬಿಕೆಯುಳ್ಳವನಾದನು.**

ಅಬ್ರಹಾಮನು ದೇವರು ಅವನ ಜೀವನಕ್ಕಾಗಿ ಮಾಡಿದ ವಾಗ್ದಾನಕ್ಕನುಸಾರವಾಗಿ ಪ್ರಾರ್ಥಿಸಿದ್ದು ಒಂದು ದೊಡ್ಡ ಮಾದರಿಯಾಗಿದೆ.

## ಶಾಂತರಾಗಿ ಉಪಕಾರ ಸ್ತುತಿ ಮಾಡುತ್ತಾ ನಂಬಿಕೆಯಲ್ಲಿ ಮುಂದುವರಿಯಿರಿ

ಇಬ್ರಿಯರಿಗೆ 6:12

**ನೀವು ಮಂದ ಮತಿಗಳಾಗಿರದೆ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳ ವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ.**

ಇಬ್ರಿಯರಿಗೆ 10:35, 36

**ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟು ಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲವುಂಟು. ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆ ಬೇಕು.**

ಫಿಲಿಪ್ಪಿಯವರಿಗೆ 4:6, 7

**ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವದು.**

ಯಾವಾಗಲೂ ನಾವಿರುವ ಕ್ಷೇತ್ರದಲ್ಲಿ ವಿಷಯಗಳು ತಕ್ಷಣ ನಡೆಯುವುದನ್ನು ನಾವು ನೋಡದಿರಬಹುದು. ಇದು ನಾವು ಶಾಂತರಾಗಿ ಭರವಸದಿಂದ ಕಾಯಬೇಕಾದ ಸಮಯ, ಆ ಪರಿಣಾಮಗಳನ್ನು ಇನ್ನೂ ಕಾಣದಿದ್ದರೂ ಯಾವಾಗಲೂ ಉಪಕಾರ ಹೇಳುತ್ತಾ, ಸಂತೋಷಿಸುತ್ತಾ ಕಾದಿರಬೇಕು.

ಕೆಲವೊಮ್ಮೆ ಉತ್ತರ ಬರಲು ತಡವಾಗಲು ಸೈತಾನನ ಅಡ್ಡಿಗಳಾಗಿರ ಬಹುದು.

ದಾನಿಯೇಲನು 10:12, 13

**ಆ ಮೇಲೆ ಅವನು ನನಗೆ – ದಾನಿಯೇಲನೇ ಭಯಪಡಬೇಡ, ನೀನು [ದೈವಸಂಕಲ್ಪವನ್ನು] ವಿಮರ್ಶಿಸುವದಕ್ಕೂ ನಿನ್ನನ್ನು ದೇವರ ಮುಂದೆ ತಗ್ಗಿಸಿಕೊಳ್ಳುವದಕ್ಕೂ ಮನಸ್ಸಿಟ್ಟು ಮೊದಲನೆಯ ದಿನದಲ್ಲಿಯೇ ನಿನ್ನ ವಿಜ್ಞಾಪನೆಯು ದೇವರಿಗೆ ಮುಟ್ಟಿತು. ಪಾರಸಿಯ ರಾಜ್ಯದ ದಿವ್ಯಪಾಲಕನು ಇಪ್ಪತ್ತೊಂದು ದಿವಸ ನನ್ನನ್ನು ತಡೆಯಲು ಇನ್ನೋ, ಪ್ರಧಾನ ದಿವ್ಯಪಾಲಕರಲ್ಲೊಬ್ಬನಾದ ಮೀಕಾಯೇಲನು ನನ್ನ ಸಹಾಯಕ್ಕೆ ಬಂದನು; ಅಲ್ಲಿ ಪಾರಸಿಯ ರಾಜನ ಸಂಗಡ [ಹೋರಾಡಿ] ಉಳಿದುಕೊಂಡು ಅಂತ್ಯ ಕಾಲದಲ್ಲಿ ನಿನ್ನ ಜನರಿಗಾಗುವ ಗತಿಯನ್ನು ನಿನಗೆ ತಿಳಿಸುವದಕ್ಕೋಸ್ಕರ ಬಂದೆನು.**

ಕೆಲವೊಮ್ಮೆ ನಮ್ಮ ಪ್ರಾರ್ಥನೆಗಳಿಗೆ ಉತ್ತರ ದೊರಕಲು ದೇವರು ನಮ್ಮನ್ನು ನಮ್ಮ ಪರಿಸ್ಥಿತಿಗಳನ್ನು ನಮ್ಮ ಸುತ್ತಲಿರುವ ಜನರನ್ನು ಸಿದ್ಧಗೊಳಿಸುತ್ತಾನೆ, ಈ ಸಿದ್ಧತೆಯು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು.

## ಬೇಡಿಕೊಳ್ಳುವುದರಲ್ಲಿ ಅತ್ಯಾಸಕ್ತಿಯುಳ್ಳವರಾಗಿರಿ, ಹಿಂಜರಿಯಬೇಡಿರಿ.

ಯಾಕೋಬನು 5:16–18

**ಹೀಗಿರಲು ನಾವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹುಬಲವಾಗಿದೆ. ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆ ಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆ ಬೀಳಲಿಲ್ಲ. ತಿರಿಗಿ ಅವನು ಪ್ರಾರ್ಥನೆ ಮಾಡಲು ಆಕಾಶವು ಮಳೆಗರೆಯಿತು. ಭೂಮಿಯು ಬೆಳೆಯಿತು.**


1 ಅರಸುಗಳು 18:1, 41–46

**ಅನೇಕ ದಿವಸಗಳಾದ ನಂತರ ಎಲೀಯನಿಗೆ ಯೆಹೋವನ ವಾಕ್ಯವುಂಟಾಯಿತು. ಬರಗಾಲದ ಮೂರನೆಯ ವರುಷದಲ್ಲಿ ಆತನು ಅವನಿಗೆ ನೀನು ಹೋಗಿ ಅಹಾಬನನ್ನು ಕಾಣು; ನಾನು ದೇಶಕ್ಕೆ ಮಳೆ ಕೊಡುತ್ತೇನೆ ಅಂದನು. ಆನಂತರ ಅವನು ಅಹಾಬನಿಗೆ – ನೀನು ಮೇಲೆ ಹೋಗಿ ಅನ್ನಪಾನಗಳನ್ನು ತೆಗೆದುಕೋ; ದೊಡ್ಡ ಮಳೆಯ ಶಬ್ದವು ಕೇಳಿಸುತ್ತದೆ ಅಂದನು. ಅಹಾಬನು ಅನ್ನಪಾನಗಳನ್ನು ತೆಗೆದುಕೊಳ್ಳಲು ಹೋದಾಗ ಎಲೀಯನು ಕಾರ್ಮೆಲಿನ ತುದಿಗೆ ಹೋಗಿ ಅಲ್ಲಿ ನೆಲದ ಮೇಲೆ ಬಿದ್ದು ಕೊಂಡು ಮೊಣಕಾಲಿನ ಮೇಲೆ ತಲೆಯನ್ನಿಟ್ಟನು. ಅವನು ತನ್ನ ಸೇವಕನಿಗೆ – ನೀನು ಮೇಲೆ ಹೋಗಿ ಸಮುದ್ರದ ಕಡೆಗೆ ನೋಡು ಎಂದು ಆಜ್ಞಾಪಿಸಿದನು. ಸೇವಕನು ಹೋಗಿ ನೋಡಿ ಬಂದು ಏನೂ ತೋರುವದಿಲ್ಲ ಎಂದು ಹೇಳಿದನು. ಹೀಗೆ ಅವನನ್ನು ಏಳು ಸಾರಿ ಕಳುಹಿಸಿದನು. ಏಳನೆಯ ಸಾರಿ ಸೇವಕನು ಅಂಗೈಯಷ್ಟು ಚಿಕ್ಕದಾದ ಮೋಡವು ಸಮುದ್ರದಿಂದ ಏರಿ ಬರುತ್ತಲಿದೆ ಎಂದು ತಿಳಿಸಿದನು. ಆಗ ಎಲೀಯನು ಅವನಿಗೆ – ನೀನು ಹೋಗಿ ಅಹಾಬನಿಗೆ – ಬೇಗನೆ ರಥವನ್ನು ಹೊಡಿಸಿಕೊಂಡು ಮಳೆಯು ನಿನ್ನನ್ನು ತಡೆಯದಂತೆ ಬೆಟ್ಟವನ್ನಿಳಿದು ಹೋಗು ಎಂದು ಹೇಳು ಅಂದನು. ತುಸು ಹೊತ್ತಿನಲ್ಲಿಯೇ ಆಕಾಶವು ಮೋಡಗಾಳಿಗಳಿಂದ ಕಪ್ಪಾಗಿ ದೊಡ್ಡ ಮಳೆಯು ಪ್ರಾರಂಭವಾಯಿತು. ಅಹಾಬನು ರಥದಲ್ಲಿ ಕೂತುಕೊಂಡು ಇಜ್ರೇಲಿಗೆ ಹೋದನು. ಯೆಹೋವನ ಹಸ್ತವು ಎಲೀಯನ ಸಂಗಡ ಇದ್ದದರಿಂದ ಅವನು ನಡುಕಟ್ಟಿ ಕೊಂಡು ಅಹಾಬನ ಮುಂದೆ ಓಡುತ್ತಾ ಇಜ್ರೇಲನು ಸೇರಿದನು.**

ಮಳೆ ಕಳುಹಿಸುವನೆಂದು ದೇವರೇ ಹೇಳಿದ್ದರೂ, ಮಳೆ ಬರುವುದೆಂದು ತಿಳಿಸಲು ದೇವರೇ ಹೇಳಿದ್ದರೂ – ಎಲೀಯನು ಕಾರ್ಮೆಲ್ ಬೆಟ್ಟಕ್ಕೆ ಹೋಗಿ ಅಲ್ಲಿ ಮಳೆಯ ಸೂಚನೆ ಕಾಣುವವರೆಗೆ ಮಳೆಗಾಗಿ ಆಸಕ್ತಿಯಿಂದ ಅತ್ಯಾಸಕ್ತಿಯಿಂದ ಪ್ರಾರ್ಥಿಸಬೇಕಾಗಿತ್ತು. ಅದೇ ರೀತಿ ದೇವರು ತನ್ನ ಚಿತ್ತವನ್ನೂ, ಏನು ಮಾಡಬೇಕೆಂದಿದ್ದಾನೆಂದೂ ನಮಗೆ ತಿಳಿಸಿದರೂ ನಾವು ನಂಬಿಕೆಯುಳ್ಳವರಾಗಿ ಆಸಕ್ತಿಯಿಂದ ಅದು ಭೂಲೋಕದಲ್ಲಿ ನಡೆಯುವವರೆಗೆ ಪ್ರಾರ್ಥಿಸಬೇಕು.

## ಕ್ರಮಬದ್ಧವಾದ ಪ್ರಾರ್ಥನಾ ಜೀವನವನ್ನು ಬೆಳೆಸುವುದು

- ಪ್ರಾರ್ಥನೆಗಾಗಿ ಸಮಯವನ್ನು ಮೀಸಲಾಗಿಡಿರಿ.
- ದಿನವಿಡೀ ಪ್ರಾರ್ಥಿಸಿರಿ – ಕರ್ತನ ಅನ್ಯೋನ್ಯತೆಯಲ್ಲಿ ನಡೆಯಿರಿ. "ಯಾವಾಗಲೂ ಸಂತೋಷಿಸಿರಿ. ಎಡೆಬಿಡದೆ ಪ್ರಾರ್ಥನೆಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾ ಸ್ತುತಿ ಮಾಡಿರಿ...... (1 ಥೆಸಲೋನಿಕದವರಿಗೆ 5:16–18)
- "ಹೊರಗೆ ಹೋಗಲು ಸಮಯ ಮೀಸಲಿಡಿರಿ" ದೇವರೊಂದಿಗೆ ಏಕಾಂತವಾಗಿರುವುದಕ್ಕಾಗಿ ದಿನದ ಅದೇ ವೇಳೆಗಳನ್ನು ಪ್ರತ್ಯೇಕವಿಡಿರಿ, ಅದೇರೀತಿ ಒಂದೆರಡು ದಿನಗಳನ್ನು ದೇವರನ್ನು ಹುಡುಕುವದಕ್ಕಾಗಿ ಪ್ರತ್ಯೇಕವಾಗಿಡಿರಿ – ಈ ಮಾಲಕ ನಿಮ್ಮ ಪ್ರಾರ್ಥನಾ ಜೀವನವನ್ನು ಬೆಳೆಸಿರಿ.
- ಗುಂಪು ಅಥವಾ ಕಾರ್ಪೋರೇಟ್ ಪ್ರಾರ್ಥನೆಗಾಗಿ ಇತರರೊಂದಿಗೆ ಸೇರಿಕೊಳ್ಳಿರಿ. ಉದಾ. ಸೆಲ್ ಗುಂಪುಗಳು, ಇಡೀ ರಾತ್ರಿ ಪ್ರಾರ್ಥನೆ.
- ನೀವು ಪ್ರಾರ್ಥಿಸುವಾಗ ದೇವರು ಕೇಳುತ್ತಾನೆಂಬ ಭರವಸದಿಂದ ನಂಬಿಕೆಯಿಂದ ಪ್ರಾರ್ಥಿಸಿರಿ.
- ಕೇಳುವ ಮತ್ತು ಹೊಂದುವ ಪ್ರಾರ್ಥನೆಯನ್ನು ಅಭ್ಯಾಸ ಮಾಡಿರಿ – ನಿಮ್ಮ ಉತ್ತರಗಳು ಬಂದಿವೆಯೋ ಎಂದು ಗಮನಿಸಿರಿ. ಇಲ್ಲವಾದಲ್ಲಿ, ಯೋಚಿಸಿ, ಈ ಕ್ಷೇತ್ರದಲ್ಲಿ ಬೆಳೆಯುತ್ತಾ ಹೋಗಲು ಕಲಿಯಿರಿ.



## ಮುಖ್ಯ ಕಂಠ ಪಾಠ ವಚನಗಳು

ಯೆರೆಮೀಯ 29:12

**ನೀವು ನನಗೆ ಮೊರೆಯಿಡುವಿರಿ, ನನ್ನನ್ನು ಪ್ರಾರ್ಥಿಸಲು ಹೋಗುವಿರಿ; ನಾನು ಕಿವಿಗೊಡುವೆನು.**

ಫಿಲಿಪ್ಪಿಯವರಿಗೆ 4:6, 7

**ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾ ಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವದು.**

1 ಯೋಹಾನ 3: 21, 22

**ಪ್ರೀಯರೇ, ನಿಮ್ಮ ಹೃದಯವು ನಿಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ ನಿಮಗೆ ದೇವರ ವಿಷಯದಲ್ಲಿ ಧೈರ್ಯವುಂಟು ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವದರಿಂದ ಏನು ಬೇಡಿಕೊಂಡರೂ ಆತನಿಂದ ಹೊಂದುವೆವು.**

# ಅನ್ವಯ

1. ನಿಮಗೆ ಪ್ರಾರ್ಥನೆ ಏನಾಗಿದೆ? ಈ ಪಾಠದಿಂದ ಪ್ರಾರ್ಥನೆ ವಿಷಯದಲ್ಲಿ ನೀವು ಪಡಕೊಂಡ ಕೆಲವು ಒಳ ನೋಟಗಳಾವುವು?

2. ಪ್ರಾರ್ಥನೆಗೆ ೩ ಮುಖ್ಯ ತಳಹದಿಗಳಾವುವು?

3. ವಿವಿಧ ಪ್ರಾರ್ಥನೆಗಳ ಪಟ್ಟಿ ಮಾಡಿರಿ ಮತ್ತು ಆ ವಿಧದ ಪ್ರಾರ್ಥನೆಗಳನ್ನು ನೀವು ಹೇಗೆ ಮತ್ತು ಯಾವಾಗ ಉಪಯೋಗಿಸುವಿರಿ?

4. "ಎಡೆಬಿಡದೆ ಪ್ರಾರ್ಥಿಸಲು" ನಿಮಗೆ ಅಡ್ಡಿಯಾಗಿರುವ ಕೆಲವು ವಿಷಯಗಳಾವುವು? ಎಲ್ಲಾ ಸಮಯಗಳಲ್ಲಿ ನೀವು ಕರ್ತನೊಂದಿಗೆ ಅನ್ಯೋನ್ಯತೆಯಲ್ಲಿರಲು ಮಾಡಿಕೊಳ್ಳಬಹುದಾದ ಕೆಲವು ಬದಲಾವಣೆಗಳಾವುವು?

(ಹೆಚ್ಚಿನ ಓದಿಗಾಗಿ : ಐ.ಪಿ.ಸಿ.ಯ ಪ್ರಕಟಣೆ – ವಾಣಿಯನ್ನಾಡುವುದರ ಅದ್ಭುತಕರವಾದ ಪ್ರಯೋಜನಗಳು.)

# 6

# ಸ್ತೋತ್ರ ಮತ್ತು ಆರಾಧನೆ

(ನಾವೆಲ್ಲರೂ ಸ್ತೋತ್ರ ಮತ್ತು ಆರಾಧನೆ ಮಾಡುತ್ತೇವೆ. ನಾವು ಯಾಕೆ ಹಾಡುವುದು? ಎಲ್ಲರೂ ಹಾಡುವುದರಿಂದ ನಾವೂ ಗುಂಪಿನೊಂದಿಗೆ ಸೇರಿ ಕೊಳ್ಳುವುದಕ್ಕಾಗಿಯೋ ಅಥವಾ ಸ್ತೋತ್ರ ಮತ್ತು ಆರಾಧನೆಯಲ್ಲಿ ಪಾಲ್ಗೊಗೊಳ್ಳಲು ಉತ್ತಮ ಕಾರಣವಿದೆಯೋ? ಈ ಪಾಠವು ದೇವರ ವಾಕ್ಯದಲ್ಲಿ ಪ್ರಕಟವಾಗುವಂತೆ ಸ್ತೋತ್ರ ಮತ್ತು ಆರಾಧನೆಯ ಮೂಲ ವಿಷಯಗಳನ್ನು ನಮಗೆ ಕಲಿಸಲು ರೂಪಿಸಲ್ಪಟ್ಟಿದೆ. ಇಲ್ಲಿರುವ ವಿಷಯಗಳು ಸ್ತೋತ್ರ ಏನಾಗಿದೆ, ಆರಾಧನೆಯು ಏನಾಗಿದೆ ಮತ್ತು ಸಭೆಯ ಆರಾಧನೆಯ ಉದ್ದೇಶ ಎಂಬ ಮೂಲ ವಿಷಯಗಳನ್ನು ಒಳಗೊಂಡಿದೆ.)

## ಸ್ತೋತ್ರ ಮತ್ತು ಆರಾಧನೆಯನ್ನು ತಿಳುಕೊಳ್ಳುವುದು


### ಸ್ತೋತ್ರವೆಂದರೆ ಏನು?

ಕೀರ್ತನೆಗಳು 100:1–5

**ಸಮಸ್ತ ಭೂನಿವಾಸಿಗಳೇ ಯೆಹೋವನಿಗೆ ಜಯಘೋಷ ಮಾಡಿರಿ. ಯೆಹೋವನನ್ನು ಸಂತೋಷದಿಂದ ಸೇವಿಸಿರಿ; ಉತ್ಸಾಹ ಧ್ವನಿ ಮಾಡುತ್ತಾ ಆತನ ಸನ್ನಿಧಿಗೆ ಬನ್ನಿರಿ. ಯೆಹೋವನೇ ದೇವರೆಂದು ತಿಳಿದುಕೊಳ್ಳಿರಿ ನಮ್ಮನ್ನು ಉಂಟು ಮಾಡಿದವನು ಆತನೇ; ನಾವು ಆತನವರು. ಆತನ ಪ್ರಜೆಯೂ ಆತನು ಪಾಲಿಸುವ ಹಿಂಡೂ ಆಗಿದ್ದೇವೆ. ಕೃತಜ್ಞತಾಸ್ತುತಿಯೊಡನೆ ಆತನ ಮಂದಿರದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ; ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ. ಯೆಹೋವನು ಒಳ್ಳೆಯವನು; ಆತನ ಕೃಪೆಯು ಯುಗಯುಗಕ್ಕೂ ಆತನ ಸತ್ಯತೆಯು ತಲತಲಾಂತರಕ್ಕೂ ಇರುವವು.**

ಕೀರ್ತನೆಗಳು 150:1–6

**ಯಾಹುವಿಗೆ ಸ್ತೋತ್ರ! ದೇವರನ್ನು ಆತನ ಪರಿಶುದ್ಧಾಲಯದಲ್ಲಿ ಸ್ತುತಿಸಿರಿ; ಆತನ ಶಕ್ತಿ ಪ್ರದರ್ಶನವಾದ ಆಕಾಶಮಂಡಲದಲ್ಲಿ ಆತನನ್ನು ಸ್ತುತಿಸಿರಿ. ಆತನ ಮಹತ್ಕಾರ್ಯಗಳಿಗಾಗಿ ಆತನನ್ನು ಸ್ತುತಿಸಿರಿ; ಆತನ ಮಹಾಪ್ರಭಾವಕ್ಕೆ ಸರಿಯಾಗಿ ಆತನನ್ನು ಸ್ತುತಿಸಿರಿ. ಕೊಂಬೂದುತ್ತಾ. ಆತನನ್ನು ಸ್ತುತಿಸಿರಿ; ಸ್ವರಮಂಡಲ ಕಿನ್ನರಿಗಳಿಂದ ಆತನನ್ನು ಸ್ತುತಿಸಿರಿ. ತಮ್ಮಡಿ ಬಡಿಯುತ್ತಾ ಕುಣಿಯುತ್ತಾ ಆತನನ್ನು ಸ್ತುತಿಸಿರಿ. ತಂತೀ ವಾದ್ಯಗಳಿಂದಲೂ ಕೊಳಲುಗಳಿಂದಲೂ ಆತನನ್ನು ಸ್ತುತಿಸಿರಿ. ತಾಳದಿಂದ ಆತನನ್ನು ಸ್ತುತಿಸಿರಿ; ಝಲ್ಲರಿಯಿಂದ ಆತನನ್ನು ಸ್ತುತಿಸಿರಿ. ಶ್ವಾಸವಿರುವದೆಲ್ಲವೂ ಯೆಹೋವನನ್ನು ಸ್ತುತಿಸಲಿ; ಯಾಹುವಿಗೆ ಸ್ತೋತ್ರ!**




ನಿಘಂಟುವಿನಲ್ಲಿ "ಸ್ತೋತ್ರ"ದ ಅರ್ಥ=ಸಮರ್ಪಿಸುವುದು, ಮೆಚ್ಚುಗೆ ತಿಳಿಯಪಡಿಸುವುದು, ಶ್ಲಾಘಿಸುವುದು, ಪ್ರಶಂಸಿಸುವುದು, ಶ್ಲಾಘಿಸುವುದು, ಪ್ರಶಂಸಿಸುವುದು ಸ್ತುತಿಸುವುದು, ಕೀರ್ತಿಸುವುದು, ಮಾತುಗಳಲ್ಲಾಗಲಿ ಹಾಡಿನ ಮೂಲಕವಾಗಿವಾಗಲಿ ಉನ್ನತಕ್ಕೇರಿಸುವುದು, ಮಹಿಮೆ ಪಡಿಸುವುದು.

**ಸ್ತೋತ್ರವು ದೇವರು ಯಾರಾಗಿದ್ದಾನೋ, ಆತನು ಏನು ಮಾಡಿದ್ದಾನೋ, ಅಥವಾ ಆತನು ಏನು ಮಾಡುವನೋ ಅವೆಲ್ಲವುಗಳಿಗಾಗಿ ಆತನನ್ನು ಬಾಯ್ದೆರೆಯಾಗಿ ಆರಾಧಿಸುವುದು, ಆತನಿಗೆ ಉಪಕಾರ ಸ್ತುತಿಮಾಡುವುದು, ಸಂತೋಷ ವ್ಯಕ್ತ ಪಡಿಸುವುದು ಮತ್ತು ಅದನ್ನು ಆಚರಿಸುವುದು**. ಅದು ನಮ್ಮ ಪೂರ್ಣ ವ್ಯಕ್ತಿಯನ್ನು – ಆತ್ಮ, ಪ್ರಾಣ, ಶರೀರಗಳನ್ನು ದೇವರ ಮೇಲೆ ತೊಡಗಿಡುತ್ತದೆ. ಸ್ತೋತ್ರವು ಅದರ ಸ್ವಭಾವದಲ್ಲಿ ಸಮೃದ್ಧವಾದದ್ದಾಗಿದೆ.

ದೇವರಿಗೆ ಸ್ತೋತ್ರವನ್ನೆರ್ಪಡಿಸುವುದು ಆತನು ಯಾರಾಗಿದ್ದಾನೆ ಮತ್ತು ಆತನು ಏನು ಮಾಡಿದ್ದಾನೆ ಎಂಬದರ ಮೇಲಿದೆಯಲ್ಲದೆ ನಮ್ಮ ಭಾವನೆಗಳ ಮೇಲಲ್ಲ. ಕೆಲವೊಮ್ಮ ಸ್ತೋತ್ರ ಮಾಡಬೇಕೆಂದು ಅನಿಸದಿದ್ದರೂ ಚಿತ್ತಪೂರ್ವಕವಾಗಿ ಉದ್ದೇಶ ಪೂರ್ವಕವಾಗಿ ಆತನಿಗೆ ಸ್ತೋತ್ರವನ್ನೆರ್ಪಡಿಸತಕ್ಕದ್ದು.

ಹಬಕ್ಕೂಕನು 3:17, 18

**ಆಹಾ, ಅಂಜೂರವು ಚಿಗುರದಿದ್ದರೂ, ದ್ರಾಕ್ಷಾಲತೆಗಳಲ್ಲಿ ಹಣ್ಣು ಸಿಕ್ಕದಿದ್ದರೂ ಎಣ್ಣೆ, ಮರಗಳ ಉತ್ಪತ್ತಿಯು ಶೂನ್ಯವಾದರೂ ಹೊಲಗದ್ದೆಗಳು ಆಹಾರವನ್ನು ಕೊಡದೆ ಹೋದರೂ ಹಿಂಡು ಹಟ್ಟಿಯೊಳಗಿಂದ ನಾಶವಾದರೂ ಮಂದೆಯು ಕೊಟ್ಟಿಗೆಗಳೊಳಗೆ ಇಲ್ಲದಿದ್ದರೂ ನಾನು ಯೆಹೋವನಲ್ಲಿ ಉಲ್ಲಾಸಿಸುವೆನು, ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು.**

## ನಾನು ಯಾಕೆ ಸ್ತುತಿಸಬೇಕು?

- ದೇವರು ನಮ್ಮಿಂದ ಸ್ತೋತ್ರ ಹೊಂದಲು ಯೋಗ್ಯನು.

ಕೀರ್ತನೆಗಳು 48:1
**ಯೆಹೋವನು ಮಹೋನ್ನತನು; ನಮ್ಮ ದೇವರು ತನ್ನ ಪರಿಶುದ್ಧ ಪರ್ವತ ನಗರದಲ್ಲಿ ಸರ್ವಸ್ತುತಿ ಪಾತ್ರನಾಗಿದ್ದಾನೆ.**

ಪ್ರಕಟನೆ 4:11
**"ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ: ಸಮಸ್ತವನ್ನು ಸೃಷ್ಟಿಸಿದಾತನು ನೀನೇ ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದಾದವು."**

- ಆತನನ್ನು ಸ್ತುತಿಸಲು ನಾವು ಸೃಷ್ಟಿಸಲ್ಪಟ್ಟಿದ್ದೇವೆ.

ಯೆರೆಮೀಯ 13:11
**ಸಮಸ್ತ ಇಸ್ರಾಯೇಲ್ ವಂಶವೂ ಸಕಲ ಯೆಹೂದ ವಂಶವೂ ನನ್ನ ಪ್ರಜೆಯಾಗಿದ್ದು ನನಗೆ ಹೆಸರುವಾಸಿಯೂ ಸ್ತೋತ್ರವೂ ಮಹಿಮೆಯೂ ಆಗಿರಲೆಂದು ನಡುಕಟ್ಟು ಸೊಂಟಕ್ಕೆ ಬಿಗಿದಿರುವಂತೆ ಇವರನ್ನು ಬಿಗಿದುಕೊಂಡಿದ್ದೇನೆ; ಆದರೂ ಇವರು ಕೇಳಲೊಲ್ಲದೆ ಹೋದರು ಎಂದು ಯೆಹೋವನು ಅನ್ನುತ್ತಾನೆ.**

1 ಪೇತ್ರನು 2:9
**ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ.**

ನೀವೂ ನಾನೂ ಆತನನ್ನು ಸ್ತುತಿಸಲು ರೂಪಿಸಲ್ಪಟ್ಟಿದ್ದೇವೆ; ಆತನಿಗೆ ಉಪಕಾರ ಸ್ತುತಿ ಮಾಡಲು ಮತ್ತು ಆತನು ಆತನು ಮಾಡಿದ್ದೆಲ್ಲವನ್ನೂ ಆಚರಿಸಲು.

ಯೆಶಾಯ 43:21
**ನನ್ನ ಸ್ತೋತ್ರವನ್ನು ಪ್ರಚಾರ ಪಡಿಸಲಿ ಎಂದು ನಾನು ಸೃಷ್ಟಿಸಿಕೊಂಡ**

- ನಾವು ಹಾಗೆ ಮಾಡಬೇಕೆಂದು ಆತನ ವಾಕ್ಯದಲ್ಲಿ ಆಜ್ಞಾಪಿಸಲ್ಪಟ್ಟಿದ್ದೇವೆ.

ಕೀರ್ತನೆಗಳು 81:1–4
**ನಮಗೆ ಬಲಪ್ರದನಾಗಿರುವ ದೇವರಿಗೆ ಉತ್ಸಾಹ ಧ್ವನಿಮಾಡಿರಿ; ಯಾಕೋಬರ ದೇವರಿಗೆ ಜಯಘೋಷ ಮಾಡಿರಿ. ರಾಗವನ್ನು ಎತ್ತಿರಿ; ತಮ್ಮಡಿಯನ್ನು ಬಡಿಯಿರಿ; ಇಂಪಾದ ಕಿನ್ನರಿಯನ್ನು ಸ್ವರಮಂಡುವನ್ನೂ ಬಾರಿಸಿರಿ. ಅಮಾವಾಸ್ಯೆಯಲ್ಲಿಯೂ ನಮ್ಮ ಉತ್ಸವದಿಸವಾಗಿರುವ ಪೂರ್ಣಿಮೆಯಲ್ಲಿಯೂ ಕೊಳಲನ್ನು ಊದಿರಿ. ಇದು ಇಸ್ರಾಯೇಲ್ಯರಲ್ಲಿ ಒಂದು ಕಟ್ಟಳೆ ಇದು ಯೂಕೋಬರ ದೇವರು ವಿಧಿಸಿದ್ದು.**

ಕೀರ್ತನೆಗಳು 149:150
**ಯೂಹುವಿಗೆ ಸ್ತೋತ್ರ! ಯೆಹೋವನಿಗೆ ನೂತನ ಕೀರ್ತನೆಯನ್ನು ಹಾಡಿರಿ; ಭಕ್ತ ಸಭೆಯಲ್ಲಿ ಆತನದನ್ನು ಸ್ತುತಿಸಿರಿ. ಇಸ್ರಾಯೇಲ್ಯರು ತಮ್ಮ ಸೃಷ್ಟಿ ಕರ್ತನಲ್ಲಿ ಹೆಚ್ಚಳ ಪಡಲಿ; ಚೀಯೋನಿನವರು ತಮ್ಮ ರಾಜನಲ್ಲಿ ಹರ್ಷಿಸಲಿ. ಕುಣಿಯುತ್ತಾ ಆತನ ನಾಮವನ್ನು ಕೀರ್ತಿಸಲಿ; ದಮ್ಮಡಿ, ಕಿನ್ನರಿಗಳಂದ ಆತನನ್ನು ಭಜಿಸಲಿ. ಯೆಹೋವನು ತನ್ನ ಪ್ರಜೆಗೆ ಪ್ರಸನ್ನನಾದನು; ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ. ಭಕ್ತರು ತಮಗುಂಟಾದ ಮಹಿಮೆಯಲ್ಲಿ ಹಿಗ್ಗಲಿ; ಹಾಸಿಗೆಯ ಮೇಲಿರುವಾಗಲೂ ಉತ್ಸಾಹಧ್ವನಿ ಮಾಡಲಿ ಅವರ ಬಾಯಲ್ಲಿ ಯೆಹೋವನ ಸ್ತೋತ್ರವೂ ಕೈಯಲ್ಲಿ ಇಬ್ಬಾಯಿಕತ್ತಿಯೂ ಇರಲಿ. ಅವರು ಜನಾಂಗಗಳಿಗೆ ಮುಯ್ಯಿತೀರಿಸುವರು; ಅನ್ಯಜನಗಳನ್ನು ದಂಡಿಸುವರು, ಅವರ ರಾಜರನ್ನು ಸಂಕೋಲೆಯಿಂದ ಬಂಧಿಸುವರು; ಪ್ರಭುಗಳಿಗೆ ಕಬ್ಬಿಣದ ಬೇಡಿಗಳನ್ನು ಹಾಕುವರು. ಲಿಖಿತದಂತೆ ಅವರಿಗೆ ಶಿಕ್ಷೆಯನ್ನು ವಿಧಿಸುವರು; ಇದು ಆತನ ಭಕ್ತರೆಲ್ಲರಿಗೆ ಗೌರವವಾಗಿರುವದು. ಯಾಹುವಿಗೆ ಸ್ತೋತ್ರ! ಯಾಹುವಿಗೆ ಸ್ತೋತ್ರ! ದೇವರನ್ನು ಆತನ ಪರಿಶುದ್ಧಾಲಯದಲ್ಲಿ ಸ್ತುತಿಸಿರಿ; ಆತನ ಶಕ್ತಿ ಪ್ರದರ್ಶಕವಾದ ಆಕಾಶ ಮಂಡಲದಲ್ಲಿ ಆತನನ್ನು ಸ್ತುತಿಸಿರಿ. ಆತನ ಮಹತ್ಕಾರ್ಯಗಳಿಗಾಗಿ ಆತನನ್ನು ಸ್ತುತಿಸಿರಿ. ಆತನ ಮಹಾ ಪ್ರಭಾವಕ್ಕೆ ಸರಿಯಾಗಿ ಆತನನ್ನು ಸ್ತುತಿಸಿರಿ ಕೊಬೂದುತ್ತಾ ಆತನನ್ನು ಸ್ತುತಿಸಿರಿ; ಸ್ವರ ಮಂಡಲ ಕಿನ್ನರಿಗಳಂದ ಆತನನ್ನು ಸ್ತುತಿಸಿರಿ. ದಮ್ಮಡಿ ಬಡಿಯುತ್ತಾ ಕುಣಿಯುತ್ತಾ ಆತನನ್ನು ಸ್ತುತಿಸಿರಿ; ತಂತೀ ವಾದ್ಯಗಳಂದಲೂ ಕೊಳಲುಗಳಂದಲೂ ಆತನನ್ನು ಸ್ತುತಿಸಿರಿ. ತಾಳದಿಂದ ಆತನನ್ನು ಸ್ತುತಿಸಿರಿ; ಝುಲ್ಲರಿಯಿಂದ ಆತನನ್ನು ಸ್ತುತಿಸಿರಿ. ಪ್ರಾಣವಿರುವದೆಲ್ಲವೂ ಯೆಹೋವನನ್ನು ಸ್ತುತಿಸಲಿ; ಯಾಹುವಿಗೆ ಸ್ತೋತ್ರ!.**

- ದೇವರು ಸ್ತುತಿಗಳ ಮಧ್ಯದಲ್ಲಿ ಆಸೀನವಾಗಿದ್ದಾನೆ.

ಕೀರ್ತನೆಗಳು 22:3
**ಇಸ್ರಾಯೇಲ್ಯರ ಸ್ತೋತ್ರ ಸಿಂಹಾಸನದಲ್ಲಿರುವಾತನೇ, ನೀನು ಪವಿತ್ರಸ್ವರೂಪನು.**

- ಸ್ತೋತ್ರದಲ್ಲಿ ಬಲವಿದೆ.

2 ಪೂರ್ವಕಾಲವೃತ್ತಾಂತ 20:21, 22
**ಆಮೇಲೆ ಅವನು ಜನರ ಸಮ್ಮತಿಯಿಂದ ಯೆಹೋವನಿಗೋಸ್ಕರ ಗಾಯನ ಮಾಡುವದಕ್ಕೋಸ್ಕರವಾಗಿ ಕೆಲವರನ್ನು ಆರಿಸಿಕೊಂಡು ಅವರಿಗೆ ಪರಿಶುದ್ಧತ್ವವೆಂಬ ಭೂಷಣದೊಡನೆ ಭಟರ ಮುಂದೆ ಹೋಗುತ್ತಾ – ಯೆಹೋವನಿಗೆ ಕೃತಜ್ಞತಾ ಸ್ತುತಿ ಮಾಡಿರಿ, ಆತನ ಕೃಪೆಯು ಶಾಶ್ವತವಾಗಿದೆ ಎಂದು ಭಜಿಸಿರಿ ಎಂಬದಾಗಿ ಆಜ್ಞಾಪಿಸಿದನು. ಅವರು ಉತ್ಸಾಹ ಧ್ವನಿಯಿಂದ ಕೀರ್ತಿಸುವದಕ್ಕೆ ಪ್ರಾರಂಭಿಸಲು ಯೆಹೋವನು ಯೆಹೂದ್ಯರಿಗೆ ವಿರುದ್ಧವಾಗಿ ಬಂದ ಅಮ್ಮೋನಿಯರನ್ನೂ ಮೋವಾಬ್ಯರನ್ನೂ ಸೇಯಿರ್ ಪರ್ವತದವರನ್ನು ನಶಿಸುವದಕ್ಕೋಸ್ಕರ ಅವರಲ್ಲಿ ಹೊಂಚು ಹಾಕುವವರನ್ನು ಇರಿಸಿದ್ದರಿಂದ ಅಮ್ಮೋನಿಯರೂ ಮೋವಾಬ್ಯರೂ ಸೇಯೀರ್ ಪರ್ವತದವರ ಮೇಲೆ ಬಿದ್ದು ಅವರನ್ನು ಪೂರ್ಣವಾಗಿ ಸಂಹರಿಸಿ ಬಿಟ್ಟರು.**

ನಾವು ದೇವರನ್ನು ಸ್ತುತಿಸುವಾಗ ಆತನ ನಿವಾಸಕ್ಕಾಗಿ ಒಂದು ಸ್ಥಳವನ್ನು ಸೃಷ್ಟಿಸುತ್ತೇವೆ. ಆತನ ಪ್ರಸನ್ನತೆಯು ಒಳಗೆ ಪ್ರವೇಶಿಸುತ್ತದೆ. ಆತನು ನಮ್ಮ ಮಧ್ಯದಲ್ಲಿ ವಾಸಿಸಲು ಬರುತ್ತಾನೆ.

ಸ್ತೋತ್ರವು ಸ್ಫೋಟಕ. ನೀವು ದೇವರನ್ನು ಆಚರಿಸುವಾಗ, ಇಲ್ಲಿ ಭೂಮಿಯ ಮೇಲೆ ಏನೋ ಒಂದು ಅಲ್ಲಾಡಲು ಪ್ರಾರಂಭವಾಗುತ್ತದೆ. ಸ್ತೋತ್ರದಲ್ಲಿ ಬಲವಿದೆ.

ನಮ್ಮ ಪರಿಸ್ಥಿತಿಗಳ ಕುರಿತು ದೂರುವುದನ್ನು ನಿಲ್ಲಿಸೋಣ. ನಮ್ಮ ಪರಿಸ್ಥಿತಿಗಳು ಬದಲಾಗಲು ಸ್ತೋತ್ರವು ನಮಗಿರುವ ಮಾರ್ಗವಾಗಿದೆ.

ಅಪೊಸ್ತಲರ ಕೃತ್ಯಗಳು 16: 25-34

**ಮಧ್ಯರಾತ್ರಿಯಲ್ಲಿ ಪೌಲನೂ ಸೀಲನೂ ಪ್ರಾರ್ಥನೆ ಮಾಡುವವರಾಗಿ ದೇವರಿಗೆ ಸ್ತುತಿ ಪದಗಳನ್ನು ಹಾಡುತ್ತಿದ್ದರು; ಸೆರೆಯಲ್ಲಿದ್ದವರು ಲಕ್ಷ್ಯವಿಟ್ಟು ಕೇಳುತ್ತಿದ್ದರು. ಆಕಸ್ಮಾತ್ತಾಗಿ ಮಹಾ ಭೂಕಂಪವುಂಟಾಯಿತು; ಸೆರೆಮನೆಯ ಅಸ್ತಿವಾರಗಳು ಕದಲಿದವು. ಅದೇ ಕ್ಷಣದಲ್ಲಿ ಕದ್ದವುಗಳೆಲ್ಲಾ ತೆರೆದವು. ಎಲ್ಲರ ಬೇಡಿಗಳು ಕಳಚಿಬಿದ್ದವು. ಸೆರೆಯ ಯಜಮಾನನು ನಿದ್ದೆಯಿಂದ ಎಚ್ಚೆತ್ತು ಸೆರೆಮನೆಯ ಕದಗಳು ತೆರೆದಿರುವುದನ್ನು ಕಂಡು ಸೆರೆಯಲ್ಲಿದ್ದವರು ಓಡಿಹೋದರೆಂದು ಭಾವಿಸಿ ಕತ್ತಿಯನ್ನು ಹಿಡಿದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದನು. ಆದರೆ ಪೌಲನು ಮಹಾ ಶಬ್ದದಿಂದಕೂಗಿ ಅವನಿಗೆ – ನೀನೇನೂ ಕೇಡು ಮಾಡಿಕೊಳ್ಳಬೇಡ, ನಾವೆಲ್ಲರೂ ಇಲ್ಲೇ ಇದ್ದೇವೆ ಎಂದು ಹೇಳಲು ಅವನು – ದೀಪ ತರಬೇಕೆಂದು ಕೂಗಿ ಒಳಕ್ಕೆ ಹಾರಿ ನಡುಗುತ್ತಾ ಪೌಲಸೀಲರ ಮುಂದೆ ಬಿದ್ದನು. ಮತ್ತು ಅವರನ್ನು ಹೊರಗೆ ಕರಕೊಂಡು ಬಂದು – ಸ್ವಾಮಿಗಳೇ ನಾನು ರಕ್ಷಣೆ ಹೊಂದುವದಕ್ಕೆ ಏನು ಮಾಡಬೇಕೆಂದು ಕೇಳಲು ಅವರು – ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು ಎಂದು ಹೇಳಿ ಅವನಿಗೂ ಅವನ ಮನೆಯಲ್ಲಿರುವವರೆಲ್ಲರಿಗೂ ದೇವರ ವಾಕ್ಯವನ್ನು ತಿಳಿಸಿದನು. ಆ ಮೇಲೆ ಅವನು ರಾತ್ರಿಯ ಅದೇ ಗಳಿಗೆಯಲ್ಲಿ ಅವರನ್ನು ಕರಕೊಂಡು ಹೋಗಿ ಅವರ ಗಾಯಗಳನ್ನು ತೊಳೆದು ಕೂಡಲೆ ತಾನು ತನ್ನವರೆಲ್ಲರ ಸಹಿತವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡನು. ತರುವಾಯ ಅವರನ್ನು ತನ್ನಮನೆಗೆ ಕರಕೊಂಡು ಹೋಗಿ ಊಟ ಮಾಡಿಸಿದ್ದನು. ಅವನು ತನ್ನ ಮನೆಯವರೆಲ್ಲರ ಸಂಗಡ ನಂಬಿ ಉಲ್ಲಾಸಗೊಂಡನು.**

- ಸ್ತುತಿಸುವುದು ಒಳ್ಳೆಯ ವಿಷಯ

ಕೀರ್ತನೆಗಳು 92:1

**ಯೆಹೋವನೇ, ನಿನ್ನನ್ನು ಕೊಂಡಾಡುವದೂ ಪರಾತ್ಪರನೇ, ನಿನ್ನ ನಾಮವನ್ನು ಸಂಕೀರ್ತಿಸುವದೂ ಯುಕ್ತವಾಗಿದೆ.**

ಕೀರ್ತನೆಗಳು 135:3

**ಯಾಹುವಿಗೆ ಸ್ತೋತ್ರ! ಯೆಹೋವನು ಒಳ್ಳೆಯವನು, ಆತನ ನಾಮವನ್ನು ಕೊಂಡಾಡಿರಿ; ಅದು ಮನೋಹರವಾಗಿದೆ.**

## ನಾವು ಯಾವಾಗ ಸ್ತುತಿಸಬೇಕು?

- ಎಲ್ಲಾ ವೇಳೆಗಳಲ್ಲೂ

ಕೀರ್ತನೆಗಳು 34:1

**ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು; ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವದು.**

ಕೀರ್ತನೆಗಳು 70:4

**ನಿನ್ನ ದರ್ಶನವನ್ನು ಕೋರುವವರೆಲ್ಲರು ನಿನ್ನಲ್ಲಿ ಉಲ್ಲಾಸದಿಂದ ಸಂತೋಷಿಸಲಿ ನಿನ್ನ ಜಯದಲ್ಲಿ ಆನಂದಿಸುವವರು ದೇವರಿಗೆ ಸ್ತೋತ್ರವೆಂದು ಯಾವಾಗಲೂ ಅನ್ನುವವರಾಗಲಿ.**

ಇಬ್ರಿಯರಿಗೆ 13:15

**ಆದುದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ.**

ನಾವು ಒಂದು ಸಮಸ್ಯೆಯನ್ನು ಎದುರಿಸುವಾಗಲೂ, ಎಲ್ಲವೂ ಕಠಿಣವಾಗಿದ್ದರೂ ನಾವು ಆತನನ್ನು ಸ್ತುತಿಸುವೆವು ಯಾಕೆಂದರೆ ಆತನು ಸರ್ವಶಕ್ತನು ಮತ್ತು ಬಲಶಾಲಿಯು ಹೀಗಾಗಿ ನಾವು ಆತನ ಶ್ರೇಷ್ಠತೆಯನ್ನು ಪ್ರಚಾರ ಪಡಿಸುವೆವೆಂದು ಆತನಿಗೆ ಹೇಳಬೇಕು.

(ದಿನವಿಡೀ)

ಕೀರ್ತನೆಗಳು 113:1-3

**ಯಾಹುವಿಗೆ ಸ್ತೋತ್ರ! ಯೆಹೋವನ ಸೇವಕರೇ. ಸ್ತೋತ್ರಮಾಡಿರಿ; ಯೊಹೋವನನ್ನು ಸ್ತುತಿ ಮಾಡಿರಿ. ಇಂದಿನಿಂದ ಯುಗಯುಗಕ್ಕೂ ಯೆಹೋವನಾಮವು ಕೀರ್ತಿಸಲ್ಪಡಲಿ. ಯೆಹೋವನ ನಾಮವು ಮೂಡಣದಿಂದ ಪಡುವಣ ವರೆಗೂ ಸ್ತುತಿಹೊಂದಲಿ.**

- ಎಂದೆಂದಿಗೂ

ಕೀರ್ತನೆಗಳು 52:9

**[ದೇವರೇ] ನಿನ್ನ ಉಪಕಾರಕ್ಕಾಗಿ ಯಾವಾಗಲೂ ನಿನ್ನನ್ನು ಸ್ತುತಿಸುವೆನು; ನಿನ್ನ ನಾಮವು ಸರ್ವೋತ್ತಮವೆಂದು ನಿನ್ನ ಭಕ್ತರ ಮುಂದೆ ಅದನ್ನೇ ನಿರೀಕ್ಷಿಸಿಕೊಂಡಿರುವೆನು.**

## ನಾವು ದೇವರಿಗೆ ಸ್ತೋತ್ರವನ್ನು ಹೇಗೆ ಅಭಿವ್ಯಕ್ತ ಪಡಿಸುವೆವು?

ಪರಿಶುದ್ಧಗ್ರಂಥದಲ್ಲಿ ಹೇಳಿರುವ ಕೆಲವು ವಿಧಗಳು.

### ಹಾಡುವುದರ ಮೂಲಕ

ಕೀರ್ತನೆಗಳು 47:6

**ದೇವರನ್ನು ಸಂಕೀರ್ತಿಸಿರಿ, ಕೀರ್ತಿಸಿರಿ; ನಮ್ಮ ಅರಸನನ್ನು ಕೀರ್ತಿಸಿರಿ, ಕೀರ್ತಿಸಿರಿ.**

**ದೇವರನ್ನು ಸ್ತುತಿಸುವುದು ಉಸಿರಾಟದಷ್ಟೆ, ರೆಪ್ಪೆ ಬಡಿತ, ಅಥವಾ ಇನ್ನಾವುದಾದರೂ ನಿರಿಚ್ಛಾ ಪ್ರತಿಕ್ರಿಯೆಯಂತೆ ಜೀವನ ಶೈಲಿಯಾಗಬೇಕು!**

**ನಾವು ಒಬ್ಬರಾಗಿ ಅಥವಾ ಬೇರೆಯವರೊಂದಿಗೆ ಎಲ್ಲೆಲ್ಲೂ ಎಲ್ಲಾದರೂ ಆತನನ್ನು ಸ್ತುತಿಸಬೇಕು.**

ಕೀರ್ತನೆಗಳು 100:4
**ಕೃತಜ್ಞತಾ ಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ; ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ.**

ಎಫೆಸದವರಿಗೆ 5:19
**ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನಮಾಡುತ್ತಾ ಕೀರ್ತನೆ ಹಾಡುತ್ತಾ...**

ಪ್ರಕಟನೆ 5:9
**ಅವರು ಹೊಸ ಹಾಡನ್ನು ಹಾಡುತ್ತಾ – ನೀವು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವುದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕಂಡುಕೊಂಡಿರಿ.**

## ಗಟ್ಟಿಯಾಗಿ ಕೂಗುತ್ತಾ (ಸಂತೋಷದ ಧ್ವನಿಯನ್ನೆತ್ತುತ್ತಾ)

ಕೀರ್ತನೆಗಳು 47:1
**ಸರ್ವಜನಾಂಗಗಳಿರಾ, ಚಪ್ಪಾಳೆ ಹೊಡೆಯಿರಿ, ಆರ್ಭಟದಿಂದ ದೇವರಿಗೆ ಜಯಧ್ವನಿ ಮಾಡಿರಿ.**

ಕೀರ್ತನೆಗಳು 66:1
**ಸರ್ವಭೂನಿವಾಸಿಗಳೇ, ದೇವರಿಗೆ ಜಯಧ್ವನಿ ಮಾಡಿರಿ.**

## ಚಪ್ಪಾಳೆ ಹೊಡೆಯುವುದು (ದೇವರಿಗೆ ಮೆಚ್ಚುಗೆ ತೋರಿಸುವುದು)

ಕೀರ್ತನೆಗಳು 47:1
**ಸರ್ವ ಜನಾಂಗಗಳಿರಾ, ಚಪ್ಪಾಳೆ ಹೊಡೆಯಿರಿ, ಆರ್ಭಟದಿಂದ ದೇವರಿಗೆ ಜಯಧ್ವನಿ ಮಾಡಿರಿ.**

## ನಮ್ಮ ಕೈಗಳನ್ನೆತ್ತುವುದು

ಕೀರ್ತನೆಗಳು 134:2
**ಮಹಾಪರಿಶುದ್ಧ ಸ್ಥಳದ ಕಡೆಗೆ ಕೈಯೆತ್ತಿ ಯೆಹೋವನನ್ನು ಕೊಂಡಾಡಿರಿ.**

1 ತಿಮೊಥೆಯನಿಗೆ 2:8
**ಹೀಗಿರಲಾಗಿ ಪುರುಷರು ಎಲ್ಲಾ ಸ್ಥಳಗಳಲ್ಲಿ ಕೋಪವೂ ವಾಗ್ವಾದವು ಇಲ್ಲದವರಾಗಿ ಭಕ್ತಪೂರ್ವಕವಾಗಿಯೇ ಕೈಗಳನ್ನೆತ್ತಿ ಪ್ರಾರ್ಥಿಸಬೇಕೆಂದು ಅಪೇಕ್ಷಿಸುತ್ತೇನೆ.**

- ಅಧೀನತೆಯ ಒಂದು ಚಿಹ್ನೆ
- ನಮ್ಮ "ತಂದೆ ದೇವರಿಗಾಗಿ" ಆತನ ಕಡೆಗೆ ಕೈಯೆತ್ತುವುದು.
- ನಮ್ಮ ಜೀವನಗಳಲ್ಲಿ ದೇವರು ಮಾಡುತ್ತಿರುವ ಎಲ್ಲವುಗಳನ್ನು ಸ್ವೀಕರಿಸುವ ಚಿಹ್ನೆ.

## ಸಂಗೀತ ವಾದ್ಯಗಳನ್ನು ನುಡಿಸುವುದು.

2 ಪೂರ್ವಕಾಲ ವೃತ್ತಾಂತ 5:13, 14
**ಯಾಜಕರು ದೇವಾಲಯದಿಂದ ಹೊರಗೆ ಬಂದಕೂಡಲೆ ಒಬ್ಬನೋ ಎಂಬಂತೆ ಸ್ವರ ಎತ್ತಿ ಯೆಹೋವನನ್ನು ಕೀರ್ತಿಸುವದಕ್ಕಾಗಿ ತುತ್ತೂರಿ ಊದುವವರೂ ಗಾಯನ ಮಾಡುವವರೂ ಅಲ್ಲಿ ನಿಂತಿದ್ದರು. ತುತ್ತೂರಿ ತಾಳ ಮೊದಲಾದ ವಾದ್ಯಗಳ ಧ್ವನಿಯೂ ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಜ್ಞತಾ ಸ್ತುತಿ ಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪಕವಾಗಿದ್ದ ಮೇಘವು ದೇವಾಲಯದಲ್ಲಿ ತುಂಬಿಕೊಂಡದರಿಂದ ಯಾಜಕರು ಅಲ್ಲಿ ನಿಂತು ಸೇವೆಮಾಡಲಾರದೆ ಹೋದರು.**

ಆದಿಕಾಂಡ 4:21
**ಅವನ ತಮ್ಮನ ಹೆಸರು ಯೊಬಾಲನು; ಇವನು ಕಿನ್ನರಿಕೊಳಲುಗಳನ್ನು ನುಡಿಸುವವರ ಮೂಲ ಪುರುಷನು.**

ಯೆಹೆಜ್ಕೇಲನು 28:13
**ದೇವರ ಉದ್ಯಾನವಾದ ಏದೆನಿನಲ್ಲಿ ನೀನಿದ್ದಿ; ಮಾಣಿಕ್ಯ ಪುಷ್ಪರಾಗ ಪಚ್ಚೆ ಪೀತರತ್ನ ಬೆರುಲ್ಲ ವೈಡೂರ್ಯ ನೀಲ ಕೆಂಪರಳು, ಸ್ಫಟಿಕ ಈ ನವರತ್ನಗಳಿಂದ ಭೂಷಿತವಾಗಿದ್ದು; ನಿನ್ನಲ್ಲಿನ (ಈ ರತ್ನಗಳು) ಗೂಡುಗಳೂ ಮನೆಗಳೂ ಸುವರ್ಣರಹಿತವಾಗಿದ್ದವು; ನಿನ್ನ ಸೃಷ್ಟಿಯ ದಿನದಲ್ಲಿ ಸಿದ್ಧವಾದವು.**

1 ಸಮುವೇಲನು 16:16–23
**ಸ್ವಾಮೀ, ಅಪ್ಪಣೆಯಾಗಲಿ, ನಿನ್ನ ಸನ್ನಿಧಿಯಲ್ಲಿ ನಿಂತಿರುವ ನಿನ್ನ ಸೇವಕರಾದ ನಾವು ಹೋಗಿ ಕಿನ್ನರಿ ಬಾರಿಸುವವರಲ್ಲಿ ನಿಪುಣನಾದ ಬಬ್ಬನನ್ನು ಹುಡುಕಿ ತರುತ್ತೇವೆ. ಯೆಹೋವನಿಂದ ಕಳುಹಿಸಲ್ಪಟ್ಟ ದುರಾತ್ಮವು ನಿನ್ನ ಮೇಲೆ ಬರುವಾಗ ಅವನು ಬಾರಿಸಿದರೆ ನಿನಗೆ ಉಪಶಮನವಾಗುವದು ಎಂದು ಹೇಳಿದರು. ಸೌಲನು ಅವರಿಗೆ – ಚೆನ್ನಾಗಿ ಬಾರಿಸಬಲ್ಲವನಾದ ಒಬ್ಬನನ್ನು ನಮಗೋಸ್ಕರ ಹುಡುಕಿಕರೆಕೊಂಡು ಬನ್ನಿರಿ ಎಂದು ಆಜ್ಞಾಪಿಸಲು ಸೇವಕರಲ್ಲೊಬ್ಬನು ಅವನಿಗೆ – ಬೆತ್ಲೆಹೇಮಿನವನಾದ ಇಷಯನ ಮಗನನ್ನು ನೋಡಿದ್ದೇನೆ; ಅವನು ಚೆನ್ನಾಗಿ ಬಾರಿಸಬಲ್ಲವನೂ ಪರಾಕ್ರಮ ಶಾಲಿಯೂ, ರಣಶೂರನೂ, ವಾಕ್ಚಾತುರನೂ, ಸುಂದರನೂ, ಯೆಹೋವನು ಅನುಗ್ರಹವನ್ನು ಹೊಂದಿದವನೂ ಆಗಿದ್ದಾನೆಂದು ಹೇಳಿದನು. ಕೂಡಲೇ ಸೌಲನು ಇಷಯನ ಬಳಿಗೆ ದೂತರನ್ನು ಕಳುಹಿಸಿ ಅವನಿಗೆ – ಕುರಿಗಳನ್ನು ಮೇಯಿಸುತ್ತಿರುವ ನಿನ್ನ ಮಗನಾದ ದಾವೀದನನ್ನು ನನ್ನ ಬಳಿಗೆ ಕಳುಹಿಸು ಎಂದು ಹೇಳಿಸಿದನು. ಇಷಯನು ರೊಟ್ಟಿಯನ್ನೂ ಒಂದು ಬುದ್ದಲಿ ದ್ರಾಕ್ಷಾರಸವನ್ನೂ ಒಂದು ಹೆತ್ತು ಮರಿಯನ್ನೂ ಕತ್ತೆಯ ಮೇಲೆ ಹೇರಿಸಿ ತನ್ನ ಮಗನಾದ ದಾವೀದನ ಮುಖಾಂತರ ಸೌಲನಿಗೆ ಕಳುಹಿಸಿದನು. ಹೀಗೆ ದಾವೀದನು ಸೌಲನ ಬಳಿಗೆ ಬಂದು ಅವನ ಸೇವಕನಾದನು. ಸೌಲನು ಅವನನ್ನು ಬಹಳವಾಗಿ ಪ್ರೀತಿಸಿ.**

**ತನ್ನ ಆಯುಧಗಳನ್ನು ಹೊರುವದಕ್ಕೆ ನೇಮಿಸಿಕೊಂಡನು. ತರುವಾಯ ಸೌಲನು ಇಷಯನ ಬಳಿಗೆ ದೂತರನ್ನು ಅಟ್ಟಿ ಅವನಿಗೆ – ನಾನು ದಾವೀದನನ್ನು ಮೆಚ್ಚಿದ್ದೇನೆ; ಅವನು ನನ್ನ ಸನ್ನಿಧಿಯಲ್ಲಿ ಸೇವೆಮಾಡಲಿ ಎಂದು ತಿಳಿಸಿದನು. ದೇವರಿಂದ ಕಳುಹಿಸಲ್ಪಟ್ಟ ದುರಾತ್ಮವು ಸೌಲನ ಮೇಲೆ ಬಂದಾಗ ದಾವೀದನು ಕಿನ್ನರಿಯನ್ನು ಬಾರಿಸುವನು; ಅದರಿಂದ ದುರಾತ್ಮವು ಸೌಲನನ್ನು ಬಿಟ್ಟು ಹೋಗುವದು; ಅವನು ಉಪಶಮನ ಹೊಂದಿ ಚೆನ್ನಾಗಿರುವನು. ಎಂದು ನುಡಿದನು.**

2 ಅರಸುಗಳು 3:15–16

**ಈಗ ಒಬ್ಬ ವಾದ್ಯಗಾರನನ್ನು ನನ್ನ ಬಳಿಗೆ ನನ್ನ ಹತ್ತಿರ ಕರಕೊಂಡು ಬನ್ನಿರಿ ಎಂದು ಹೇಳಿದನು. (ವಾದ್ಯಗಳ ಸ್ವರವನ್ನು ಕೇಳುವಾಗೆಲ್ಲಾ ಎಲೀಷನಲ್ಲಿ ಯೆಹೋವನ ಬಲವು ಬರುತ್ತಿತ್ತು) ಅನಂತರ ಎಲೀಷನು ಇಸ್ರಾಯೇಲ್ಯರ ಅರಸನಿಗೆ ಈ ಹಳ್ಳದಲ್ಲಿ ತುಂಬಾ ಗುಂಡಿಗಳನ್ನು ಮಾಡಿರಿ.... ಎಂಬದಾಗಿ ಯೆಹೋವನು ಅನ್ನುತ್ತಾನೆ.**

ಪ್ರಕಟನೆ 5:8

**ಆ ಸುರಳಿಯನ್ನು ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು. ಹಿರಿಯರ ಕೈಗಳಲ್ಲಿ ವೀಣೆಗಳೂ, ದೇವಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳೂ ಇದ್ದವು.**

ಪ್ರಕಟನೆ 14:2

**ಇದಲ್ಲದೆ ಪರಲೋಕದ ಕಡೆಯಿಂದ ಜಲಪ್ರವಾಹದ ಘೋಷದಂತೆಯೂ ದೊಡ್ಡ ಗುಡುಗಿನ ಶಬ್ದದಂತೆಯೂ ಇದ್ದ ಶಬ್ದವನ್ನು ಕೇಳಿದೆನು. ನಾನು ಕೇಳಿದ ಆ ಶಬ್ದವು ವೀಣೆಗಳನ್ನು ನುಡಿಸಿಕೊಂಡು ಹಾಕುತ್ತಿರುವ ವೀಣೆಗಾರರ ಶಬ್ದದಂತಿತ್ತು.**

ಕೀರ್ತನೆಗಳು 33:2, 3

**ಕಿನ್ನರಿಯನ್ನು ನುಡಿಸುತ್ತಾ ಯೆಹೋವನನ್ನು ಕೊಂಡಾಡಿರಿ; ಹತ್ತು ತಂತಿಗಳ ಸ್ವರ ಮಂಡಲವನ್ನು ಬಾರಿಸುತ್ತಾ ಸಂಕೀರ್ತಿಸಿರಿ. ಆತನ ಘನಕ್ಕಾಗಿ ನೂತನ ಕೀರ್ತನೆಯನ್ನು ಹಾಡಿರಿ; ಉತ್ಸಾಹ ಧ್ವನಿಯೊಡನೆ ಇಂಪಾಗಿ ಬಾರಿಸಿರಿ.**

ಕೀರ್ತನೆಗಳು 150:5

**ತಾಳದಿಂದ ಆತನನ್ನು ಸ್ತುತಿಸಿರಿ, ಝಲ್ಲರಿಯಿಂದ ಆತನನ್ನು ಸ್ತುತಿಸಿರಿ.**

- ನಾವು ಸಂಗೀತ / ಉಪಕರಣಗಳ ಮೇಲೆ ಹೆಚ್ಚು ಆತುಕೊಳ್ಳದಂತೆ ಎಚ್ಚರ ವಹಿಸಬೇಕು. ಸಂಗೀತವಿಲ್ಲದೆಯೂ ನಾವು ದೇವರನ್ನು ಸ್ತುತಿಸಲು ಸಮರ್ಥರಾಗಬೇಕು.

## ನಿಲ್ಲುವುದು

- ಗೌರವದ ಒಂದು ಸಂಕೇತ

2 ಪೂರ್ವಕಾಲವೃತ್ತಾಂತ 5:12

**ನಾರು ಬಟ್ಟೆಗಳನ್ನು ಧರಿಸಿಕೊಂಡು ತಾಳ ಸ್ವರಮಂಡಲ ಕಿನ್ನರಿ ಇವುಗಳನ್ನು ಹಿಡಿದುಕೊಂಡು ಲೇವಿಯ ಗಾಯಕರಾದ ಆಸಾಫ್ ಹೇಮಾನ್ ಯೆದುತೂನರೂ ಇವರ ಮಕ್ಕಳೂ ಸಹೋದರರೂ ತುತೂರಿಗಳನ್ನು ಊದತಕ್ಕ ನೂರಿಪ್ಪತ್ತು ಮಂದಿ ಯಾಜಕರೂ ಯಜ್ಞವೇದಿಯ ಪೂರ್ವದಿಕ್ಕಿನಲ್ಲಿ ನಿಂತು ಕೊಂಡರು.**

2 ಪೂರ್ವಕಾಲವೃತ್ತಾಂತ 7:6

**ಯಾಜಕರೂ ಲೇವಿಯರೂ ತಮ್ಮ ತಮ್ಮ ಸ್ಥಳಗಳಲ್ಲಿ ನಿಂತರು ದಾವೀದನು ಯೆಹೋವನ ಗಾಯನ ಸೇವೆಗೋಸ್ಕರ ಮಾಡಿಸಿದ ವಾದ್ಯಗಳು ಈ ಲೇವಿಯರ ಕೈಯಲ್ಲಿದ್ದವು. ಇವರು ರಾಜ ಸೇವೆಯಲ್ಲಿದ್ದುಕೊಂಡು ದೇವಾರಾಧನೆ ನಡಿಸುತ್ತಾ – ಯೆಹೋವನಿಗೆ ಕೃತಜ್ಞತಾ ಸ್ತುತಿಯನ್ನು ಸಮರ್ಪಿಸಿರಿ; ಆತನ ಕೃಪೆಯು ಶಾಶ್ವತವಾಗಿದೆ ಎಂಬದಾಗಿ ಆ ವಾದ್ಯಗಳೊಡನೆ ಭಜಿಸುತ್ತಿದ್ದರು. ಯಾಜಕರು ಇದರ ಎದುರಾಗಿ ನಿಂತು ತುತೂರಿಯೂದುತ್ತಿದ್ದರು. ಇಸ್ರಾಯೇಲ್ಯರೆಲ್ಲರೂ ನಿಂತಿದ್ದರು.**

2 ಪೂರ್ವಕಾಲವೃತ್ತಾಂತ 29:26

**ಆ ಲೇವಿಯರು ದಾವೀದನ ವಾದ್ಯಗಳನ್ನೂ ಯಾಜಕರು ತುತ್ತೂರಿಗಳನ್ನೂ ಹಿಡಿದು ನಿಂತಿರಲು.**

ಕೀರ್ತನೆಗಳು 135:2

**ಯೆಹೋವನ ಮಂದಿರದಲ್ಲಿಯೂ ನಮ್ಮ ದೇವರ ಆಲಯದ ಅಂಗಳಗಳಲ್ಲಿಯೂ (ನಿಂತು) ಸೇವೆಮಾಡುವವರೇ,**

ಪ್ರಕಟನೆ 4:9–11

**ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿ ಸಿಂಹಾಸನದ ಮೇಲೆ ಕೂತಿರುವಾತನಿಗೆ ಆ ನಾಲ್ಕು ಜೀವಿಗಳು ಪ್ರಭಾವ ಮಾನ ಕೃತಜ್ಞತಾ ಸ್ತುತಿಗಳನ್ನು ಸಲ್ಲಿಸುವಾಗ್ಗೆ, ಆ ಇಪ್ಪತ್ತು ನಾಲ್ಕು ಮಂದಿ ಹಿರಿಯರು ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ – ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ: ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು ನಿನ್ನ ಚಿತ್ತದಿಂದಲೇ ನಿರ್ಮಿತವಾದವು ಎಂದು ಹೇಳುತ್ತಾ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನನ್ನು ಆರಾಧಿಸುತ್ತಾರೆ.**

## ಆತ್ಮನಲ್ಲಿ ಹಾಡುವುದು (ಅನ್ಯಭಾಷೆಗಳಲ್ಲಿ)

ಅಪೊಸ್ತಲರ ಕೃತ್ಯಗಳು 2:11

**ಕ್ರೇತ್ಯರೂ ಅರಬೀದೇಶದವರೂ ಆಗಿರುವ ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ತುಗಳ ವಿಷಯವಾಗಿ ಹೇಳುವದನ್ನು ಕೇಳುತ್ತೇವೆ ಅಂದು ಕೊಂಡರು.**

ಅಪೊಸ್ತಲರ ಕೃತ್ಯಗಳು 10:46

**ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ....**

## ಕುಣಿದಾಡುವುದು

ಚೆಫನ್ಯ 3 : 17

**ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ, ನಿನ್ನನ್ನು ರಕ್ಷಿಸುವನು; ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವನು; ತನ್ನ ಪ್ರೀತಿಯಲ್ಲಿ ಮುಳುಗಿ ಮೌನವಾಗಿರುವನು; ನಿನ್ನಲ್ಲಿ ಆನಂದಿಸಿ ಹರ್ಷ ಧ್ವನಿಗೈಯುವನು.**

ಕೀರ್ತನೆಗಳು 149: 2,3

**ಇಸ್ರಾಯೇಲ್ಯರು ತಮ್ಮ ಸೃಷ್ಟಿಕರ್ತನಲ್ಲಿ ಹೆಚ್ಚಳ ಪಡಲಿ; ಚೀಯೋನಿನವರು ತಮ್ಮ ರಾಜನಲ್ಲಿ ಹರ್ಷಿಸಲಿ. ಕುಣಿಯುತ್ತಾ ಆತನ ನಾಮವನ್ನು ಕೀರ್ತಿಸಲಿ, ದಮ್ಮಡಿ ಕಿನ್ನರಿಗಳಿಂದ ಆತನನ್ನು ಭಜಿಸಲಿ.**

2 ಸಮುವೇಲನು 6:14

**ದಾವೀದನು ನಾರಿನ ಏಫೋದನ್ನು ಧರಿಸಿಕೊಂಡವನಾಗಿ ಯೆಹೋವನ ಸನ್ನಿಧಿಯಲ್ಲಿ ಪೂರ್ಣಾಸಕ್ತಿಯಿಂದ ಕುಣಿದಾಡಿದನು.**

- ಕುಣಿದಾಡುವುದು ದೇವರನ್ನು ಸಂಭ್ರಮಿಸುವುದು.
- ನಾವು ನಮ್ಮ ಎಲ್ಲಾ ಶಾರೀರಿಕ ಬಂಧನಗಳನ್ನು ತೆಗೆದುಬಿಟ್ಟು ನಮ್ಮ ಸರ್ವೇಂದ್ರಿಯಗಳಿಂದ ಸರಳತೆಯುಳ್ಳವರಾಗಿ ದೇವರ ಮುಂದೆ ಕುಣಿದಾಡಿದರೆ ನಮ್ಮ ಆತ್ಮಿಕ ಬಂಧನಗಳೂ ಕಳಚಿಹೋಗಿ ನಮ್ಮ ಮಧ್ಯದಲ್ಲಿ ದೇವರ ಸಂಚಲನಕ್ಕೆ ಹೆಚ್ಚು ಸ್ವತಂತ್ರವು ಸಿಗುವುದು.
- ಎಚ್ಚರಿಕೆ: ಕುಣಿದಾಡಲು ಸಂಕೋಚ ಪಡುವವರ ಮೇಲೆ ನಾವು ತಪ್ಪು ಹೊರಿಸುವುದಲ್ಲ; ಅವರು ಭಯಪಡಬಾರದು ಅಥವಾ ಪ್ರತ್ಯೇಕಿಸಲ್ಪಡಬಾರದು.
- ಕೆಲವು ಸಭೆಗಳಲ್ಲಿ ಆರಾಧನೆಯ ಕಾಲದಲ್ಲಿ ಕುಣಿದಾಡಲು ಕುಣಿದಾಡುವ ಸೇವೆ ಇದೆ.
- ವಿವಿಧ ಜನರು, ವಿವಿಧ ಸಂಸ್ಕೃತಿಗಳಲ್ಲಿ ತಮ್ಮದೇ ಆದ ಸ್ತೋತ್ರ ಮತ್ತು ದೇವಾರಾಧನೆ ಮಾಡುವ ಅಭಿವ್ಯಕ್ತತೆಗಳಿವೆ.

*"...ದಾವೀದನು ಪೂರ್ಣಬಲದಿಂದ ಕರ್ತನ ಮುಂದೆ ಕುಣಿದಾಡುತ್ತಿರುವುದು...."*



## ನಾವು ಸ್ತೋತ್ರ ಮಾಡಿದಾಗ ಏನು ನಡೆಯುವುದು?

ದೇವರು ನಮ್ಮ ಸ್ತುತಿಗಳ ಮಧ್ಯ ವಾಸಿಸುತ್ತಾನೆ.

ಸ್ವತಃ ದೇವರ ಪ್ರಸನ್ನತೆಯು ನಮ್ಮ ಪರಿಸ್ಥಿತಿಗಳನ್ನೂ ಸನ್ನಿವೇಶಗಳನ್ನೂ ಆಕ್ರಮಿಸುವುದು. ಒಂದು ಉದ್ದೇಶಕ್ಕಾಗಿ ನಾವು ದೇವರ ಗಮನ ಸೆಳೆಯಬೇಕಾದರೆ ನಾವು ಆತನನ್ನು ಸ್ತುತಿಸಲು ಪ್ರಾರಂಭಿಸಬೇಕು ಯಾಕಂದರೆ ಆತನು ನಮ್ಮ ಸ್ತುತಿಗಳ ಮಧ್ಯದಲ್ಲಿ ವಾಸಮಾಡುತ್ತಾನೆ.

ಕೀರ್ತನೆಗಳು 22:3

**ಸ್ತೋತ್ರವು, ದೈವಿಕ ಬಿಡುಗಡೆಗೆ ಕಾರಣವಾಗುತ್ತದೆ. ಇಸ್ರಾಯೇಲ್ಯರ ಸ್ತೋತ್ರ ಸಿಂಹಾಸನದಲ್ಲಿರುವಾತನೇ, ನೀನು ಪವಿತ್ರ ಸ್ವರೂಪನು.**

ತೊಂದರೆಯಲ್ಲಿರುವ ಸನ್ನಿವೇಶಗಳಲ್ಲಿ ನಾವು ದೇವರನ್ನು ಸ್ತುತಿಸಲು ಪ್ರಾರಂಭಿಸುವಾಗ, ದೇವರು ತನ್ನ ಜನರಿಗ ಬಿಡುಗಡೆಯನ್ನುಂಟು ಮಾಡುತ್ತಾನೆ.

2 ಪೂರ್ವಕಾಲವೃತ್ತಾಂತ 20:22

**ಅವರು ಉತ್ಸಾಹ ಧ್ವನಿಯಿಂದ ಕೀರ್ತಿಸುವುದಕ್ಕೆ ಪ್ರಾರಂಭಿಸಲು ಯೆಹೋವನು ಯೆಹೂದ್ಯರಿಗೆ ವಿರೋಧವಾಗಿ ಬಂದ ಅಮ್ಮೋನಿಯರನ್ನೂ ಮೋವಾಬ್ಯರನೂ ಸೇಯೀರ್ ಪರ್ವತದವರನ್ನೂ ನಶಿಸುವದಕ್ಕೋಸ್ಕರ ಅವರಲ್ಲಿ ಹೊಂಚುಹಾಕುವವರನ್ನು ಇರಿಸಿದ್ದರಿಂದ. ಅಮ್ಮೋನಿಯರು ಮೋವಾಬ್ಯರು ಸೇಯೀರ್ ಪರ್ವತದವರ ಮೇಲೆ ಬಿದ್ದು ಅವರನ್ನು ಸಂಪೂರ್ಣವಾಗಿ ಸಂಹರಿಸಿಬಿಟ್ಟರು.**

ಸ್ತೋತ್ರವು ವೈರಿಯನ್ನು ತಡೆಯುತ್ತದೆ

ಕೀರ್ತನೆಗಳು 8:2

**ನಿನಗೆ ವಿರೋಧವಾಗಿ ನಿಂತು ಮುಯ್ಯಿ ತೀರಿಸುವ ವೈರಿಗಳ ಬಾಯನ್ನು ಕಟ್ಟುವದಕ್ಕೋಸ್ಕರ ನೀನು ಬಾಲಕರ ಮತ್ತು ಮೊಲೆ ಕೂಸುಗಳ ಬಾಯಿಂದ ಬಲವಾದ ಸಾಕ್ಷಿ ಉಂಟಾಗುವಂತೆ ಮಾಡಿದ್ದೀ.**

ಸ್ತೋತ್ರವು ಯುದ್ಧದ ಒಂದು ಆಯುಧ

ನಾವು ದೇವರನ್ನು ಸ್ತುತಿಸುತ್ತಿರುವಾಗ, ವೈರಿಯನ್ನು ಕಟ್ಟಿಹಾಕಿ ಬರೆಯಲ್ಪಟ್ಟ ದೇವರ ನ್ಯಾಯತೀರ್ಪನ್ನು ಅವನಿಗೆ ವಿರೋಧವಾಗಿ ಬರಮಾಡುತ್ತೇವೆ.

ಸ್ತೋತ್ರವು ಬಲಶಾಲಿಯಾಗಿದೆ ಯಾಕಂದರೆ ಆತ್ಮದ ಕ್ಷೇತ್ರದಲ್ಲಿ ವಿಷಯಗಳು ನಡೆಯಲು ಪ್ರಾರಂಭಿಸುತ್ತದೆ.

ಸ್ತೋತ್ರವು ದೇವರ ಉಚಿತ ನ್ಯಾಯದಂಡನೆಯನ್ನು ವೈರಿಯ ಮೇಲೆ ಬರಮಾಡುತ್ತದೆ.

> ಕೀರ್ತನೆಗಳು 149:5-9
> **ಭಕ್ತರು ತಮಗುಂಟಾದ ಮಹಿಮೆಯಲ್ಲಿ ಹಿಗ್ಗಲಿ; ಹಾಸಿಗೆಯ ಮೇಲಿರುವಾಗಲೂ ಉತ್ಸಾಹ ಧ್ವನಿ ಮಾಡಲಿ ಅವರ ಬಾಯಲ್ಲಿ ಯೆಹೋವನ ಸ್ತೋತ್ರವೂ ಕೈಯಲ್ಲಿ ಇಬ್ಬಾಯಿ ಕತ್ತಿಯೂ ಇರಲಿ. ಅವರು ಜನಾಂಗಗಳಿಗೆ ಮುಯ್ಯಿ ತೀರಿಸುವರು; ಅನ್ಯಜನಗಳನ್ನು ದಂಡಿಸುವರು; ಅವರ ರಾಜರನ್ನು ಸಂಕೋಲೆಯಿಂದ ಬಂಧಿಸುವರು; ಪ್ರಭುಗಳಿಗೆ ಕಬ್ಬಿಣದ ಬೇಡಿಗಳನ್ನು ಹಾಕುವರು ಉಚಿತದಂತೆ ಅವರಿಗೆ ಶಿಕ್ಷೆಯನ್ನು ವಿಧಿಸುವರು; ಇದು ಆತನ ಭಕ್ತರೆಲ್ಲರಿಗೆ ಗೌರವವಾಗಿರುವುದು ಯಾಹುವಿಗೆ ಸ್ತೋತ್ರ!**

ಸ್ತೋತ್ರವು ನಮಗೆ ದೇವರ ಮೇಲೆ ಇರುವ ನಂಬಿಕೆಯನ್ನು ಅಭಿವ್ಯಕ್ತಪಡಿಸುತ್ತದೆ.

> ರೋಮಾಪುರದವರಿಗೆ 4:21
>
> **ದೇವರನ್ನು ಘನ ಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವುದಕ್ಕೆ ಸಮರ್ಥನೆಂದು ಪೂರಾ ಭರವಸೆಯಿಟ್ಟು ದೃಢನಂಬಿಕೆಯುಳ್ಳವನಾದನು.**

ಸ್ತೋತ್ರವು ಡೇರೆಯ ಹೊರಾಂಗಣದಲ್ಲಿ ಸಮೃದ್ಧವಾಗಿದ್ದು ಸಂಭ್ರಮಾಚರಣೆಯಾದಾಗ, ಆರಾಧನೆಯು ಬಹು ಆಪ್ತವಾಗಿ ಬಹು ಭಕ್ತಿಪೂರ್ವಕವಾಗಿರುವುದು, ಕಾರಣ ನಾವು ದೇವರ ಸಿಂಹಾಸನದ ಮುಂದೆ ತಲೆ ಬಾಗಿದ್ದೇವೆ. ನಾವು ದೇವರನ್ನು 'ಸ್ತೋತಿಸಲೂ' ಆರಾಧಿಸಲೂ ಕರೆಯಲ್ಪಟ್ಟಿದ್ದೇವೆ. ನಾವು ಕ್ರೈಸ್ತ ಜೀವನಗಳಲ್ಲಿ ದೇವರೊಂದಿಗಿನ ಅನ್ಯೋನ್ಯತೆಯು ಫಲಭರಿತ ಜೀವಿತದಿಂದ ಹುಟ್ಟಿದ್ದಾಗಿದೆ.

## ಆರಾಧನೆ

> ಕೀರ್ತನೆಗಳು 95:6,7
> **ಬನ್ನಿರಿ, ನಮ್ಮ ನಿರ್ಮಾಣಿಕನಾದ ಯೆಹೋದನಿಗೆ ಸಾಷ್ಟಾಂಗವೆರಗಿ ಆರಾಧಿಸೋಣ. ಆತನು ನಮ್ಮ ದೇವರು; ನಾವೋ ಆತನು ಪಾಲಿಸುವ ಪ್ರಜೆಯೂ ಆತನ ಕೈ ಕೆಳಗಿರುವ ಹಿಂಡೂ ಆಗಿದ್ದೇವೆ.**
>
> ಪ್ರಕಟನೆ 4:10,11
> **ಆ ಇಪ್ಪತ್ತನಾಲ್ಕು ಮಂದಿ ಹಿರಿಯರು ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು ಎಂದು ಹೇಳುತ್ತಾ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನನ್ನು ಆರಾಧಿಸುತ್ತಾರೆ.**

ಆರಾಧನೆ (ನಿಘಂಟು ನಿರೂಪಣೆ); ತೀವ್ರ ಪ್ರೀತಿ ಅಥವಾ ಪೂಜ್ಯತೆ ಭಕ್ತಿಯ ಸೇವೆ, ಗೌರವ, ಭಯಭಕ್ತಿಯ ಭಾವ, ನೆಲದವರೆಗೆ ಬಾಗುವುದು

ಆರಾಧನೆಯು ಭಯ ಭಕ್ತಿಯ ಅಭಿವ್ಯಕ್ತತೆ, ದೇವರ ಶ್ರೇಷ್ಠತೆಯನ್ನು ನೆನಸಿಕೊಂಡು ಭಕ್ತಿಯ ಪೂಜೆ, ಮೊಣಕಾಲೂರಬಹುದು. ಭಾಗಬಹುದು, ಇನ್ನಾವುದಾದರೂ ಪರಿಯನ್ನು ಉಪಯೋಗಿಸಬಹುದು.

ನಿಜ ಆರಾಧನೆಗೆ ನಿರೂಪಣೆಯಿಲ್ಲ. ಅದು ಅತನ ಪ್ರೀತಿ ಪಾತ್ರರಾದವರು ಆತನೊಂದಿಗೆ ಅನ್ಯೋನ್ಯತೆಯಲ್ಲಿರುವುದು. ನಿಜ ಆರಾಧನೆಯು ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ನಮ್ಮ ಹೃದಯಗಳನ್ನೂ ಜೀವನಗಳನ್ನೂ ಕರ್ತನ ಮುಂದೆ ತಗ್ಗಿಸಿಕೊಂಡು ಆತ್ಮನ ಪರಾತ್ಪರತೆಯನ್ನು ಒಪ್ಪಿಕೊಳ್ಳುವುದು.

> ಯೋಹಾನ 4:23,24
> **ಅದಿರಲಿ; ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮಿಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ.**

ಆತ್ಮಿಯ ರೀತಿಯಲ್ಲಿ – ನಮ್ಮ ಹೃದಯದಿಂದ, ನಮ್ಮ ಆಂತರ್ಯದಿಂದ

ಸತ್ಯಕ್ಕೆ ತಕ್ಕ ಹಾಗೆ – ಯಥಾರ್ಥವಾಗಿ

## ನಾವು ಆರಾಧಿಸುವಾಗ ಏನು ಸಂಭವಿಸುತ್ತದೆ

- ಆರಾಧನೆಯು ಆತ್ಮೀಯತೆಯನ್ನುಂಟು ಮಾಡುತ್ತದೆ – ಈ ಆತ್ಮೀಯತೆಯ ಸ್ಥಳದಲ್ಲೇ ನಾನು ನೂತನ ಗೊಳ್ಳುತ್ತೇನೆ. ಚೈತನ್ಯ ಗೊಳ್ಳುತ್ತೇನೆ, ಫಲಕೊಡುವವನಾಗುತ್ತೇನೆ.
- ಆರಾಧನೆಯು ಪರಿವರ್ತನೆಯನ್ನುಂಟು ಮಾಡುತ್ತದೆ – ನಾವು ಆರಾಧಿಸುವಂಥವರ 'ಸಾರೂಪ್ಯ' ಹೊಂದುತ್ತೇವೆ.

## ಸಭೆಯ ಆರಾಧನೆ

ನಾವಾಗಿಯೇ ನಮ್ಮಿಷ್ಟಕ್ಕೆಯೇ ದೇವರನ್ನು ನಿಜವಾಗಿಯೂ ಸ್ತುತಿಸಿ ಆರಾಧಿಸಲು ಕಲಿಯ ಬೇಕಾದರೂ, ದೇವರ ವಾಕ್ಯವು ಜನರು ಸಭೆಯಾಗಿ ಕೂಡಿ ಬಂದು ದೇವರನ್ನು ಸ್ತುತಿಸಿ ಆರಾಧಿಸಬೇಕೆಂದು ಒತ್ತಿ ಹೇಳುತ್ತದೆ. ಅದು ದೇವರೊಂದಿಗಿನ ನಮ್ಮ ನಡೆಯಲ್ಲೂ ನಮ್ಮ ಜೀವನ ಶೈಲಿಯಲ್ಲೂ ಒಂದು ಅತಿ ಮುಖ್ಯ ಭಾಗ.

ಸಭೆಯಾಗಿ ನಾವು ದೇವರನ್ನು ಅರಾಧಿಸುವುದಕ್ಕೆ ಒಂದು ಲಂಬ ಅಳತೆಯಿದೆ.

## ಲಂಬ ರೂಪ

ನಾವು ದೇವರಿಗೆ ಸೇವೆ ಮಾಡುವವರಾಗಬೇಕು.

- ದೇವರನ್ನು ಸ್ತುತಿಸಿ ಮಹಿಮೆ ಪಡಿಸುವುದು ಆರಾಧನೆಯಲ್ಲಿ ಪ್ರಮುಖವಾದದ್ದು, ನಮಗೆ ಏನನ್ನಾದರೂ ಸಂಪಾದಿಸಿಕೊಳ್ಳುವುದಲ್ಲ. ಆರಾಧನೆಯು ನನಗೇನನ್ನಾದರೂ ಸಂಪಾದಿಸಿಕೊಟ್ಟಿತು ಎಂಬದಲ್ಲ, ಅದು ಕರ್ತನನ್ನು ಮಹಿಮೆ ಪಡಿಸಿತೊ ಎಂಬದಾಗಿದೆ. ಒಂದು ಆಶೀರ್ವಾದವನ್ನು ಕರ್ತನಿಂದ ಹೊಂದುವ ಉದ್ದೇಶದಿಂದ ನಾವು ಆರಾಧಿಸುವುದಲ್ಲ ಆತನಿಗೆ ಮಹಿಮೆ ಉಂಟಾಗುವಂತೆ ಆರಾಧಿಸಬೇಕು. ಆತನು ನಮ್ಮನ್ನು ಆಶೀರ್ವದಿಸಲಿ ಆಶೀರ್ವದಿಸದಿರಲಿ.

ನಾವು ಆತನಿಗೆ ಮಹಿಮೆಯುಂಟು ಮಾಡಬೇಕು.

- ದೇವರ ಪ್ರಸನ್ನತೆಯನ್ನು ಅನುಭವಿಸಲು ನಾವು ಆರಾಧಿಸುತ್ತೇವೆ ಸಾಮಾಜಿಕ ಸಂಘದ ಒಂದು ಕೂಟಕ್ಕೂ ಸಭೆಯ ಆರಾಧನೆಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ದೇವರ ಪ್ರಸನ್ನತೆ

  ಕೀರ್ತನೆಗಳು 22:3
  **ಇಸ್ರಾಯೇಲ್ಯರ ಸ್ತೋತ್ರ ಸಿಂಹಾಸನದಲ್ಲಿರುವಾತನೇ, ನೀನು ಪವಿತ್ರ ಸ್ವರೂಪನು.**

ಪವಿತ್ರಾತ್ಮನ ವರದ ಅಭಿವ್ಯಕ್ತತೆಗೆ ಒಂದು ವಾತಾವರಣವನ್ನು ಒದಗಿಸಲು

- ನಾವು ದೇವರ ವಾಕ್ಯದ ಪ್ರವಾದನೆಯ ವಾಕ್ಯ ಸ್ವೀಕರಿಸಲು ಸಿದ್ಧನಾಗುವ ವರೆಗೆ ಆತನು ಕಾಯುತ್ತಾನೆ.

## ಸಮಾನಾಂತರ ಕ್ಷೇತ್ರ

ಒಂದು ದೇಹದಲ್ಲಿರುವ ಅನ್ಯೋನ್ಯತೆಯನ್ನು ವೃದ್ಧಿಸಲು

ನಾವು ವಿವಿಧ ಸಂಸ್ಕೃತಿ, ಹಿನ್ನಲೆ, ಅಭಿರುಚಿ, ಭಾಷೆಗಳವರಾದರೂ ಆರಾಧನೆಗೆ ಸೇರಿಬಂದಾಗ ನಮ್ಮಲ್ಲಿ ಒಂದು ವಿಧದ ಅನ್ಯೋನ್ಯತೆ, ಒಗ್ಗಟ್ಟು ಇದೆ.

ಕೀರ್ತನೆಗಳು 133
**ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು. ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಯ ಕೊರಳ ಪಟ್ಟಿಯವರೆಗೂ ಹರಿದು ಬರುವ ಶ್ರೇಷ್ಠ ತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.**

ಕೀರ್ತನೆಗಳು 86:11
**ಯೆಹೋವನೇ, ನಿನ್ನ ಮಾರ್ಗವನ್ನು ನನಗೆ ಬೋಧಿಸು; ನಿನ್ನ ಸತ್ಯತೆಯನ್ನು ನನ್ನ ದೃಷ್ಟಿಯಲ್ಲೇ ಇಟ್ಟುಕೊಂಡು ನಡೆಯುವೆನು. ನಾನು ನಿನ್ನ ನಾಮದಲ್ಲಿ ಭಯಭಕ್ತಿಯುಂದಿರುವಂತೆ ಏಕ ಮನಸ್ಸನ್ನು ಅನುಗ್ರಹಿಸು.**

- ಎಲ್ಲಾ ವಿಶ್ವಾಸಿಗಳಿಗೂ ಒಂದು ಸಾಮಾನ್ಯ ವಿಷಯವಿದೆ: ಅವರು ಕರ್ತನಾದ ಯೇಸು ಕ್ರಿಸ್ತನನ್ನು ಪ್ರೀತಿಸಿ ಪರಸ್ಪರ ನಂಬಿಕೆಯನ್ನು ಹಾಡಿನಲ್ಲಿ ಅಭಿವ್ಯಕ್ತಗೊಳಿಸುತ್ತಾರೆ.
- ವಿಶ್ವಾಸಿಗಳೊಳಗೆ ಸಹೋದರ ಪ್ರೀತಿಯನ್ನು ವೃದ್ಧಿಸಬಹುದು.

ಒಬ್ಬರಿಗೊಬ್ಬರು ಸೇವೆ ಮಾಡಲು

ಬೋಧಿಸಲು ಮತ್ತು ಆತ್ಮಿಕ ಸತ್ಯವನ್ನು ಬಲಪಡಿಸಲು

ಎಫೆಸದವರಿಗೆ 5:19
**ಆದರೆ ಪರಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ**

ಕೊಲೊಸ್ಸೆಯವರಿಗೆ 3:16
**ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ, ಬುದ್ಧಿ ಹೇಳಿಕೊಳ್ಳಿರಿ. ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ.**

- ಸಂಗೀತಗಳೂ ಹಾಡುಗಳೂ ಹೆಚ್ಚಾಗಿ ಪರಿಶುದ್ಧ ಗ್ರಂಥದ ವಚನಗಳು ಹಾಡಿನ ರೂಪದಲ್ಲಿವೆ.

ವಿಶ್ವಾಸಿಗಳಿಗೆ ತಮ್ಮ ವಿಶ್ವಾಸವನ್ನು ಇತರರ ಮುಂದೆ ಹೇಳಲು ಮತ್ತು ಅವಿಶ್ವಾಸಿಗಳ ಮುಂದೆ ದೇವರ ಮಹಿಮೆಯನ್ನು ಪ್ರಚಾರಪಡಿಸಲು.

ಕೀರ್ತನೆಗಳು 108:3
**ಯೆಹೋವನೇ, ಜನಾಂಗಗಳಲ್ಲಿ ನಿನ್ನನ್ನು ಸ್ತುತಿಸುವೆನು; ಸರ್ವದೇಶದವರೊಳಗೆ ನಿನ್ನನ್ನು ಕೊಂಡಾಡುವೆನು.**

ಹೋಶೇಯ 6:11
**ಯೆಹೂದವೇ, ನಿನಗೂ [ಅಧರ್ಮ ಫಲದ] ಸುಗ್ಗಿಯು ನೇಮಕವಾಗಿದೆ.**

ದೇವರ ವಾಕ್ಯವನ್ನು ಪ್ರಸಂಗಿಸಲು ವಾತಾವರಣ ಸೃಷ್ಟಿಸಲು

ಹೋಶೇಯ 10:11
**ಎಫ್ರಾಯಿಮು ಹತೋಟಿಗೆ ಬಂದು ತೆನೆ ಹುಲ್ಲನ್ನು ತುಳಿಯುತ್ತಿರುವದರಲ್ಲಿಯೇ ಇಷ್ಟಪಡುವ ಕಡಸಾಗಿದೆ; [ಈಗಲಾದರೋ] ಅದರ ಅಂದವಾದ ಹೆಗಲಿನ ಮೇಲೆ ಕೈ ಹಾಕಿದ್ದೇನೆ, ಎಫ್ರಾಯಿಮನ್ನು ಹೂಡುವೆನು, ಯೆಹೂದವು ಉಳಬೇಕು, ಯಾಕೋಬ ಕುಂಟೆ ಎಳೆಯಬೇಕು.**

ಕೀರ್ತನೆಗಳು 65:9,10
**ನೀನು ನಮ್ಮ ದೇಶವನ್ನು ಕಟಾಕ್ಷಿಸಿ ಅದರ ಮೇಲೆ ಮಳೆ ಸುರಿಸಿ ಚೆನ್ನಾಗಿ ಹದಗೊಳಿಸುತ್ತೀ; ದೇವರೇ ನಿನ್ನ ಕಾಲುವೆಗಳಲ್ಲಿ ನೀರಿಗೆ ಕೊರತೆ ಇಲ್ಲ. ಹೀಗೆ ಭೂಮಿಯನ್ನು ಸಿದ್ಧಮಾಡಿ ಮನುಷ್ಯರಿಗೆ ಧಾನ್ಯವನ್ನು ಒದಗಿಸುತ್ತೀ. ನೇಗಿಲ ಗೆರೆಗಳನ್ನು ತ್ಯಾವಿಸಿ ಮಳೆಯಿಂದ ಅದರ ಹಂಟೆಗಳನ್ನು ಕರಗಿಸಿ ಸಮಮಾಡುತ್ತೀ.**




## ಆಂತರ್ಯದ ಕ್ಷೇತ್ರ

ದೇವ ಜನರನ್ನು ಅವರ ಹೃದಯದ ಅಡಚಣೆಯಿಲ್ಲದ ಅಭಿವ್ಯಕ್ತತೆಗೆ ಬಿಡುಗಡೆಗೊಳಿಸುವುದು.

ನಮ್ಮ ಹೃದಯದ ಭಾವನೆಗಳನ್ನು ಮಾತಿನ ಮೂಲಕ ಅಭಿವ್ಯಕ್ತಗೊಳಿಸಲು

ಪ್ರಾರ್ಥನಾ ಜೀವನಕ್ಕೆ ಇನ್ನೂ ಹೆಚ್ಚಿನ ಬದ್ಧತೆಯನ್ನು ಪ್ರೇರಿಸಲು.

## ಸ್ತೋತ್ರ ಮತ್ತು ಆರಾಧನೆಯಲ್ಲಿ ಅಡ್ಡಿಯುಂಟು ಮಾಡುವ ಮನೋಭಾವನೆಗಳು

### ಹೆಮ್ಮೆ

ಹೆಮ್ಮೆಯು ಆರಾಧನೆಗೆ ಬಹುದೊಡ್ಡ ಅಡ್ಡಿ. ಕೆಲವೊಮ್ಮೆ ನಾವು ಕರ್ತನ ಅಭಿಪ್ರಾಯಕ್ಕಿಂತ ಮನುಷ್ಯನ ಅಭಿಪ್ರಾಯಕ್ಕೇ ಗಮನಕೊಡುತ್ತೇವೆ. ಬೇರೆಯವರು ನಿಮ್ಮನ್ನು ನೋಡುತ್ತಿರುವುದರಿಂದ ಏನೂ ಮಾಡದಿರಿ ಮತ್ತು ಬೇರೆಯವರು ನೋಡುತ್ತಿರುವುದರಿಂದ ಯಾವುದಕ್ಕೂ ಹಿಂಜರಿಯದಿರಿ.

### ಅಗೌರವ

ನಾವು ದೇವರ ಸಹಜ ಗುಣಸ್ವಭಾವಕ್ಕೆ ಗೌರವ ಕೊಡದೆ ನಮ್ಮ ಕಡೆಯಿಂದ ಯಾವೊಂದೂ ತ್ಯಾಗವಿಲ್ಲದೆ, ಪ್ರಾರ್ಥನೆಯಿಲ್ಲದೆ ಅಥವಾ ತಗ್ಗಿಸಿ ಕೊಳ್ಳುವಿಕೆಯಿಲ್ಲದೆ ಆತನಿಂದ ನಮ್ಮ ಮೇಲೆ ಆಶೀರ್ವಾದಗಳು ಸುರಿಸಲ್ಪಡಬೇಕು ಎಂದು ಅಪೇಕ್ಷಿಸುವುದು.

### 'ವೀಕ್ಷಕರಾಗಿರುವುದು'

ಕೆಲವೊಮ್ಮೆ ಸಭೆಯು ಆರಾಧನೆಯಲ್ಲಿ ಪಾತ್ರವಹಿಸದೆ ಆರಾಧನೆಯ ಗುಂಪನ್ನು ವೀಕ್ಷಿಸುತ್ತಿರುವುದು. ನಾವೆಲ್ಲರೂ ಆರಾಧಿಸಬೇಕೆಂಬ ಅಪ್ಪಣೆಯನ್ನು ಹೊಂದಿದ್ದೇವೆ.

ರೋಮಾಪುರದವರಿಗೆ 12:1
**ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ-ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು.**

## ಸ್ತೋತ್ರ ಮತ್ತು ಆರಾಧನೆಯು ಪ್ರಗತಿಯಲ್ಲಿದೆ....



1 ಕೊರಿಂಥದವರಿಗೆ 3:16
**ನೀವು ದೇವರ ಆಲಯವಾಗಿದ್ದಿರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?**

1 ಪೇತ್ರನು 2:5,6
**ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ. ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪರಿಶುದ್ಧ ಯಾಜಕ ವರ್ಗದವರಾಗಿದ್ದೀರಿ. ಇಗೋ, ಚೀಯೋನಿನಲ್ಲಿ ಮೂಲೆಗಲ್ಲನ್ನು ಇಡುತ್ತೇನೆ; ಅದು ಆಯಲ್ಪಟ್ಟದ್ದು, ಮಾನ್ಯವಾದದ್ದು, ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವದೇ ಇಲ್ಲ ಎಂದು ಶಾಸ್ತ್ರದಲ್ಲಿ ಬರೆದಿದೆ.**

ಪ್ರಕಟನೆ 1:6
**ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್**

## 'ಭಾವನಾ ಸಮುಚ್ಚಯ'

ಹಾಡುಗಳ ಮಾತುಗಳಲ್ಲಿರುವ ಸಂದೇಶಕ್ಕಿಂತಲೂ ಆರಾಧಿಸುವವರಿಗೆ ಸಂಗೀತ ಮತ್ತು ಮನೋಭಾವಗಳು ಹೆಚ್ಚಾಗಿರುವುದು. ಇಲ್ಲಿ ದೇವರೊಂದಿಗೆ ಅನ್ಯೋನ್ಯತೆ ಹೊಂದುವುದಕ್ಕಿಂತಲೂ ಸಂಗೀತದ ಆಸ್ವಾದನೆಗೆ ಹೆಚ್ಚು ಗಮನ ಕೊಡುವುದರ ಮೂಲಕ ಆರಾಧನೆ ಉದ್ದೇಶವು ವಿಫಲವಾಗುವುದು.

## 'ತುಟಿಗಳ ಮೂಲಕ' ಮಾತ್ರ ಆರಾಧನೆ

ಇಲ್ಲಿ ಹಾಡು ಮಾತ್ರ ಮುಖ್ಯವಾಗಿದ್ದು ಹೃದಯಪೂರ್ವಕ ದೇವರನ್ನು ಆರಾಧಿಸುವುದು ಇಲ್ಲ.

ಅರ್ಥಪೂರ್ವಕವಾಗಿ ಹಾಡದೆ ಇರುವುದರ ಬದಲಾಗಿ ನಾವು ಬಾಯಿಮುಚ್ಚಿಕೊಂಡಿರುವುದನ್ನು ಇಲ್ಲಿ ದೇವರು ಮೆಚ್ಚಬಹುದು.

ಆಮೋಸನು 5:21–23
**ನಿಮ್ಮ ಜಾತ್ರೆಗಳನ್ನು ಹಗೆ ಮಾಡುತ್ತೇನೆ, ತುಚ್ಛೀಕರಿಸುತ್ತೇನೆ; ನಿಮ್ಮ ಉತ್ಸವಗಳ ವಾಸನೆಯೇ ನನಗೆ ಬೇಡ. ನೀವು ನನಗೆ ಸರ್ವಾಂಗ ಹೋಮಗಳನ್ನೂ ಧಾನ್ಯನೈವೇದ್ಯಗಳನ್ನೂ ಸಮರ್ಪಿಸಿದರೂ ಸ್ವೀಕರಿಸೆನು; ಸಮಾಧಾನದ ಯಜ್ಞವಾಗಿ ನೀವು ಒಪ್ಪಿಸುವ ಕೊಬ್ಬಿದ ಪಶುಗಳನ್ನು ನೋಡೆನು. ನಿಮ್ಮ ಗೀತ ಧ್ವನಿಯನ್ನು ನನ್ನಿಂದ ತೊಲಗಿಸಿರಿ. ನಿಮ್ಮ ವೀಣಾನಾದಕ್ಕೆ ಕಿವಿಗೊಡೆನು.**

## ನಾನು ಹಿಂದೆ ಎಂದೂ ಈ ರೀತಿಯಾಗಿ ಮಾಡಲಿಲ್ಲ.

ಕೆಲವೊಮ್ಮೆ ಬದಲಾವಣೆಯ ಭಯವಿದೆ. ನಮ್ಮ ದೇವರು ಸೃಷ್ಟಿಸುವ ದೇವರಾಗಿದ್ದು ವಿವಿಧ ರೀತಿಗಳಲ್ಲಿ ಕೆಲಸ ನಡಿಸುತ್ತಾನೆ.

## ಮುಖ್ಯ ಕಂಠಪಾಠ ವಚನಗಳು

ಕೀರ್ತನೆಗಳು 100:4
**ಕೃತಜ್ಞತಾ ಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ; ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ.**

ಎಫೆಸದವರಿಗೆ 5:19
**ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ ... ನಡೆದುಕೊಳ್ಳಿರಿ.**

ಯೋಹಾನ 4:23–24
**ಆದಿರಲಿ, ಸತ್ಯಭಾವದಿಂದ ಆರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ. ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು.**

**ಯೋಗ್ಯನಾಗಿರುವ ದೇವರಿಗೆ ಎಲ್ಲಾ ಸ್ತೋತ್ರ ಆರಾಧನೆಗಳನ್ನು ಸಲ್ಲಿಸೋಣ.**

**ಅದನ್ನು ನಮ್ಮ ಪೂರ್ಣ ಹೃದಯದಿಂದ ಮಾಡೋಣ– ರಹಸ್ಯದಲ್ಲಿಯೂ ಸಭೆಯಾಗಿ ಸೇರಿ ಬಂದಾಗಲೂ**

**'ಸ್ತೋತ್ರವನ್ನೂ' 'ಆರಾಧನೆಯನ್ನೂ' ಒಂದು ಜೀವನ ಶೈಲಿಯಾಗಿ ಮಾಡಿಕೊಳ್ಳಿರಿ.**

# ಅನ್ವಯ

1. ನೀವು ದೇವರಿಗೆ ಹೇಗೆ ಸ್ತೋತ್ರಪಡಿಸಲು ಇಷ್ಟ ಪಡುತ್ತೀರಿ? ಈ ಪಾಠವನ್ನು ಕಲಿತ ಬಳಿಕ ಸ್ತುತಿಸಲು ಹೆಚ್ಚು ವಿಧಾನಗಳನ್ನು ಉಪಯೋಗಿಸಲು ಇಷ್ಟ ಪಡುತ್ತೀರೋ?

2. ದೇವರಿಗೆ ಸ್ತೋತ್ರ ಸಲ್ಲಿಸುವುದರ ಪರಿಣಾಮಗಳೇನು?

3. ಸ್ತೋತ್ರ ಮತ್ತು ಆರಾಧನೆಗಳ ಕಡೆಗೆ ನಿಮ್ಮ ಮನೋಭಾವನೆಯನ್ನು ಪರೀಕ್ಷಿಸಿಕೊಳ್ಳಿರಿ. ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ದೇವರನ್ನು ಸ್ತುತಿಸಿ ಆರಾಧಿಸಲು ನಿಮ್ಮನ್ನು ತಡೆಯುವ ಅಡ್ಡಿಗಳಾವುವು?

# 7

# ದೇವರ ವಾಕ್ಯ

(ದೇವರ ವಾಕ್ಯವು ನಂಬಿಕೆಯ ತಳಹದಿ. ಅದು ನಮ್ಮ ಜೀವನದ ಮೊಟ್ಟಮೊದಲ ಮತ್ತು ಅಂತಿಮ ಅಧಿಕಾರ. ಈ ಪಾಠವು ದೇವರ ವಾಕ್ಯದಲ್ಲಿ ಅಡಕವಾಗಿರುವ ಶಕ್ತಿಯನ್ನು ನಮಗೆ ಕಲಿಸಲು ಮತ್ತು ಅದು ಸದಾ ನಮ್ಮ ಹೃದಯಗಳಲ್ಲಿಯೂ ನಮ್ಮ ಬಾಯಲ್ಲಿಯೂ ನೆಲೆಗೊಂಡಿರುವಂತೆ ನಮ್ಮನ್ನು ಪ್ರೇರೇಪಿಸಲು ರೂಪಿಸಲ್ಪಟ್ಟಿದೆ. ನಾವು ಇದರಲ್ಲಿ ದೇವರ ವಾಕ್ಯವನ್ನು ಧ್ಯಾನ ಮಾಡುವ 3 ಹೆಜ್ಜೆಗಳನ್ನೂ ಕಲಿತು ವಿಶ್ವಾಸಿಗಳಾದ ನಮ್ಮೆಲ್ಲರ ಜೀವನಗಳಲ್ಲಿ ನಾವು ಫಲ ಕೊಡುವಂತೆ ಇದನ್ನು ಅಭ್ಯಾಸ ಮಾಡಬೇಕೆಂದು ಕಲಿಯುತ್ತೇವೆ?

## ದೇವರ ವಾಕ್ಯವು ನಮ್ಮ ನಂಬಿಕೆಯ ತಳಹದಿ

ವಿಶ್ವಾಸಿಗಳಾದ ನಮಗೆ ದೇವರ ವಾಕ್ಯವು ಬಹು ಮುಖ್ಯ. ಇದು ನಮ್ಮ ನಂಬಿಕೆಯ ತಳಹದಿ, ನಾವು ನಂಬುವುದರ ತಳಪಾಯ, ನಾವು ಯಾತಕ್ಕಾಗಿ ಜೀವಿಸುತ್ತೇವೆ ಮತ್ತು ನಮ್ಮ ಕ್ರೈಸ್ತ ಜೀವನಗಳಲ್ಲಿ ಏನನ್ನು ಅಭ್ಯಾಸ ಮಾಡುತ್ತೇವೆ ಇವೆಲ್ಲವುಗಳಿಗಾಗಿ ಇದು ಅತ್ಯಗತ್ಯ ಹೀಗಾಗಿ, ನಾವು ದೇವರ ವಾಕ್ಯವನ್ನು ಬಿಗಿಯಾಗಿ ಹಿಡಿದು ಕೊಳ್ಳಬೇಕು ಬೈಬಲ್‌ನಲ್ಲಿರುವ 66 ಗ್ರಂಥಗಳು ಪರಿಶುದ್ಧ ಗ್ರಂಥದ ಕಾನೂನು ಎಂದು ಕರೆಯಲ್ಪಟ್ಟು ಇದು ದೈವಪ್ರೇರಿತ ವಾಕ್ಯವಾಗಿದೆ ಹೀಗೆ ನಾವು ಬೈಬಲನ್ನು ನೋಡುವಾಗ ಅದು ಇನ್ನೊಂದು ಧಾರ್ಮಿಕ ಗ್ರಂಥ ಎಂದು ಮಾತ್ರ ನೋಡದೆ, ಅದು ದೈವಪ್ರೇರಿತ ವಾಕ್ಯವಾಗಿದೆ ಎಂದು ನೋಡುತ್ತೇವೆ.

## ಪ್ರತಿಯೊಂದು ಶಾಸ್ತ್ರವು 'ದೈವ ಪ್ರೇರಿತವಾಗಿದೆ.'

2 ತಿಮೊಥೆಯನಿಗೆ 3:14, 15, 16

**ಚಿಕ್ಕಂದಿನಿಂದಲೂ ನಿನಗೆ ಪರಿಶುದ್ಧ ಗ್ರಂಥಗಳ ಪರಿಚಯವಾಯಿತಲ್ಲಾ. ಆ ಗ್ರಂಥಗಳು ಕ್ರಿಸ್ತಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆಹೊಂದಿರುವ ಜ್ಞಾನವನ್ನು ಕೊಡುವದಕ್ಕೆ ಶಕ್ತವಾಗಿದೆ. ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದು ಪಾಡಿಗೂ ನೀತಿರಕ್ಷೆಗೂ ಉಪಯುಕ್ತವಾಗಿದೆ.**

ದೇವರ ವಾಕ್ಯವು ದೈವ ಪ್ರೇರಿತ ಮತ್ತು ದೇವರು ಉಸಿರಿಸಿದ್ದು ಎಂದು ಇದರ ಅರ್ಥ. ನಾವು ಬೈಬಲ್‌ನ್ನು ಓದುವಾಗ, ಪ್ರತಿಯೊಂದು ಕಥೆಯೂ ಅದರ ಹಿಂದೆ ದೈವ ಉದ್ದೇಶವನ್ನು ಹೊಂದಿದೆ ಎಂದು ತಿಳಿಯಬೇಕು. ಪರಿಶುದ್ಧ ಗ್ರಂಥದಲ್ಲಿ ಲಿಖಿತವಾದದ್ದೆಲ್ಲವೂ ದೈವ ಉದ್ದೇಶಿತವಾಗದೆ – ಅದಕ್ಕೆ ಒಂದು ಕಾರಣವಿದೆ. ಜನರ ವಿಫಲತೆಗಳೂ ಅಲ್ಲಿ ಲಿಖಿತವಾಗಿದೆ ಯಾಕೆಂದರೆ ನಾವು ಇವುಗಳಿಂದ ಕಲಿಯಬಹುದಾಗಿದೆ.

2 ಪೇತ್ರನು 1:20,21

**ಶಾಸ್ತ್ರದಲ್ಲಿರುವ ಯಾವ ಪ್ರವಾದನಾವಾಕ್ಯವೂ ಕೇವಲ ಮಾನುಷ ಬುದ್ಧಿಯಿಂದ ವಿವರಿಸತಕ್ಕಂಥದಲ್ಲವೆಂಬುದನ್ನು ಮುಖ್ಯವಾಗಿ ತಿಳಿದುಕೊಳ್ಳಿರಿ. ಯಾಕೆಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯನ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತನಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು.**

ಪರಿಶುದ್ಧಗ್ರಂಥವೆಲ್ಲವೂ ನಮಗೆ ದೇವರ ಮನುಷ್ಯರಿಂದ ಪವಿತ್ರಾತ್ಮ ಪ್ರೇರಿತರಾಗಿ ಕೊಡಲ್ಪಟ್ಟವು. ಹೀಗೆ ನಾವು ಬೈಬಲ್‌ನ್ನು ಓದುವಾಗ ಅದು ದೈವ ಪ್ರೇರಿತವಾದ ವಾಕ್ಯವೆಂದು ತಿಳಿದು ಅದರಿಂದ ಕಲಿತು, ಸ್ವೀಕರಿಸಲು ಓದುತ್ತೇವೆ. ಉದಾಹರಣೆ, ಅರಣ್ಯಕಾಂಡವು ಪ್ರತಿಯೊಂದು ಗೋತ್ರದಲ್ಲಿ ಎಷ್ಟು ಜನರಿದ್ದರು, ಈ ಗೋತ್ರಗಳು ಗುಡಾರದ ಯಾವ ಭಾಗದಲ್ಲಿ ತಮ್ಮ ಡೇರೆಗಳನ್ನು ಹಾಕಿಕೊಳ್ಳಬೇಕು ಇತ್ಯಾದಿ ವಿಷಯಗಳನ್ನು ಓದುತ್ತೇವೆ, ಆದರೆ ಇದು ದೇವರು ಒಂದು ಕ್ರಮದ ವ್ಯವಸ್ಥೆಯ ದೇವರು, ಪ್ರತಿ ವಿವರದ ಕುರಿತು ಗಮನ ಕೊಡುವಾತನು ಮತ್ತು ವಾಗ್ದಾನದ ದೇಶಕ್ಕೆ ಸೇರಲು ಜನರು ಹೇಗೆ ಸಂಘಟಿತರಾಗಿರಬೇಕೆಂದು ನಮಗೆ ಬೋಧಿಸುತ್ತದೆ. ಹಾಗೆ ನಾವು ಆತನೊಂದಿಗೆ ಪ್ರಯಾಣಮಾಡುವಾಗ ಒಂದು ಕ್ರಮ, ವ್ಯವಸ್ಥೆಯನ್ನು ಅನುಸರಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ.

## ಪರಿಶುದ್ಧ ಗ್ರಂಥಗಳು – ದೇವರನ್ನು ಕಾಣಲು ನಮ್ಮ ಕಿಟಕಿಗಳು

ದೇವರ ಕಡೆಗೆ ದೃಷ್ಟಿ ಮಾಡಿ ತೋರಿಸದ ಇತರ ಕಿಟಕಿಗಳ ಮೂಲಕ ನಾವು ಇಣಿಕಿ ನೋಡುವಂತೆ ಜನರು ನಮ್ಮನ್ನು ಕರೆಯಬಹುದು.

**ನಾವು ದೇವರು ಯಾರಾಗಿದ್ದಾನೆ ಎಂದು ಕಂಡುಕೊಳ್ಳಲು ಅಪೇಕ್ಷಿಸಿದಾಗ, ನಾವು ದೇವರ ವಾಕ್ಯದ ಕಿಟಕಿಯ ಮೂಲಕ ಆತನನ್ನು ನೋಡುತ್ತೇವೆ.**

ಕೀರ್ತನೆಗಳು 119 ; 18

**ನನ್ನ ಕಣ್ಣು ತೆರೆ, ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು**

ಬೈಬಲ್ ಓದುವುದು ಒಂದು ಸಾಗರದಲ್ಲಿ ತೇಲುವಂತೆ ಅನೇಕರಿಗೆ ಅದು ಬೇಸರಿಕೆಯನ್ನು ಉಂಟುಮಾಡುತ್ತದೆ. ಆದರೆ ಸಾಗರದ ಮೇಲಡೆಯಿಂದ ಅದರ ಆಳದಲ್ಲಿರುವ ಆಶ್ಚರ್ಯಕರವಾದ ಸೌಂದರ್ಯವನ್ನು ನೋಡಬೇಕಾದರೆ ನಾವು ಅದರ ಆಳಕ್ಕೆ ಮುಳುಗಬೇಕು.

ಅದರಂತೆಯೇ, ವಾಕ್ಯದ ಆಳಕ್ಕೆ ಮುಳುಗಿಹೋಗಿರಿ, ಪ್ರಾರ್ಥಿಸಿ ಆಳವಾದ 'ಸಮುದ್ರದೊಳಗೆ ಮುಳುಗಿ' ಹೋಗಿ ಅದರಲ್ಲಿ ಹುದುಗಿರುವ ಎಲ್ಲಾ ಸಂಪತ್ಸಮೃದ್ಧಿಯನ್ನು ನೋಡಲಿಕ್ಕಾಗುವಂತೆ ನಿಮ್ಮ ಕಣ್ಣುಗಳನ್ನು ತೆರೆಯಲು ದೇವರಿಗೆ ಪ್ರಾರ್ಥಿಸಿರಿ ದೇವರ ವಾಕ್ಯವು ನಮಗೆ ಹೆಚ್ಚೆಚ್ಚಾಗಿ ಪ್ರಕಟಿಸುತ್ತಾ ಹೋಗುವುದು. ದೇವರು ವಾಕ್ಯಕ್ಕಿಂತಲೂ ದೊಡ್ಡವನಾಗಿದ್ದಾನೆ ಎಂಬುದು ನಿಜ, ಹೀಗಾಗಿ ದೇವರ ವಾಕ್ಯವು ದೇವರನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ದೇವರು ಮಿತಿ ಇಲ್ಲದಾತನಾಗಿದ್ದಾನೆ ಎಂಬುದು ಕೂಡ ನಿಜ ಆದರೆ ಆತನ ವಾಕ್ಯದಲ್ಲಿ 66 ಪುಸ್ತಕಗಳು ಮಾತ್ರ ಇದೆ. ಆಕಾಶದಲ್ಲಿ ಎಷ್ಟೋ ಆಶ್ಚರ್ಯಕರವಾದುವುಗಳಿವೆ, ಆದರೆ ಅವೆಲ್ಲವೂ ಬೈಬಲ್‌ನಲ್ಲಿ ಹೇಳಲಾಗಿಲ್ಲ, ನಾವು ಅದರಲ್ಲಿ ದೇವರ ಕುರಿತು ಎಷ್ಟೋ ಆಶ್ಚರ್ಯಕರವಾದವುಗಳನ್ನು ಕಂಡುಕೊಳ್ಳಬಹುದು. ಆದರೆ ಈಗ ಭೂಲೋಕದ ನಮ್ಮ ಪ್ರಯಾಣಕ್ಕೆ ಬೈಬಲ್ ಎಂದು ಕರೆಯಲ್ಪಡುವ ದೇವರ ವಾಕ್ಯವು ಸಾಕು. ಅದು ದೇವರನ್ನು ಕಂಡುಕೊಳ್ಳಲು ನಾವು ನೋಡುವ ಕಿಟಿಕಿಯಾಗಿದೆ.

ಪರಿಶುದ್ಧ ಗ್ರಂಥಗಳನ್ನು ನಮಗೆ ಜೀವಿಸುವ ದೇವರೊಳಕ್ಕೆ ಒಳನೋಟವನ್ನು ಒದಗಿಸುತ್ತದೆ – ಆತನ ಸಹಜಗುಣಸ್ವಭಾವ, ಆತನ ನಡತೆ, ಆತನ ಹೆಸರು ಗುಣಲಕ್ಷಣಗಳು ಮತ್ತು ಆತನ ಹೃದಯಗಳೊಳಕ್ಕೆ ದೇವರು ಯಾರಾಗಿದ್ದಾನೆ, ಆತನು ಏನು  ಮಾಡುತ್ತಾನೆ, ಆತನ ಭಾವನೆಗಳು, ಆತನ ಅಪೇಕ್ಷೆಗಳು ಇವುಗಳ ಒಳನೋಟ ಯಾವ ಸಂಬಂಧವೂ ತಿಳಿವಳಿಕೆಯಿಂದ ಬರುತ್ತದೆ. ಆದುದರಿಂದ ಜೀವಿಸುವ ದೇವರೊಂದಿಗೆ ನಿಕಟವಾದ ಗಾಢ ಸಂಬಂಧ ಹೊಂದಿಕೊಳ್ಳಲು ಪರಿಶುದ್ಧ ಗ್ರಂಥಗಳಲ್ಲಿ ಪ್ರಕಟವಾದವುಗಳ ಮೂಲಕ ನಾವು ತಿಳಿಯಬಹುದು.

## ಪರಿಶುದ್ಧ ಗ್ರಂಥದ ವಾಕ್ಯಗಳು – ನಮ್ಮ ಗುಣಮಟ್ಟ

ಕೀರ್ತನೆಗಳು 119 ; 133

**ನಿನ್ನ ನುಡಿಗನುಸಾರವಾಗಿ ನನ್ನ ಹೆಜ್ಜೆಯನ್ನು ದೃಢ ಪಡಿಸು ಯಾವ ಅನ್ಯಾಯವಾದರೂ ನನ್ನನ್ನು ಆಳದಂತೆ ಮಾಡು.**

ನಾವು ಜೀವಿಸಬಹುದಾದ ಅನೇಕ ಜೀವನ ಮಟ್ಟಗಳಿವೆ – ಲೌಕಿಕವಾದವುಗಳು, ಪುಸ್ತಕದಿಂದ ದೊರೆಯುವ ತತ್ವಜ್ಞಾನ ಅಥವಾ ಹೊಸಯುಗದ ಆಂದೋಲನ ಆದರೆ ವಿಶ್ವಾಸಿಗಳಾದ ನಮಗೆ ದೇವರ ವಾಕ್ಯವು ನಮ್ಮ ಜೀವನ ಮಟ್ಟ ಅದನ್ನಾಧರಿಸಿ ನಮ್ಮ ಜೀವನ ನಡಿಸುತ್ತೇವೆ. ನಮ್ಮ ನಡತೆ ಹೊಂದಿಸಿಕೊಳ್ಳುತ್ತೇವೆ, ಮತ್ತು ಜೀವನ ಯಾತ್ರೆ ಮಾಡುತ್ತೇವೆ.

## ಪರಿಶುದ್ಧ ಗ್ರಂಥದ ವಾಕ್ಯಗಳು – ನಮ್ಮ ಅಧಿಕಾರ

ಕೀರ್ತನೆಗಳು 119;101

**ನಿನ್ನ ವಾಕ್ಯವನ್ನೇ ಅನುಸರಿಸಬೇಕೆಂದು ನನ್ನ ಕಾಲುಗಳನ್ನು ಯಾವ ಕೆಟ್ಟ ದಾರಿಗೂ ಹೋಗದಂತೆ ಕಾದಿದ್ದೇನೆ.**

ದೇವರ ವಾಕ್ಯವು ನಮ್ಮ ಅಂತಿಮ ಅಧಿಕಾರ ಅದು ಸರ್ವಾಧಿಕಾರ. ನಾನು ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದಿರುವಾಗ, ಅದು ನನಗೆ ಬೋಧಿಸುತ್ತದೆ ಮತ್ತು ನಾನು ದೇವರ ವಾಕ್ಯದ ಅಧಿಕಾರಕ್ಕೆ ಒಳಗಾಗುತ್ತೇನೆ. ಒಬ್ಬ ವಿಶ್ವಾಸಿಯಾಗಿ ಅದು ನನ್ನ ಜೀವನದಲ್ಲಿ ಅಂತಿಮ ಅಧಿಕಾರವಾಗಿದೆ.

## ಪರಿಶುದ್ಧ ಗ್ರಂಥದ ವಾಕ್ಯಗಳು – ನಂಬಿಕೆಯನ್ನುಂಟು ಮಾಡುತ್ತದೆ.

ದೇವರ ವಾಕ್ಯವು ನಂಬಿಕೆಗೆ ಆಧಾರವೂ ಆಗಿದೆ – ಅದು ನಮ್ಮ ನಂಬಿಕೆಯ ಮೂಲ ಉಗಮ

ರೋಮಾಪುರದವರಿಗೆ 10:17

**ಆದಕಾರಣ ಸಾರಿದ ವಾಕ್ಯವು ನಂಬಿಕೆಗೆ ಆಧಾರ ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.**

ದೇವರು ಆತನ ವಾಕ್ಯವು ನಮ್ಮಲ್ಲಿ ಕಾರ್ಯನಡಿಸುವಂತೆ ಮಾಡಿದಾಗ, ನಾವು ವಾಕ್ಯವನ್ನು ನಂಬುತ್ತೇವೆ. ಅದು ನಮ್ಮ ನಂಬಿಕೆಗೆ ಆಧಾರವಾಗುತ್ತದೆ. ನಾವು ನಂಬುವುದನ್ನು ನಂಬುತ್ತೇವೆ, ಯಾಕೆಂದರೆ ಅದು ವಾಕ್ಯದಲ್ಲಿದೆ, ಮತ್ತು ಅದು ನೆರವೇರುವುದೆಂದು ಭರವಸೆವುಳ್ಳವರಾಗಿದ್ದೇವೆ. ಯಾಕೆಂದರೆ ಅದು ತನ್ನ ವಾಕ್ಯದಲ್ಲಿ ದೇವರು

**ಕ್ಷಮಿಸು ಸ್ನೇಹಿತನೇ.... ನಮ್ಮ ದೇಹವು ಪವಿತ್ರಾತ್ಮನ ವಾಸಸ್ಥಾನವಾಗಿದೆ ಎಂದು ಬೈಬಲ್ ಹೇಳುತ್ತದೆ.**



ನಮಗೆ ಮಾಡಿದ ವಾಗ್ದಾನವಾಗಿದೆ. ನಾವು ಒಂದು ಪರಿಸ್ಥಿತಿಯನ್ನು ದಾಟಿ ಹೋಗುವಾಗ ಪವಿತ್ರಾತ್ಮನು ಆ ವಾಕ್ಯವನ್ನು ನಮಗಾಗಿ ನೆರವೇರಿಸುತ್ತಾನೆ ಮತ್ತು ದೇವರು ತನ್ನ ವಾಕ್ಯದ ಮೂಲಕ ನಮ್ಮೊಂದಿಗೆ ಮಾತಾಡುತ್ತಿದ್ದಾನೆಂದು ಬಲ್ಲೆವು. ಇದು ನಮ್ಮಲ್ಲಿ ನಂಬಿಕೆಯನ್ನು ಹುಟ್ಟಿಸಿ ಅದರ ಪರಿಣಾಮದ ವಿಷಯದಲ್ಲಿ ನಾವು ಭರವಸೆವುಳ್ಳವರಾಗುತ್ತೇವೆ.

## ನಾವು ಪ್ರಕಟನೆಯಿಂದ ಕಾರ್ಯಕ್ಕೆ ಮುಂದುವರಿಯಬೇಕು.

ಯಾಕೋಬನು 1;22,25

**ವಾಕ್ಯದ ಪ್ರಕಾರ ನೆಡೆಯುವವರಾಗಿರಿ ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ. ಆದರೆ ಬಿಡುಗಡೆಯನ್ನುಂಟು ಮಾಡುವ ಸರ್ವೋತ್ತಮ ಧರ್ಮ ಪ್ರಮಾಣವನ್ನು ಲಕ್ಷ್ಯಕೊಟ್ಟು ನೋಡಿ ಇನ್ನೂ ನೋಡುತ್ತಲೇ ಇರುವವನು ವಾಕ್ಯವನ್ನು ಕೇಳಿ ಮರೆತು ಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯವಾಗುವನು.**

ದೇವರ ವಾಕ್ಯವನ್ನು ಓದುವುದು ಮತ್ತು ಕೇಳುವುದು ಮಾತ್ರವೇ ಸಾಲದು. ನಾವು ದೇವರ ವಾಕ್ಯವನ್ನು ತಿಳಿದು ಅದರ ಪ್ರಕಟನೆಯನ್ನು ತಿಳಿಯುವಲ್ಲಿಂದ ದೇವರ ವಾಕ್ಯವನ್ನು ಮಾಡುವವರಾಗಬೇಕು

## ದೇವರ ವಾಕ್ಯ; ಅದರ ಶುದ್ಧತೆ ಮತ್ತು ಬಲ

## ದೇವರು ಆತನ ಹೆಸರಿಗಿಂತಲೂ ಸಹ ಆತನ ವಾಕ್ಯವನ್ನು ಉನ್ನತಕ್ಕೇರಿಸುತ್ತಾನೆ.

ಕೀರ್ತನೆಗಳು 138;2

**ನಿನ್ನ ಪರಿಶುದ್ಧಾಲಯದ ಕಡೆಗೆ ಅಡ್ಡ ಬೀಳುತ್ತೇನೆ; ನಿನ್ನ ಕೃಪೆ ಸತ್ಯತೆ ಇವುಗಳಿಗೋಸ್ಕರ ನಿನ್ನ ನಾಮವನ್ನು ಕೊಂಡಾಡುತ್ತೇನೆ. ವಾಗ್ದಾನವನ್ನು ವಿಶೇಷ ರೀತಿಯಿಂದ ನೆರವೇರಿಸಿ ನಿನ್ನ ನಾಮ ಮಹತ್ತನ್ನು ಹೆಚ್ಚಿಸಿದ್ದೀ.**

ನಮಗೆ ಬೈಬಲ್ ನಲ್ಲಿರುವ ಆತನ ಹೆಸರುಗಳು ಗೊತ್ತಿದ್ದು ಆತನು ಯಾರು ಎಂದು ತಿಳಿದಿದೆ ಮತ್ತು ನಾವು ಆತನನ್ನು ಗೌರವಿಸುತ್ತೇವೆ, ಆದರೆ ದೇವರು ತನ್ನ ವಾಕ್ಯವನ್ನು ಹೆಸರಿಗಿಂತಲೂ ತನ್ನ ಗೌರವಕ್ಕಿಂತಲೂ ಹೆಚ್ಚು ಮಹಿಮೆಪಡಿಸುತ್ತಾನೆ.

## ಆತನ ವಾಕ್ಯವು ಶುದ್ಧವಾಗಿದೆ

ಯೋಹಾನ 17;17

**ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು.**

ಅರಣ್ಯಕಾಂಡ 23;19

**ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ; ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ. ತಾನು ಹೇಳಿದ ಮೇರೆಗೆ ನಡೆಯುವದಿಲ್ಲವೋ?**

ಕೀರ್ತನೆಗಳು 12:6

**ಯೆಹೋವನ ಮಾತುಗಳು ಯಥಾರ್ಥವಾದವುಗಳೇ; ಅವು ಏಳು ಸಾರಿ ಪುಟಕ್ಕೆ ಹಾಕಿದ ಚೊಕ್ಕ ಬೆಳ್ಳಿಯೋಪಾದಿಯಲ್ಲಿವೆ**

## ದೇವರ ವಾಕ್ಯವು ಬಲವಾಗಿದೆ.

ಇಬ್ರಿಯರಿಗೆ 4:12

**ಯಾಕೆಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು ಪ್ರಾಣ ಆತ್ಮಗಳನ್ನು ಕೀಲು ಮಜ್ಜೆಗಳನ್ನು ವಿಭಾಗಿಸಿವಷ್ಟು ಮಟ್ಟಿಗೂ ತೂರಿ ಹೋಗುವಂಥದು, ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ.**

ದೇವರ ವಾಕ್ಯವು ದೇವರ ಬಲವನ್ನು ಹೊತ್ತು ತರುವ ವಾಹನವಾಗಿದೆ–ಅದು ನಮ್ಮ ಜೀವನಗಳೊಳಗೆ ದೇವರ ಬಲವನ್ನು ಬಿಡುಗಡೆಗೋಳಿಸುವಂಥದ್ದು ಆಗಿದೆ. ದೇವರ ವಾಕ್ಯವು ದೇವರ ಬಲವನ್ನು ಹೊತ್ತು ತರುವ ವಾಹನವಾಗಿದೆ. ಅದು ನಮ್ಮ ಜೀವನಗಳೊಳಗೆ ದೇವರ ಬಲವನ್ನು ಬಿಡುಗಡೆಗೊಳಸುವಂಥವಾಗಿದೆ. ಹೀಗೆ, ನಾವು ದೇವರ ವಾಕ್ಯಕ್ಕೆ ಸಂಬಂಧಿಸಿ ಕೊಂಡಾಗ, ನಾವು ದೇವರ ಬಲದ ಉಗಮದೊಂದಿಗೆ ಸಂಬಂಧಿಸಿ ಕೊಳ್ಳುತ್ತೇವೆ.

ಇಬ್ರಿಯರಿಗೆ 11:3

**ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ.**

ಈ ವಿಶ್ವವಿಡೀ ದೇವರು ನುಡಿದ ವಾಕ್ಯದಿಂದ ಅಸ್ತಿತ್ವಕ್ಕೆ ಬಂತು. ನಾವು ಇದನ್ನು ಗ್ರಹಿಸುವ ಅಗತ್ಯವಿದೆ. ವಾಕ್ಯವು ಈ ವಿಶ್ವವನ್ನು ಸೃಷ್ಟಿಸಿ, ಅದು ಜೀವಂತವಾಗಿದ್ದು, ಅದರ ಒಂದಿಷ್ಟು ಬಲವು ಕುಂದದಿದ್ದರೆ, ಅದು ಇಂದು ನಿಮ್ಮ ಜೀವನದಲ್ಲೂ, ನನ್ನ ಜೀವನದಲ್ಲೂ 'ಸೃಷ್ಟಿಸಬಹುದು. ಭೂಲೋಕವು ಕೂಡಾ ಆತನ ವಾಕ್ಯದ ಬಲದಿಂದಲೇ ಆಧರಿಸಲ್ಪಟ್ಟು ನಡೆಯುತ್ತದೆ. ಈ ವಿಶಾಲವಾದ ವಿಶ್ವಕ್ಕೆ ನಮ್ಮ ಜೀವನವನ್ನು ಹೋಲಿಸಿದರೆ, ನಮ್ಮ ಜೀವನವು ಎಷ್ಟೋ ಸಣ್ಣದಾಗಿದೆ, ಮತ್ತು ಆತನ ವಾಕ್ಯದಲ್ಲಿ ವಿಶ್ವವನ್ನೇ ಎತ್ತಿಹಿಡಿಸಲು ನಡಿಸಲು ಬಲವಿದ್ದರೆ ನಮ್ಮ ಚಿಕ್ಕ ಜೀವನಗಳನ್ನೂ ಎತ್ತಿ ಹಿಡಿದು ನಡಿಸಲು ವಾಕ್ಯದಲ್ಲಿ ಸಾಕಷ್ಟು ಬಲವಿದೆ.

ಈ ವಿಶ್ವವೇ ಆತನಿಂದ ಅಧರಿಸಲ್ಪಟ್ಟು ಆತನ ವಾಕ್ಯದ ಬಲದಿಂದ ಆಧರಿಸಲ್ಪಟ್ಟಿದ್ದರೆ, ಐಶ್ವರ್ಯವಾಗಿ ನಮ್ಮ ಜೀವನಗಳು ಆತನ ವಾಕ್ಯದ ಬಲದಿಂದ ಕ್ರಮಗೊಳಿಸಲ್ಪಟ್ಟು, ಕಾಪಾಡಲ್ಪಟ್ಟು ಎತ್ತಿ ಹಿಡಿಯಲ್ಪಟ್ಟಿದೆ.

ನಿಮ್ಮ ಜೀವನದಲ್ಲಿ ಎಲ್ಲವೂ ಬಿದ್ದು, ತಪ್ಪಿ ಹೋಗುತ್ತಾ ಇದೆ, ಅದನ್ನು ನಿಮಗೆ ಹಿಡಿತದಲ್ಲಿಡಲು ಆಗುವುದಿಲ್ಲ, ಎಂದೆನಿಸುವಾಗ, ನಿಮ್ಮ ಜೀವನದಲ್ಲಿ ಎಲ್ಲವನ್ನೂ ಒಟ್ಟು ಹಿಡಿದು ಬದ್ರಪಡಿಸಿ, ನಿಮ್ಮನ್ನು ಮೇಲಕ್ಕೆತ್ತಿ ಹಿಡಿದು, ಸರಿಪಡಿಸಿ, ಅದನ್ನು ನಡಿಯಬೇಕಾದ ಸ್ಥಿತಿಗೆ ತರಲು ವಾಕ್ಯದಲ್ಲಿ ಬಲವಿದೆ ಎಂದು ತಿಳಿಯಿರಿ. ನಿಮ್ಮ ಜೀವನದಲ್ಲಿ ಅಸ್ತಿತ್ವದಲ್ಲಿರದ ಯಾವುದಾದರೂ ಒಂದನ್ನು ಅಸ್ತಿತ್ವಕ್ಕೆ ತರಲು ನಿಮ್ಮಲ್ಲಿ ಕಾರ್ಯನಡಿಸುತ್ತಿರುವ ದೇವರ ವಾಕ್ಯಕ್ಕೆ ಬಲವಿದೆ. ಒಂದು ವೇಳೆ ಆರೋಗ್ಯವಿಲ್ಲದಿರಬಹುದು – ನೋವು, ವಾಸಿಯಾಗಬೇಕಾದ ಒಂದು ಅಸ್ವಸ್ಥವಿದೆ. ಆ ಆರೋಗ್ಯವನ್ನು ದೇಹದಲ್ಲಿ ಅಸ್ತಿತ್ವಕ್ಕೆ ತರಲು ದೇವರ ವಾಕ್ಯದಲ್ಲಿ ಬಲವಿದೆ.

ಇಬ್ರಿಯರಿಗೆ 1:3
**ಈತನು (ಯೇಸು) ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು**

**ದೇವರ ವಾಕ್ಯವು ಸಜೀವವಾದದ್ದು ಬಲಶಾಲಿಯಾಗಿದೆ ಅದನ್ನು ನಮ್ಮದಾಗಿ ಮಾಡಿಕೊಳ್ಳಲು ನಾವು ದೇವರ ವಾಕ್ಯದ ಬಲಕ್ಕೆ ಅದನ್ನು ಜೋಡಿಸಿಕೊಳ್ಳುವುದೇ ಕೀಲಿಕೈಯಾಗಿದೆ.**

## ದೇವರ ವಾಕ್ಯ : ಅದ್ಭುತವಾದ ಬೀಜ

ದೇವರ ವಾಕ್ಯವೆಂಬ ಬೀಜವನ್ನು ತಗೆದು ಕೊಳ್ಳಿರಿ ಆ ವಾಕ್ಯದ ಬಲವನ್ನು ನಿಮ್ಮ ಜೀವನದಲ್ಲಿ ಅವುಭವಿಸಲು ಅದನ್ನು ಧ್ಯಾನಿಸಿರಿ, ಅದು ನಿಮ್ಮ ಜೀವನಗಳಲ್ಲಿ ಮೊಳೆಯುವಂತೆ ಮಾಡಿರಿ. ದೇವರ ವಾಕ್ಯವು "ಅದ್ಭುತವಾದ ಬೀಜ" ಮತ್ತು ನಮ್ಮ ಜೀವಿತಗಳಲ್ಲಿ ಫಲವನ್ನು ಉತ್ಪತ್ತಿ ಮಾಡಲು ರಚಿಸಲ್ಪಟ್ಟಿವೆ.



**ಬೀಜವು ಫಲಕೊಡಬೇಕಾದರೆ ಅದು ರಕ್ಷಿಸಲ್ಪಟ್ಟು ಪೋಷಿಸಲ್ಪಡಬೇಕು**

## ಬಿತ್ತುವವನ ಸಾಮ್ಯ

ಮಾರ್ಕ 4: 1–20
**ಆತನು ತಿರಿಗಿ ಸಮುದ್ರದ ದಡದಲ್ಲಿ ಉಪದೇಶ ಮಾಡುತ್ತಿದ್ದನು. ಬಹು ಜನರು ಆತನ ಬಳಿಗೆ ಕೂಡಿ ಬಂದದ್ದರಿಂದ ಆತನು ಸಮುದ್ರದಲ್ಲಿದ್ದ ದೋಣಿ ಹತ್ತಿಕೂತು ಕೊಂಡನು; ಆ ಜನರೆಲ್ಲರು ಸಮುದ್ರದ ಹತ್ತಿರ ನೆಲದ ಮೇಲೆ ಇದ್ದರು. ಆಗ ಆತನು ಅವರಿಗೆ ಸಾಮ್ಯರೂಪವಾಗಿ ಅನೇಕ ಸಂಗತಿಗಳನ್ನು ಉಪದೇಶ ಮಾಡಿದನು. ಅ ಉಪದೇಶದಲ್ಲಿ ಅವರಿಗೆ ಹೇಳಿದ್ದೇನೆಂದರೆ – "ಕೇಳಿರಿ! ಬಿತ್ತುವವನು ಬಿತ್ತುವದಕ್ಕೆ ಹೊರಟನು. ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದವು; ಹಕ್ಕಿಗಳು ಬಂದು ಅವುಗಳನ್ನು ತಿಂದುಬಿಟ್ಟವು. ಬೇರೆ ಕೆಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ ನೆಲದಲ್ಲಿ ಬಿದ್ದವು; ಅಲ್ಲಿ ಮಣ್ಣು ತೆಳ್ಳಗಿದ್ದದರಿಂದ ಅವು ಬೇಗ ಮೊಳೆತವು; ಆದರೆ ಬಿಸಿಲೇರಿದಾಗ ಬಾಡಿ ಬೇರಿಲ್ಲದ ಕಾರಣ ಒಣಗಿ ಹೋದವು. ಮತ್ತೆ ಕೆಲವು ಬೀಜ ಮುಳ್ಳುಗಿಡಗಳಲ್ಲಿ ಬಿದ್ದವು; ಮುಳ್ಳುಗಿಡಗಳು ಬೆಳೆದು ಅವುಗಳನ್ನು ಅಡಗಿಸಿ ಬಿಟ್ಟದ್ದರಿಂದ ಅವು ಫಲಕೊಡಲಿಲ್ಲ ಇನ್ನು ಕೆಲವು ಬೀಜ ಒಳ್ಳೆಯ ನೆಲದಲ್ಲಿ ಬಿದ್ದು ಹುಟ್ಟಿ ಬೆಳೆಯುತ್ತಾ ಬಂದು ಒಂದು ಮೂವತ್ತರಷ್ಟು, ಒಂದು ಅರುವತ್ತರಷ್ಟು, ಒಂದು ನೂರರಷ್ಟು ಫಲವನ್ನು ಕೊಟ್ಟವು ಎಂದು ಹೇಳಿ – ಕೇಳುವುದಕ್ಕೆ ಕಿವಿಯುಳ್ಳವನು ಕೇಳಲಿ ಅಂದನು ಆತನು ಒಬ್ಬನೇ ಇದ್ದಾಗ ಆತನ ಹತ್ತಿರ ಇದ್ದವನು ಹನ್ನೆರಡು ಮಂದಿ ಶಿಷ್ಯರ ಕೂಡ ಆ ಸಾಮ್ಯಗಳ ವಿಷಯದಲ್ಲಿ ಆತನನ್ನು ಕೇಳಿದರು. ಆತನು ಅವರಿಗೆ – ದೇವರ ರಾಜ್ಯದ ಗುಟ್ಟು ನಿಮಗೆ ಕೊಟ್ಟಿದೆ; ಹೊರಗಿನವರಿಗೆ ಎಲ್ಲವೂ ಸಾಮ್ಯದ ಮರೆಯಲ್ಲಿವೆ. ಅವರು ಕಣ್ಣಿದ್ದು ನೋಡಿದರೂ ಕಾಣಬಾರದು, ಕಿವಿಯಿದ್ದು ಕೇಳಿದರೂ ತಿಳುಕೊಳ್ಳಬಾರದು, ಹಾಗೆ ಕಂಡು ತಿಳುಕೊಂಡರೆ ಅವರು ದೇವರ ಕಡೆಗೆ ತಿರುಗಿಕೊಂಡು ಪಾಪಕ್ಷಮಾಪಣೆಯನ್ನು ಹೊಂದಾರು ಎಂದೇ ಮರೆಮಾಡಲಾಗಿದೆ. ಆ ಮೇಲೆ ಆತನು ಅವರಿಗೆ ಹೇಳಿದ್ದೇನೆಂದರೆ – ಈ ಸಾಮ್ಯದ ಅರ್ಥ ನಿಮಗೆ ಗೊತ್ತಾಗಲಿಲ್ಲವೋ? ಹಾಗಾದರೆ ನನ್ನ ಎಲ್ಲಾ ಸಾಮ್ಯಗಳನ್ನು ಹೇಗೆ ತಿಳುಕೊಂಡಿರಿ? ಆ ಬಿತ್ತುವವನು ವಾಕ್ಯವೆಂಬ ಬೀಜವನ್ನು ಬಿತ್ತುತ್ತಾನೆ. ಕೆಲವರು ವಾಕ್ಯವನ್ನು ಕೇಳಿದ ಕೂಡಲೇ ಸೈತಾನನು ಬಂದು ಅವರಲ್ಲಿ ಬಿತ್ತಿದ್ದ ವಾಕ್ಯವನ್ನು ತೆಗೆದು ಬಿಡುತ್ತಾನೆ. ಇವರೇ ವಾಕ್ಯವು ಬಿತ್ತಲ್ಪಟ್ಟ ದಾರಿಯ ಮಗ್ಗುಲಾಗಿರುವವರು. ಅದೇ ಪ್ರಕಾರ ಬೇರೆ ಕೆಲವರು ವಾಕ್ಯವನ್ನು ಕೇಳಿದ ಕೂಡಲೇ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾರೆ; ತಮಗೆ ಬೇರಿಲ್ಲದ ಕಾರಣ ಇವರು ಸ್ವಲ್ಪ ಕಾಲ ಮಾತ್ರವೇ ಇದ್ದು ಬಳಿಕ ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿ ಬೀಳುತ್ತಾರೆ; ಇವರೇ ಬೀಜಬಿದ್ದ ಬಂಡೆಯ ನೆಲವಾಗಿರುವವರು. ಇನ್ನು ಕೆಲವರು ವಾಕ್ಯವನ್ನು ಕೇಳೀದಾಗ್ಯೂ ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಟಾಗುವ ಮೋಹವು ಇತರ ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ ಆ ವಾಕ್ಯವನ್ನು ಅಡಗಿಸಿ ಬಿಡುವದರಿಂದ ಫಲವನ್ನು ಕೊಡದೆ ಇರುತ್ತಾರೆ; ಇವರೇ ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವವರು. ಮತ್ತೆ ಕೆಲವರು ವಾಕ್ಯವನ್ನು ಕೇಳಿ ಕೈಗೊಂಡು ಮೂವತ್ತರಷ್ಟಾಗಲಿ ಅರುವತ್ತರಷ್ಟಾಗಲಿ ನೂರರಷ್ಟಾಗಲಿ ಫಲವನ್ನು ಕೊಡುತ್ತಾರೆ; ಇವರೇ ಬೀಜಬಿದ್ದ ಒಳ್ಳೆಯ ನೆಲವಾಗಿರುವವರು" ಅಂದನು.**

ದೇವರ ವಾಕ್ಯವು ಬೀಜದಂತಿದೆ (ಮಾರ್ಕ 4:14)

ದೇವರ ವಾಕ್ಯವು ಅನೇಕ ವೇಳೆ ತನ್ನನ್ನು ಬೀಜವೆಂದು ಹೇಳುತ್ತದೆ. “ಬೀಜ” ವೆಂದ ಭಾಷಾಂತರಿಸಲ್ಪಟ್ಟ ಗ್ರೀಕ್ ಪದವಾದ “ಸ್ಪರ್ಮಾ” ಎಂಬ ಪದವು ಹೊಸ ಒಡಂಬಡಿಕೆಯಲ್ಲಿ 44 ಬಾರಿ ಹೇಳಲಾಗಿದೆ. ಇದೇ ಪದದಿಂದ ನಾವು ನಮ್ಮ ಇಂಗ್ಲೀಷ್ ಪದವಾದ “ಸ್ಪರ್ಮ್” ಎಂಬ ಪದವನ್ನು ಪಡೆದಿದ್ದೇವೆ.

ನಮ್ಮ ಹೃದಯವು ದೇವರ ವಾಕ್ಯವೆಂಬ ಬೀಜವು ಬಿತ್ತಲ್ಪಡಬೇಕಾದ ನೆಲವಾಗಿದೆ. (ಮಾರ್ಕ 4:15)

ಬೀಜವು ಫಲಕೊಡಬೇಕಾದರೆ ಅದು ರಕ್ಷಿಸಲ್ಪಟ್ಟು ಪೋಷಿಸಲ್ಪಡತಕ್ಕದ್ದು.

ನಾವು ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳಬೇಕು (ಅಂದರೆ ಆತ್ಮಿಕ ಸತ್ಯವನ್ನು ತಿಳಿಯಬೇಕು) ಸೈತಾನನು ಆ ವಾಕ್ಯವನ್ನು ಕದಿಯಬಾರದೆಂದಿದ್ದರೆ.

ಮತ್ತಾಯ 13;19
**ಯಾವನಾದರೂ ಪರಲೋಕದ ರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ, ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದುಹಾಕುತ್ತಾನೆ; ಈ ಮನುಷ್ಯನೇ ಬೀಜಬಿದ್ದ ದಾರಿಯ ಮಗ್ಗುಲಾಗಿರುವವನು.**

ಲೋಕದಿಂದಾಗಲಿ ಸೈತಾನನಿಂದಾಗಲಿ ಯಾವ ತೊಂದರೆಗಳಾಗಲಿ ಹಿಂಸೆಯಾದರೂ ಬಂದಾಗಲೂ ನಾವು ವಾಕ್ಯವನ್ನು ಬಲವಾಗಿ ಹಿಡಿದುಕೊಂಡು ಅದು ನಮ್ಮ ಹೃದಯದಲ್ಲಿ ಬೇರೂರಿ, ಫಲಬಿಡುವಂತಾಗಬೇಕು. (ಮಾರ್ಕ 4:16,17)

ನಾವು ಈ ರೋಗದ ಚಿಂತೆಗಳಿಂದ, ಐಶ್ವರ್ಯದ ಮೋಸಗಳಿಂದ, ಇತರ ವಸ್ತುಗಳ ಮೇಲಣ ದುರಾಶೆಗಳಿಂದ ನಮ್ಮ ಹೃದಯವನ್ನು ಕಾಪಾಡಿಕೊಳ್ಳಬೇಕು. ನಾವು ಹೀಗೆ ಮಾಡಿದಾಗ ವಾಕ್ಯವು ಫಲಕೊಡಲು ಯೋಗ್ಯ ವಾತಾವರಣವನ್ನು ಒದಗಿಸುವೆವು (ಮಾರ್ಕ 4:19).

ನಾವು ವಾಕ್ಯವನ್ನು ನಮ್ಮ ಹೃದಯದಲ್ಲಿ ತಿಳುಕೊಂಡಾಗ (ಮತ್ತಾಯ 15;23) ಸ್ವೀಕರಿಸಿದಾಗ (ಮಾರ್ಕ 4:20), ಮತ್ತು ಇಟ್ಟುಕೊಂಡಾಗ (ಲೂಕ 8:15) ನಮ್ಮ ಜೀವನಗಳಲ್ಲಿ ಫಲ ಕೊಡುವೆವು.

ಬೈಬಲ್ ಅದ್ಭುತ ಬೀಜಗಳನ್ನು ತುಂಬಿದ ನಮ್ಮ ಚೀಲ. ಪ್ರತಿಯೊಂದು ಬೀಜವೂ ಅದರ ಜಾತಿಯ ಫಲವನ್ನು ಬಿಡುವುದು (ಸ್ವಸ್ಥ ಮಾಡುವ ಬೀಜವು ಆರೋಗ್ಯವನ್ನು ಉತ್ಪಾದಿಸುತ್ತದೆ, ಆಶೀರ್ವಾದಗಳನ್ನು ಕೊಡುವ ಬೀಜವು ಆಶೀರ್ವಾದಗಳನ್ನು ಉಂಟುಮಾಡುವುದು)

ನಿಮಗೆ ಬೇಕಾಗಿರುವ ಬೀಜವನ್ನು ತೆಗೆದುಕೊಂಡು ನಿಮ್ಮ ಹೃದಯದಲ್ಲಿ ಬಿತ್ತಿರಿ, ನೀವು ವಾಕ್ಯವನ್ನು ಕೇಳುವಾಗ ಅದು ಏನು ಹೇಳುತ್ತದೆ ಎಂದು ತಿಳಿಯುವುದು ಒಂದು ಪ್ರಕಟನೆಯನ್ನು ಹೊಂದುವುದು ಮುಖ್ಯವಾಗಿದೆ. ನಾವು ವಾಕ್ಯವನ್ನು ಕೇಳುವಾಗ ಹಿಂಸೆಗಳೂ ತೊಂದರೆಗಳೂ ಬರುತ್ತವೆ. ಎಂದು ಯೇಸು ನಮ್ಮನ್ನು ಎಚ್ಚರಿಸಿದ್ದಾನೆ. ಅವುಗಳು ನಮ್ಮ ಹೃದಯದಲ್ಲಿ ತಡೆಯಾಗಿ, ನಿರಾಶೆಗೊಳಿಸಿ ಅವುಗಳ ವಿಷಯ ಚಿಂತಿಸಿ ವಾಕ್ಯವನ್ನು ಕೈಬಿಟ್ಟರೆ, ನಾವು ಕಲ್ಲು ಬಂಡೆಗಳಿರುವ ನೆಲದಂತಿದ್ದು ಫಲ ಬಿಡಲು ವಿಫಲರಾಗುವೆವು.

ಹೀಗೆ ನಾವು ಕಷ್ಟಗಳನ್ನು ಎದುರಿಸುವಾಗ, ವಾಕ್ಯವನ್ನು ಭದ್ರವಾಗಿ ಹಿಡಿದುಕೊಂಡು, ಈ ಲೋಕದ ಚಿಂತೆಗಳು ಅವುಗಳನ್ನು ಅಡಗಿಸಲು ಬಿಡಲಾರದು. ನಮ್ಮ ಜವಾಬ್ದಾರಿಗಳು, ಅಪೇಕ್ಷೆಗಳು ಐಶ್ವರ್ಯವು ನಮ್ಮ ಶಕ್ತಿ, ಗಮನವನ್ನು ಸೆಳೆದು ಅವು ವಾಕ್ಯಕ್ಕಿಂತ ಮುಖ್ಯವಾಗಬಹುದು, ಹೀಗೆ ವಾಕ್ಯವು ಅಡಗಿ ಹೋಗುವುದು.

**ನಮ್ಮ ಹೃದಯಗಳು ದೇವರ ವಾಕ್ಯವು ಬಿತ್ತಲ್ಪಟ್ಟು ಬೇರೂರಿ, ಮೊಳೆತು, ನಮ್ಮ ಜೀವನಗಳ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಬಿಡುಗಡೆ ಮಾಡುವ ಸ್ಥಳವಾಗಿರುವುದರಿಂದ , ನಾವು ಎಚ್ಚರವಾಗಿದ್ದು ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳೋಣ**

ಮತ್ತಾಯ 13:23
**ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಅರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವವನು.**

ಲೂಕ 8:15
**ಮತ್ತೆ ಕೆಲವರು ವಾಕ್ಯವನ್ನು ಕೇಳಿ ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ; ಇವರೇ ಬೀಜಬಿದ್ದ ಒಳ್ಳೆಯ ನೆಲವಾಗಿರುವವರು.**

### ಬೀಜವು ದೇವರ ವಾಕ್ಯವಾಗಿದೆ.

ಲೂಕ 8:11
**ಈ ಸಾಮ್ಯದ ಅರ್ಥವೇನೆಂದರೆ – ಆ ಬೀಜವೆಂದರೆ ದೇವರ ವಾಕ್ಯ.**

### ದೇವರ ವಾಕ್ಯವು ಫಲಕೊಡುವುದಕ್ಕೋಸ್ಕರ ರೂಪಿಸಲ್ಪಟ್ಟಿದೆ.

ಯೆಶಾಯ 55;10–11
**ಮಳೆಯೂ ಹಿಮವೂ ಆಕಾಶದಿಂದ ಬಿದ್ದು ಭೂಮಿಯನ್ನು ತೋಯಿಸಿ ಹಸಿರುಗೊಳಿಸಿ ಫಲಿಸುವಂತೆ ಮಾಡಿ ಬಿತ್ತುವವನಿಗೆ ಬೀಜವನ್ನು ಉಣ್ಣುವವನಿಗೆ ಆಹಾರವನ್ನು ಒದಗಿಸಿದ ಹೊರತು ಹೇಗೆ ಆಕಾಶಕ್ಕೆ ಸುಮ್ಮನೆ ಹಿಂದಿರುಗುವದಿಲ್ಲವೋ ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ.**

1 ಥೆಸಲೋನಿಕದವರಿಗೆ 2:13
**ಹೀಗಿರಲಾಗಿ ನೀವು ದೇವರ ವಾಕ್ಯವನ್ನು ನಿಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಕ್ಕಾಗಿ ನಾವಂತೂ ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿ ಮಾಡುತ್ತೇವೆ. ಅದು ನಿಜವಾಗಿ ದೇವರ ವಾಕ್ಯವೇ: ಅದು ನಂಬುವವರಾದ ನಿಮ್ಮೊಳಗೆ ಬಲವಾಗಿ ಕೆಲಸ ನಡಿಸುತ್ತದೆ.**


## ದೇವರ ವಾಕ್ಯದಲ್ಲಿ ಧ್ಯಾನಿಸುವುದು

ಯೆಹೋಶುವನು 1;8

**ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಗೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ; ಕೃತಾರ್ಥನಾಗುವಿ**

ಧ್ಯಾನವು ಮುಖ್ಯವಾಗಿ ಮನುಷ್ಯನ ಆತ್ಮದ ಒಂದು ಚಟುವಟಿಕೆಯಾಗಿದ್ದು ಅದು ಪ್ರಾಣವನ್ನು (ಯೋಚನೆ, ಬುದ್ಧಿ, ಯೋಚನಾ ಸಾಮರ್ಥ್ಯ, ಭಾವನೆ ಮತ್ತು ಚಿತ್ತಗಳ ಸ್ಥಾನ) ತಲುಪಿ ದೇಹದ ಮೇಲೆ ಪರಿಣಾಮ ಬೀರುತ್ತದೆ.

ಬೋಧನೆಯ ಉದ್ದೇಶದಿಂದ ನಾವು ಧ್ಯಾನದ ಕಾರ್ಯಗತಿಯನ್ನು ಈ ರೀತಿ ಸಂಕ್ಷೇಪಿಸಬಹುದು;



ಓ ಇಲ್ಲ..... ಧ್ಯಾನವೆಂದರೆ ಇದೆಂದು ನೀನು ತಿಳಿದಿದ್ದೀಯೋ?

### ಅವಲೋಕಿಸುವುದು – ನಿಮ್ಮೊಳಗೆ (ನಿಮ್ಮಲ್ಲೇ) ಯೋಚಿಸುವುದು

ಕೀರ್ತನೆಗಳು 143;5

**ಹಳೇ ದಿನಗಳನ್ನು ನೆನಪಿಸಿಕೊಳ್ಳುತ್ತೇನೆ; ನಿನ್ನ ಎಲ್ಲಾ ಕಾರ್ಯಗಳನ್ನು ಧ್ಯಾನಿಸುತ್ತೇನೆ; ನಿನ್ನ ಕೈಕೆಲಸಗಳನ್ನು ಸ್ಮರಿಸುತ್ತೇನೆ.**

### ದೃಷ್ಟಿಪಟಲದಲ್ಲಿ ತರುವುದು – ನಿಮ್ಮ ಮನಸ್ಸಿನ ಕಣ್ಣುಗಳಿಂದ ನೋಡುವುದು

ಜ್ಞಾನೋಕ್ತಿಗಳು 4; 20–22

**ಕಂದಾ, ನನ್ನ ಮಾತುಗಳನ್ನು ಆಲಿಸು, ನನ್ನ ನುಡಿಗಳಿಗೆ ಕಿವಿಗೊಡು. ನಿನ್ನ ದೃಷ್ಟಿಯು ಅವುಗಳ ಮೇಲೆ ತಪ್ಪದಿರಲಿ, ಅವುಗಳನ್ನು ನಿನ್ನ ಹೃದಯದೊಳಗೆ ಇಟ್ಟುಕೋ. ಅವುಗಳನ್ನು ಹೊಂದುವವರಿಗೆ ಅವು ಜೀವವು. ದೇಹಕ್ಕೆಲ್ಲಾ ಅದೇ ಆರೋಗ್ಯವು.**

ಯೆಶಾಯ 54;13

**ನಿನ್ನ ಮಕ್ಕಳೆಲ್ಲರೂ ಯೆಹೋವನಿಂದ ಶಿಕ್ಷಿತರಾಗಿರುವರು ಅವರಿಗೆ ಅಧಿಕ ಸುಕ್ಷೇಮವಾಗುವುದು**

ಈ ವಾಕ್ಯವನ್ನು ನಿಮ್ಮ ದೃಷ್ಟಿಪಟಕ್ಕೆ ತಂದು ಕೊಳ್ಳಿರಿ – ನಿಮ್ಮ ಮಗು ದೇವರಿಗೆ ಮಹಿಮೆ ತರುವ ರೀತಿಯಲ್ಲಿ ಜೀವಿಸಿದನ್ನು ನೋಡಿ ಆ ಚಿತ್ರಗಳನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ ದೇವರ ವಾಕ್ಯವು ನಿಮ್ಮ ಮಕ್ಕಳು ದೇವರಿಂದ ಶಿಕ್ಷಿತರಾಗುವರು ಎಂದು ಹೇಳುವುದರಿಂದ ನಿಮಗೆ ಹಾಗೆ ಯೋಚಿಸಲು ಹಕ್ಕು ಇದೆ. ದರ್ಶನಗಳೂ ಕನಸುಗಳೂ ಪವಿತ್ರಾತ್ಮನ ಭಾಷೆಯಾಗಿದೆ. ದೇವರ ವಾಕ್ಯವು ಹೇಳುವಂತೆ ನೀವು ಆಗುವುದನ್ನು, ಇರುವುದನ್ನು ಮತ್ತು ಮಾಡುವುದನ್ನು ನೋಡಿರಿ

### ಅರಿಕೆ ಮಾಡುವುದು – ದೇವರು ಹೇಳುವುದನ್ನು ಹೇಳುವುದು

ದೇವರ ವಾಕ್ಯವು ನಿಮ್ಮೊಳಗೆ ಮೊಳೆಯುವಾಗ ನಿಮ್ಮ ಜೀವನದಲ್ಲಿ ಯಾವುದನ್ನಾದರೂ ಯಾವ ಪರಿಸ್ಥಿತಿಯನ್ನಾದರೂ ಮಾರ್ಪಡಿಸಲು ದೇವರ ವಾಕ್ಯಕ್ಕೆ ಬಲವಿದೆ.

ಧರ್ಮೋಪದೇಶಕಾಂಡ 30: 11–14

**ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶವು ನಿಮಗೆ ಗ್ರಹಿಸುವುದಕ್ಕೆ ಕಷ್ಟವಾದದ್ದೂ ಅಲ್ಲ, ಹೊಂದುವದಕ್ಕೆ ಅಸಾಧ್ಯವಾದದ್ದೂ ಅಲ್ಲ. ಇದು ಮೇಲಣ ಲೋಕದಲ್ಲಿರುವ ಮಾತಲ್ಲ. ನಮಗೋಸ್ಕರ ಮೇಲಣ ಲೋಕಕ್ಕೆ ಏರಿ ಅದನ್ನು ತಿಳಿದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೇಳಿ ಕೈಕೊಂಡೆವು ಅಂದುಕೊಳ್ಳುವದಕ್ಕೆ ಅವಕಾಶವೇನೂ ಇಲ್ಲ ಮತ್ತು ಇದು ಸಮುದ್ರದ ಆಚೆ ಇರುವ ಮಾತಲ್ಲ. ನಮಗೋಸ್ಕರ ಸಮುದ್ರವನ್ನು ದಾಟಿ ಅದನ್ನು ತೆಗೆದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೈಕೊಂಡೆವು ಅಂದುಕೊಳ್ಳುವದಕ್ಕೆ ಆಸ್ಪದವೇನೂ ಇಲ್ಲ. ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ; ಇದು ನಿಮ್ಮ ಬಾಯಲ್ಲಿಯೂ ನಿಮ್ಮ ಹೃದಯದಲ್ಲಿಯೂ ಇದೆ. ಇದನ್ನು ಅನುಸರಿಸುವುದಕ್ಕೆ ಅವಕಾಶವುಂಟಷ್ಟೆ.**

## ದೇವರ ವಾಕ್ಯವನ್ನು ಓದುವ ಮತ್ತು ಧ್ಯಾನಿಸುವ ಶಿಸ್ತನ್ನು ಬೆಳೆಸುವುದು.

ದೇವರ ವಾಕ್ಯಕ್ಕೆ ನಿಮ್ಮ ಜೀವನದಲ್ಲಿ ಅದರ ಯೋಗ್ಯ ಸ್ಥಾನವನ್ನು ಕೊಡಿರಿ.

ಕೀರ್ತನೆಗಳು 1: 1–3

**ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವದೇ ಇಲ್ಲ ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು.**

- ದೇವರ ವಾಕ್ಯವನ್ನು ಓದಲು (ಪ್ರತಿದಿನವು ಉತ್ತಮ) ವೇಳೆಯನ್ನು ಪ್ರತ್ಯೇಕವಾಗಿಡಿರಿ.
- ನೀವು ಓದುವುದನ್ನು ಧ್ಯಾನಿಸಿರಿ
- ನಿಮ್ಮನ್ನು ಬಲಪಡಿಸಿಕೊಳ್ಳಬೇಕೆಂದು ನೀವು ಭಾವಿಸುವ (ಉದಾ: ಸ್ವಸ್ಥತೆ, ಒದಗಿಸುವಿಕೆ, ಪ್ರಾರ್ಥನೆ) ಯಾವುದಾದರೂ ಕ್ಷೇತ್ರಕ್ಕೆ ಸಂಬಂದಿಸಿದ ಪರಿಶುದ್ಧ ಗ್ರಂಥದ ಕೆಲವು ವಚನಗಳನ್ನು ಆಯ್ಕೆ ಮಾಡಿ ಈ ವಚನಗಳನ್ನು ಧ್ಯಾನಿಸಿರಿ.
- ಪ್ರಸಂಗಿಸುವ ದೇವರ ವಾಕ್ಯವನ್ನು ನಿಮಗೆ ಸಾಧ್ಯವಾದಷ್ಟು ಬಾರಿ ಕೇಳಿರಿ (ಉದಾ: ಪ್ರಯಾಣಮಾಡುತ್ತಿರುವಾಗ) ಇದಕ್ಕೆ ಎಂ ಪಿ ತ್ರಿ ಡೌನ್‌ಲೋಡ್ ಗಳನ್ನು ಉಪಯೋಗಿಸಿರಿ

## ಮುಖ್ಯ ಕಂಠಪಾಠ ವಚನಗಳು

ಯೆಹೋಶುವ 1:8

**ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೇಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ.**

ಯೆಶಾಯ 55:10,11

**ಮಳೆಯೂ ಹಿಮವೂ ಆಕಾಶದಿಂದ ಬಿದ್ದು ಭೂಮಿಯನ್ನು ತೋಯಿಸಿ ಹಸಿರು ಗೊಳಿಸಿ ಫಲಿಸುವಂತೆ ಮಾಡಿ ಬಿತ್ತುವವನಿಗೆ ಬೀಜವನ್ನು ಉಣ್ಣುವವನಿಗೆ ಆಹಾರವನ್ನು ಒದಗಿಸದ ಹೊರತು ಹೇಗೆ ಆಕಾಶಕ್ಕೆ ಸುಮ್ಮನೆ ಹಿಂತಿರುಗುವದಿಲ್ಲವೋ ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು  ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ.**

ಇಬ್ರಿಯರಿಗೆ 4:12

**ಯಾಕೆಂದರೆ ದೇವರ  ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನು ಕೀಲುಮಜ್ಜೆಗಳನ್ನು ವಿಭಾಗಿಸಿವಷ್ಟು ಮಟ್ಟಿಗೂ ತೂರಿಹೋಗುವಂಥದು. ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನು ವಿವೇಚಿಸುವಂಥದ್ದು ಆಗಿದೆ.**

(ಎಪಿಸಿ ಯ 'ದೇವರ ವಾಕ್ಯ' ಎಂಬ ಪ್ರಕಟಿತ ಪುಸ್ತಕದ ಪ್ರತಿಯನ್ನು ತೆಗೆದುಕೊಂಡು ಅದನ್ನು ಕಲಿಯಿರಿ)

# ಅನ್ವಯ

1. ದೇವರ ವಾಕ್ಯವು ಗುಣಮಟ್ಟವಾದದ್ದು ಮತ್ತು ಅಂತಿಮ ಅಧಿಕಾರವಾಗಿದೆ - ಇಹಲೋಕದ ನನ್ನ ಜೀವನದಲ್ಲಿ ನಾನು ಇದನ್ನು ಹೇಗೆ ಅನ್ವಯಿಸುವುದು?

2. ದೇವರ ವಾಕ್ಯವು ಅದ್ಭುತಕರವಾದ ಬೀಜವಾಗಿದೆ – ಹೀಗಿರುವುದರಿಂದ ನಾನು ದೇವರ ವಾಕ್ಯ ಓದುವುದನ್ನು ಹೇಗೆ (ಬದಲಾಯಿಸಿ) ಇನ್ನು ಮುಂದೆ ಓದಬೇಕು?

3. ದೇವರ ವಾಕ್ಯವನ್ನು ಧ್ಯಾನಿಸುವ ಅಭ್ಯಾಸವನ್ನು ನಾನು ಹೇಗೆ ಬೆಳೆಸಬಹುದು?

4. ದೇವರ ವಾಕ್ಯದ ಪರಿಶುದ್ಧತೆಯನ್ನೂ ಅಧಿಕಾರವನ್ನು ಪ್ರಶ್ನಿಸುವ ಕ್ಷೇತ್ರಗಳಿವೆ ಎಂದು ನಾನು ಭಾವಿಸುವ ಕ್ಷೇತ್ರಗಳಿವೆಯೋ?

5. ದೇವರ ವಾಕ್ಯವು ಸತ್ಯವೆಂದು ನಾನು ಆಲಿಂಗಿಸಿ, ನನ್ನ ಜೀವನದಲ್ಲಿ ಅದಕ್ಕೆ ಅಡ್ಡಿಪಡಿಸುವಂಥದ್ದು ಏನಾದರೂ ಇದ್ದರೆ ಅದರಿಂದ ನಾನು ಹೇಗೆ ಹೊರಬರಬಹುದು?

# 8

# ಸ್ಥಳೀಯ ಸಭೆ

(ಈ ಪಾಠವು ನಮಗೆ ಸ್ಥಳೀಯ ಸಭೆಯ ಉದ್ದೇಶವನ್ನು, ಸ್ಥಳೀಯ ಸಭೆಯಲ್ಲಿ ಒಬ್ಬ ವಿಶ್ವಾಸಿಯ ಸಂಬಂಧ ಮತ್ತು ಕರ್ತವ್ಯವನ್ನೂ ಭೋಧಿಸಲು ರೂಪಿಸಲ್ಪಟ್ಟಿದೆ)

## ಸ್ಥಳೀಯ ಸಭೆ – ಅದರ ಸ್ವಾಭಾವಿಕ ಮತ್ತು ಆತ್ಮಿಕ ಪರಿಮಿತಿಗಳು

***ಸಭೆಯು ದೇವರ ಯೋಚನೆ ಧಾರ್ಮಿಕ (ಪಂಗಡ) ಸಂಘಸಂಸ್ಥೆಗಳು ಮಾನವ ನಿರ್ಮಿತ***

ಮತ್ತಾಯ 16:15–19

**ಆತನು ಅವರನ್ನು–ಆದರೆ ನೀವು ನನ್ನನು ಯಾರೆನ್ನುತ್ತೀರಿ ಎಂದು ಕೇಳಲಾಗಿ ಸೀಮೋನ್ ಪ್ರೇತ್ರನು–ನೀನು ಬರಬೇಕಾಗಿರುವ ಕ್ರಿಸ್ತನು, ಜೀವ ಸ್ವರೂಪನಾದ ದೇವರ ಕುಮಾರನು ಎಂದು ಉತ್ತರ ಕೊಟ್ಟನು ಅದಕ್ಕೆ ಯೇಸು–ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರ ಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು ಮತ್ತು ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನೆಂದರೆ–ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು, ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವುದು; ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು.**

'ಸಭೆ' ಎಂಬ ಪದದ ಅರ್ಥ:

ಸಭೆ (ಗ್ರೀಕ್) 'ಎಕ್ಲೆಸಿಯ' ಎಕ್=ಹೊರಗೆ, ಕ್ಲೆಸಿಸ್=ಒಂದು ಕರೆ ಎಂಬುದಾಗಿ ವಾಸ್ತಾವವಾದ ಅರ್ಥ ಹೊಂದಿದೆ. ಸಭೆ ಎಂಬ ಪದವು ಸರಳವಾಗಿ ಒಂದು ಉದ್ದೇಶಕ್ಕಾಗಿ ಹೊರಗೆ ಕರೆಯಲ್ಪಟ್ಟ ಜನರ ಒಂದು ಗುಂಪು.

## ಸಭೆಯ ಕುರಿತ ಮುಖ್ಯ ಸತ್ಯಗಳು–ಕ್ರಿಸ್ತನ ದೇಹ

- ಸಭೆಯು ಕ್ರಿಸ್ತನ ದೇಹವಾಗಿದೆ.

  ಕೊಲೊಸ್ಸೆಯವರಿಗೆ 1:8, 24

  **ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿಸಂಭೂತನು ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ.**

  ಎಫೆಸದವರಿಗೆ 1:22, 23

  **ಇದಲ್ಲದೆ ಆತನನ್ನ ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ, ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ಸ್ಥಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.**

- ಸಭೆಯು ಶಾಶ್ವತವಾಗಿದೆ, ಯಾಕೆಂದರೆ  ಅದರ ಶಿರಸ್ಸಾದ ಕ್ರಿಸ್ತನು ನಿತ್ಯನು.

- ಸಭೆಯು ಕ್ರಿಸ್ತನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಾಧನವಾಗಿದೆ.

  ತಲೆಯು ಆಜ್ಞಾಪಿಸಿದ್ದನ್ನು ದೇಹವು ಕಾರ್ಯಗತಗೊಳಿಸುತ್ತದೆ ಈಗಿನ ಯುಗದಲ್ಲಿಯೂ ಸಾವಿರ ವರ್ಷಗಳ ಕಾಲದಲ್ಲೂ.

  ದಾನಿಯೇಲನು 7:18

  **ಆದರೆ ರಾಜ್ಯವು ಪರಾತ್ಪರನ ಭಕ್ತರಿಗೆ ಲಭಿಸುವುದು, ಅವರೇ ಅದನ್ನು ತಲತಲಾಂತರಕ್ಕೂ ಶಾಶ್ವತವಾಗಿ ಅನುಭವಿಸುವರು.**


- ಪ್ರತಿಯೊಬ್ಬ ವಿಶ್ವಾಸಿಯೂ ಕ್ರಿಸ್ತನ ದೇಹದ ಅಂಗ – ಶಾಶ್ವತವಾದ ಸಭೆ.

  1 ಕೊರಿಂಥದವರಿಗೆ 12:27

  **ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ.**

## ಸ್ಥಳೀಯ ಸಭೆಯ ಕುರಿತ ಮುಖ್ಯ ಸತ್ಯಗಳು

ನಾವು ಕ್ರಿಸ್ತನಲ್ಲಿ ಸಹೋದರಿಯರು



1 ತಿಮೊಥೆಯನಿಗೆ 3:14,15

**ಬೇಗನೆ ನಿನ್ನ ಬಳಿಗೆ ಬರುವೆನೆಂದು ನನಗೆ ನಿರೀಕ್ಷೆಯುಂಟು; ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ.**

- ಸ್ಥಳೀಯ ಸಭೆಯು "ದೇವರ ಮನೆ (ಆಲಯ)" ಎಂದು ಕರೆಯಲ್ಪಟ್ಟಿದೆ.

  ಒಂದು ನಿರ್ದಿಷ್ಟ ಸ್ಥಳದಲ್ಲಿರುವ ಸ್ಥಳೀಯ ಸಭೆಯು ದೇವರ ಕುಟುಂಬವಾಗಿದೆ.

  ಕುಟುಂಬವು ಸಂಬಂಧಗಳಿಗೆ ಸಂಬಂಧಿಸಿದ್ದಾಗಿದೆ.

  ಅಲ್ಲಿ ಪರಸ್ಪರ ಪ್ರೀತಿ, ಆರೈಕೆ, ಚಿಂತೆ ಮತ್ತು ಸಹಾಯಗಳಿವೆ.

  ಜನರು ಬೆಳವಣಿಗೆ ಮತ್ತು ಪ್ರೌಢಿಮೆಯ ವಿವಿಧ ಮಟ್ಟಗಳಲ್ಲಿರುತ್ತಾರೆ.
- ಸ್ಥಳೀಯ ಸಭೆಯು ಒಂದು ಭೌಗೋಳಿಕ ಕ್ಷೇತ್ರದಲ್ಲಿ ಕ್ರಿಸ್ತನ ಆತ್ಮಿಕ ದೇಹದ ದೈಹಿಕ ಅಭಿವ್ಯಕ್ತತೆಯಾಗಿದೆ.
- ಒಂದು ನಿರ್ದಿಷ್ಟ ಕ್ಷೇತ್ರದಲ್ಲಿರುವ ಸ್ಥಳೀಯ ಸಭೆಯು ಆ ಕ್ಷೇತ್ರದಲ್ಲಿ ಕ್ರಿಸ್ತನ ಉದ್ದೇಶಗಳನ್ನು ನೆರವೇರಿಸಲು ಇರುವ ಕ್ರಿಸ್ತನ ಸಾಧನವಾಗಿದೆ.

### ನೀವು ಒಂದು ಸ್ಥಳೀಯ ಸಭೆಯ ಬದ್ಧತೆಯುಳ್ಳ ಒಂದು ಭಾಗವಾಗಿರಬೇಕು?

ನಮ್ಮ ದಿನನಿತ್ಯದ ಜೀವನವನ್ನು ನಾವು ಜೀವಿಸುವ ಸ್ಥಳೀಯ ಸಭೆಯಾದ ಕ್ರಿಸ್ತನ ದೇಹದಲ್ಲಿ -ಸಭೆಯಲ್ಲಿ-ನಮ್ಮ ಸದಸ್ಯತ್ವವಿದೆ.

**ಸ್ಥಳೀಯ ಸಭೆಯು ಕೂಡ ದೇವರ ಯೋಚನೆಯಾಗಿದೆ.**

ರೋಮಾಪುರದವರಿಗೆ 12: 4-8


**ಯಾಕೆಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವುದಿಲ್ಲವೋ ಹಾಗೆಯೇ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ. ದೇವರು ನಮಗೆ ಕೃಪೆ ಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿ ಹೇಳುವವನು ಬುದ್ಧಿ ಹೇಳುವದರಲ್ಲಿಯೂ ನಿರತನಾಗಿರಲಿ. ದಾನ ಕೊಡುವವನು ಯದಾರ್ಥ ಮನಸ್ಸಿನಿಂದ ಕೊಡಲಿ. ಹಿರಿತನ ನಡಿಸುವವನು ಆಸಕ್ತಿಯಿಂದ ನಡಿಸಲಿ. ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ**

- ನೀವು ಇತರರ ಸೇವೆ ಮಾಡಲು ಇತರರಿಂದ ಸೇವೆಹೊಂದಲೂ ಸಾಧ್ಯವಾಗುವುದು
- ಬಲ, ನೆರವು ಮತ್ತು ಪ್ರೋತ್ಸಾಹ ಇರುವುದು.
- ನಾವು ಒಟ್ಟಾಗಿ ಇನ್ನೂ ಎಷ್ಟೋ ಹೆಚ್ಚು ಮಾಡಬಹುದು.
- ಒಂದು ದ್ರಾಕ್ಷೆಯು ಕೊಡಲಾರದ್ದನ್ನು ಒಂದು ಗೊಂಚಲು ದ್ರಾಕ್ಷೆ ಕೊಡಬಲ್ಲದು.

ಯೆಶಾಯ 65:8

**ಯೆಹೋವನು ಹೀಗೆನ್ನುತ್ತಾನೆ-ರಸ ದೊರೆಯಬಹುದಾದ ದ್ರಾಕ್ಷೆಯ ಗೊಂಚಲನ್ನು ಒಬ್ಬನು ನೋಡಿ ಹಾಳು ಮಾಡಬೇಡ, ಅದರಲ್ಲಿ ಪ್ರಯೋಜನ ವಿದೆ ಎನ್ನುವಂತೆ ನಾನು ಸೇವಕರನ್ನು ಲಕ್ಷ್ಯಕ್ಕೆ ತಂದು ಇವರನ್ನೆಲ್ಲಾ ಹಾಳುಮಾಡಬಾರದು ಎಂದು ಅಂದುಕೊಳ್ಳುವೆನು.**

*ಒಂಟಿಯಾಗಿರುವ ವನಪಾಲಕ ಕ್ರೈಸ್ತನು*
*(ಒಂಟಿಯಾಗಿರುವ ವನಗಳ ರಕ್ಷಕ)*




**ನೀವು ಸ್ಥಳದಲ್ಲಿರುವಾಗ ಒಂದು ಸ್ಥಳೀಯ ಸಭೆಗೆ ಬದ್ಧರಾಗಿರತಕ್ಕದ್ದು ದೇಹದ ಅಂಗಗಳು ಪ್ರತ್ಯೇಕವಾಗಿ ಸುತ್ತುತ್ತಿರುವುದಿಲ್ಲ, ಆದರೆ ಒಟ್ಟಾಗಿ ಇರುತ್ತವೆ.**

## ಸ್ಥಳೀಯ ಸಭೆಯ ನಿಯೋಗ

ಸ್ಥಳೀಯ ಸಭೆಯ ನಿಯೋಗವನ್ನು ಐದು ಮುಖ್ಯ ಕ್ಷೇತ್ರಗಳಾಗಿ ಮಾಡಬಹುದು:


### ಸುವಾರ್ತೀಕರಣ ಮತ್ತು ನಿಯೋಗಗಳು

ಜನರಿಗೆ ಸುವಾರ್ತೆ ತಿಳಿಸಿ ಶ್ರೇಷ್ಠ ನಿಯೋಗವನ್ನು ನೆರವೇರಿಸುವುದು.

### ಶಿಷ್ಯತ್ವ

ಗುಣನಡತೆ, ನಡವಳಿಕೆ ಮತ್ತು ಸೇವೆಯಲ್ಲಿ ಕ್ರಿಸ್ತನಂತಾಗಲು ತರಬೇತಿ ಪಡೆವನು ಒಬ್ಬ ಶಿಷ್ಯನಾಗಿದ್ದಾನೆ.

ಶಿಷ್ಯರನ್ನಾಗಿ ಮಾಡುವುದು ಹೊಸ ವಿಶ್ವಾಸಿಗಳನ್ನು ಮಾರ್ಗದರ್ಶಿಸುವುದು ಮತ್ತು ತರಬೇತಿಯನ್ನು ಒಳಗೊಂಡಿರುತ್ತದೆ.



### ಪ್ರಾರ್ಥನೆ ಮತ್ತು ಆರಾಧನೆ

- ಪ್ರಾರ್ಥನೆ ಮತ್ತು ಅರಾಧನೆಗಳ ಮೂಲಕ ನಾವು ನಮ್ಮ ನಗರದ ಮೇಲಿನ ಆತ್ಮಿಕ ವಾತಾವರಣವನ್ನು ಬದಲಾಯಿಸುತ್ತೇವೆ.
- ಪ್ರಾರ್ಥನೆ ಮತ್ತು ಆರಾಧನೆಯು ನಾವು ಸೇರಿಬಂದಾಗ ಆತ್ಮಿಕ ಸೇವೆಯ ವಾತಾವರಣವನ್ನು ಸೃಷ್ಟಿಸುತ್ತದೆ.
- ದೇವರು ಪ್ರಾರ್ಥಿಸುವ ಮತ್ತು ಆರಾಧಿಸುವ ಒಂದು ಸಭೆಯ ಮಧ್ಯದಲ್ಲಿ ಮಾತಾಡುತ್ತಾನೆ.

### ಅನ್ಯೋನ್ಯತೆ


ದೇವರ ಕುಟುಂಬವಾಗಿ (ಮನೆಯಾಗಿ) ಜೀವಿಸುವುದು.


### ಸೇವೆ

ಪವಿತ್ರರಾದವರನ್ನು ಸೇವೆಗಾಗಿ ಸನ್ನಧಗೊಳಸುವುದು.

- ಪ್ರತಿಯೊಬ್ಬ ಸದಸ್ಯನೂ ಅವನ ಕರೆಯನ್ನು ನೆರವೇರಿಸಲು ಸಂಪೂರ್ಣವಾಗಿ ಸನ್ನದ್ಧಗೊಂಡಿದ್ದಾನೆ, ಕಾರ್ಯಸನ್ನದ್ದನಾಗಿದ್ದಾನೆ ಮತ್ತು ಬಿಡುಗಡೆ ಹೊಂದಿದ್ದಾನೆ/ ಕಳುಹಿಸಲ್ಪಟ್ಟಿದ್ದಾನೆ.
- ವಿಶ್ವಾಸಿಗಳು ದೇಹದ ಉನ್ನತಿಗಾಗಿ ಅವರಿಗೆ ಕೊಡಲ್ಪಟ್ಟಿರುವ ವರಗಳನ್ನು ಗುರುತಿಸಿ ಪ್ರಯೋಗಿಸುತ್ತಾರೆ.
- ನಮ್ಮ ಸುತ್ತಲಿನ ಪ್ರಪಂಚದ ಮೇಲೆ ಪರಿಣಾಮ ಬೀರುವುದು.
- ಸೇವಕರನ್ನು ಕಳುಹಿಸಿ ಅವರು ಇತರರನ್ನು ಸೇವೆಗೆ ಸಿದ್ಧರಾಗಿಸುವುದು.

ಒಂದು ಉತ್ತಮವಾಗಿರುವ ಸಭೆಯು ಈ ಎಲ್ಲಾ ಐದು ಕ್ಷೇತ್ರಗಳಲ್ಲಿ ಸರಿಯಾದ ಸಮತೋಲನ ಹೊಂದಿದ್ದು ಎಲ್ಲವುಗಳಿಗೂ ಸಮಾನ ಒತ್ತು ನೀಡುತ್ತವೆ.



# ಸ್ಥಳೀಯ ಸಭೆ

## ಸ್ಥಳೀಯ ಸಭೆ – ಒಂದು ದೇಹ

ಸಭೆಯು ಮನುಷ್ಯ ದೇಹಕ್ಕೆ ಹೋಲಿಸಬಹುದಾದ ಒಂದು "ದೇಹ" ಮನುಷ್ಯ ದೇಹದಲ್ಲಿ ವಿದಿಧ ಕಾರ್ಯಾಂಗಗಳಿವೆ–ಒಟ್ಟು ಒಂಬತ್ತು. ಎಲ್ಲಾ ಕಾರ್ಯಾಂಗಗಳಿಗೆ–ಆರೋಗ್ಯ ಶಕ್ತಿ, ಮತ್ತು ಪುನರುತ್ಪತ್ತಿಗಳಿಗಾಗಿ–ಗಮನ ಕೊಡುವುದು ಮುಖ್ಯ. ನಾವು ಒಂದು ಆಶ್ಚರ್ಯಕರವಾದ ಸಮಾನಾಂತರ (ಹೋಲಿಕೆ) ವನ್ನು ನೋಡಬಹುದು.

1 ಕೊರಿಂಥದವರಿಗೆ 12:12–27

**ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿಯೋ, ಹೇಗೆ ದೇಹದ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವುದೋ, ಹಾಗೆಯೇ ಕ್ರಿಸ್ತನು. ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರೂ ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು. ಒಂದೇ ಆತ್ಮ ನಮ್ಮೆಲ್ಲರಿಗೂ ಪಾನನಾಗಿ ಕೊಡಲ್ಪಟ್ಟಿತು. ದೇಹವು ಒಂದೇ ಅಂಗವಲ್ಲ, ಅನೇಕ ಅಂಗಗಳುಳ್ಳದ್ದಾಗಿದೆ. ಕಾಲು ನಾನು ಕೈಯಲ್ಲದ ಕಾರಣ ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ  ಸೇರದೆ ಇರುವದೋ? ಕಿವಿ– ನಾನು ಕಣ್ಣಲ್ಲದ ಕಾರಣ ನಾನು ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವದೋ? ದೇಹವೆಲ್ಲಾ ಕಣ್ಣಾದರೆ ಕಿವಿಯೆಲ್ಲಿ? ಅದೆಲ್ಲಾ ಕಿವಿಯಾದರೆ ಮೂಗೆಲ್ಲಿ? ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ. ಅವೆಲ್ಲವೂ ಒಂದೇ ಅಂಗವಾಗಿದ್ದರೆ ದೇಹವೆಲ್ಲಿರುವುದು? ಆದರೆ ಅಂಗಗಳೇನೋ ಅನೇಕ, ದೇಹವು ಒಂದೇ. ಕಣ್ಣು ಕೈಗೆ – ನೀನು ನನಗೆ ಅವಶ್ಯವಿಲ್ಲವೆಂದೂ ತಲೆಯು ಕಾಲುಗಳಿಗೆ – ನೀವು ನನಗೆ ಅವಶ್ಯವಿಲ್ಲವೆಂದೂ ಹೇಳುವದಕ್ಕಾಗುವುದಿಲ್ಲ ದೇಹದಲ್ಲಿ ಅಲ್ಪ ಬಲವುಳ್ಳವುಗಳಾಗಿ ಕಾಣುವ ಅಂಗಗಳನ್ನು ಅತ್ಯವಶ್ಯವೆಂದು ತಿಳಿಯಬೇಕಲ್ಲವೋ? ಮತ್ತು ನಾವು ದೇಹದಲ್ಲಿ ಅಲ್ಪಮಾನವುಳ್ಳವುಗಳೆಂದೆಣಿಸುವ ಭಾಗಗಳಿಗೆ ಉಡಿಗೆಯಿಂದ ಹೆಚ್ಚಾದ  ಮಾನವನ್ನು ಕೊಡುವುದುಂಟಲ್ಲಾ? ಹೇಗೆ ಅಂದವಿಲ್ಲದ ಅಂಗಗಳಿಗೆ ಹೆಚ್ಚಾದ ಅಂದವುಂಟಾಗುತ್ತದೆ. ಅಂದವುಳ್ಳ ಅಂಗಗಳಿಗೆ ಏನೂ ಅವಶ್ಯವಿಲ್ಲ. ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ. ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ. ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ. ನೀವು ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ.**

ಎಫೆಸದವರಿಗೆ 4:16

**ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ.**

- ರಕ್ತ ಪರಿಚಲನೆಯ ಅಂಗಗಳು (ವ್ಯೂಹ): ಪ್ರತಿ ವ್ಯಕ್ತಿಗೂ ಆರೈಕೆ ಮತ್ತು ಪೋಷಣೆ ದೊರೆಯುತ್ತದೆಂದು ಖಚಿತಪಡಿಸುವುದು.
- ಮೂಳೆಗಳ ವ್ಯೂಹ: ಸರಿಯಾದ ರಚನೆ, ರೂಪ, ಆಧಾರಗಳಿವೆಯೇ ಎಂದು ಸರಿಯಾದ ನಾಯಕತ್ವ, ಸಂಘಟನೆ ಮತ್ತು ಆಡಳಿತಗಳ ಮೂಲಕ ನೋಡುವುದು.
- ಸ್ನಾಯು ಮಂಡಲ: ಪ್ರತಿಯೊಬ್ಬ ವಿಶ್ವಾಸಿಯೂ ಸೇವಕನಾಗುವಂತೆ ಬಲ, ಚಲನೆಗಳಿವೆಯೇ ಎಂದು ನೋಡುವುದು.
- ಜೀರ್ಣವ್ಯೂಹ: ಬಲಯುತ, ಅಭಿಷಿಕ್ತ ಮತ್ತು ಸಮಯೋಚಿತವಾದ ಪಕ್ವದ ಸೇವೆಯು ದೊರೆತು ಜನರು ಅರಗಿಸಿಕೊಂಡು, ರಕ್ತಗತವಾಗಿ, ಆತ್ಮಿಕ ಪೋಷಣೆ ದೊರೆಯುವಂತೆ ಮಾಡುವುದು.
- ಉಸಿರಾಟದ ವ್ಯೂಹ: ನಿರಂತರವಾದ, ಹೊಸ ಉಸಿರು ಪ್ರೇರಣೆ ಮತ್ತು ಪವಿತ್ರಾತ್ಮನ ಕೆಲಸ ನಡೆಯುತ್ತದೋ ಎಂದು ನೋಡುವುದು.
- ನರಮಂಡಲ: ಸ್ಥಳೀಯ ದೇಹದಲ್ಲಿ ಏನು ನಡೆಯುತ್ತಿದೆ ಎಂಬುದರ ಕುರಿತು ತೀವ್ರ ಸಂವೇದನೆ ಮತ್ತು ಇಂದ್ರೀಯ ಗೋಚರವುಂಟಾಗುವಂತೆ ಮಾಡುತ್ತದೆ.
- ನಿರ್ನಾಳ ಗ್ರಂಥಿಗಳ ಮಂಡಲ: ಇವು ಆತ್ಮಿಕ ಚಟುವಟಿಕೆಗಳಾದ ಪ್ರಾರ್ಥನೆ, ನಂಬಿಕೆ, ಪ್ರೀತಿ, ಸೇವಕತ್ವಗಳು ನಡೆಯುತ್ತವೆಂದು ನೋಡಿಕೊಂಡು ಮತ್ತು ಸಭೆಯ ಮುಖ್ಯ ಕವಾಟುಗಳನ್ನು ಸಂಸ್ಕೃತಿಗಳಿಗೆ ಸಂಬಂಧಿಸಿದ ನವೀನತೆ, ಸಮಕಾಲೀನತೆ, ಜನರನ್ನು ಸದೃಢಗೊಳಿಸುವಿಕೆ, ಆತ್ಮಿಕ ವಿಚಾರಗಳಲ್ಲಿ ನಾಯಕತ್ವ ಮುಂತಾದವುಗಳನ್ನು ಕಾಪಾಡಿಕೊಂಡು, ನೋಡಿಕೊಂಡು ಬರುತ್ತದೆ. ಇದು ಸಣ್ಣ ಪ್ರಮಾಣದಲ್ಲಿದ್ದರೂ ಇದು ರಾಸಾಯನಿಕ ಹತೋಟಿ ಮಂಡಲದಂತಿದ್ದು ದೇಹದ ಬೆಳವಣಿಗೆ, ಆರೋಗ್ಯ ಮತ್ತು ಸಮತೋಲನವನ್ನು ಕಾಪಾಡಿಕೊಂಡು ಬರುತ್ತದೆ.
- ವಿಸರ್ಜನಾ ಮಂಡಲ: ವೈಯಕ್ತಿಕವಾಗಿಯೂ ಸಾಂಘಿಕವಾಗಿಯೂ ಸಭೆಯು ಅನಾರೋಗ್ಯಕರವಾದವುಗಳನ್ನು ಹೊರಹಾಕುವಂತೆ ಮಾಡುವುದು.
- ಪುನರುತ್ಪತ್ತಿ ಮಂಡಲ: ವ್ಯಕ್ತಿಗಳೂ ಸ್ಥಳೀಯ ಸಭೆಯೂ ಆತ್ಮಗಳನ್ನು ಗೆದ್ದುಕೊಂಡು, ಶಿಷ್ಯತ್ವ ಮಾಡಿ, ಹೊಸ ಸಭೆಗಳನ್ನು ನೆಡುವ ಕಾರ್ಯಗಳಂಥ ಕೆಲಸಗಳನ್ನು ಮಾಡುವಂತೆ ಖಚಿತಪಡಿಸುವುದು.

## ಸ್ಥಳೀಯ ಸಭೆ – ಒಂದು ಕುಟುಂಬ

ದೇವರ ಮನೆ (ಆಲಯ) – ಒಂದು ಆತ್ಮಿಕ ಮನೆ

ಗಲಾತ್ಯದವರಿಗೆ 6:10
**ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನ ನಂಬಿಕೆಯುಳ್ಳವರಿಗೆ ಮಾಡೋಣ.**

ಎಫೆಸದವರಿಗೆ 2:19-22
**ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸುಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು; ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತದೊ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪವಿತ್ರಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವುದಕ್ಕಾಗಿ ನಮ್ಮ ಸಂಗಡ ಕಟ್ಟುತ್ತಾ ಇದ್ದೀರಿ.**

1 ತಿಮೊಥೆಯನಿಗೆ 3:15
**ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದು ಕೊಳ್ಳಬೇಕಾದ ರೀತಿಯು ನಿಮಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವು ಆಧಾರವೂ ಆಗಿದೆ.**

(ಗ್ರೀಕ್ ನಲ್ಲಿ "ಮನೆ" "ಓಯ್ಕೋಸ್" = ನಿವಾಸ (ಮನೆ), ಭಾವಾರ್ಥ ಒಂದು ಕುಟುಂಬ)

ಕ್ರಿಸ್ತನ ಸರ್ವಸಮೂಹಕ್ಕೂ ಸ್ಥಳೀಯ ಸಭೆಗೂ ಅನ್ವಯವಾಗುತ್ತದೆ.

ಯೇಸು-ಮನೆಯ ಯಜಮಾನನು.

ಮತ್ತಾಯ 10:25
**ಗುರುವಿನಂತೆ ಆಗುವದು ಶಿಷ್ಯನಿಗೆ ಸಾಕು, ಧಣಿಯಂತೆ ಆಗುವದು ಆಳಿಗೆ ಸಾಕು. ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನಂದಾರು?**

ಗ್ರೀಕ್‌ನಲ್ಲಿ "ಮನೆಯ ಯಜಮಾನ" "ಓಯ್‌ಕೊಡೆಸ್ಪೋಟ್ಸ್" – ಕುಟುಂಬದ ತಲೆ, (ಯಜಮಾನನು)

ನಾವು ದೇವರ ಕುಟುಂಬದಂತೆ ಜೀವಿಸಬೇಕು-ಒಬ್ಬರನ್ನೊಬ್ಬರು ಆರೈಕೆ ಮಾಡಿ, ಚಿಂತಿಸುತ್ತ, ಪ್ರೋತ್ಸಾಹಿಸುತ್ತಾ ಜೀವಿಸಬೇಕು.

## ಸ್ಥಳೀಯ ಸಭೆ-ಒಂದು ಸೈನ್ಯ

ಮತ್ತಾಯ 16:15-19
**ಆತನು ಅವರನ್ನು – ಆದರೆ ನೀವು ನನ್ನನ್ನು ಯಾರನ್ನುತ್ತೀರಿ ಎಂದು ಕೇಳಲಾಗಿ ಸೀಮೋನ್ ಪೇತ್ರನು-ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನ್ನು ಎಂದು ಉತ್ತರ ಕೊಟ್ಟನು ಅದಕ್ಕೆ ಯೇಸು-ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರ ಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ – ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು. ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವುದು; ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು ಅಂದನು.**

ನಾವು ಯುದ್ಧ ಮಾಡುತ್ತಿರುವುದರಿಂದ ಬಹಳ ಎಚ್ಚರವಾಗಿರುವ ಅಗತ್ಯವಿದೆ.




2 ತಿಮೊಥೆಯನಿಗೆ 2:3,4
**ಕ್ರಿಸ್ತಯೇಸುವಿನ ಒಳ್ಳೇ ಸೈನಿಕನಂತೆ ನನ್ನೊಂದಿಗೆ ಶ್ರಮೆಯನ್ನ ಭವಿಸು ಯುದ್ಧಕ್ಕೆ ಹೋಗುವ ಸೈನಿಕನು ಲೋಕ ವ್ಯವಹಾರದಲ್ಲಿ ಸಿಕ್ಕಿಕೊಳ್ಳದೆ ತನ್ನನ್ನು ಸೈನ್ಯದಲ್ಲಿ ಸೇರಿಸಿಕೊಂಡವನನ್ನು ಮೆಚ್ಚಿಸುವುದಕ್ಕೆ ಪ್ರಯಾಸ ಪಡುತ್ತಿರುವನಲ್ಲವೇ.**

ಸೈನ್ಯದಲ್ಲಿ ಒಂದು ಪದವಿ, ಕ್ರಮ ಮತ್ತು ಶಿಸ್ತು ಇದೆ.

ದೇವರು ನಮ್ಮ ಮಧ್ಯದಲ್ಲಿ ನಾಯಕರನ್ನು ಇರಿಸಿದ್ದಾನೆ – ನಮ್ಮನ್ನು ಮುಂದೆ ನಡಿಸಲು

### ಸೈನ್ಯದ ಮನೋಭಾವ

ನಾವು ಯುದ್ಧದಲ್ಲಿರುವುದರಿಂದ ಸದಾ "ಕಟ್ಟೆಚ್ಚರ"ದಿಂದಿರಬೇಕು. ನಾವು ಈ ಜೀವದಲ್ಲಿರುವಾಗೆಲ್ಲ ಯುದ್ಧವಿಲ್ಲದ ಕ್ಷೇತ್ರವೆಂದಿಲ್ಲ.

### ಸೈನ್ಯದ ಜೀವನ–ಶೈಲಿ

ನಮ್ಮ ಜೀವನದ ಕರ್ತವ್ಯಗಳನ್ನು ನಿರ್ವಹಿಸುವಾಗ ಈ ಜೀವನದ ವ್ಯವಹಾರಗಳಲ್ಲಿ ಸಿಲುಕಿಕೊಳ್ಳುವಂತೆ ನಾವು ಸೈನಿಕರಂತೆ ಜೀವಿಸಬೇಕು.

### ಸೇನೆಯ ಶಿಸ್ತು

ನಮ್ಮ ಪೂರ್ಣ ವ್ಯಕ್ತಿಯನ್ನು–ಆತ್ಮ, ಪ್ರಾಣ ಮತ್ತು ದೇಹಗಳನ್ನು ಶಿಸ್ತಿನಲ್ಲಿಟ್ಟುಕೊಳ್ಳಬೇಕು.

*ದೇಹದ ಪ್ರತಿಯೊಬ್ಬ ಸದಸ್ಯನ ಪ್ರಾಮುಖ್ಯತೆಯನ್ನೂ ತಿಳಿದುಕೊಳ್ಳಿರಿ.*

*ನೀವು ಮುಖ್ಯವಾಗಿದ್ದೀರಿ-ಯಾವ ಸ್ಥಳ (ಸ್ಥಾನ), ಕರ್ತವ್ಯದಲ್ಲಿರಲಿ.*

*ಒಂದು ಕುಟುಂಬದಲ್ಲಿ ವಿವಿಧ ಮಟ್ಟದ ಬೆಳವಣಿಗೆಯ ಮತ್ತು ವಿಶ್ವಾಸದ ವ್ಯಕ್ತಿಗಳಿದ್ದಾರೆಂದು ನೆನಪಿಡಿರಿ (ತಂದೆಯಂದಿರು, ತಾಯಂದಿರು, ಸಣ್ಣವರು, ನವಯುವಕರು, ಮಕ್ಕಳು)*

*ಹೀಗೆ ನಾವೆಲ್ಲರೂ ಬೆಳೆಯುತ್ತಿರುವುದರಿಂದ ಸ್ಥಳೀಯ ಸಭೆಯಲ್ಲೂ ಒಬ್ಬರನ್ನೊಬ್ಬರು ತಿಳಿದು ಅರ್ಥಮಾಡಿಕೊಳ್ಳಬೇಕು.*

## ಮುಖ್ಯ ಕಂಠಪಾಠ ವಚನಗಳು

ರೋಮಾಪುರದವರಿಗೆ 12:4–8

**ಯಾಕಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವುದಿಲ್ಲವೋ ಹಾಗೆಯೇ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ. ದೇವರು ನಮಗೆ ಕೃಪೆ ಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. ಬೋಧಿಸುವದನ್ನು ಬೋಧಿಸುವದರಲ್ಲಿಯೂ ಬುದ್ಧಿ ಹೇಳುವವದನು ಬುದ್ಧಿ ಹೇಳುವುದರಲ್ಲಿಯೂ ನಿರತನಾಗಿರಲಿ. ದಾನ ಕೊಡುವವನು ಯಥಾರ್ಥ ಮನಸ್ಸಿನಿಂದ ಕೊಡಲಿ. ಹಿರೀತನ ನಡಿಸುವವನು ಆಸಕ್ತಿಯಿಂದ ನಡಿಸಲಿ. ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ.**

ಎಫೆಸದವರಿಗೆ 1:22,23

**ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುತೆಯುಳ್ಳದ್ದಾಗಿದೆ.**

ಗಲಾತ್ಯದವರಿಗೆ 6:10

**ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ ಮಾಡೋಣ.**

## ಅನ್ವಯ

1. ಸ್ಥಳೀಯ ಸಭೆಯ ಸೇವಾಕ್ಷೇತ್ರವನ್ನು ಸಂಕ್ಷಿಪ್ತ ರೂಪರೇಖೆ ಕೊಡಿರಿ.

2. ನಾನು ಸ್ಥಳೀಯ ಸಭೆಯ ಬದ್ಧನಾದ ಸದಸ್ಯನೋ ಇಲ್ಲವಾದಲ್ಲಿ, ಸ್ಥಳೀಯ ಸಭೆಯ ಕರ್ತವ್ಯ ನಿರತ ಸದಸ್ಯನಾಗಲು ನನಗೆ ಯಾವುದು ಅಡ್ಡಿಯಾಗಿದೆ?

3. ಪ್ರಸ್ತುತದಲ್ಲಿ, ಸ್ಥಳೀಯ ಸಭೆಯಲ್ಲಿ, ನನ್ನ ಸ್ಥಾನ ಮತ್ತು ಕರ್ತವ್ಯವೇನು? ಸ್ಥಳೀಯ ಸಭೆಯ ದೇಹದ ಅರ್ಥಪೂರ್ಣ ಸದಸ್ಯನಾಗಿ–ನನಗಾಗಿರುವ ಕ್ರಿಸ್ತನ ಉದ್ದೇಶವನ್ನು ನೆರವೇರಿಸಲು–ನಾನು ಹೇಗೆ ಇರಬೇಕು?

(ನೀವು ಒಂದು ಸ್ಥಳೀಯ ಸಭೆಯ ಸದಸ್ಯನಾಗಿರದಿದ್ದರೆ, ಒಬ್ಬ ಬದ್ಧನಾದ ಸದಸ್ಯನಾಗುವಂತೆ ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಸದಸ್ಯದ ಪತ್ರಕ್ಕೆ ಸಹಿ ಹಾಕುವುದು ನಿಮ್ಮ ಬದ್ಧತೆಯ ಅಭಿವ್ಯಕ್ತತೆ. ಮಾಹಿತಿ ಕೇಂದ್ರದಿಂದ ಸದಸ್ಯತ್ವದ ಮಾಹಿತಿಯ ಕಿರುಪುಸ್ತಕವನ್ನು ತೆಗೆದುಕೊಳ್ಳಿರಿ ಮತ್ತು ಆ ಕಿರು ಪುಸ್ತಕವನ್ನು ಪರಿಶೀಲಿಸಿರಿ ಕೊಂಡು ಓದಿರಿ.)

# 9

# ಸಭೆಯ ಸಂಸ್ಕಾರಗಳು

(ಈ ಪಾಠವು ನಮಗೆ ಸಭೆಯ ಎರಡು ಸಂಸ್ಕಾರಗಳನ್ನು ಕಲಿಸಲು ರಚಿಸಲ್ಪಟ್ಟಿದೆ. ಸಭೆಯು ಶಾಶ್ವತವಾಗಿ ಅನುಸರಿಸಬೇಕೆಂದು ಕ್ರಿಸ್ತನು ಸ್ಥಾಪಿಸಿದ ವಿಧಿಗಳು ಸಂಸ್ಕಾರಗಳಾಗಿವೆ. ನೀರಿನ ದೀಕ್ಷಾಸ್ನಾನ ಮತ್ತು ಕರ್ತನ ಭೋಜನ ಈ ಎರಡು ಸಂಸ್ಕಾರಗಳಾಗಿವೆ. ನೀರಿನ ದೀಕ್ಷಾಸ್ನಾನ ಮತ್ತು ಕರ್ತನ ಭೋಜನ ಈ ಎರಡು ಸಂಸ್ಕಾರಗಳು ನಮ್ಮ ಕರ್ತನಾದ ಯೇಸು ಕ್ರಿಸ್ತನು ಸಭೆಗಾಗಿ ಸ್ಥಾಪಿಸಿದವುಗಳು. ಒಬ್ಬ ವಿಶ್ವಾಸಿಯು ಪಾಲಿಸುವ ಈ ಎರಡು ಸಂಸ್ಕಾರಗಳು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿ ಪೂರೈಸಿದ್ದು ಅವನ (ವಿಶ್ವಾಸಿಯ) ಜೀವನದಲ್ಲಿ ನೈಜವೂ ಪರಿಣಾಮಕಾರಿಯೂ ಆಗುತ್ತದೆ. ಸಭೆಯ ಸಂಸ್ಕಾರಗಳಲ್ಲಿ ನೀವು ಪಾಲ್ಗೊಳ್ಳುವಾಗ, ನಿಮ್ಮ ಜೀವನಗಳೊಳಗೆ ದೇವರ ಬಲವನ್ನು ಹೇಗೆ ನೀವು ಹೊಂದಬಹುದು ಎಂದು ಕಲಿಯಿರಿ)

## ಸಭೆಯ ಸಂಸ್ಕಾರಗಳು

ಸಭೆಯ ಎರಡು ಸಂಸ್ಕಾರಗಳು ಅಥವಾ ವಿಧಿಗಳು ಇವೆ. ಕ್ರಿಸ್ತನಿಂದ ಆಜ್ಞಾಪಿಸಲ್ಪಟ್ಟ ಸಭೆಯ ಸಂಸ್ಕಾರಗಳನ್ನು ಅಥವಾ ವಿಧಿಗಳನ್ನು ಸಭೆಯು ಶಾಶ್ವತವಾಗಿ ಪಾಲಿಸಬೇಕು. ನಮ್ಮ ಕರ್ತನಾದ ಯೇಸು ಕ್ರಿಸ್ತನು ಸಭೆಗೆ ವಿಧಿಸಿದ ಈ ಸಂಸ್ಕಾರಗಳು ನೀರಿನ ದೀಕ್ಷಾಸ್ನಾನ ಮತ್ತು ಕರ್ತನ ಭೋಜನ.

ಒಬ್ಬ ವಿಶ್ವಾಸಿಯು ಪಾಲಿಸುವ ಈ ಎರಡು ಸಂಸ್ಕಾರಗಳು ಅವನ ಜೀವನದಲ್ಲಿ ಕ್ರಿಸ್ತನು ಶಿಲುಬೆಯಲ್ಲಿ ನೆರವೇರಿಸಿ ಪೂರೈಸಿದ ಕೆಲಸದ ಬಲವು ನೈಜವೂ ಪರಿಣಾಮಕಾರಿಯೂ ಆಗುವಂತೆ ಮಾಡುತ್ತದೆ. ಸಭೆಯ ಸಂಸ್ಕಾರಗಳಲ್ಲಿ ಭಾಗವಹಿಸುವಾಗ ನಮ್ಮ ಜೀವನದೊಳಕ್ಕೆ ದೇವರ ಬಲವನ್ನು ಹೇಗೆ ಹೊಂದುವೆವೆಂದು ತಿಳಿಯಲು ಅಪೇಕ್ಷಿಸುತ್ತೇವೆ.

## ನೀರಿನ ದೀಕ್ಷಾಸ್ನಾನ

ದೇವರ ರಾಜ್ಯವು ಸಮೀಪಿಸುವುದೆಂದು ಪ್ರಕಟಿಸುವಾಗ ಈ ಸಂಸ್ಕಾರವು ಸ್ನಾನಿಕನಾದ ಯೋಹಾನನಿಂದ ಸ್ಥಾಪಿಸಲ್ಪಟಿತು. ಇದು ಪಶ್ಚಾತ್ತಾಪದ ಚಿಹ್ನೆ.

> ಮತ್ತಾಯ 3:1–8
> **ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು–ಪರಲೋಕ ರಾಜ್ಯವು ಸಮೀಪವಾಯಿತು, ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು. ಕರ್ತನ ದಾರಿಯನ್ನು ಸಿದ್ಧಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ದವದೆ ಎಂಬುದಾಗಿ ಪ್ರವಾದಿಯಾದ ಯೆಶಾಯನಿಂದ ಸೂಚಿತನಾದವನು ಇವನೇ. ಈ ಯೋಹಾನನಿಗೆ ಒಂಟೇ ಕೂದಲಿನ ಹೊದಿಕೆಯೂ ಸೊಂಟದಲ್ಲಿ ತೊಗಲಿನ ನಡುಕಟ್ಟೂ ಇದ್ದವು. ಅವನಿಗೆ ಮಿಡಿತೆ ಮತ್ತು ಕಾಡಜೇನು ಆಹಾರವಾಗಿದ್ದವು ಆಗ ಯೆರೋಸಲೇಮೂ ಎಲ್ಲಾ ಯೂದಾಯವೂ ಯೊರ್ದನ್ ಹೊಳೆಯ ಸುತ್ತಲಿರುವ ಎಲ್ಲಾ ಸೀಮೆಯೂ ಅವನ ಬಳಗೆ ಹೊರಟು ಹೋಗಿ, ಅವರು ತಮ್ಮ ತಮ್ಮ ಪಾಪಗಳನ್ನು ಹೇಳಿಕೊಂಡು ಯೊರ್ದನ್ ಹೊಳೆಯಲ್ಲಿ ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು. ಆದರೆ ಅವನು ಫರಿಸಾಯರಲ್ಲಿಯೂ ಸದ್ದುಕಾಯರಲ್ಲಿಯೂ ಅನೇಕರು ತನ್ನಿಂದ ಸ್ನಾನ ಮಾಡಿಸಿಕೊಳ್ಳುವುದಕ್ಕೆ ಬರುವುದನ್ನು ಕಂಡು ಅವರಿಗೆ–ಎಲೈ ಸರ್ಪಜಾತಿಯವರೇ, ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿಕೊಳ್ಳುವದಕ್ಕೆ ನಿಮಗೆ ಉಪದೇಶ ಮಾಡಿದವರಾರು? ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬದನ್ನು ತಕ್ಕ ಫಲದಿಂದ ತೋರಿಸಿರಿ.**

ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡನು–ಆತನಿಗೆ ಪಶ್ಚಾತ್ತಾಪ ಪಡಲು ಏನೂ ಇಲ್ಲದಿದ್ದರೂ–ಎಲ್ಲಾ ನೀತಿಯನ್ನು ನೆರವೇರಿಸಲು ಮಾರ್ಗದರ್ಶನವಾಗಿ ಪ್ರಕಟಿಸಲು.

> ಮತ್ತಾಯ 3:13–16
> **ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೊರ್ದಾನ್ ಹೊಳೆಗೆ ಬಂದನು. ಆಗ ಯೋಹಾನನು–ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳಲು ತಕ್ಕವನಾಗಿರುವಲ್ಲಿ ನೀನು ನನ್ನ ಬಳಗೆ ಬರುವುದೇನು ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ –ಸದ್ಯಕ್ಕೆ ಒಪ್ಪಿಕೋ. ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು. ಯೇಸು ಸ್ನಾನ ಮಾಡಿಸಿಕೊಂಡ ಕೂಡಲೇ ನೀರಿನಿಂದ ಮೇಲಕ್ಕೆ ಬರಲು ಇಗೋ ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವುದನ್ನು ಕಂಡನು.**

*ದೀಕ್ಷಾಸ್ನಾನವು ವಿಧೇಯತೆಯ ಒಂದು ಕ್ರಿಯೆ. ಆಶೀರ್ವಾದದ ವೃದ್ಧಿಯಾದ ಅಳತೆಯನ್ನು ನೀವು ನಿರೀಕ್ಷಿಸಬಹುದು.*

ಹೊಸ ಒಡಂಬಡಿಕೆಯಲ್ಲಿ ದೀಕ್ಷಾಸ್ನಾನವು ಒಂದು ಆಜ್ಞೆಯಾಗಿದೆ

ಮತ್ತಾಯ 28:19-20

**ಆದ್ದರಿಂದ ನೀವು ಹೊರಟು ಹೋಗಿ ಎಲ್ಲ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು, ಆಮೆನ್**.

ದೀಕ್ಷಾಸ್ನಾನವು ನಾವು ಯೇಸುಕ್ರಿಸ್ತನೊಬ್ಬನನ್ನೇ ಹಿಂಬಾಲಿಸುವ ನಿರ್ಧಾರ ಮಾಡಿದ್ದೇವೆಂದು ಅಭಿವ್ಯಕ್ತಗೊಳಿಸುತ್ತದೆ.

ಅಪೊಸ್ತಲರ ಕೃತ್ಯಗಳು 2:38,39

**ಪೇತ್ರನು ಅವರಿಗೆ - ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ, ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು**.

ದೀಕ್ಷಾಸ್ನಾನವು ಯೆಸುವಿನೊಂದಿಗೆ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನಗಳ ಆಂತರ್ಯದ ಅನುಭವದ ಒಂದು ಚಿಹ್ನೆಯಾಗಿದೆ.

ರೋಮಾಪುರದವರಿಗೆ 6:4

**ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು**.

ದೀಕ್ಷಾಸ್ನಾನವು ನೀವು ದೇವರ ಮುಂದೆ ಒಳ್ಳೇ ಮನಸ್ಸಾಕ್ಷಿಯುಳ್ಳವರಾಗಿರಬೇಕೆಂಬ ನಿಮ್ಮ ಅಪೇಕ್ಷೆಯನ್ನು ಅಭಿವ್ಯಕ್ತಪಡಿಸುತ್ತದೆ.

1 ಪೇತ್ರನು 3:21

**ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ, ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ**.

ದೀಕ್ಷಾಸ್ನಾನಕ್ಕೆ  ಬೇಕಾದ ಒಂದೇ ಒಂದು ಅಗತ್ಯವೆಂದರೆ "ಪಶ್ಚಾತ್ತಾಪ ಪಡು"ವುದು ಮತ್ತು ಕರ್ತನಾದ ಯೇಸುಕ್ರಿಸ್ತನಲ್ಲಿ "ನಂಬಿಕೆಯಿಡು"ವುದು.

ಅಪೊಸ್ತಲರ ಕೃತ್ಯಗಳು 8:36,37

**ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು. ಕಂಚುಕಿಯು ಅಗೋ ನೀರು, ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು ಎಂದು ಕೇಳಿದನು**.

ದೀಕ್ಷಾಸ್ನಾನವು ನೀರಿನಿಂದ ಮುಳುಗಿಸುವಿಕೆಯಾಗಿದೆ.

ನೀವು ದೀಕ್ಷಾಸ್ನಾನ ತೆಗೆದು ಕೊಳ್ಳಲು ಅತಿ ಪರಿಶುದ್ಧರಾಗಬೇಕಾಗಿಲ್ಲ.


ನೀರಿನ ದೀಕ್ಷಾಸ್ನಾನವು ನಿಮ್ಮನ್ನು ದೊಡ್ಡ ಆತ್ಮಿಕ ವ್ಯಕ್ತಿಯನ್ನಾಗಿ ಮಾಡುವುದಿಲ್ಲ.

ವಾಕ್ಯ ಮತ್ತು ಪ್ರಾರ್ಥನೆಯ ಮೂಲಕ  ನೀವು ಇನ್ನೂ ಆತ್ಮಿಕವಾಗಿ ಬೆಳೆಯಬೇಕು.

ಅಪೊಸ್ತಲರ ಕೃತ್ಯಗಳು 8:36,37

**ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು ಕಂಚುಕಿಯು ಅಗೋ ನೀರು ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು ಎಂದು ಕೇಳಿದನು** [**ಆಗ ಫಿಲಿಪ್ಪನು ನಿನ್ನ ಪೂರ್ಣ ಹೃದಯದಿಂದ ನಂಬಿದರೆ ತೆಗೆದುಕೊಳ್ಳಬಹುದು ಎಂದನು**.]

ದೀಕ್ಷಾಸ್ನಾನವು ಶಿಲುಬೆಯ ಚಿಹ್ನೆಯ ಪ್ರಕಟನೆಯಾಗಿರುವುದರಿಂದ, ನಿಮ್ಮ ಜೀವನದಲ್ಲಿರುವ ಬಂಧನಗಳನ್ನು, ವ್ಯಸನಗಳನ್ನು ಮುರಿದು ನಿಮಗೆ ಬಿಡುಗಡೆಯನ್ನುಂಟು ಮಾಡುವುದನ್ನು ದೀಕ್ಷಾಸ್ನಾನ ತೆಗೆದುಕೊಳ್ಳುವಾಗ ನೀವು ಅನುಭವಿಸಬಹುದು.



ಅಪೊಸ್ತಲರ ಕೃತ್ಯಗಳಲ್ಲಿ ಜನರು ದೀಕ್ಷಾಸ್ನಾನ ತೆಗೆದುಕೊಂಡ ಪ್ರತಿ ಸಂದರ್ಭದಲ್ಲಿಯೂ ಅವರು "ಯೇಸುವಿನ ಹೆಸರಿನಲ್ಲಿ" ದೀಕ್ಷಾಸ್ನಾನ ಮಾಡಿಸಿಕೊಂಡರು. "ಯೇಸು ನಮಗೆ ಕೊಟ್ಟ ಆತನ ಅಧಿಕಾರದಲ್ಲಿ" ಎಂಬ ಇದರ ಅರ್ಥವನ್ನು ನಾವು ತಿಳುಕೊಳ್ಳಬೇಕು.

ನಾವು ಉಪಯೋಗಿಸುವ ಸೂತ್ರವು: "ಯೇಸುವಿನ ಹೆಸರಿನಲ್ಲಿ (ಅಂದರೆ, ಕ್ರಿಸ್ತನ ಅಧಿಕಾರದಲ್ಲಿ), ತಂದೆ ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ನಾನು ನಿನಗೆ ದಿಕ್ಷಾಸ್ನಾನ ಮಾಡಿಸುತ್ತೇನೆ."

(ಪರಿಶುದ್ಧ ಗ್ರಂಥದ ಆಜ್ಞೆಯ ಮೇರೆಗೆ ನೀವು ನೀರಿನ ದೀಕ್ಷಾಸ್ನಾನ ಮಾಡಿಸಿಕೊಳ್ಳದೆ ಇದ್ದರೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಎಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ದಯವಿಟ್ಟು ಮುಂದಿನ ನೀರಿನ ದೀಕ್ಷಾಸ್ನಾನವು ಯಾವಾಗ ನಡೆಯುವುದೆಂದು ತಿಳಿದು, ನಿಮ್ಮ ಹೆಸರನ್ನು ದಾಖಲು ಪಡಿಸಿರಿ).

## ಕರ್ತನ ಭೋಜನ (ಮೇಜು)

ಮತ್ತಾಯ 26:18-30

**ಆತನು-ನೀವು ಪಟ್ಟಣದೊಳಕ್ಕೆ ಇಂಥವನ ಮನೆಗೆ ಹೋಗಿ ಅವನಿಗೆ-ನನ್ನ ಕಾಲ ಸಮೀಪವಾಯಿತು. ನಿನ್ನ ಮನೆಯಲ್ಲಿ ನನ್ನ ಶಿಷ್ಯರ ಸಂಗಡ ಪಸ್ಕ ಹಬ್ಬ ಮಾಡುತ್ತೇನೆಂದು ಬೋಧಕನು ಹೇಳುತ್ತಾನೆ ಎಂಬುದಾಗಿ ಹೇಳಿರಿ ಅಂದನು. ಶಿಷ್ಯರು ಯೇಸು ತಮಗೆ ಅಪ್ಪಣೆ ಕೊಟ್ಟಂತೆ ಮಾಡಿ ಪಸ್ಕಕ್ಕೆ ಸೌರಿಸಿದರು. ಸಂಜೆಯಾದಾಗ ಆತನು ಹನ್ನೆರಡು ಮಂದಿ ಶಿಷ್ಯರ ಸಂಗಡ ಊಟಕ್ಕೆ ಕೂತುಕೊಂಡನು. ಅವರು ಊಟ ಮಾಡುತ್ತಿರುವಾಗ ಆತನು-ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. ಆಗ ಅವರು ಬಹಳ ದುಃಖಪಟ್ಟು-ಸ್ವಾಮೀ, ನಾನಲ್ಲವಲ್ಲ ಎಂದು ಪ್ರತಿಯೊಬ್ಬರು ಕೇಳತೊಡಗಿದರು. ಅದಕ್ಕಾತನು -ಬಟ್ಟಲಲ್ಲಿ ನನ್ನ ಸಂಗಡ ಕೈ ಅದ್ದಿದವನೇ ನನ್ನನ್ನು ಹಿಡುಕೊಡುವನು. ಮನುಷ್ಯ ಕುಮಾರನು ಹೊರಟು ಹೋಗುತ್ತಾನೆ ಸರಿ, ಹಾಗೆ ಆತನ ವಿಷಯವಾಗಿ ಬರೆದಿದೆಯಲ್ಲಾ. ಆದರೆ ಯಾವನು ಮನುಷ್ಯ ಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು ಅಂದನು. ಆಗ ಆತನನ್ನು ಹಿಡುಕೊಡಬೇಕೆಂದಿದ್ದ ಯೂದನು-ಗುರುವೇ, ನಾನಲ್ಲವಲ್ಲ ಅನ್ನಲಾಗಿ? ಯೇಸು ಅವನಿಗೆ-ನೀನೇ ಹೇಳಿದ್ದೀ ಎಂದು ಹೇಳಿದನು. ಅವರು ಊಟ ಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಶಿಷ್ಯರಿಗೆ ಕೊಟ್ಟು-ತಕ್ಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹ ಅಂದನು. ಆ ಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ. ಇದು ಪಾಪ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ, ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವುದೇ ಇಲ್ಲ ಎಂದು ನಿಮಗೆ ಹೇಳುತ್ತೇನೆ ಅಂದನು. ಬಳಿಕ ಅವರು ಕೀರ್ತನೆಯನ್ನು ಹಾಡಿ ಎಣ್ಣೆಯ ಮರಗಳ ಗುಡ್ಡಕ್ಕೆ ಹೊರಟು ಹೋದರು.**

1 ಕೊರಿಂಥದವರಿಗೆ 11:20-34

**ಪರಂತು ನೀವೆಲ್ಲರೂ ಕೂಡಿ ಬರುವಾಗ ನೀವು ಮಾಡುವ ಭೋಜನವು ಕರ್ತನ ಭೋಜನವಲ್ಲ. ಭೋಜನವಾಗುವಲ್ಲಿ ಪ್ರತಿಯೊಬ್ಬನು ತಾನು ತಂದದ್ದನ್ನು ಮತ್ತೊಬ್ಬರಿಗಿಂತ ಮುಂದಾಗಿ ಊಟ ಮಾಡುತ್ತಾನೆ. ಹೀಗೆ ಒಬ್ಬನು ಹಸಿದಿರುತ್ತಾನೆ, ಮತ್ತೊಬ್ಬನು ಕುಡಿದು ಮತ್ತನಾಗಿರುತ್ತಾನೆ. ಏನು ಉಣ್ಣುವುದಕ್ಕೂ ಕುಡಿಯುವದಕ್ಕೂ ಮನೆಗಳಿಲ್ಲದೆ ಇದ್ದೀರಾ? ಅಥವಾ ದೇವರ ಸಭೆಯನ್ನು ಅಸಡ್ಡೆ ಮಾಡಿ ಏನೂ ಇಲ್ಲದವರನ್ನು ನಾಚಿಕೆಪಡಿಸುತ್ತೀರಾ? ನಾನು ನಿಮಗೇನು ಹೇಳಲಿ? ನಿಮ್ಮನ್ನು ಹೊಗಳಲೋ? ಈ ವಿಷಯದಲ್ಲಿ ಹೊಗಳುವುದಿಲ್ಲ. ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನಂದರೆ-ಕರ್ತನಾದ ಯೇಸು ತಾನು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಮುರಿದು-ಇದು ನಿಮಗೋಸ್ಕರವಾಗಿರುವ ನನ್ನ ದೇಹ: ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು-ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ, ನೀವು ಇದರಲ್ಲಿ ಪಾನ ಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನ ಮಾಡಿರಿ ಅಂದನು. ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನ ಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿ ಪಡಿಸುತ್ತೀರಿ. ಹೀಗಿರುವುದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿನನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹಮಾಡಿದವನಾಗಿರುವನು. ಪ್ರತಿ ಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತೆಯಲ್ಲಿ ಕುಡಿಯಲಿ. ಯಾಕೆಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯ ತೀರ್ಪಿಗೊಳಗಾಗುವನು. ಈ ಕಾರಣದಿಂದಲೇ ನಿಮ್ಮಲ್ಲಿ ಬಹುಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ ಮತ್ತು ಅನೇಕರು ಸಾಯುತ್ತಾರೆ. ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯ ವಿಚಾರಣೆಗೊಳಗಾಗುವುದಿಲ್ಲ. ಆದರೆ ನಾವು ಕರ್ತನ ನ್ಯಾಯ ವಿಚಾರಣೆಗೆ ಒಳಗಾಗಿರಲಾಗಿ ಆತನು-ಇವರಿಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ನಮ್ಮನ್ನು ಶಿಕ್ಷಿಸುತ್ತಾನೆ. ಆದಕಾರಣ ನನ್ನ ಸಹೋದರರೇ, ಈ ಭೋಜನವನ್ನು ಮಾಡುವುದಕ್ಕೆ ಕೂಡಿ ಬರುವಾಗ ಒಬ್ಬರನ್ನೊಬ್ಬರು ಕಾದುಕೊಳ್ಳಿರಿ. ಒಬ್ಬನು ಹಸಿದಿದ್ದರೆ ಅವನು ಮನೆಯಲ್ಲೇ ಊಟ ಮಾಡಲಿ; ನೀವು ಕೂಡಿ ಬಂದದ್ದು ನ್ಯಾಯ ತೀರ್ಪಿಗೊಳಗಾಗುವುದಕ್ಕೆ ಕಾರಣವಾಗಬಾರದು. ಮಿಕ್ಕಿದ ಸಂಗತಿಗಳನ್ನು ನಾನು ಬಂದಾಗ ಕ್ರಮ ಪಡಿಸುತ್ತೇನೆ.**

1 ಕೊರಿಂಥದವರಿಗೆ 10:16-21

**ನಾವು ದೇವಸ್ತೋತ್ರ ಮಾಡಿ ಪಾತ್ರೆಯಲ್ಲಿ ಪಾನ ಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ ನಾವು ರೊಟ್ಟಿಯನ್ನ ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ರೊಟ್ಟಿಯು ಒಂದೇ ಆಗಿರುವುದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕೆಂದರೆ ನಾವೆಲ್ಲರೂ ಒಂದೇ ರೊಟ್ಟಿಯಲ್ಲಿ ಪಾಲು ತಕ್ಕೊಂಡು ತಿನ್ನುತ್ತೇವೆ. ವಂಶಕ್ರಮದಿಂದ ಇಸ್ರಾಯೇಲರಾಗಿರುವವರನ್ನು ಯೋಚಿಸಿರಿ. ಯಜ್ಞ ಮಾಡಿದ್ದನ್ನು ತಿನ್ನುವವರು ಯಜ್ಞವೇದಿಯೊಡನೆ ಭಾಗಿಗಳಾಗಿದ್ದಾರಲ್ಲವೇ ಹೀಗೆ ಹೇಳುವದರಿಂಡ ಏನು ಹೇಳಿದ ಹಾಗಾಯಿತು? ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥವು ವಾಸ್ತವವೆಂದು ಅಥವಾ ವಿಗ್ರಹವು ವಾಸ್ತವವೆಂದು ನನ್ನ ಅಭಿಪ್ರಾಯವೋ? ಅಲ್ಲ. ಆದರೆ ಅನ್ಯ ಜನರು ತಾವು ಅರ್ಪಿಸುವ ಬಲಿಗಳನ್ನು ದೇವರಿಗಲ್ಲ ದೆವ್ವಗಳಿಗೆ ಅರ್ಪಿಸುತ್ತಾರೆಂದು ನನ್ನ ಅಭಿಪ್ರಾಯವು. ನೀವು ದೆವ್ವಗಳೊಡನೆ ಭಾಗಿಗಳಾಗಿರಬೇಕೆಂಬುದು ನನ್ನ ಇಷ್ಟವಲ್ಲ. ನೀವು ಕರ್ತನ ಪಾತ್ರೆ ಮತ್ತು ದೆವ್ವಗಳ ಪಾತ್ರೆ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಕುಡಿಯಲಾರಿರಿ; ಕರ್ತನ ಪಂಕ್ತಿ ಮತ್ತು ದೆವ್ವಗಳ ಪಂಕ್ತಿ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಊಟಮಾಡಲಾರಿರಿ.**

ಕರ್ತನ ಮೇಜು ಸ್ವತಃ ಕರ್ತನಿಂದಲೇ ಪ್ರಾರಂಭಿಸಲ್ಪಟ್ಟಿತು.

ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರೆಲ್ಲರಿಗೂ ಕರ್ತನ ಮೇಜು ತೆರೆದದ್ದಾಗಿದೆ.

*ಕರ್ತನ ಭೋಜನವನ್ನೂ ಆಚರಿಸುವುದು*

*ಈ ಕೆಳಗಿನವುಗಳು ನಮ್ಮ ವೈಯಕ್ತಿಕ ನಂಬಿಕೆಯ ಅಭಿವ್ಯಕ್ತತೆಯಾಗಿದೆ:*

*ಕರ್ತನ ಮರಣ, ಹೂಣಿಡಲ್ಪಡುವಿಕೆ ಮತ್ತು ಪುನರುತ್ಥಾನ, ಮತ್ತು*

*ಕ್ರಿಸ್ತನು ಶಿಲುಬೆಯ ಮೇಲೆ ಸಾಧಿಸಿ ತೀರಿಸಿದ ಕೆಲಸವಾಗಿದೆ*

*ಪ್ರತಿಯೊಂದು ಪ್ರಕಟನೆಯು ಆತ್ಮಿಕ ಕ್ಷೇತ್ರದಲ್ಲಿ ಬಲವುಳ್ಳದ್ದಾಗಿದ್ದು, ನಾವು ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವಾಗ ನಮ್ಮ ಜೀವನದಲ್ಲಿ ಶಿಲುಬೆಯ ಬಲವನ್ನು ಅನುಭವಿಸುವೆವೆಂಬ ನಿರೀಕ್ಷೆ,*

*ಆತನ ಬರೋಣದ ನಮ್ಮ ನಂಬಿಕೆ*

*ಯೇಸುವಿನೊಂದಿಗೆ ನಮ್ಮ ಐಕ್ಯತೆ (ಸ್ವತಃ ಕ್ರಿಸ್ತನ ದೇಹ ಮತ್ತು ರಕ್ತದೊಂದಿಗೆ ನಮ್ಮ ಅನ್ಯೋನ್ಯತೆಯ ಪ್ರಕಟನೆ.)*

1 ಕೊರಿಂಥವರಿಗೆ 10:16

**ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ.**

- ನಾವು ಒಬ್ಬರು ಇನ್ನೊಬ್ಬರೊಂದಿಗೆ ಐಕ್ಯವಾಗಿದ್ದೇವೆ ಎಂಬ ಅಭಿವ್ಯಕ್ತತೆ

1 ಕೊರಿಂಥದವರಿಗೆ 10:17

**ರೊಟ್ಟಿಯು ಒಂದೇಯಾಗಿರುವುದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ, ಯಾಕೆಂದರೆ ನಾವೆಲ್ಲರೂ ಒಂದೇ ರೊಟ್ಟಿಯಲ್ಲಿ ಪಾಲು ತಕ್ಕೊಂಡು ತಿನ್ನುತ್ತೇವೆ.**

ನಾವು ನಮ್ಮ ಹೃದಯಗಳನ್ನು ಈ ರೀತಿ ಸಿದ್ಧಪಡಿಸಬೇಕು

- ನಮ್ಮ ಜೀವನಗಳನ್ನು ಪರೀಕ್ಷಿಸಿಕೊಂಡು ತಿಳಿದಿರುವ ಪಾಪವನ್ನು ಬಿಟ್ಟುಬಿಡುವುದು
- ತೆಗೆದುಕೊಳ್ಳುವ ದ್ರಾಕ್ಷಾರಸ ಮತ್ತು ರೊಟ್ಟಿ ಏನನ್ನು ಸೂಚಿಸುತ್ತವೆ. ಶಿಲುಬೆಯ ಮೇಲೆ ಯೇಸುವಿನ ಮರಣ ಮತ್ತು ಆತನು ಸುರಿಸಿದ ರಕ್ತ ಇವನ್ನು ಎಂದು ತಿಳಿದುಕೊಂಡು ನಂಬಿಕೆಯಿಂದ ಸ್ವೀಕರಿಸುವುದು.

ಕರ್ತನ ಭೋಜನವನ್ನು ಆಚರಿಸುವುದರಲ್ಲಿ ನಾವು ಶಿಲುಬೆಯ ಸಂಪೂರ್ಣ ಆಶೀರ್ವಾದಗಳನ್ನು-ರಕ್ಷಣೆ, ಸ್ವಸ್ಥತೆ, ವಿಮೋಚನೆ ಮತ್ತು ಪರಿಪೂರ್ಣತೆ ಇವುಗಳು ನಮ್ಮ ಜೀವನಗಳೊಳಗೆ ಬಿಡುಗಡೆಯಾಗುತ್ತವೆ ಎಂದು ನಿರೀಕ್ಷಿಸಬಹುದು.




## ಯೋಗ್ಯ ರೀತಿಯಲ್ಲಿ ಅದರಲ್ಲಿ ಪಾಲ್ಗೊಳ್ಳುವುದು

ಕೊರಿಂಥ ಸಭೆಯಲ್ಲಿ ಪೌಲನು ಹೇಳುತ್ತಿರುವ ವಿಷಯಗಳಲ್ಲಿ ಒಂದು ಸಭೆಯಲ್ಲಿ ಜನರ ನಡವಳಿಕೆಯ ಕುರಿತಾಗಿತ್ತು. ಅವರು ಕರ್ತನ ಭೋಜನದಲ್ಲಿ ಎರಡು ವಿಷಯಗಳಲ್ಲಿ ಅಯೋಗ್ಯರಾಗಿ ನಡೆದುಕೊಳ್ಳುತ್ತಿದ್ದರು:




(ಆರಾಧನೆಯ ಭಾಗವಾಗಿ ಅವರು) ಕರ್ತನ ಭೋಜನದಲ್ಲಿ ಪಾಲ್ಗೊಳ್ಳುತ್ತಿದ್ದರು ಮತ್ತು ವಿಗ್ರಹಗಳ ಆರಾಧನೆಗಾಗಿ ವಿಗ್ರಹಗಳಿಗೆ ಅರ್ಪಿಸಲ್ಪಟ್ಟದನ್ನು ತಿನ್ನುತ್ತಿದ್ದರು, ಇದನ್ನು ಪೌಲನು ವಿಗ್ರಹರಾಧನೆ ಎಂದು ಹೇಳುತ್ತಾನೆ (1 ಕೊರಿಂಥದವರಿಗೆ 10:14–33). ನಿಜವಾದ ಸಮಸ್ಯೆಯು ಆಹಾರವಲ್ಲ–ವಿಗ್ರಹಗಳಿಗೆ ಅರ್ಪಿಸಿದ್ದನ್ನು ಭಕ್ತಿಯಿಂದ ಸೇವಿಸುತ್ತಿದ್ದದ್ದು ಮತ್ತು ಇದು ಹೊಸ ವಿಶ್ವಾಸಿಗಳಿಗೆ ಮುಗ್ಗರಿಸುವ ಕಲ್ಲಾದದ್ದು.

ಕರ್ತನ ಭೋಜನವನ್ನು ಒಂದು ಹಬ್ಬವನ್ನಾಚರಿಸಿದಂತೆ ಆಚರಿಸಿದರು (1 ಕೊರಿಂಥದವರಿಗೆ 11:20–22), ಆದುದರಿಂದ, ಯೋಗ್ಯ ರೀತಿಯಲ್ಲಿ ಅದನ್ನು ಆಚರಿಸಬೇಕೆಂದು ಎಚ್ಚರಿಸಲ್ಪಟ್ಟರು. ನಾವು ಅದನ್ನು ಯೋಗ್ಯ ರೀತಿಯಲ್ಲಿ ಆಚರಿಸಿದರೆ ನಮ್ಮ ಜೀವನಗಳಲ್ಲಿ ಶಿಲುಬೆಯ ಎಲ್ಲಾ ಆಶೀರ್ವಾದಗಳನ್ನು ಹೊಂದುವೆವು– ಇವುಗಳಲ್ಲಿ ಸ್ವಸ್ಥತೆ ಒಂದು. ನಾವು ಮಾಡುವುದರ ಮಹತ್ವವನ್ನು ತಿಳಿಯದೆ ಅಥವಾ ಅದಕ್ಕೆ ಗಮನಕೊಡದೆ ನಾವು ಶಿಲುಬೆಯ ಆಶೀರ್ವಾದಗಳನ್ನು ಕಳಕೊಳ್ಳುತ್ತೇವೆ–ಅದರ ಒಂದು ಪರಿಣಾಮವು ಆರೋಗ್ಯವನ್ನು ಕಳಕೊಳ್ಳುತ್ತೇವೆ, "ಹೀಗಾಗಿ... ನಿಮ್ಮಲ್ಲಿ ಅನೇಕರು ಬಲಹೀನರೂ ರೋಗಿಗಳೂ ಆಗಿದ್ದಾರೆ ಮತ್ತು ಅನೇಕರು ಸಾಯುತ್ತಾರೆ..."

## ಒಂದೇ ಅಗತ್ಯತೆ

ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಬೇಕಾದರೆ ನೀವು ನೀರಿನ ದೀಕ್ಷಾ ಸ್ನಾನವನ್ನು ತೆಗೆದುಕೊಂಡಿರಬೇಕು ಎಂದು ಪರಿಶುದ್ಧ ಗ್ರಂಥದಲ್ಲಿ ಸ್ಪಷ್ಟ ಬೋಧನೆ ಇಲ್ಲ. ಆದುದರಿಂದ ನಾವು ಆಲ್ ಪೀಪಲ್ಸ್ ಚರ್ಚ್‌ನಲ್ಲಿ ಹೊಸತಾಗಿ ಹುಟ್ಟಿದ ಎಲ್ಲಾ ವಿಶ್ವಾಸಿಗಳಿಗೆ ಕರ್ತನ ಭೋಜನದಲ್ಲಿ ಅವಕಾಶ ಕೊಡುತ್ತೇವೆ. ಪರಿಶುದ್ಧ ಗ್ರಂಥದಲ್ಲಿ ಒಬ್ಬನು ಯಾವ ವಯಸ್ಸಿನಲ್ಲಿ ನೀರಿನ ದೀಕ್ಷಾಸ್ನಾನ ತೆಗೆದುಕೊಳ್ಳಬೇಕು, ಹಾಗೂ ಕರ್ತನ ಭೋಜನದಲ್ಲಿ ಪಾಲ್ಗೊಳ್ಳಬಹುದು ಎಂದೂ ಹೇಳಲಾಗಿಲ್ಲ. ಒಂದೇ ಅಗತ್ಯತೆಯೆಂದರೆ ಯೇಸುಕ್ರಿಸ್ತನಲ್ಲಿ ವೈಯಕ್ತಿಕ ನಂಬಿಕೆ ಇಡುವುದರಿಂದ ಒಬ್ಬನು ಹೊಸದಾಗಿ ಹುಟ್ಟಿರಬೇಕು (ವಿಶ್ವಾಸಿಯಾಗಿರಬೇಕು). ಈ ರೀತಿಯಾಗಿ ನಾವು ಜನರನ್ನು ನೀರಿನ ದೀಕ್ಷಾಸ್ನಾನ ತೆಗೆದುಕೊಳ್ಳಲು ಮತ್ತು ಕರ್ತನ ಭೋಜನದಲ್ಲಿ ಪಾಲ್ಗೊಳ್ಳಲು ಸ್ವಾಗತಿಸುತ್ತೇವೆ.

## ಕೆಲವು ಸಾಮಾನ್ಯ ಪ್ರಶ್ನೆಗಳು

**ನಾನು ಈ ಹಿಂದೆ ವಿಶ್ವಾಸಿಯಾಗುವ ಮೊದಲು ದೀಕ್ಷಾಸ್ನಾನ–ತೆಗೆದುಕೊಂಡಿದ್ದರೆ "ಚಿಮುಕಿಸಿ ದೀಕ್ಷಾಸ್ನಾನ" ಅಥವಾ "ಮುಳುಗಿ ದೀಕ್ಷಾಸ್ನಾನ", ನಾನು "ಪುನಃ" ದೀಕ್ಷಾಸ್ನಾನ ತೆಗೆದುಕೊಳ್ಳುವ ಅಗತ್ಯವಿದೆಯೋ/ತೆಗೆದುಕೊಳ್ಳಬಹುದೋ?**

ಈಗ ನೀವು ಒಬ್ಬ ವಿಶ್ವಾಸಿಯಾಗಿ, ಹೌದು. ಪುನಃ ದಿಕ್ಷಾಸ್ನಾನ ತೆಗೆದುಕೊಳ್ಳುವುದು ಸರಿಯಾಗಿದೆ ಮತ್ತು ಕ್ರಿಸ್ತನಲ್ಲಿ ನಿಮ್ಮ ನಂಬಿಕೆಯನ್ನು ಅಭಿವ್ಯಕ್ತಗೊಳಿಸುವುದಕ್ಕಾಗಿ ಹಾಗೆ ಮಾಡಿರಿ. ಅಪೊಸ್ತಲರ ಕೃತ್ಯಗಳು 19:1–6ರಲ್ಲಿ ಪೌಲನು, ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಹೊಂದಿದ ಕೆಲವರನ್ನು ಸಂಧಿಸುತ್ತಾನೆ. ಅವನು ಅವರಿಗೆ ಯೇಸು ಕ್ರಿಸ್ತನ ಸುವಾರ್ತೆಯನ್ನು ತಿಳಿಸಿದನು, ಅವರು ನಂಬಿದ ಬಳಿಕ ಅವರು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿದರು.

**ನೀರಿನ ದೀಕ್ಷಾಸ್ನಾನ ತೆಗೆದುಕೊಳ್ಳುವ ಮೊದಲು ನಾನು ಒಂದು ಆತ್ಮಿಕ ಮಟ್ಟವನ್ನು ಅಥವಾ ಆತ್ಮಿಕ ಪ್ರೌಢಿಮೆಯನ್ನು ತಲುಪಬೇಕೋ?**

ಇಲ್ಲ. ಒಬ್ಬನು ಹೊಸದಾಗಿ ಹುಟ್ಟಿದನು. ಯಾಕಂದರೆ ಅವನು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟನು ಎಂಬ ಒಂದೇ ಅಗತ್ಯವನ್ನು ನಾವು ನೋಡುತ್ತೇವೆ. ಅಪೊಸ್ತಲರ ಕೃತ್ಯಗಳಲ್ಲಿ, ಅವರು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟೊಡನೆ ದೀಕ್ಷಾಸ್ನಾನ ಹೊಂದಿದರು ಎಂದು ನೋಡುತ್ತೇವೆ.

**ಒಬ್ಬ ವಿಶ್ವಾಸಿಯು ಇನ್ನೊಬ್ಬ ವಿಶ್ವಾಸಿಗೆ ನೀರಿನ ದೀಕ್ಷಾಸ್ನಾನ ಕೊಡಬಹುದೋ ಅಥವಾ ದೀಕ್ಷಾಸ್ನಾನವನ್ನು ಸಭಾಪಾಲಕರು ಅಥವಾ ಆತ್ಮಿಕ ನಾಯಕರು ಮಾತ್ರ ಕೊಡಬೇಕೋ?**

ಅಪೊಸ್ತಲರ ಕೃತ್ಯಗಳಲ್ಲಿ, ಯೆರೂಸಲೇಮಿನ ಸಭೆಯಲ್ಲಿ ಸಭಾ ಹಿರಿಯನಾಗಿದ್ದ ಫಿಲಿಪ್ಪನು ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸುವುದನ್ನು ನೋಡುತ್ತೇನೆ. ಅವನೇ ಸೌಲನಿಗೆ ತದನಂತರ (ಪೌಲನೆಂಬ ಹೆಸರು ಪಡೆದ) ದೀಕ್ಷಾಸ್ನಾನ ಮಾಡಿಸಲು ಕಳುಹಿಸಲ್ಪಟ್ಟದ್ದನ್ನು ಕೂಡ ನೋಡುತ್ತೇವೆ. ಹೀಗಾಗಿ, ಹೌದು, ಒಬ್ಬ ವಿಶ್ವಾಸಿಯು ಇನ್ನೊಬ್ಬ ವಿಶ್ವಾಸಿಗೆ ದೀಕ್ಷಾಸ್ನಾನ ಮಾಡಿಸಬಹುದು.

**ನಾನು ಕರ್ತನ ಭೋಜನವನ್ನು 'ಅಯೋಗ್ಯ ರೀತಿಯಲ್ಲಿ' ಅದರ ಅರ್ಥವನ್ನು ಸರಿಯಾಗಿ ತಿಳಿಯದೆ, ಅಥವಾ ಅದರಲ್ಲಿ ನಂಬಿಕೆ ಇಲ್ಲದೆ, ತೆಗೆದುಕೊಂಡರೆ ಏನಾಗುವುದು - ನನಗೆ ಒಂದು ಮರಣಕರ ರೋಗ ಹಿಡಿಯಬಹುದೋ?**

ಇಲ್ಲ, ನೀನು ಇದನ್ನು ಹಗುರವಾಗಿ ತೆಗೆದುಕೊಂಡಿದ್ದಿ ಎಂದು ತಿಳಿ. ನೀನು ತಪ್ಪು ಮಾಡಿದ್ದಿ ಎಂದು ಕರ್ತನಿಗೆ ಹೇಳಿ ಕ್ಷಮೆ ಕೇಳಿಕೋ. (ಅಂದರೆ ಅಯೋಗ್ಯ ರೀತಿಯಲ್ಲಿ ತೆಗೆದುಕೊಂಡದ್ದಕ್ಕೆ ಪಶ್ಚಾತಾಪ ಪಟ್ಟು) ಬಳಿಕ, ಮುಂದುವರಿದು ಸರಿಯಾದ ರೀತಿಯಲ್ಲಿ ತೆಗೆದುಕೋ.

**ಕರ್ತನ ಭೋಜನವನ್ನು ಕೊಡುವವರು ಅವರು ಮಾಡುತ್ತಿರುವುದರಲ್ಲಿ ನಂಬಿಕೆಯಿಡದೆ ಕೊಡುತ್ತಿರುವಾಗ ನಾನು ಅದರಲ್ಲಿ ಪಾಲು ತೆಗೆದುಕೊಳ್ಳಬಹುದೋ?**

ತಾನು ಮಾಡುತ್ತಿರುವುದನ್ನು ನಂಬದೆ ಇರುವುದರಿಂದ ತೆಗೆದುಕೊಳ್ಳುವುದಕ್ಕೆ ಬೆಲೆ ಇಲ್ಲ.

**ನಾನು ವಿಶ್ವಾಸಿಯಾಗಿ ಮನೆಯಲ್ಲಿ ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಬಹುದೋ?**

ನಿಶ್ಚಯವಾಗಿ ನೀವು ಅದನ್ನು ಕರ್ತನ ಜ್ಞಾಪಕಾರ್ಥವಾಗಿ ಆತನಿಗಾಗಿ ಮಾಡುವಷ್ಟು ಸಾರಿ, ಕರ್ತನ ಭೋಜನವನ್ನು ವಿಶ್ವಾಸಿಗಳು ಒಬ್ಬರಾಗಲಿ ಹೆಚ್ಚು ಜನರಾಗಲಿ ಮನೆಯಲ್ಲಾಗಲಿ ಇನ್ನಾವ ಸ್ಥಳದಲ್ಲಾಗಲಿ ಆಚರಿಸಬಹುದು.

## ಮುಖ್ಯ ಕಂಠಪಾಠ ವಚನಗಳು

ಅಪೊಸ್ತಲರ ಕೃತ್ಯಗಳು 2:38,39

**ಆಗ ಪೇತ್ರನು ಅವರಿಗೆ-ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು, ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು.**

1 ಕೊರಿಂಥದವರಿಗೆ 10:16

**ನಾವು ದೇವಸ್ತೋತ್ರ ಮಾಡಿ ಪಾತ್ರೆಯಲ್ಲಿ ಪಾನ ಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತದಲ್ಲವೇ.**

1 ಕೊರಿಂಥದವರಿಗೆ 10:17

**ರೊಟ್ಟಿಯು ಒಂದೇಯಾಗಿರುವುದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕೆಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲು ತಕ್ಕೊಂಡು ತಿನ್ನುತ್ತೇವೆ.**

*ಈಗ ನಾನು ನೀರಿನ ದೀಕ್ಷಾಸ್ನಾನದ ಅರ್ಥ ಮತ್ತು ಮಹತ್ವವನ್ನು ತಿಳಿದಿರುವುದರಿಂದ, ನಾನು ಕರ್ತನ ಆಜ್ಞೆಗೆ ವಿಧೇಯನಾಗಿ ನೀರಿನ ದೀಕ್ಷಾಸ್ನಾನ ತೆಗೆದುಕೊಳ್ಳಬೇಕು.*

*ನಾನು ಕರ್ತನ ಭೋಜನವನ್ನು ತೆಗೆದುಕೊಳ್ಳುವಾಗೆಲ್ಲಾ ಅದರ ಅರ್ಥವನ್ನು ಗ್ರಹಿಸಿ ತಿಳುವಳಿಕೆಯಿಂದ ತೆಗೆದುಕೊಳ್ಳಬೇಕು. ಅದನ್ನು ಗೌರವದಿಂದ ಸ್ವೀಕರಿಸುವ ನಿರೀಕ್ಷೆಯಿಂದಿರಬೇಕು.*

## ಅನ್ವಯ

1. ಯಾವುದು ನೀರಿನ ದೀಕ್ಷಾಸ್ನಾನದಲ್ಲೂ ಕರ್ತನ ಭೋಜನದಲ್ಲೂ ಪಾಲ್ಗೊಳ್ಳುವ ಅಭ್ಯಾಸವನ್ನು ನೈಜವಾಗಿಯೂ ಅರ್ಥಗರ್ಭಿತವಾಗಿಯೂ ಮಾಡುತ್ತದೆ?

# 10

# ಕ್ರಿಸ್ತನಲ್ಲಿ

(ಕ್ರಿಸ್ತಯೇಸುವಿನಲ್ಲಿ ದೇವರು ನಮಗೆ ಏನು ಮಾಡಿದ್ದಾನೆ ಎಂದು ತಿಳುಕೊಳ್ಳಲು ಸಹಾಯಮಾಡಿ, ಕ್ರಿಸ್ತನಲ್ಲಿ ನಾವು ಯಾರೆಂದು ನಿರೂಪಿಸಿ, ಆತನಲ್ಲಿ ನಮಗೆ ದೊರೆತ ಸ್ವಾಸ್ತ್ಯವನ್ನು ನಾವು ಹೇಗೆ ಜೀವಿಸುವುದು ಎಂದು ಈ ಪಾಠವು ನಮಗೆ ಬೋಧಿಸಲು ರೂಪಿಸಲ್ಪಟ್ಟಿದೆ).

**ಪೀಠಿಕೆ**

ಕ್ರಿಸ್ತಯೇಸುವಿನಲ್ಲಿ ದೇವರು ನಮಗೆ ಏನು ಮಾಡಿದ್ದಾನೆ, ಕ್ರಿಸ್ತನಲ್ಲಿ ನಾವು ಯಾರು ಎಂದು ಗ್ರಹಿಸಿ, ಕ್ರಿಸ್ತನು ನಮ್ಮಲ್ಲಿರುವ ಜೀವನವನ್ನು ಜೀವಿಸಲು ನಾವು ಸನ್ನಧರಾಗುವ ಅಗತ್ಯವಿದೆ.

"ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ" ಎಂಬ ಎಪಿಸಿಯ ಉಚಿತ ಪ್ರಕಟನೆಯಲ್ಲಿ ಹೇಳಲಾದ ವಿಷಯಗಳು ಈ ಪಾಠದಲ್ಲಿ ಸಂಕ್ಷೇಪವಾಗಿ ಇದೆ.

## ಕ್ರಿಸ್ತನಲ್ಲಿ ನಮ್ಮ ಐಕ್ಯತೆಯನ್ನು ತಿಳುಕೊಳ್ಳುವುದು

### ನಾವು ಕ್ರಿಸ್ತನಲ್ಲಿದ್ದೇವೆ

ಯೋಹಾನ15:1–5

**ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚುಫಲ ಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇಬಳ್ಳಿ ನೀವು ಕೊಂಬೆಗಳು, ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ.**

ಇಲ್ಲಿ, ಕರ್ತನು ಆತನ ಜನರೊಂದಿಗೆ ಆತನ ಸಂಬಂಧವನ್ನು ತಿಳಿಸಲು ದ್ರಾಕ್ಷೇ ಬಳ್ಳಿಯ ಮತ್ತು ಅದರ ಕೊಂಬೆಗಳ ಉದಾಹರಣೆಯನ್ನು ಕೊಟ್ಟನು.

- ನಾವು ಆತನೊಂದಿಗೆ ಸಂಪರ್ಕದಲ್ಲಿದ್ದೇವೆ
- ಆತನಲ್ಲಿ ಇರುವದು ನಮ್ಮಲ್ಲಿ ಇದೆ.
- ನಾವು ದ್ರಾಕ್ಷೇ ಬಳ್ಳಿಯ ಫಲಕೊಡುವ ಭಾಗ–ನಾವು ಕ್ರಿಸ್ತನಂತಿರುವ–ಜೀವವನ್ನು ಪ್ರಕಟಿಸುತ್ತೇವೆ.

2 ಕೊರಿಂಥದವರಿಗೆ 5:17

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**

- ನಾವು ಮೊದಲು ಇಲ್ಲದೆ ಇದದ್ದು ಏನೋ ಒಂದು ಆಗುತ್ತೇವೆ.
- ನಾವು ಮೊದಲು ಅಸ್ತಿತ್ವದಲ್ಲಿ ಇಲ್ಲದೆ ಇದ್ದುದ್ದು ಈಗ ಅಸ್ತಿತ್ವಕ್ಕೆ ಬಂದಿದ್ದೇವೆ.
- ದೇವರು 'ಹಳೆಯ ನನ್ನನ್ನು' ತೆಗೆದು ಕ್ರಿಸ್ತನಲ್ಲಿ ಹಾಕಲಿಲ್ಲ. ಬದಲಾಗಿ ಆತನು ನನ್ನನ್ನು ಒಂದು ನೂತನ ಸೃಷ್ಟಿಯಾಗಿ ಮಾಡಿ ನನ್ನನ್ನು ಕ್ರಿಸ್ತನಲ್ಲಿ ಹಾಕಿದನು. ನಾನು ಒಬ್ಬ ನೂತನ ಸೃಷ್ಟಿಯಾದೆನು ನಾನು ಕ್ರಿಸ್ತ ಯೇಸುವಿನೊಳಕ್ಕೆ ಬಂದಾಗ ಒಂದು ನೂತನ ವಿಷಯ, ಒಬ್ಬ ನೂತನ ಮನುಷ್ಯನಾದೆನು.

**ಕ್ರಿಸ್ತನಲ್ಲಿ ನೀವು ಯಾರಾಗಿದ್ದೀರೋ ಅದೇ ನಿಜವಾಗಿ ಆಗಿದ್ದೀರಿ!**

### ನಮಗೆ ನೂತನ ಗುರುತು ಇದೆ

- ಒಮ್ಮೆ ನಾವು ಪಾಪಿಗಳಾಗಿದ್ದೆವು, ಆದರೆ ಈಗ ನಾವು ಕ್ರಿಸ್ತನಲ್ಲಿ ಪವಿತ್ರರಾದವರು.
- ಒಮ್ಮೆ ನಾವು ಅಪರಾಧ ನಿರ್ಣಯ ಹೊಂದಿದ್ದೆವು, ಆದರೆ ಈಗ ಕ್ರಿಸ್ತನಲ್ಲಿ ನಾವು ನೀತಿ ನಿರ್ಣಯ ಹೊಂದಿದ್ದೇವೆ.
- ಒಮ್ಮೆ ನಾವು ಅನೀತಿವಂತರಾಗಿದ್ದೆವು, ಆದರೆ ಈಗ ದೇವರಲ್ಲಿ ನಾವು ನೀತಿ ಸ್ವರೂಪಿಗಳಾಗಿದ್ದೇವೆ.
- ಆತ್ಮಿಕವಾಗಿ, ನಾವು ಹಿಂದೆ ಇದ್ದವರಾಗಿ ಇಲ್ಲ.




ಇದರ ಅರ್ಥ ನಾವು ನಮ್ಮ ಸ್ವ-ಬಿಂಬವನ್ನು ಬದಲಾಯಿಸಬೇಕಾಗಿದೆ - ನಮ್ಮ ಕುರಿತು ನಾವು ಯೋಚಿಸುವುದರಲ್ಲಿ, ಮಾತಾಡುವುದರಲ್ಲಿ, ಕ್ರಿಸ್ತನಲ್ಲಿ ದೇವರು ನಮ್ಮನ್ನು ನೋಡುವ ಹಾಗೆ ನಮ್ಮ ಕುರಿತು ನಾವು ಯೋಚಿಸಬೇಕು, ಮಾತಾಡಬೇಕು- ನಾವು ಮೊದಲದಂತೆ ಅಥವಾ ಬೇರೆಯವರು ನಮ್ಮನ್ನು ನೋಡಿದ್ದ ಹಾಗೆ ಇರುವ ಬದಲು.

### ಈ ಸತ್ಯವು ನಿಮ್ಮ ಜೀವನವನ್ನು ಹೇಗೆ ಬದಲಾಯಿಸಬಹುದು?

### ಅದು ನಿಮ್ಮ ಸ್ವ ಬಿಂಬವನ್ನು ಬದಲಾಯಿಸುವುದು

ಕ್ರಿಸ್ತನಲ್ಲಿ ನೀವು ಯಾರಾಗಿದ್ದೀರೋ ನಿಜವಾಗಿಯೂ ನೀವು ಹಾಗೆ ಇದ್ದೀರಿ! ನಿಮ್ಮ ಸ್ವ ಬಿಂಬವನ್ನು ನಿಮ್ಮ ಸಾಧನೆಗಳ ಮೇಲಲ್ಲ, ಇತರರು ನಿಮ್ಮ ಕುರಿತು ಹೇಳುವುದರ ಮೇಲಲ್ಲ, ಆದರೆ ನೀವು ಕ್ರಿಸ್ತನಲ್ಲಿ ಯಾರಾಗಿದ್ದೀರೋ ಅದರ ಮೇಲೆ.

### ಅದು ನೀವು ದೇವರೊಂದಿಗೆ ಸಂಬಂಧಿಸಿಕೊಳ್ಳುವುದನ್ನು ಬದಲಾಯಿಸುತ್ತದೆ

ನೀವು ದೇವರೊಂದಿಗೆ ಸಂಬಂಧಿಸಿಕೊಳ್ಳುವ ರೀತಿ, ದೇವರೊಂದಿಗಿನ ನಿಮ್ಮ ಅನುದಿನದ ಅನ್ಯೋನ್ಯತೆ, ದೇವರ ಪ್ರಸನ್ನತೆಗೆ ನಿಮ್ಮ ಪ್ರವೇಶ-ಇವು ನಿಮ್ಮ ಕ್ರಿಯೆಗಳನ್ನಾಧರಿಸಿಲ್ಲ. ನೀವು ಕ್ರಿಸ್ತನಲ್ಲಿ ಯಾರಾಗಿದ್ದೀರೋ ಅದರ ಮೇಲೆ ಆಧರಿಸಿದೆ.

### ಅದು ಜೀವನದಲ್ಲಿ ಬರುವ ಸವಾಲುಗಳ ಮತ್ತು ಕಷ್ಟಗಳನ್ನು ನೀವು ಎದುರಿಸುವ ರೀತಿಯನ್ನು ಬದಲಾಯಿಸಬಹುದು.

ಕ್ರಿಸ್ತನು ನಿಮ್ಮಲ್ಲಿದ್ದಾನೆ, ನೀವು ಕ್ರಿಸ್ತನಲ್ಲಿದ್ದೀರಿ-ನೀವು ಜಯಿಸುವಿರಿ. ದೇವರು ಮತ್ತು ನೀವು ಬಹು ಸಂಖ್ಯಾತರು.

### ಅದು ನಿಮ್ಮ ಜೀವನ-ಶೈಲಿಯನ್ನು ಬದಲಾಯಿಸುವುದು ಅದು

ನಿಮ್ಮ ಜೀವನದಲ್ಲಿ ಪಾಪವನ್ನು ಜಯಿಸಲು ಸಹಾಯಮಾಡುವುದು

> ರೋಮಾಪುರದವರಿಗೆ 6:14
>
> **ಯಾಕೆಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ.**

ಇನ್ನು ಮೇಲೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು. ನೀವು ಪಾಪಕ್ಕೆ ದಾಸರಾಗಿರಬೇಕಾಗಿಲ್ಲ.

### ಅದು ನೀವು ದೆವ್ವಗಳನ್ನೂ ದೆವ್ವಗಳ ಬಲವನ್ನೂ ಎದುರಿಸುವ ರೀತಿಯನ್ನು ಬದಲಾಯಿಸುವುದು.

ನೀವು ಕ್ರಿಸ್ತನಲ್ಲಿದ್ದೀರೆಂದು ತಿಳಿದಾಗ, ನೀವು ದೆವ್ವಗಳನ್ನೂ ದೆವ್ವಗಳ ಬಲವನ್ನೂ ದೃಢ ನಂಬಿಕೆಯಿಂದ ಎದುರಿಸಬಹುದು.




**ನೀವು ಜನರೊಂದಿಗೆ ಸಂಬಂಧಿಸುವ ರೀತಿಯನ್ನು ಅದು ಬದಲಾಯಿಸುವುದು.**


ಒಬ್ಬರು, ಸಹಜ ಸ್ಥಿತಿಯಲ್ಲಿ, ಒಬ್ಬ ದೊಡ್ಡ ವ್ಯಕ್ತಿಯಾಗಿರದಿದ್ದರೂ, ಅವನು ಕ್ರಿಸ್ತನಲ್ಲಿದ್ದರೆ, ಅವನು ನಿಮ್ಮ ಒಬ್ಬ ಸಹೋದರನು. ನೀವು ಅವರ ವಿದ್ಯೆ, ವಿದ್ಯಾರ್ಹತೆಗಳಿಗೆ ಸಂಬಂಧಿಸುವುದಿಲ್ಲ. ಅದನ್ನು ಕ್ರಿಸ್ತನಲ್ಲಿ ಒಬ್ಬ ಸಹೋದರರು. ನೀವು ಅವರನ್ನು ಹಾಗೆ ನಡಿಸಿಕೊಳ್ಳತಕ್ಕದ್ದು. ಆ ಸಹೋದರರಿಗೆ ಹೆಚ್ಚು ಫಲಕಾರಿಯಾದ ಸೇವೆಯಿದ್ದರೆ, ದೇವರು ಅವರನ್ನು ಆಶೀರ್ವದಿಸಲಿ, ಅವರು ಕ್ರಿಸ್ತನಲ್ಲಿ ನಿಮ್ಮ ಸಹೋದರರು. ನೀವು ಒಬ್ಬರೊಡನೊಬ್ಬರು ಪೈಪೋಟಿಯಲ್ಲಿಲ್ಲ. ಜೊತೆಯಾಗಿ ಸೇವೆ ಮಾಡುತ್ತಿದ್ದೀರಿ. ನೀವು ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದೀರಿ. ನೀವು ಅಭದ್ರಪಡಬಾರದು. ನಾವೆಲ್ಲರೂ ಕ್ರಿಸ್ತನ ದೇಹಕ್ಕೆ ಜೋಡಿಸಲ್ಪಟ್ಟಿದ್ದೇವೆ.

1 ಕೊರಿಂಥದವರಿಗೆ 6:9-11

**ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂಬುದು ನಿಮಗೆ ತಿಳಿಯದೋ? ಮೋಸ ಹೋಗಬೇಡಿರಿ, ಜಾರರು, ವಿಗ್ರಹಾರಾಧಕರು, ವ್ಯಭಿಚಾರಿಗಳು, ವಿಟರು, ಪುರುಷಗಾಮಿಗಳು, ಕಳ್ಳರು ಲೋಭಿಗಳು ಕುಡುಕರು ಬೈಯುವವರು, ಸುಲು ಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ, ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ; ಆದರೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವ ಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ.**

| | | |
|---|---|---|
| **ತೊಳೆಯಲ್ಪಟ್ಟಿರಿ** | = | ಶುದ್ಧವಾದಿರಿ |
| **ಪ್ರತಿಷ್ಠಿಸಲ್ಪಟ್ಟಿರಿ** | = | ದೇವರಿಗಾಗಿಯೂ ಆತನ ಉದ್ದೇಶಗಳಿಗಾಗಿಯೂ ಪ್ರತ್ಯೇಕಿಸಲ್ಪಟ್ಟಿರಿ. |
| **ನೀತಿ ನಿರ್ಣಯ ಹೊಂದಿದಿರಿ** | = | ಬಿಡುಗಡೆಹೊಂದಿದಿರಿ, ತಪ್ಪಿತಸ್ಥರಲ್ಲವೆಂದು ಪ್ರಕಟಿಸಲ್ಪಟ್ಟಿರಿ, ಸಂಪೂರ್ಣವಾಗಿ ಕ್ಷಮಿಸಲ್ಪಟ್ಟಿರಿ, ಮುಗ್ಧರಾದಿರಿ, ಮಾಡಿಯೇ-ಇಲ್ಲವೆಂಬಂತಾದೆನು. |







**ಪ್ರತಿಯೊಂದು ಆಶೀರ್ವಾದದಿಂದ ಆಶೀರ್ವದಿಸಲ್ಪಟ್ಟೆವು**

ಎಫೆಸದವರಿಗೆ 1:3

**ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮಿಯ ವರಗಳನ್ನು ನಮಗೆ ಕ್ರಿಸ್ತಯೇಸುವಿನಲ್ಲಿ ಅನುಗ್ರಹಿಸಿದ್ದಾನೆ.**

**ಜಯಶಾಲಿಗಳಾಗಿ ಮಾಡಲ್ಪಟ್ಟೆವು**

2 ಕೊರಿಂಥದವರಿಗೆ 2:14

**ಕ್ರಿಸ್ತನ ಅನ್ಯೋನ್ಯತೆಯಲ್ಲಿ ನಮ್ಮನ್ನು ಯಾವಾಗಲೂ ಜಯೋತ್ಸವದೊಡನೆ ಮೆರೆಸುತ್ತಾ ಆತನ ವಿಷಯವಾದ ಜ್ಞಾನವೆಂಬ ಸುವಾಸನೆಯನ್ನು ನಮ್ಮ ಮೂಲಕ ಎಲ್ಲಾ ಸ್ಥಳಗಳಲ್ಲಿ ವ್ಯಾಪನಗೊಳಿಸುತ್ತಾ ಬರುವ ದೇವರಿಗೆ ಸ್ತೋತ್ರವು.**




**ಜೀವದಲ್ಲಿ ಆಳುವೆವು**

ರೋಮಾಪುರದವರಿಗೆ 5:17

**ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.**

**ಕ್ರಿಸ್ತನೊಂದಿಗೆ ಎಣಿಸಲ್ಪಟ್ಟಿದ್ದೇವೆ-ಶಿಲುಬೆಗೆ ಹಾಕಲ್ಪಟ್ಟು ಹೂಣಲ್ಪಟ್ಟು, ಎಬ್ಬಿಸಲ್ಪಟ್ಟು, ಕೂಡ್ರಿಸಲ್ಪಟ್ಟಿದ್ದೇವೆ.**

ನಾವು ಕ್ರಿಸ್ತನಲ್ಲಿರುವುದರಿಂದ, ಆತನ ಶಿಲುಬೆಗೆ ಜಡಿಯಲ್ಪಡುವಿಕೆ, ಹೂಣಿಡಲ್ಪಡುವಿಕೆ, ಪುನರುತ್ಥಾನ, ಪರಲೋಕಕ್ಕೆ ಏರಿಹೋಗಲ್ಪಡುವಿಕೆ ಮತ್ತು ತಂದೆಯ ಬಲಗಡೆಯಲ್ಲಿ ಆಸೀನನಾಗುವಿಕೆಗಳಲ್ಲಿ ಕ್ರಿಸ್ತನೊಂದಿಗೆ ಎಣಿಸಲ್ಪಟ್ಟಿದ್ದೇವೆ. ಕ್ರಿಸ್ತನೊಂದಿಗೆ ನಮ್ಮ ಈಗಿನ ಐಕ್ಯತೆಯು ಕ್ರಿಸ್ತನು ಹಿಂದೆ ಸಾಧಿಸಲ್ಪಟ್ಟವುಗಳಲ್ಲಿ ನಮಗೆ ಪಾಲುಕೊಡುತ್ತದೆ.

ಕ್ರಿಸ್ತನೊಂದಿಗಿನ ನಮ್ಮ ಈಗಿನ ಐಕ್ಯತೆಯು ಆತನು ಹಿಂದೆ ಸಾಧಿಸಿದ್ದವುಗಳಲ್ಲಿ ನಾವು ಆತನಲ್ಲಿದ್ದಂತೆ ಮಾಡುತ್ತದೆ.

ರೋಮಾಪುರದವರಿಗೆ 6:1–7

**ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾಗಿದ್ದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡೆದುಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನದಲ್ಲಿ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ.**

ಎಫೆಸದವರಿಗೆ 2:1–6,7

**ಆತನು ಅಪರಾಧಗಳ ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನು ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವ ಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು. ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು. ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದದು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗದ್ದೀರಿ) ಬದುಕಿಸಿದ್ದಲ್ಲದೆ ತಾನು ಕ್ರಿಸ್ತಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ.**

- ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟದ್ದೆವು ಪಾಪದ ದೇಹ/ಪಾಪದ ಅಧಿಕಾರ/ ಬಲ ನಾಶಗೊಳಸಲ್ಪಟ್ಟಿತು.
- ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದೇವೆ–ಹಿಂದಿನ ಜೀವನದಿಂದ ಬೇರ್ಪಡಿಸಲ್ಪಟ್ಟೆವು.
- ಕ್ರಿಸ್ತನೊಂದಿಗೆ ಪರಲೋಕ ರಾಜ್ಯಕ್ಕೆ ಎಬ್ಬಿಸಿಲ್ಪಟ್ಟೆವು–ಈಗಿನ ಯುಗದಿಂದ ಪ್ರಪಂಚದಿಂದ ಬೇರ್ಪಡಿಸಲ್ಪಟ್ಟೆವು.
- ಕ್ರಿಸ್ತನೊಂದಿಗೆ ಕೂಡ್ರಿಸಲ್ಪಟ್ಟೆವು–ಅಧಿಕಾರ ನಡಿಸಿ ಆಳಲು.




(ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆಂದು ಪರಿಶುದ್ಧ ಗ್ರಂಥದಲ್ಲಿ ಇನ್ನೂ ಹೆಚ್ಚಿನ ವಿಷಯಗಳಿವೆ. ಎಪಿಸಿಯ ಪ್ರಕಟನೆಯಾದ "ನಾವು ಕ್ರಿಸ್ತನಲ್ಲಿ ಯಾರು" ಎಂಬ ಪುಸ್ತಕವನ್ನು ತೆಗೆದುಕೊಂಡು ಅಧ್ಯಯನ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.)

## ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ ಎಂಬಂತೆ ಜೀವಿಸಬೇಕು

### ಆತನಲ್ಲಿ ನೆಲೆಗೊಂಡಿರ್ರಿ

ಯೋಹಾನ 15:4,5

**ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ? ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ.**

ನಾವು ಆತನಲ್ಲಿ ನೆಲೆಗೊಂಡಿದ್ದರೆ, ಮತ್ತು ಆತನು ನಮ್ಮಲ್ಲಿ ನೆಲೆಗೊಂಡಿದ್ದರೆ, ನಾವು ಕ್ರಿಸ್ತನು ನಡೆದಂತೆ ನಡೆಯುವೆವು.

ಆತನಲ್ಲಿ ನಿಮಗಿರುವ ಪ್ರತಿಯೊಂದು ಒಳ್ಳೇ ವಿಷಯವನ್ನೂ ಒಪ್ಪಿಕೊಳ್ಳಿರಿ.



***ನೀವು ಕ್ರಿಸ್ತನಂತೆ ನಡೆಯುವುದನ್ನು ಸ್ವಲ್ಪ ಅಕ್ಷರಶಃ ತೆಗೆದುಕೊಂಡಿದ್ದೀರೆಂದು ನಾನು ಭಾವಿಸುತ್ತೇನೆ.***

ಫಿಲೆಮೋನನಿಗೆ 1:66

**ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ.**

- ಕ್ರಿಸ್ತನಲ್ಲಿ ನಿನ್ನಲ್ಲಿರುವ ಪ್ರತಿಯೊಂದು ಒಳ್ಳೆಯ ವಿಷಯವನ್ನು ಅರಿಕೆ ಮಾಡಿ ಒಪ್ಪಿಕೋ.
- ನಿನ್ನ ಹಕ್ಕುಗಳನ್ನು ತಿಳುಕೊಂಡು ದೃಢವಾಗಿ ನಿಲ್ಲು.

## ಮುಖ್ಯ ಕಂಠಪಾಠ ವಚನಗಳು

2 ಕೊರಿಂಥದವರಿಗೆ 5:17

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**

ಯೋಹಾನ 15:4,5

**ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೇ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ.**

(ಹೆಚ್ಚಿನ ಅಧ್ಯಯಯನಕ್ಕಾಗಿ ಎಪಿಸಿಯ ಉಚಿತ ಪ್ರಕಟನೆಯಾದ "ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ" ಓದಿರಿ.)

## ಅನ್ವಯ

1. ದೇವರು ನನಗೆ ಮಾಡಿದ್ದೆಲ್ಲವುಗಳ ಮತ್ತು ನನಗೆ ಕ್ರಿಸ್ತನಲ್ಲಿ ಕೊಟ್ಟ ಎಲ್ಲವುಗಳ ಮೂಲಕವಾಗಿ ನಾನು ಮಾಡಬೇಕೆಂದು ದೇವರು ಅಪೇಕ್ಷಿಸುತ್ತಾನೆ.

2. ನಾನು ಕ್ರಿಸ್ತನೊಂದಿಗೆ ಐಕ್ಯವಾಗಿರುವುದನ್ನು ಹೇಗೆ ಜೀವಿಸಬೇಕು?

3. ದೇವರು ಕ್ರಿಸ್ತನಲ್ಲಿ ನನಗಾಗಿ ಮಾಡಿದ್ದೆಲ್ಲವನ್ನು ನಾನು ನನ್ನ ದಿನನಿತ್ಯದ ಜೀವನದಲ್ಲಿ ಹೇಗೆ ಅನುಭವಿಸುತ್ತಿದ್ದೇನೆ?

4. "ಕ್ರಿಸ್ತನಲ್ಲಿರುವುದು" ಹೇಗೆ

- ನನ್ನ ಸ್ವ–ಬಿಂಬವನ್ನು ಬದಲಾಯಿಸುತ್ತದೆ?

- ನಾನು ದೇವರೊಂದಿಗೆ ಸಂಬಂಧಿಸುವ ರೀತಿಯನ್ನು ಬದಲಾಯಿಸುತ್ತದೆ?

- ನಾನು ಜೀವನದಲ್ಲಿ ಸವಾಲುಗಳನ್ನು ಮತ್ತು ಕಷ್ಟಗಳನ್ನು ಎದುರಿಸುವ ರೀತಿಯನ್ನು ಹೇಗೆ ಬದಲಾಯಿಸುತ್ತದೆ?

- ನನ್ನ ಜೀವನ ಶೈಲಿಯನ್ನು ಬದಲಾಯಿಸುತ್ತದೆ?

- ದೆವ್ವಗಳನ್ನು ದೆವ್ವಗಳ ಬಲವನ್ನೂ ಎದುರಿಸುವುದನ್ನು ಹೇಗೆ ಬದಲಾಯಿಸುತ್ತದೆ?

- ನಾನು ಜನರೊಂದಿಗೆ ಸಂಬಂಧಿಸುವ ರೀತಿಯನ್ನು ಬದಲಾಯಿಸುತ್ತದೆ?

# 11

# ಪವಿತ್ರಾತ್ಮನು

(ಒಬ್ಬ ವಿಶ್ವಾಸಿಯ ಜೀವನದಲ್ಲಿ ವ್ಯಕ್ತಿಯಾದ ಪವಿತ್ರಾತ್ಮನ ಮತ್ತು ಆತನ ಕೆಲಸದ ಕುರಿತು ಬೋಧಿಸಲು ಈ ಪಾಠವು ರೂಪಿಸಲ್ಪಟ್ಟಿದೆ. ಪವಿತ್ರಾತ್ಮ ಭರಿತರಾಗುವುದು, ಪವಿತ್ರಾತ್ಮನಲ್ಲಿ ನಡೆಯುವುದು, ಪವಿತ್ರಾತ್ಮನಿಂದ ನಡಿಸಲ್ಪಡುವುದು ಮತ್ತು ಪವಿತ್ರಾತ್ಮನ ದೀಕ್ಷಸ್ನಾನಗಳಂಥ ವಿಷಯಗಳು ಇಲ್ಲಿ ಹೇಳಲಾಗಿದೆ.)

### ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ.

"ಗಾಳಿಯ" ಸಾದೃಶ್ಯದ

“ಆತ್ಮ”ನಿಗೆ ಇಬ್ರಿಯ ಮತ್ತು ಗ್ರೀಕ್ ಭಾಷೆಗಳಲ್ಲಿ ಅಕ್ಷರತ 'ಗಾಳಿ' ಎಂಬ ಅರ್ಥ ಇದೆ

ಇಬ್ರಿಯ “ರುಹಾ” “ಉಸಿರು, ಗಾಳಿ ಬಲ ಗಾಳಿ, ವಾಯು"

ಗೀಕ್ : ನ್ಯೂಮ” – ಗಾಳಿ “ಉಸಿರು”, ಉಸಿರಾಡು, ಊದು';

ಗಾಳಿ : ನಾವು ಬೇರೆ ಬೇರೆ ವಿಷಯಗಳನ್ನು ಮಾಡುತ್ತೇವೆ.

ನಾವು ಗಾಳಿಯನ್ನು ಉಸಿರಾಡುತ್ತೇವೆ (ವಾಯು)

ನಮಗೆ ಗಾಳಿಯ ಅನುಭವವಾಗುತ್ತದೆ.

ಗಾಳಿ (ವಾಯುವಿಂದ) ಯಿಂದ ನಾವು ಶಕ್ತಿಯನ್ನು ಉತ್ಪಾದಿಸಬಹುದು.

ಸಮುದ್ರದಲ್ಲಿ ಹೋಗಲು ನಾವು ಗಾಳಿಯನ್ನು ಉಪಯೋಗಿಸಬಹುದು.

ವಿಮಾನದಲ್ಲಿ ಪ್ರಯಾಣಿಸಲು ಗಾಳಿಯನ್ನು ಎಳಕೊಳ್ಳುತ್ತೇವೆ.

ಒಂದು ಮಟ್ಟದಲ್ಲಿದ್ದು ಅದೇ ರೀತಿಯಲ್ಲಿ ನಾವು ಒಂದು ಮಟ್ಟದಲ್ಲಿದ್ದು ಆತ್ಮನ ಗಾಳಿಯನ್ನು ಉಸಿರಾಡಬಹುದು ಅಥವಾ ಆತ್ಮನ ಗಾಳಿಯನ್ನು ಎಳಕೊಂಡು ಉನ್ನತ ಕ್ಷೇತ್ರಕ್ಕೆ ಹೋಗಬಹುದು. “ಆತ್ಮನ ಗಾಳಿಯು ನಾವು ಅನುಭವಿಸಬಹುದಾದ ಬಹಳಷ್ಟು ವಿಷಯಗಳಿವೆ.

ಪರಿಶುದ್ಧ ಗ್ರಂಥದಲ್ಲಿ ಯಾವಾಗಲು ಉಪಯೋಗಿಸಲಾದ ಪದವು “ಗಾಳಿ” ಎಂದು ಭಾಷಾಂತರಿಸಲ್ಪಟ್ಟರೂ ಪವಿತ್ರಾತ್ಮನು ಒಬ್ಬ ವ್ಯಕ್ತಿ, ಒಬ್ಬ ನಿಜ ಆತ್ಮಿಕ ವ್ಯಕ್ತಿ, ಎಂದು ನಾವು ತಿಳಿಯಬೇಕು. ಆತನು ದೇವರು ತಂದೆ ಮತ್ತು ಮಗನಿಗೆ ಸರಿಸಮಾನವಾದ, ಮತ್ತು ಆರಾಧನೆ ಹೊಂದ ಯೋಗ್ಯನು ಎಂದು ತಿಳಿಯಬೇಕು.

## ಒಬ್ಬ ವಿಶ್ವಾಸಿಯ ಜೀವನದಲ್ಲಿ ಪವಿತ್ರಾತ್ಮನ ಕೆಲಸ

### ಹೊಸ ಜನ್ಮದ ಸಮಯದಲ್ಲಿ

ಆತ್ಮನಿಂದಲೂ ನೀರಿನಿಂದಲೂ ಪುನಃ ಹುಟ್ಟುತ್ತೇವೆ.

> ಯೋಹಾನ 3:1–8
>
> **ಫರಿಸಾಯರಲ್ಲಿ ಯೆಹೂದ್ಯರ ಹಿರೀಸಭೆಯವನಾದ ನಿಕೋದೇಮನೆಂಬ ಒಬ್ಬ ಮನುಷ್ಯನಿದ್ದನು ಅವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದು ಆತನಿಗೆ – ಗುರುವೇ, ನೀನು ದೇವರ ಕಡೆಯಿಂದ ಬಂದ ಬೊಧಕನೆಂದು ಬಲ್ಲೆವು ನೀನು ಮಾಡುವಂಥ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವುದು ಯಾರಿಂದಲೂ ಆಗದು ಎಂದು ಹೇಳಿದನು. ಅದಕ್ಕೆ ಯೇಸು – ನಾನು ನಿನಗೆ ನಿಜ ನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು ನಿಕೊದೇಮನು ಆತನನ್ನು – ಮನುಷ್ಯನು ಮುದುಕನಾದ ಮೇಲೆ ಹುಟ್ಟುವದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರುಗಿ ಸೇರಿ ಹುಟ್ಟುವದಾದೀತೆ ಎಂದು ಕೇಳಿದನು?**

**ಅದಕ್ಕೆ ಯೇಸು ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ಅವನು ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ ಆತ್ಮನಿಂದ ಹುಟ್ಟಿದ್ದು ಆತ್ಮವೇ, ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ. ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು.**

ನೀರು ಪ್ರಾಕೃತಿಕ ಜನನವನ್ನು ಹೇಳುತ್ತದೆ. ನೀರು ದೇವರ ವಾಕ್ಯದ ಚಿಹ್ನೆಯಾಗಿರುವುದರಿಂದ, ಅದು ದೇವರ ವಾಕ್ಯದ ಬಲದಿಂದ ಹೊಸ ಜನ್ಮವನ್ನು ಕೂಡ ಹೇಳುತ್ತದೆ.

1 ಪೇತ್ರನು 1:23
**ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ; ನಾಶವಾಗದ ಬೀಜದಿಂದಲೇ, ಉಂಟಾದದ್ದು. ಅದು ದೇವರ ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು.**

ಯೋಹಾನ 15:3
**ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ**

ಎಫೆಸದವರಿಗೆ 5:26,
**ಆತನು ಅದನ್ನು ಪ್ರತಿಷ್ಠೆ ಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು.... ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು**

ಆತ್ಮನ ಪುನರುಜ್ಜೀವನಗೊಳಿಸುವ ಕೆಲಸದಿಂದ ಹುಟ್ಟಿತು

ತೀತನಿಗೆ 3: 4, 5
**ಆದರೆ ನಮ್ಮ ರಕ್ಷಕನಾದ ದೇವರ ದಯೆಯೂ ಜನೋಪಕಾರವೂ ಪ್ರತ್ಯಕ್ಷವಾದಾಗ ಆದರೆ ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಿಲ್ಲಿಯೇ ಪುನರ್ಜನ್ಮವನ್ನ ಸೂಚಿಸುವ ಸ್ನಾನದ ಮುಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು.**

ನಮ್ಮ ಹೃದಯಗಳೊಳಗೆ ಪುತ್ರರಾಗುವ ಆತ್ಮನು ಕಳುಹಿಸಲ್ಪಟ್ಟನು

ಗಲಾತ್ಯದವರಿಗೆ 4: 6,7
**ನೀವು ಪುತ್ರರಾಗಿರುವುದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು ಹೀಗಿರುವಲ್ಲಿ ಇನ್ನೂ ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ.**

ಪವಿತ್ರಾತ್ಮನು ನಮಗೆ ಪುತ್ರರ/ ರಕ್ಷಣೆಯ "ಭರವಸೆ" ಯನ್ನು ಕೊಡುತ್ತಾನೆ.

ರೋಮಪುರದವರಿಗೆ 8: 14 – 16
**ಯಾರಾರು ದೇವರ ಆತ್ಮನಿಂದ ನೆಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು ನೀವು ತಿರುಗಿ ಪಾಪದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ ಮಗನ ಭಾವನನ್ನು ಹೊಂದಿವರಾಗಿದ್ದೀರಿ ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ, ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾರೆ.**

## ಪ್ರತಿದಿನದ ಜೀವನದಲ್ಲಿ

ಶರೀರವನ್ನು ಶಿಲುಬೆಗೆ ಹಾಕುವುದು


(ರೋಮಾಪುರದವರಿಗೆ ಅಧ್ಯಾಯಗಳು 6,7 ಮತ್ತು 8 ಮತ್ತು ಗಲಾತ್ಯದವರಿಗೆ ಅಧ್ಯಯ 5 ಅಧ್ಯಯನ ಮಾಡಿರಿ)

ಗಲಾತ್ಯದವರಿಗೆ 6:8
**ತನ್ನ ಶರೀರ ಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶವನ್ನು ಕೊಯ್ಯುವನು. ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯ ಜೀವವನ್ನು ಕೊಯ್ಯುವನು.**

ಆತ್ಮನ ಆಲಯಗಳು
1 ಕೊರಿಂಥದವರಿಗೆ 3.16, 17
**ನೀವು ದೇವರ ಆಲಯವಾಗಿದ್ದೀರೆಂದು ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದು ನಿಮಗೆ ಗೊತ್ತಿಲ್ಲವೋ ಯಾವನಾದರೂ ದೇವರ ಆಲಯವನ್ನು ಕೆಡಿಸಿದರೆ ದೇವರು ಅವನನ್ನು ಕೆಡಿಸುವನು ಯಾಕೆಂದರೆ ದೇವರ ಆಲಯವು ಪವಿತ್ರವಾದದ್ದು. ಅ ಆಲಯವು ನೀವೇ.**

1 ಕೊರಿಂಥದವರಿಗೆ 6: 19, 20
**ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬುದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ.**

**ರೋಮಾಪುರದವರಿಗೆ 6, 7, 8**



ನಮ್ಮನ್ನು ಕ್ರಿಸ್ತನ ಸಾರೂಪ್ಯವಾಗಿ ಮಾರ್ಪಡಿಸುತ್ತದೆ.

2 ಕೊರಿಂಥದವರಿಗೆ 3:18
**ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೇ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ.**

ಆತ್ಮನಲ್ಲಿ ನಡೆಯುವುದು / ಪವಿತ್ರಾತ್ಮಭರಿತರಾಗಿರುವುದು

## ಪವಿತ್ರಾತ್ಮ ಭರಿತರಾಗುವುದು ಎಂದರೇನು?

ಎಫೆಸದರಿಗೆ 5: 18-21
**ಮದ್ಯಪಾನ ಮಾಡಿ ಮತ್ತರಾಗಬೇಡಿರಿ ಇದರಿಂದ ಪಟಿಂಗತನವು ಹುಟ್ಟುತ್ತದೆ. ಆದರೆ "ಪವಿತ್ರಾತ್ಮ" ಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ.**

**ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾ**

**ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ ಕ್ರಿಸ್ತನಿಗೆ ಭಯ ಪಡುವವರಾಗಿ ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ.**

ದೇವರ ವಾಕ್ಯವು ಪವಿತ್ರಾತ್ಮಭರಿತರಾಗುವುದನ್ನು" ಮದ್ಯಪಾನ ಮಾಡಿ ಮತ್ತರಾದ ಸ್ಥಿತಿಗೆ ಹೋಲಿಸುತ್ತದೆ ಒಬ್ಬರು ಮದ್ಯಪಾನ ಮಾಡಿ ಮತ್ತನಾದ ನೀವು ಅದನ್ನು ನೋಡಿ ಹೇಳಬಹುದು. ಹೇಗೆಂದರೆ ಅವರು ಸರಿಯಾಗಿ ನೆಟ್ಟಗೆ ನಡೆಯುವುದಿಲ್ಲ. ಅವರು ಸರಿಯಾಗಿ ಮಾತನಾಡುವುದಿಲ್ಲ ಮತ್ತು ನೀವು ಸಮೀಪವಿದ್ದರೆ ನಿಮಗೆ ಮದ್ಯದ ವಾಸನೆಯೂ ಬರುವುದು!!!

ಜನರು ನಮ್ಮನ್ನು ನೋಡುವಾಗ ನಾವು ಪವಿತ್ರಾತ್ಮಭರಿತರಾಗಿದ್ದೇವೆ ಎಂದು

ಹೇಳುವಷ್ಟರ ಮಟ್ಟಿಗೆ ನಾವು ಪವಿತ್ರಾತ್ಮನಿಂದ ತುಂಬಲ್ಪಡಬೇಕು

ಒಬ್ಬನು ಪವಿತ್ರಾತ್ಮಭರಿತನಾದಾಗ ಅಥವಾ ಪವಿತ್ರಾತ್ಮನಲ್ಲಿ ನಡೆಯುವಾಗ ಅವನಲ್ಲಿ ತೋರಿಬರುವ ಗುಣಲಕ್ಷಣಗಳು ಎಫೆಸದವರಿಗೆ 5: 19-21ರಲ್ಲಿ ವಿವರಿಸಲಾಗಿದೆ.

ಮಾತನಾಡುವುದು ಗಲಾತ್ಯದವರಿಗೆ 5: 16-24
**ನಾನು ಹೇಳುವದೇನೆಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ. ಆಗ ನೀವು ಶರೀರಭಾವವು ಅಭಿಲಾಷಿಸುವುದು ಆತ್ಮನಿಗೆ ವಿರುದ್ಧವಾಗದೆ ನೀವು ಮಾಡಲ್ಪಟ್ಟಿರುವುದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ. ಆದರೆ ನೀವು ಆತ್ಮನಿಂದ ನಡಿಸಿಕೊಳ್ಳುವವರಾದರೆ ನೇಮ ನಿಷ್ಠೆಗಳಿಗೆ ಅಧೀನರಲ್ಲ. ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ. ಯಾವವಂದರೆ - ಜಾರತ್ವ ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೆಕಿಚ್ಚು ಸಿಟ್ಟು ಕಕ್ಷಭೇಧ, ಭಿನ್ನಮತ ಮತ್ಸರ ಕುಡಿಕುತನದ ದುಂದೌತಣ ಇಂಥವುಗಳೇ. ಇವುಗಳ ವಿಷಯದಲ್ಲಿ ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ. ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ - ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆ ದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವುದಿಲ್ಲ. ಕಿಸ್ತ ಯೇಸುವಿನವರು ತಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು.**

ಆತ್ಮನ ಫಲ (ಕ್ರಿಸ್ತನಲ್ಲಿರುವ ಸದ್ಗುಣಗಳು)

ಗಲಾತ್ಯದವರಿಗೆ 5: 22,23
**ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ - ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮವೂ ಆಕ್ಷೇಪಿಸುವುದಿಲ್ಲ.**

**ಪವಿತ್ರಾತ್ಮನ ಫಲ**
ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ.

ಪವಿತ್ರಾತ್ಮನು ಪ್ರಕಟಪಡಿಸುವ ಕೆಲಸ

ನಮಗಾಗಿ ಸಿದ್ಧಪಡಿಸಲ್ಪಟ್ಟವುಗಳ ತಿಳುವಳಿಕೆ

1 ಕೊರಿಂಥದವರಿಗೆ 2:9-16
**ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವುದು ? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವುದಿಲ್ಲ. ನಾವು ಪ್ರಾಪಂಚಿಕ**

**ಆತ್ಮವನ್ನು ಹೊಂದದೇ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮನನ್ನೇ ಹೊಂದಿದೆವು. ಇವುಗಳನ್ನು ಮಾನುಷ ಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಮುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ. ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ. ; ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತದೆ; ಅವು ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. ದೇವರಾತ್ಮನಿಂದ ನಡಿಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳುಕೊಳ್ಳುತ್ತಾನೆ. ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳುಕೊಳ್ಳುವುದಿಲ್ಲ ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು.**

ನಮ್ಮನ್ನು ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು


ಯೋಹಾನ 16:13

**ಸತ್ಯದ ಆತ್ಮನು ಬಂದಾಗ ಆತ್ಮನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವದು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು.**

## ಪವಿತ್ರಾತ್ಮನಿಂದ ನಡಿಸಲ್ಪಡುವುದು

ರೋಮಾಪುರದವರಿಗೆ 8:14-16

**ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು ನೀವು ತಿರುಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ, ಎಂದು ಕೂಗುತ್ತವೆ, ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**




ಪವಿತ್ರಾತ್ಮಾಧೀನವಾಗಿರುವ ಮನಸ್ಸಾಕ್ಷಿ

ರೋಮಾಪುರದವರಿಗೆ 9: 1

**ನನಗೆ ಮಹಾದುಃಖವೂ ನನ್ನ ಹೃದಯದಲ್ಲಿ ಎಡೆಬಿಡದೆ ವೇದನೆಯೂ ಉಂಟು. ಈ ಮಾತನ್ನು ಸುಳ್ಳಾಡದೆ ಕ್ರಿಸ್ತನ ಮುಂದೆ ಸತ್ಯವಾಗಿ ಹೇಳುತ್ತೇವೆ; ಪವಿತ್ರಾತ್ಮಾಧೀನನಾಗಿರುವ ನನ್ನ ಮನಸ್ಸೇಸಾಕ್ಷಿ.**

ನನ್ನ ಭಾವನೆಯು ಪವಿತ್ರಾತ್ಮನ ನಡಿಸುವಿಕೆಯೇ" ಎಂದು ಹೇಗೆ ತಿಳಿಯುವುದು?

- ಆತ್ಮನೂ ಮತ್ತು ವಾಕ್ಯವು ಸರಿ ಹೊಂದುತ್ತದೆ (ಒಪ್ಪುತ್ತದೆ)

  1 ಯೋಹಾನ 5,7,8

  **ಇದಲ್ಲದೆ ಆತ್ಮನು ಸಾಕ್ಷಿ ಕೊಡುವವನಾಗಿದ್ದಾನೆ. ಆತ್ಮನು ಸತ್ಯ ಸ್ವರೂಪನೇ. ಆತ್ಮ ನೀರು ಶಕ್ತಿ ಎಂಬ ಮೂರು ಸಾಕ್ಷಿಗಳುಂಟು ಈ ಮೂರು ಸಾಕ್ಷಿಗಳು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ.**

- ಯೇಸು ಮಹಿಮೆ ಪಡಿಸಲ್ಪಡುತ್ತಾನೋ ?

  ಯೋಹಾನ 16: 13,14

  **ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನು ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆ ಪಡಿಸುವನು.**

- ಅದು ನೀತಿಯುಳ್ಳದ್ದಾಗಿದೆಯೇ?

- ಇತರ ವಿಶ್ವಾಸಿಗಳು ಇದಕ್ಕೆ ಸಾಕ್ಷಿ ಹೇಳುತ್ತಾರೋ?

## ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ

ಪವಿತ್ರಾತ್ಮನಲ್ಲಿ ಹೊಂದುವ ದೀಕ್ಷಾಸ್ನಾನವು ಯೇಸುವಿಗೆ ಸಾಕ್ಷಿಯಾಗಿರಲು ಬಲಪಡಿಸುವುದು.

ಮತ್ತಾಯ 3; 11

**ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೆ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು.**

ಪುನರುತ್ಥಾನವಾದ ಬಳಿಕ ಯೇಸು ಶಿಷ್ಯರನ್ನು ಸಂಧಿಸಿ ಅವರ ಮೇಲೆ ಉಸಿರು ಊದಿ ಅವರು ತಿರುಗಿ ಹುಟ್ಟುವಂತೆ ಮಾಡಿದನು.

ಯೋಹಾನ 20: 21, 22

**ಯೇಸು ಅವರಿಗೆ – ನಿಮಗೆ ಸಮಾಧಾನವಾಗಲಿ ಎಂದು ತಿರುಗಿ ಹೇಳಿ – ತಂದೆಯು ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿಕೊಡುತ್ತೇನೆ ಎಂದು ಹೇಳಿದನು ಇದನ್ನು ಹೇಳಿ ಅವರ ಮೇಲೆ ಊದಿ "ಅವರಿಗೆ ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ; .... "ಎಂದು ಹೇಳಿದನು.**

ಬಳಿಕೆ ಅವರಿಗೆ ಪವಿತ್ರಾತ್ಮನ ದೀಕ್ಷಾಸ್ನಾನಕ್ಕಾಗಿ ಕಾದಿರಲು ಹೇಳಿದನು

ಲೂಕ 24: 48,49

**ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ. ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಿನ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು.**

ಅಪೊಸ್ತಲರ ಕೃತ್ಯಗಳು 1; 4, 5, 8,

**ಹೀಗಿಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ - ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವಾಗುವದು. ಆದಕಾರಣ ನೀವು ಯೆರೋಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂತ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆ ಕೊಟ್ಟನು. ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯ ವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು.**

ಪವಿತ್ರಾತ್ಮನ ಅಧಿವೇಶವು "ಹೊಸ-ಜನ್ಮ"ದ ಅನುಭವಕ್ಕಿಂತ ತೀರಾ ಭಿನ್ನವಾಗಿದೆ.

ಪವಿತ್ರಾತ್ಮನು ಸುರಿಸಲ್ಪಡುವುದು ಅಥವಾ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವು ಎಲ್ಲಾ ವಿಶ್ವಾಸಿಗಳಿಗಾಗಿದೆ

ಪವಿತ್ರಾತ್ಮದಾನವನ್ನು ಹೊಂದುವುದು.

ಅಪೊಸ್ತಲರ ಕೃತ್ಯಗಳು 2; 1-4, 14-18, 38, 39

**ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿ ಬಂದಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತ್ತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವುದಕ್ಕೆ ಪ್ರಾರಂಭಿಸಿದರು. ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ ಮಾಡಿದನು - ಯೆಹೂದ್ಯರೇ, ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಜನರೇ, ಈ ಸಂಗತಿಯು ಏನೆಂದು ನಿಮಗೆ ಗೊತ್ತಾಗುವ ಹಾಗೆ ನನ್ನ ಮಾತಿಗೆ ಕಿವಿಗೊಡಿರಿ; ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ; ಈಗ ಬೆಳಗ್ಗೆ ಒಂಬತ್ತು ಗಂಟೆಯಾಗಿದೆಯಷ್ಟೆ. ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ. ಅದೇನಂದರೆ - ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು, ; ನಿಮ್ಮಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯ ದರ್ಶನಗಳಾಗುವದು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು; ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು; ಅವರೂ ಪ್ರವಾದಿಸುವರು. ಪೇತ್ರನು ಅವರಿಗೆ ನಿಮ್ಮ ಪಾಪಗಳು ಪರಿಹಾರವಾಗುವುದಕ್ಕೆ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು.**

ಅಪೊಸ್ತಲರ ಕೃತ್ಯಗಳು 8: 5-21

**ಫಿಲಿಪ್ಪನು ಸಮಾರ್ಯ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು. ಗುಂಪಾಗಿ ಕೂಡಿದ ಜನಗಳು ಫಿಲಿಪ್ಪನ ಮಾತುಗಳನ್ನು ಕೇಳಿ ಅವನು ಮಾಡಿದ ಸೂಚಕ ಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿಗೆ ಏಕ ಮನಸ್ಸಾಗಿ ಲಕ್ಷ್ಯಕೊಟ್ಟರು. ಯಾಕೆಂದರೆ ಅನೇಕರೊಳಗಿಂದ ದೆವ್ವಗಳು ಮಹಾಶಬ್ದದಿಂದ ಕೂಗಿ ಹೊರಗೆ ಬಂದವು; ಮತ್ತು ಅನೇಕ ಪಾರ್ಶ್ವವಾಯುರೋಗಿಗಳೂ ಕುಂಟರೂ ಸ್ವಸ್ಥ ಮಾಡಲ್ಪಟ್ಟರು. ಆ ಪಟ್ಟಣದಲ್ಲಿ ಬಹು ಸಂತೋಷವಾಯಿತು. ಆದರೆ ಕೆಲವು ಕಾಲದಿಂದ ಆ ಪಟ್ಟಣದಲ್ಲಿದ್ದ ಸೀಮೋನನೆಂಬ ಒಬ್ಬ ಮನುಷ್ಯನು ತಾನು ಏನೋ ಒಬ್ಬ ಮಹಾತ್ಮನೆಂದು ಹೇಳಿಕೊಂಡು ಮಂತ್ರ ತಂತ್ರಗಳನ್ನು ನಡಿಸಿ ಸಮಾರ್ಯದ ಜನರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದನು. ಚಿಕ್ಕವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರೂ - ಇವನು ಮಹಾಶಕ್ತಿ ಎನಿಸಿಕೊಂಡಿರುವ ದೇವರ ಶಕ್ತಿಯೇ ಎಂದು ಹೇಳುತ್ತಾ ಅವನಿಗೆ ಲಕ್ಷ್ಯ ಕೊಡುತ್ತಿದ್ದರು. ಬಹುಕಾಲದಿಂದಲೂ ಅವನು ಮಂತ್ರ ತಂತ್ರಗಳನ್ನು ನಡಿಸಿ ಜನರಲ್ಲಿ ಬೆರಗನ್ನು ಹುಟ್ಟಿಸಿದ್ದ ಕಾರಣದಿಂದ ಅವರು ಅವನಿಗೆ ಲಕ್ಷ್ಯಕೊಡುತ್ತಿದ್ದರು. ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಆಗ ಸೀಮೋನನು ಕೂಡ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕ ಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವುದನ್ನು ನೋಡಿ ಬೆರಗಾದನು. ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆ ಮಾಡಿದರು. ಯಾಕೆಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿ ಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮವರವನ್ನು ಹೊಂದಿದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡುವದರ ಮೂಲಕವಾಗಿ ಪವಿತ್ರಾತ್ಮದಾನವಾಗುವುದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂದಿಟ್ಟು ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ ಅವರು ಪವಿತ್ರಾತ್ಮ ವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು. ಆದರೆ ಪೇತ್ರನು ಅವನಿಗೆ - ನಿನ್ನ ಬೆಳ್ಳಿಯು ನಿನ್ನ ಕೂಡ ಹಾಳಾಗಿ ಹೋಗಲಿ. ದೇವರ ವರವನ್ನು ಹಣಕ್ಕೆ ಕೊಂಡುಕೊಳ್ಳಬಹುದೆಂದು ಭಾವಿಸುತಿಯೋ? ಈ ಕಾರ್ಯದಲ್ಲಿ ನಿನಗೆ ಭಾಗವೂ ಇಲ್ಲ, ಪಾಲೂ ಇಲ್ಲ, ನಿನ್ನ ಹೃದಯವು ದೇವರ ಮುಂದೆ ಸರಿಯಿಲ್ಲ.**

ಅಪೊಸ್ತಲರ ಕೃತ್ಯಗಳು 9: 17, 18

**ಆಗ ಅನನೀಯನು ಹೊರಟು ಆ ಮನೆಯೊಳಗೆ ಹೋಗಿ ಅವನ ಮೇಲೆ ತನ್ನ ಕೈಗಳನ್ನಿಟ್ಟು - ಸಹೋದರನಾದ ಸೌಲನೇ, ನೀನು ಬಂದದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸು ನಿನಗೆ ಕಣ್ಣು ಬರುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಿದನು ಕೂಡಲೇ ಅವನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು. ಅವನು ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು. ತರುವಾಯ ಊಟ ಮಾಡಿ ಬಲಹೊಂದಿದನು.**

1. ಕೊರಿಂಥದವರಿಗೆ 14:18

**ನಾನು ನಿಮ್ಮೆಲ್ಲರಿಗೂ ಹೆಚ್ಚಾಗಿ ವಾಣಿಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ.**

ಅಪೊಸ್ತಲರ ಕೃತ್ಯಗಳು 10:44-48

**ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ, ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು. ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ – ಅನ್ಯಜನಗಳಿಗೂ ಪವಿತ್ರಾತ್ಮದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು. ನಡೆದ ಸಂಗತಿಯನ್ನು ಪೇತ್ರನು ನೋಡಿ ನಮ್ಮ ಹಾಗೆಯೇ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನನಾಗದಂತೆ ಯಾರದರೂ ಅಭ್ಯಂತರ ಮಾಡಾರೇ ಎಂದು ಹೇಳಿ ಅವರಿಗೆ – ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು. ಆ ಮೇಲೆ ಅವರು ಅವನನ್ನು – ಇನ್ನೂ ಕೆಲವು ದಿವಸ ಇರಬೇಕೆಂದು ಬೇಡಿಕೊಂಡರು.**

ಅಪೊಸ್ತಲರ ಕೃತ್ಯಗಳು 19; 1-7

**ಅಪೋಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರ ಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನು ಕಂಡು – ನೀವು ನಂಬಿದಾಗ ಪವಿತ್ರಾತ್ಮ ವರವನ್ನು ಹೊಂದಿದಿರೋ ಎಂದು ಕೇಳಲು ಅವರು ಅವನಿಗೆ ಇಲ್ಲ, ಪವಿತ್ರಾತ್ಮ ವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು. ಅವನು – ನೀವು ಯಾವದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ ಎಂದು ಕೇಳಿದಕ್ಕೆ ಅವರು ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು ಅದಕ್ಕೆ ಪೌಲನು – ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ, ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬದಾಗಿ ಜನರಿಗೆ ಹಿಂದೆ ಹೇಳಿದನು ಎಂದು ಹೇಳಲು ಅವರು – ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು. ಅವರು ಸುಮಾರು ಹನ್ನೆರಡು ಮಂದಿ ಗಂಡಸರು.**

ಪವಿತ್ರಾತ್ಮನ ಸುರಿಸುವಿಕೆ ಅಥವಾ ಪವಿತ್ರಾತ್ಮನಲ್ಲಿ ಸ್ನಾನವು ಅಲೌಕಿಕ ಪ್ರಕಟನೆಗಳಿಂದ ಕಂಡು ಬರುತ್ತದೆ – ಇದರಲ್ಲಿ ಅನ್ಯಭಾಷೆಗಳನ್ನಾಡುವುದು ಸಾಮಾನ್ಯ

ಪವಿತ್ರಾತ್ಮನು ನಮ್ಮಲ್ಲಿ ವಾಸಮಾಡುವುದಕ್ಕೆ ಮತ್ತು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವಾಗುವುದು ಇವುಗಳಿಗೆ ವ್ಯತ್ಯಾಸವೇನು?

ಯೋಹಾನ 4: 13,14

**ಯೇಸು ಆಕೆಗೆ – ಈ ನೀರನ್ನು ಕುಡಿಯುವವರೆಲ್ಲರಿಗೆ ತಿರಿಗಿ ನೀರಡಿಕೆಯಾಗುವದು; ನಾನು ಕೊಡುವ ನೀರನ್ನು ಕುಡಿದವವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ; ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವನವನ್ನು ಉಂಟು ಮಾಡುವದು ಎಂದು ಹೇಳಿದನು.**

ಯೋಹಾನ 7:37,38

**ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವ ಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು.**

## ಆತ್ಮದಲ್ಲಿ ಪ್ರಾರ್ಥಿಸುವುದರ ಪ್ರಯೋಜನಗಳು

(ಎಪಿಸಿಯವರ ಅನ್ಯಭಾಷೆಗಳಲ್ಲಿ ಪ್ರಾರ್ಥಿಸುವುದರ ಅದ್ಭುತಕರವಾದ ಪ್ರಯೋಜನಗಳು ಎಂಬ ಪ್ರಕಟನೆಯನ್ನು ತೆಗೆದುಕೊಂಡು ಅದರ ಅಧ್ಯಯನ ಮಾಡಿರಿ)

- ಮೇರೆಯಿಲ್ಲದೆ ಪ್ರಾರ್ಥಿಸುವುದು ದೇವರ ರಹಸ್ಯವಾದವುಗಳನ್ನು ಪ್ರಾರ್ಥಿಸುವುದು

1 ಕೊರಿಂಥದವರಿಗೆ 14:2

**ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವುದಿಲ್ಲ. ಅವನು ಆತ್ಮ ಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವುದಿಲ್ಲ.**

- ದೇವರ ಪರಿಪೂರ್ಣ ಚಿತ್ತದ ಪ್ರಕಾರ ಪ್ರಾರ್ಥಿಸುವುದು

ರೋಮಾಪುರದವರಿಗೆ 8:26,27

**ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗೆಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.**

- ಶರೀರದ ಬಲಹೀನತೆಯನ್ನು ಜಯಿಸಲು ಸಹಾಯ ಮಾಡುತ್ತಾನೆ.

ರೋಮಾಪುರದವರಿಗೆ 8:26

**ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗೆಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ.**

ಮತ್ತಾಯ 3:11,12

**ನಾವಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವರು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೆ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನುಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು.**

ವೈಯಕ್ತಿಕ ಮಟ್ಟದಲ್ಲಿ ಬೆಂಕಿಯ ದೀಕ್ಷಾಸ್ನಾನವು ಹೊಟ್ಟನ್ನು ಶರೀರಕ್ಕೆ ಸಂಬಂಧಿಸಿದವುಗಳನ್ನು ಸುಟ್ಟು ಹಾಕುತ್ತದೆ.

- ವೈಯಕ್ತಿಕ ಉನ್ನತಿ – ಆತ್ಮಿಕವಾಗಿ ನಿಮ್ಮನ್ನು ಕಟ್ಟುತ್ತದೆ.

  1 ಕೊರಿಂಥದವರಿಗೆ 14: 2
  **ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವುದಿಲ್ಲ. ಅವನು ಆತ್ಮ ಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ.**

  ಯೂದನು 1:20
  **ಪ್ರಿಯರೇ, ನೀವಾದರೋ ನಿಮಗಿರುವ ಅತಿ ಪರಿಶುದ್ಧವಾದ ಕ್ರಿಸ್ತನಂಬಿಕೆಯನ್ನು ಆಧಾರ ಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ....**

  ಎಫೆಸದವರಿಗೆ 3:16
  **ನೀವು ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷ ಬಲಹೊಂದುವವರಾಗುವ ಹಾಗೆಯೂ.....**

- ವಿಶ್ರಾಂತಿ ಮತ್ತು ಹರ್ಷದಾಯಕ

  ಯೆಶಾಯ 28: 11, 12
  **ಹೌದು, ತೊದಲು ಮಾತಿನವರು, ಅನ್ಯ ಭಾಷಿಗಳು, ಇವರ ಮೂಲಕವಾಗಿಯೇ ಯೆಹೋವನು ಈ ಜನರ ಮಧ್ಯದಲ್ಲಿ ಮಾತಾಡುವನು. ಆತನು ಮೊದಲು – ಇದೇ ನಿಮಗೆ ಆವಶ್ಯಕವಾದ ವಿಶ್ರಾಂತಿ, ಬಳಲಿ ಹೋದವರನ್ನು ವಿಶ್ರಮಗೊಳಿಸಿರಿ, ನಿಮಗೆ ಅನುಕೂಲವಾದ ಉಪಶಮನವು ಇದೇ ಎಂದು ಹೇಳಿದಾಗ ಇವರು ಕೇಳಲೊಲ್ಲದೆ ಹೋದರು.**

  1 ಕೊರಿಂಥದವರಿಗೆ 14:21
  **ಅನ್ಯಭಾಷೆಯವರ ಮೂಲಕವಾಗಿ ಪರದೇಶಸ್ಥರ ನಾಲಿಗೆಯಿಂದಲೂ ನಾನು ಈ ಜನರ ಸಂಗಡ ಮಾತಾಡುವೆನು; ಆದರೂ ಅವರು ನನ್ನ ಮಾತಿಗೆ ಕಿವಿಗೊಡುವುದಿಲ್ಲವೆಂದು ಕರ್ತನು ಹೇಳುತ್ತಾನೆಂಬುದಾಗಿ ಧರ್ಮಶಾಸ್ತ್ರದಲ್ಲಿ ಬರೆದಿದೆ.**

- ದೇವರನ್ನು ಸ್ತುತಿಸಿ ಆತನನ್ನು ಮಹಿಮೆಪಡಿಸುವ ಇನ್ನೊಂದು ವಿಧ

  ಅಪೊಸ್ತಲರ ಕೃತ್ಯಗಳು 10:46
  **ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವುದನ್ನು ಕೇಳಿದರು**

- ನಿಮ್ಮ ಸ್ವಂತ ಜೀವನಕ್ಕಾಗಿ ದೇವರ ರಹಸ್ಯವಾದುವುಗಳನ್ನು ಮರೆಯಾದವುಗಳನ್ನು ನಿಮ್ಮ ಆತ್ಮವು ಹೊಂದುವಂತೆ ನಿಮ್ಮ ಆತ್ಮಕ್ಕೆ ಸಹಾಯಮಾಡುವುದು ಪ್ರಾರ್ಥಿಸುವಾಗ ನೀವು ಅನೇಕ ವೇಳೆ ನೀವು ಹೇಳುತ್ತಿರುವುದರ ಅರ್ಥವು ನಿಮ್ಮ ಆತ್ಮಕ್ಕೆ ತಿಳಿಸಲ್ಪಡುವುದು.

  1 ಕೊರಿಂಥದವರಿಗೆ 2:7–16
  **ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವುದೆಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆಮಾಡಿದ ಜ್ಞಾನವೇ ಇದನ್ನು ಇಹಲೋಕಾಧಿಕಾರಿಗಳಲ್ಲಿ ಯಾರೂ ಅರಿಯಲಿಲ್ಲ; ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ; ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತುಬೇರೆ ಯಾರೂ ಗ್ರಹಿಸುವುದಿಲ್ಲ. ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮನುಷ್ಯಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂಧವಾದುವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ. ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ; ಅವು ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. ದೇವರಾತ್ಮನಿಂದ ನಡಿಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳುಕೊಳ್ಳುತ್ತಾನೆ; ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳುಕೊಳ್ಳುವದಿಲ್ಲ ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು.**

  1 ಕೊರಿಂಥದವರಿಗೆ 14:2
  **ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವುದಿಲ್ಲ. ಅವನು ಪ್ರೇರಿತನಾಗಿ ರಹಸ್ಯರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ.**

- ನಮ್ಮೊಳಗಿರುವ ದೇವರ ಕೃಪಾವರವು ಪ್ರಜ್ವಲಿಸುವಂತೆ ಸಹಾಯ ಮಾಡುತ್ತದೆ. ನೀವು ಈ ಕ್ಷೇತ್ರದಲ್ಲಿ ಪ್ರೇರಿಸಲ್ಪಟ್ಟಾಗ ಪ್ರಜ್ವಲಿಸುವ ವರವು ಅತ್ಯಂತ ಮೂಲ ವರಗಳಲ್ಲಿ ಒಂದಾಗಿದೆ.

  2 ತಿಮೊಥೆಯನಿಗೆ 1:6
  **ಆದಕಾರಣ ನಾನು ನಿನ್ನ ತಲೆಯ ಮೇಲೆ ಹಸ್ತವನ್ನಿಟ್ಟದ್ದರ ಮೂಲಕ ನಿನಗೆ ದೊರಕಿದ ಕೃಪಾವರವು ಪ್ರಜ್ವಲಿಸುವಂತೆ ಮಾಡಬೇಕೆಂದು ನಿನಗೆ ಜ್ಞಾಪಕ ಕೊಡುತ್ತೇನೆ.**

## ಮುಖ್ಯ ಕಂಠಪಾಠ ವಚನಗಳು

ಗಲಾತ್ಯದವರಿಗೆ 4: 6,7

**ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮವನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ.**

ರೋಮಾಪುರದವರಿಗೆ 8: 26,27

**ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗೆಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವ ಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.**

ರೋಮಾಪುರದವರಿಗೆ 8: 14-16

**ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು, ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ, ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**

# ಅನ್ವಯ

1. ನೀವು ಪವಿತ್ರಾತ್ಮನೊಂದಿಗೆ ನಿಮ್ಮ ಸಂಬಂಧದಲ್ಲಿ ಹೇಗೆ ಬೆಳೆಯಬಹುದು?

2. ನನ್ನ ಜೀವನದಲ್ಲಿ ನಾನು ಬದಲಾವಣೆ ಮತ್ತು ಪರಿವರ್ತನೆಯನ್ನು ಕಾಣಲು ಪವಿತ್ರಾತ್ಮನ ಮೇಲೆ ಹೆಚ್ಚು ಆತುಕೊಳ್ಳಬೇಕಾದ ಕ್ಷೇತ್ರಗಳು ನನ್ನ ಜೀವನದಲ್ಲಿ ಇದೆಯೇ? ಈ ಕೆಲವು ಕ್ಷೇತ್ರಗಳು ಯಾವುವು? ಪ್ರಾರ್ಥಿಸಲು/ ಪವಿತ್ರಾತ್ಮನೊಂದಿಗೆ ಈ ವಿಷಯಗಳನ್ನು ಕುರಿತು ಹೇಳಲು ಪ್ರಾರಂಭಿಸಿ, ಈ ಕ್ಷೇತ್ರಗಳಲ್ಲಿ ಆತನ ಕೆಲಸಕ್ಕಾಗಿ ಪ್ರಾರ್ಥಿಸಿರಿ.

# 12

# ನಂಬಿಕೆ

ದೇವರಲ್ಲಿಯೂ ಆತನ ವಾಕ್ಯದಲ್ಲಿಯೂ ನಂಬಿಕೆಯಿಟ್ಟು ಹೇಗೆ ಜೀವಿಸುವುದೆಂದು ನಮಗೆ ಬೋಧಿಸಲು ಈ ಪಾಠವು ರಚಿಸಲ್ಪಟ್ಟಿದೆ. ನಾವು ದೇವರಿಗೆ ಮೆಚ್ಚಿಕೆಯಾಬೇಕಾದರೆ ಮತ್ತು ನಮ್ಮ ಜೀವನದಲ್ಲಿ ಆತನ ಕಾರ್ಯಗಳು ಬಿಡುಗಡೆಯಾಗುವುದನ್ನು ನೋಡಬೇಕಾದರೆ ನಾವು ನಂಬಿಕೆಯಿಂದೇ ಬದುಕಬೇಕು.

## ನಂಬಿಕೆಯ ಕಲ್ಪನೆ

ರೊಮಾಪುರದವರಿಗೆ 1:17

**ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂತದ್ದಾಗಿದೆ.**

ಇಬ್ರಿಯರಿಗೆ 1:6

**ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ.**

> *ಜನರು ಪಂಚೇಂದ್ರಿಗಳ ಸಹಾಯದಿಂದ ಬದುಕುತ್ತಾರೆ ಆದರೆ ದೇವರ ಮಕ್ಕಳಾದ ನಾವು ಆರನೆಯ ಒಂದು ಇಂದ್ರಿಯದ ಮೂಲಕ - ನಂಬಿಕೆಯೆಂಬ ಇಂದ್ರಿಯದ ಮೂಲಕ ಬದುಕುತ್ತೇವೆ?*

## ನಾವು ನಂಬಿಕೆಯಿಂದಲೇ ಬದುಕಬೇಕೆಂದು ದೇವರು ನಮ್ಮನ್ನು ಕರೆಯುತ್ತಾನೆ.

ಇಬ್ರಿಯರಿಗೆ 11:1

**ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸೆದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವುದೂ ಆಗಿದೆ.**

## ನಂಬಿಕೆಯು ದೇವರಿಂದ ಬರುತ್ತದೆ.

ಅಪೊಸ್ತಲರ ಕೃತ್ಯಗಳು 3:16

**ನೀವು ನೊಡುವಂಥ ನಿಮಗೆ ಗುರುತಿಸುವಂಥ ಈ ಮನುಷ್ಯನು ನೆಟ್ಟಗಾದದ್ದಕ್ಕೆ ಆತನ ಹೆಸರಿನಲ್ಲಿ ಇಟ್ಟ ನಂಬಿಕೆಯೇ ಕಾರಣ; ಆ ಹೆಸರೇ ಇವನನ್ನು ಬಲಪಡಿಸಿತು. ಆತನ ಮೂಲಕ ಉಂಟಾಗಿರುವ ನಂಬಿಕೆಯೇ ಇವನಿಗೆ ನಿಮ್ಮೆಲ್ಲರ ಮುಂದೆ ಪೂರ್ಣ ಕ್ಷೇಮವನ್ನು ಕೊಟ್ಟಿತು.**

ಇಬ್ರಿಯರಿಗೆ 12:12

**ಆದ ಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಷದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪನನ್ನೂ ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಒಡೋಣ ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.**

> *ನಂಬಿಕೆಯು ನಿನ್ನಪರಿಸ್ಥಿತಿಗಳೊಳಗೆ ದೇವರನ್ನು ಆಮಂತ್ರಿಸುವ ಭಾಗಿಲಾಗಿದೆ.*

## ದೇವರ ಸಾರ್ವಭೌಮತ್ವ ಮತ್ತು ನಂಬಿಕೆಯ ಕಾರ್ಯ

ಮತ್ತಾಯ 13: 58

**ಅವರು ಆತನನ್ನು ನಂಬದೆ ಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ.**

ಮಾರ್ಕ 6:5,6

**ಆತನು ಅಲ್ಲಿ ಕೆಲವು ಮಂದಿ ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥ ಮಾಡಿದ್ದೇ ಹೊರತು ಬೇರೆ ಯಾವ ಮಹತ್ಕಾರ್ಯವನ್ನು ಮಾಡುವದಕ್ಕಾಗಲಿಲ್ಲ. ಅವರು ತನ್ನನ್ನು ನಂಬದೆ ಹೋದದ್ದಕ್ಕೆ ಆತನು ಆಶ್ಚರ್ಯಪಟ್ಟನು. ಆತನು ಹಳ್ಳಿಪಳ್ಳಿಗಳನ್ನು ಸುತ್ತಿಕೊಂಡು ಉಪದೇಶ ಮಾಡುತ್ತಾ ಬಂದನು.**

- ದೇವರು ಸಾರ್ವಭೌಮನು (ಸರ್ವಶಕ್ತನು, ಎಲ್ಲರ ಮೇಲಿರುವಾತನು ಮತ್ತು ಎಲ್ಲರಿಂದಲೂ ಸ್ವತಂತ್ರನು) ಮತ್ತು ಯಾರು ಆತನನ್ನು ತಡೆಯಲು ಸಾಧ್ಯವಿಲ್ಲವಾದರೆ ಆತನು ಇನ್ನೂ ಆತನ ಜನರ ಜೀವನಗಳಲ್ಲಿ ಮಹಾಕಾರ್ಯಗಳನ್ನು ನಡೆಯಬೇಕಾದರೆ ವೈಯಕ್ತಿಕ ನಂಬಿಕೆಯನ್ನು ಹೊಂದಿರಬೇಕೆಂದು ಹೇಳುತ್ತಾನೆ?

ಇಂದೊಂದು ವಿರೋಧಾಭಾಸವೆಂದು (ಒಂದಕ್ಕೊಂದು ವಿರೋಧವಾದ ಹೇಳಿಕೆ ಎಂದು) ಕಾಣಬಹುದು – ನಮ್ಮ ದೇವರು ಸರ್ವಶಕ್ತನು ಮತ್ತು ಸಾರ್ವಭೌಮನು, ನಮ್ಮ ಅಪನಂಬಿಕೆಯ ನಿಮಿತ್ತ ದೇವರು ಸೀಮಿತವಾಗಿರಬಹುದು ಮತ್ತು ನಂಬಿಕೆಯಿಲ್ಲದಿದ್ದರೆ ಆತನು ಕಾರ್ಯಮಾಡುವುದಿಲ್ಲ ಇಲ್ಲದಿದ್ದರೆ ಆತನೂ ಕೆಲಸ ಮಾಡಲಾಗದು

- ಎಲ್ಲವೂ ಕೃಪೆಯ ಉಚಿತ ದಾನನಾಗಿದ್ದರೆ, ನಾವು ಹೇಗೆ ಅದನ್ನು ನಂಬಿಕೆಯಿಂದ ಮಾತ್ರ ಪಡೆಯಲು ಸಾಧ್ಯ:

ನಾವು ತಿಳುಕೊಳ್ಳುವಂತೆ ಕೃಪೆಯು ನಾವು ಮಾಡಿದ ಯಾವುದನ್ನೂ ಆಧರಿಸದೆ ದೇವರ ಗುಣಸ್ವಭಾವದ ಒಂದು ಅಭಿವ್ಯಕ್ತತೆಯಾಗಿದೆ, ನಂಬಿಕೆಯು ದೇವರಲ್ಲಿ ನಮ್ಮ ಭರವಸೆ ಮತ್ತು ವಿಶ್ವಾಸದ ಅಭಿವ್ಯಕ್ತತೆ.

ಗಮನಿಸಬೇಕಾದ ವಿಷಯಗಳು

- ದೇವರು ತನ್ನ ಜ್ಞಾನದಿಂದ ಒಂದಕ್ಕೊಂದು ವಿರೋಧವಾದವುಗಳು ಎಂದು ಕಾಣುವ ಈ ಎರಡು ಗುಣಲಕ್ಷಣಗಳು ಜೊತೆಯಲ್ಲಿರಬೇಕೆಂದು ಮಾಡಿದ್ದಾನೆ. ತರ್ಕಿಸಲಾಗದ ದೇವರ ಸಾರ್ವಭೌಮತ್ವದ ಒಂದು ಕ್ಷೇತ್ರವಿದೆ. ಮತ್ತು ಇಲ್ಲಿ ಅಗತ್ಯವಾದ ನಮ್ಮ ವೈಯಕ್ತಿಕ ನಂಬಿಕೆ ಮತ್ತು ಅದರ ಸ್ಫೋಟಕ ಉದ್ದೇಶ ಮತ್ತು ಯುಗಗಳ ವರೆಗಿನ ಆತನ ಯೋಜನೆ ಇವು ದೇವರ ಸಾರ್ವಭೌಮತ್ವದ ಮೇಲೆ ಮಾತ್ರವೇ ಇರುವ ವಿಷಯಗಳು. ಇವು ಮನುಷ್ಯನ ವಿಶ್ವಾಸವಿಲ್ಲದೆ ನೆರವೇರುವವು ಮತ್ತು ದೇವರ ವೈಯಕ್ತಿಕ ಉದ್ದೇಶಗಳವೆ, ಇವುಗಳ ನರವೇರಿಕೆಯು ದೇವರೊಂದಿಗೆ ಮನುಷ್ಯನ ವೈಯಕ್ತಿಕ ಸಹಕಾರದಲ್ಲದೆ.
- ದೇವರ ಕೃಪೆಯಿಂದ ಈ ಎಲ್ಲಾ ವರಗಳನ್ನು ನಮಗೆ ಉಚಿತವಾಗಿ ದಾನ ಮಾಡುವಲ್ಲಿ , ಆದಾಗ್ಯೂ ಅದನ್ನು ಪ್ರತಿಯೊಬ್ಬನು ನಂಬಿಕೆಯಿಂದ ಪಡೆಯಬೇಕಾದುದರಿಂದ, ದೇವರು ಪ್ರತಿಯೊಬ್ಬ ವ್ಯಕ್ತಿಗೂ ಆತನಿಂದ ಪಡೆಯಲು "ಸಮಾನ ಅವಕಾಶಗಳನ್ನು" ಕೊಡುತ್ತಾನೆ ಮತ್ತು ಅವುಗಳ ನೆರವೇರಿಕೆಯು ಪ್ರತಿಯೊಬ್ಬ ವ್ಯಕ್ತಿಯೂ ಅವುಗಳ ನೆರವೇರಿಕೆಗೆ ದೇವರೊಂದಿಗೆ ಸಹಕರಿಸುವುದರ ಮೇಲೆ ಇದೆ.
- ಆತನು ಕೃಪೆಯಿಂದ ತನ್ನ ಎಲ್ಲಾ ವರಗಳನ್ನು ನಮಗೆ ಉಚಿತವಾಗಿ ದಾನಮಾಡಿದ್ದಾನೆ ಆದರೂ ಅವುಗಳನ್ನು ನಾವು ನಂಬಿಕೆಯಿಂದಲೇ ಪಡೆಯುವ ಅಗತ್ಯವಿದೆ. ದೇವರು ಆತನಿಂದ ಹೊಂದಲು ಪ್ರತಿಯೊಬ್ಬನಿಗೂ ಸಮಾನ ಅವಕಾಶಗಳನ್ನು ಕೊಡುತ್ತಾನೆ. ಬುಡಕಟ್ಟು, ಬಣ್ಣ, ಸಾಮಾಜಿಕ ಅಥವಾ ಆರ್ಥಿಕಮಟ್ಟ, ಹಿಂದಿನ ಅನುಭವಗಳು – ಇವುಗಳ ವ್ಯತ್ಯಾಸವಿಲ್ಲದೆ ಪ್ರತಿಯೊಬ್ಬನಿಗೂ ದೇವರು ಕೃಪೆಯಿಂದಲೇ ನೀಡಿರುವ ಈ ವರಗಳನ್ನು ಪಡೆಯಲು ಸಮಾನ ಅವಕಾಶಗಳವೆ.
- ನಂಬಿಕೆಯ ಕ್ಷೇತ್ರವು ದೇವರ ಚಿತ್ತಕ್ಕೂ ಆತನ ಉದ್ಧೇಶಗಳಗೂ ಆತನು ಇಟ್ಟುಕೊಂಡಿರುವ ಮೇರೆಯೊಳಗಿದೆ. ದೇವರ ಚಿತ್ತದ ಮಿತಿಯ ಹೊರಗೆ ಕೆಲಸ ಮಾಡಿದರೆ ಯಾರೂ ಜಯ ಹೊಂದಲಾರರು.

ಹೀಗೆ ಪ್ರತಿಯೊಬ್ಬ ವಿಶ್ವಾಸಿಯೂ ನಂಬಿಕೆಯಿಂದಲೇ ಬದುಕಲು ಕಲಿಯುವ ಅಗತ್ಯವಿದೆ.

> ಅಬ್ರಹಾಮನು ಪರಿಸ್ಥಿತಿಗಳ ನೈಜತೆಯಿಂದ ಅವನ ನಂಬಿಕೆಯು ಕುಂದಲು ಅವಕಾಶ ಕೊಡಲಿಲ್ಲ.

## ಹಳೆ ಒಡಂಬಡಿಕೆಯಲ್ಲಿಯೂ ಹೊಸ ಒಡಂಬಡಿಕೆಯಲ್ಲಿಯೂ ನಂಬಿಕೆ

### ಅಬ್ರಹಾಮನು

ಅಬ್ರಹಾಮನ ಕಥೆಯನ್ನು ಓದಿರಿ (ಆದಿಕಾಂಡ 11:26 ರಿಂದ ಆದಿಕಾಂಡ 25:11)

ರೋಮಾಪುರದವರಿಗೆ 4:18 – 21

**ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವದು ಎಂಬದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವದಕ್ಕೆ ಮಾರ್ಗತೋರದೆ ಇರುವದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು. ಅವನು ಹೆಚ್ಚುಕಡಿಮೆ ನೂರುವರುಷದವನಾಗಿದ್ದು ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದು ಸಾರಳಿಗೆ ಗರ್ಭಕಾಲ ಕಳೆದು ಹೋಯಿತೆಂದೂ ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲ ಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವುದಕ್ಕೆ ಸಮರ್ಥನೆಂದು ಪೂರಾ ಭರವಸೆ ಇಟ್ಟು ದೃಢ ನಂಬಿಕೆಯುಳ್ಳವನಾದನು.**

### ನಂಬಿಕೆಯ ಕುರಿತು ಯೇಸುವಿನ ಬೋಧನೆ

ಮಾರ್ಕ 11:22

**ಯೇಸು ಹೇಳಿದ್ದೇನೆಂದರೆ – ನಿಮಗೆ ದೇವರಲ್ಲಿ ನಂಬಿಕೆಯಿರಲಿ**

ಮತ್ತಾಯ 9:29

**ಆತನು ಆಗ ಕಣ್ಣುಗಳನ್ನು ಮುಟ್ಟಿ – ನೀವು ನಂಬಿದಂತೆ ನಿಮಗೆ ಆಗಲಿ ಅಂದನು**

ನಂಬಿಕೆಯ ಅನೇಕ ಉದಾಹರಣೆಗಳವೆ.

ಮತ್ತಾಯ 8:13

**ಬಳಿಕ ಯೇಸು ಆ ಶತಾಧಿಪತಿಗೆ – ನೀನು ನಂಬಿದಂತೆ ನಿನಗಾಗಲಿ, ಹೋಗು ಎಂದು ಹೇಳಿದನು. ಅದೇ ಗಳಿಗೆಯಲ್ಲಿ ಅವನ ಆಳಿಗೆ ಗುಣವಾಯಿತು.**

ಮತ್ತಾಯ 9: 2
**ಅಲ್ಲಿಗೆ ಬಂದಾಗ ಹಾಸಿಗೆ ಮೇಲೆ ಬಿದ್ದುಕೊಂಡಿರುವ ಒಬ್ಬ ಪಾರ್ಶ್ವವಾಯು ರೋಗಿಯನ್ನು ಆತನ ಬಳಿಗೆ ಹೊತ್ತುಕೊಂಡು ಬಂದರು. ಯೇಸು ಅವರ ನಂಬಿಕೆಯನ್ನು ನೋಡಿ ಪಾರ್ಶ್ವವಾಯು ರೋಗಿಗೆ – ಮಗನೇ ಧೈರ್ಯವಾಗಿರು, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿದೆ ಎಂದು ಹೇಳಿದನು**

ಮತ್ತಾಯ 9: 22, 29
**ಆಗ ಯೇಸು ಹಿಂತಿರುಗಿ ಆಕೆಯನ್ನು ನೋಡಿ – ಮಗಳೇ, ಧೈರ್ಯವಾಗಿರು, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿತು ಅಂದನು. ಆ ಕ್ಷಣವೇ ಆ ಹೆಂಗಸು ಸ್ವಸ್ಥವಾದಳು. ಆಗ ಆತನು ಅವರ ಕಣ್ಣುಗಳನ್ನು ಮುಟ್ಟಿ – ನೀವು ನಂಬಿದಂತೆ ನಿಮಗೆ ಆಗಲಿ ಅಂದನು.**

ಮತ್ತಾಯ 15:28
**ಆಗ ಯೇಸು ಆಕೆಗೆ – ಅಮ್ಮಾ ನಿನ್ನ ನಂಬಿಕೆ ಬಹಳ, ನಿನ್ನ ಮನಸ್ಸಿನಂತೆ ಆಗಲಿ ಎಂದು ಉತ್ತರಕೊಟ್ಟನು ಅದೇ ಗಳಿಗೆಯಲ್ಲಿ ಆಕೆಯ ಮಗಳು ಸ್ವಸ್ಥಳಾದಳು.**

ಮತ್ತಾಯ 17: 20,21
**ಆತನು ಅವರಿಗೆ – ನಿಮ್ಮ ನಂಬಿಕೆ ಕಡಿಮೆಯಾಗಿರುವುದರಿಂದಲೇ (ಆಗಲಿಲ್ಲ); ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೇಕಾಳಷ್ಟು ನಂಬಿಕೆ ನಿಮಗೆ ಇರುವುದಾದರೆ ನೀವು ಈ ಬೆಟ್ಟಕ್ಕೆ ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವುದಿಲ್ಲ ಅಂದನು.**

ಮತ್ತಾಯ 21: 17-21
**ಬಳಿಕ ಅವರನ್ನು ಬಿಟ್ಟು ಪಟ್ಟಣದಿಂದ ಹೊರಟು ಬೇಥಾನ್ಯಕ್ಕೆ ಬಂದು ಅಲ್ಲಿ ರಾತ್ರಿ ಇಳುಕೊಂಡನು. ಬೆಳಗ್ಗೆ ಆತನು ಪಟ್ಟಣಕ್ಕೆ ತಿರಿಗಿ ಹೋಗುತ್ತಿರುವಾಗ ಹಸಿದನು. ದಾರಿಯಲ್ಲಿ ಒಂದು ಅಂಜೂರದ ಮರವನ್ನು ಕಂಡು ಅದರ ಹತ್ತಿರಕ್ಕೆ ಹೋಗಿ ಅದರಲ್ಲಿ ಬರೀ ಎಲೆಗಳನ್ನೇ ಹೊರತು ಮತ್ತೇನೂ ಕಾಣದೆ ಅದಕ್ಕೆ ಇನ್ನು ಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆ ಹೋಗಲಿ ಎಂದು ಹೇಳಿದನು ಆ ಕ್ಷಣವೇ ಆ ಅಂಜೂರದ ಮರವು ಒಣಗಿಹೋಯಿತು; ಶಿಷ್ಯರು ಅದನ್ನು ನೋಡಿ ಬೆರಗಾಗಿ ಈ ಅಂಜೂರದ ಮರವು ಒಂದು ಕ್ಷಣದಲ್ಲೇ ಒಣಗಿ ಹೋಯಿತಲ್ಲಾ ಅದು ಹೇಗೆ? ಅಂದರು ಅದಕ್ಕೆ ಯೇಸು – ನಿಮಗೆ ಸತ್ಯವಾಗಿ ಹೇಳುತ್ತೇನೆ ನೀವು ಸಂಶಯ ಪಡದೆ ನಂಬಿದರೆ ನಾನು ಅಂಜೂರದ ಮರಕ್ಕೆ ಮಾಡಿದಂಥದನ್ನು ನೀವು ಮಾಡುವಿರಿ. ಇದು ಮಾತ್ರವಲ್ಲದೆ ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೆ ಅದೂ ಆಗುವದು ಅಂದನು.**

## ವಿಶ್ವಾಸಿಯ ಜೀವನದಲ್ಲಿ ನಂಬಿಕೆ

ನಾವು ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದ್ದೇವೆ.

ಎಫೆಸದವರಿಗೆ 2:8
**ನಂಬಿಕೆಯ ಮುಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದುದ್ದಲ್ಲ, ಅದು ದೇವರ ವರವೇ.**

ರೋಮಾಪುರದವರಿಗೆ 5:1
**ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ.**


ಪ್ರತಿವಿಶ್ವಾಸಿಗೂ ಒಂದು ಅಳತೆಯ ನಂಬಿಕೆಯು ಕೊಡಲ್ಪಟ್ಟಿದೆ
ರೋಮಾಪುರದವರಿಗೆ 12:3
**ದೇವರು ನನಗೆ ಕೃಪೆಮಾಡಿದ ಸೇವೆಯನ್ನು ನಡಿಸಿ ನಿಮ್ಮಲ್ಲಿ ಒಬ್ಬೊಬ್ಬನಿಗೂ ಹೇಳುವದೇನೆಂದರೆ – ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು.**

ನಂಬಿಕೆಯಲ್ಲಿ ವಿವಿಧ ಮಟ್ಟಗಳಿವೆ.

- ನಂಬಿಕೆಯಿಲ್ಲ

**ನಂಬಿಕೆಯಿಲ್ಲ**

ಮಾರ್ಕ 4:40
**ತರುವಾಯ ಆತನು ಅವರನ್ನು – ಯಾಕೆ ಧೈರ್ಯಗೆಡುತ್ತೀರಿ? ಇನ್ನೂ ನಿಮಗೆ ನಂಬಿಕೆಯಿಲ್ಲವೇ ? ಎಂದು ಕೇಳಿದನು**



- ಅಲ್ಪವಿಶ್ವಾಸ

**ಅಲ್ಪವಿಶ್ವಾಸ**

ಮತ್ತಾಯ 6.30
**ಎಲೈ ಅಲ್ಪ ವಿಶ್ವಾಸಿಗಳೇ, ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿ ತೊಡಿಸುವನಲ್ಲವೇ.**

- ದೊಡ್ಡ ನಂಬಿಕೆ

**ದೊಡ್ಡ ನಂಬಿಕೆ**

ಮತ್ತಾಯ 8:10
**ಯೇಸು ಇದನ್ನು ಕೇಳಿ ಆಶ್ಚರ್ಯ ಪಟ್ಟು, ತನ್ನ ಹಿಂದೆ ಬರುತ್ತಿದ್ದವರಿಗೆ – ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೆಲ್ ಜನರಲ್ಲಿ ಕಾಣಲಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು**

2 ಥೆಸಲೋನಿಕದವರಿಗೆ 1:3
**ಸಹೋದರರೇ, ನಾವು ಯಾವಾಗಲೂ ನಿಮ್ಮ ವಿಷಯದಲ್ಲಿ ದೇವರಿಗೆ ಕೃತಜ್ಞಾತಾ ಸ್ತುತಿ ಮಾಡುವುದಕ್ಕೆ ಬದ್ಧರಾಗಿದ್ದೇವೆ. ಹಾಗೆ ಮಾಡುವದು ಯೋಗ್ಯ ; ಯಾಕೆಂದರೆ ನಿಮ್ಮ ಪ್ರೀತಿಯು ಬಹಳ ಅಭಿವೃದ್ಧಿ ಹೊಂದುತ್ತಾ ಬರುತ್ತದೆ. ಪರಸ್ಪರವಾದ ಪ್ರೀತಿ ನಿಮ್ಮೆಲ್ಲರಲ್ಲಿಯೂ ಹೆಚ್ಚುತ್ತಾ ಬರುತ್ತದೆ.**

ನಂಬಿಕೆಯು ಬೆಳೆಯಬಹುದು

# ನಿಮ್ಮ ನಂಬಿಕೆಯನ್ನು ಹೇಗೆ ಕಾರ್ಯಗತ ಗೊಳಿಸುವುದು

## ವಾಕ್ಯವನ್ನು ಸ್ವೀಕರಿಸಿ

ರೋಮಾಪುರದವರಿಗೆ 10:17
**ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ**

ನಾವು ದೇವರ ವಾಕ್ಯವನ್ನು ಕೇಳಿ ಅದನ್ನು ನಮ್ಮ ಆತ್ಮದೊಳಕ್ಕೆ ಪ್ರವೇಶಿಸಲು ಬಿಟ್ಟಾಗ ಅದು ಆಂತರ್ಯದ ನಂಬಿಕೆಗೆ ಒಂದು ಕಾರಣವಾಗುತ್ತದೆ. ನಂಬಿಕೆಯ ಕಾರಣಕ್ಕೆ ಒಂದು ದೃಢವಾದ ಆಧಾರ, ಮತ್ತು ಆಂತರ್ಯದ ಪಾಪದ ಅರುಹುಗಳಿಗೆ ಒಂದು ಭದ್ರವಾದ ತಳಹದಿಯನ್ನು ಒದಗಿಸುತ್ತದೆ. ನಂಬಿಕೆಯ ಕಾರಣಕ್ಕೆ ದೇವರ ವಾಕ್ಯವು ಆಧಾರ

ನಂಬಿಕೆಯನ್ನು ದೇವರು ನಮಗೆ ತನ್ನ ವಾಕ್ಯದ ಮೂಲಕ ಹೇಳಿದ್ದರ ಅಥವಾ ಆತನ ಆತ್ಮದ ಮೂಲಕ ನಮ್ಮ ಹೃದಯದೊಳಕ್ಕೆ ಮಾತಾಡಿದ್ದರ ಮೇಲೆ ಆಧರಿಸಿದೆ.

## ನಿಮ್ಮ ನಂಬಿಕೆಯನ್ನು ಮಾತಾಡಿರಿ.

ಮಾರ್ಕ 11:23
**ನಿಮಗೆ ಸತ್ಯವಾಗಿ ಹೇಳುತ್ತೇನೆ , ಯಾವನಾದರೂ ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು.**

ಬಾಯಲ್ಲಿ ಹೇಳು (ನಿಘಂಟು) – ಒಪ್ಪಿಕೊಳ್ಳು, ನಂಬಿಕೆ ಇದೆ ಎಂದು ಒಪ್ಪುವುದು ನಾವು ಹೃದಯದಲ್ಲಿ ನಂಬಿದ ಒಂದು ವಿಷಯವನ್ನು ಬಾಯ್ದೆರೆ ಹೇಳುವುದು ಅರಿಕೆ ಮಾಡು. ಅದು ನಮಗೆ ತಿಳಿದ ಒಂದು ವಿಷಯ ನಿಜವೆಂದು ಸಾಕ್ಷಿ ಹೇಳುವುದು ಅದು ನಾವು ಸ್ವೀಕರಿಸಿದ ಒಂದು ಸತ್ಯ ಸಾಕ್ಷಿಕೊಡುವುದು.

ನಾವು ಅರಿಕೆ ಮಾಡುತ್ತೇವೆ:


- ವಿಮೋಚನೆಯ ಯೋಜನೆಯಲ್ಲಿ ದೇವರು ನಿಮಗೆ ಮಾಡಿದ್ದನ್ನು
- ದೇವರು ಆತನ ವಾಕ್ಯ ಮತ್ತು ಆತ್ಮನ ಮೂಲಕ ನಮ್ಮಲ್ಲಿ ಮಾಡಿದ್ದನ್ನು
- ಕ್ರಿಸ್ತ ಯೇಸುವಿನಲ್ಲಿ ನಾವು ತಂದೆಗೆ ಏನಾಗಿದ್ದೇವೆ ಅದನ್ನು
- ಈಗ ಯೇಸು ತಂದೆಯ ಬಲಪಾರ್ಶ್ವದಲ್ಲಿದ್ದು ನಮಗೋಸ್ಕರ ವಿಜ್ಞಾಪನೆ ಮಾಡುತ್ತಾ ನಮಗಾಗಿ ಸಾಧಿಸುತ್ತಿರುವುದನ್ನು
- ದೇವರು ನಮ್ಮ ಮೂಲಕ ಏನನ್ನು ಸಾಧಿಸಬಹುದು ಎನ್ನುವುದನ್ನು

ನಮ್ಮ ಅರಿಕೆಯು ದೇವರ ಲಿಖಿತ ವಾಕ್ಯದ ಮಿತಿಯೊಳಗೆ ಇರತಕ್ಕದ್ದು.

## ನಂಬಿಕೆಯಿಂದ ಹೊರಹೊಗಿರಿ (ನಿಮ್ಮ ನಂಬಿಕೆಯ ಮೇಲೆ ಕೆಲಸ ಮಾಡಿರಿ)

ಯಾಕೋಬನು 2: 14,22, 26

**ನನ್ನ ಸಹೋದರರೇ ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? ಅಂಥ ನಂಬಿಕೆಯು ಇವನನ್ನು ರಕ್ಷಿಸುವದೋ? ಅವನ ನಂಬಿಕೆಯು ಕ್ರಿಯೆಗಳೊಂದಿಗೆ ಪ್ರವರ್ತಿಸಿ ಆ ಕ್ರಿಯೆಗಳಿಂದಲೇ ಸಿದ್ಧಿಗೆ ಬಂತೆಂಬದು ಕಾಣಬರುತ್ತದಲ್ಲಾ. ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ.**




ನಮ್ಮ ಕ್ರಿಯೆಗಳು ನಮ್ಮ ನಂಬಿಕೆಗೆ ಸರಿತೂಗಬೇಕು. ನಾವು ದೇವರಿಂದ ಏನನ್ನಾದರೂ ಹೊಂದಬೇಕೆಂದಿದ್ದರೆ.

## ನಿಮ್ಮ ನಂಬಿಕೆಯಲ್ಲಿ ನಡೆಯಿರಿ (ನಂಬಿಕೆಯಿಂದ ಸಹಿಸಿರಿ)

ಇಬ್ರಿಯರಿಗೆ 10: 35,36

**ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ; ಅದಕ್ಕೆ ಮಹಾಪ್ರತಿಫಲಉಂಟು. ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆಬೇಕು.**

ವಾಗ್ದಾನಗಳನ್ನು ಭಾಧ್ಯಾವಾಗಿ ಹೊಂದಲು ನಮಗೆ ತಾಳ್ಮೆ ಮತ್ತು ಸಹನೆಗಳು ಬೇಕು.

ಇಬ್ರಿಯರಿಗೆ 6:12

**ನೀವು ಮಂದಮತಿಗಳಾಗಿರದೆ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹುದಿವಸಗಳ ವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ.**

ರೋಮಾಪುರದವರಿಗೆ 4:16-21

**ಆದಕಾರಣ ಅ ಬಾಧ್ಯತೆಯು ಕೃಪೆಯಿಂದಲೇ ದೊರೆಯುವಂಥದಾಗಿರುವಂತೆ ಅದು ನಂಬಿಕೆಯ ಮೂಲಕ ಸಿಕ್ಕುತ್ತದೆ ಹೀಗೆ ಆ ವಾಗ್ದಾನವು ಅಬ್ರಹಾಮನ ಸಂತತಿಯವರೆಲ್ಲರಿಗೂ, ಅಂದರೆ ಧರ್ಮಶಾಸ್ತ್ರವನ್ನು ಆಧಾರ ಮಾಡಿಕೊಂಡವರಿಗೆ ಮಾತ್ರವಲ್ಲದೆ ಅಬ್ರಹಾಮನಲ್ಲಿದ್ದಂಥ ನಂಬಿಕೆಯುಳ್ಳವರಿಗೆ ಸಹ ಸ್ಥಿರವಾಗಿ ನಿಲ್ಲುವದು. ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು. ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವುದು ಎಂಬುದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವದಕ್ಕೆ ಮಾರ್ಗತೋರದೆ ಇರುವುದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು ಅವನು ಹೆಚ್ಚು ಕಡಿಮೆ ನೂರು ವರುಷದವನಾಗಿದ್ದು ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದು ಹೋಯಿತೆಂದೂ ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ. ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಭರವಸವಿಟ್ಟು ದೃಢ ನಂಬಿಕೆಯುಳ್ಳವನಾದನು.**

ನ್ಯಾಯಸ್ಥಾಪಕರು 6:11

**ಆ ಮೇಲೆ ಯೆಹೋವನ ದೂತನು ಬಂದು ಒಫ್ರದದಲ್ಲಿದ್ದ ಏಲಾ ವೃಕ್ಷದ ಅಡಿಯಲ್ಲಿ ಕೂತು ಕೊಂಡನು. ಅದು ಬೀಯೆಜೆರನ ಗೊತ್ರದವನಾದ ಯೋವಾಷನದಾಗಿತ್ತು. ಅವನ ಮಗನಾದ ಗಿದ್ಯೋನನು ಮಿದ್ಯಾನ್ಯರಿಗೆ ಗೊತ್ತಾಗದ ಹಾಗೆ ಅಲ್ಲಿ ದ್ರಾಕ್ಷೆಯ ಅಲೆಯ ಮರೆಯಲ್ಲಿ ಗೋದಿಯನ್ನು ಬಡಿಯುತ್ತಿದ್ದನು**

**ನಂಬಿಕೆಯು ಒಂದು ಹೆಜ್ಜೆ ಮತ್ತು ಒಂದು ನಡೆ ಎರಡೂ ಆಗಿದೆ**

ನಾವು ನಂಬಿಕೆಯಲ್ಲಿ ಕಾರ್ಯಮಾಡಿದಾಗ, ಒಂದೆ ಹೆಜ್ಜೆ ತೆಗೆದುಕೊಳ್ಳುತ್ತೇವೆ. ನಾವು ಈಗ ಇರುವಲ್ಲಿಂದ ಒಂದು ಭರವಸದ ಸ್ಥಳಕ್ಕೆ ಮತ್ತು ದೇವರಲ್ಲಿ ನಂಬಿಕೆಗೆ ಹೋಗುತ್ತೇವೆ.

ಆದರೆ ನಂಬಿಕೆಯು ಒಂದು ನೆಡೆಯಾಗಿದೆ ನಾವು ತಾಳ್ಮೆಯಿಂದ ಕಾಲದಲ್ಲಿ ನಂಬಿಕೆಯಲ್ಲಿ ಸ್ಥಿರವಾಗಿ ಹೋಗುವಾಗ ನಾವು ದೇವರೊಂದಿಗೆ ಆತನ ವಾಗ್ದಾನಗಳ ನೆರವೇರುವಿಕೆಗೆ ಹೋಗುತ್ತೇವೆ.

## ಬಲವಾದ ನಂಬಿಕೆಗೆ ಅಡ್ಡಿಗಳು

- ದೇವರ ವಾಕ್ಯದ ತಿಳವಳಿಕೆಯ ಕೊರತೆ
- ನಿಮ್ಮ ನಂಬಿಕೆಯು ದೇವರವಾಕ್ಯದ ಸರಿಯಾದ ತಿಳುವಳಿಕೆಯನ್ನು ಮೀರಿ ಹೋಗಲಾಗದಿರುವುದು
- ಒಂದು ಸ್ಪಷ್ಟ ನಿರ್ಧಿಷ್ಟವಾದ ಬಯಸಿದ ಗುರಿಯ ಕೊರತೆ
- ಚಿಂತೆ/ಭಯ/ಸಂದೇಹ/ಅಪನಂಬಿಕೆ

- ಮಾನಸಿಕ ಒಪ್ಪಿಗೆ – ಮಾನಸಿಕವಾಗಿ ನಾವು 'ಹೌದು' ಎನ್ನುತ್ತೇವೆ (ನಮ್ಮ ಮನಸ್ಸಿನಲ್ಲಿ) ಆದರೆ ನಮ್ಮ ಹೃದಯದಲ್ಲಿ ನಮಗೆ ನಂಬಿಕೆ ಇಲ್ಲ.
- ಉದಾಸೀನ/ಸೋಮಾರಿತನ: ವಾಕ್ಯದ ಆಧಾರದಲ್ಲಿ ಕೆಲಸಮಾಡಲು ವಿಫಲತೆ

  ಯಾಕೋಬನು 2:14,22

  **ನನ್ನ ಸಹೋದರರೇ, ಒಬ್ಬನು ತನಗೆ ನಂಬಿಕೆ ಉಂಟೆಂದು ಹೇಳಿಕೊಂಡು, ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? ಅಂಥ ನಂಬಿಕೆಯು ಅವನನ್ನು ರಕ್ಷಿಸುವದೋ? ಅವನ ನಂಬಿಕೆಯು ಕ್ರಿಯೆಗಳೊಂದಿಗೆ ಪ್ರವರ್ತಿಸಿ ಆ ಕ್ರಿಯೆಗಳಿಂದಲೇ ಸಿದ್ಧಿಗೆ ಬಂತೆಂಬುದು ಕಾಣಬರುತ್ತದಲ್ಲಾ.**
- ತಪ್ಪಾದ (ಸರಿಯಲ್ಲದ) ಪ್ರೇರಣೆ / ತಪ್ಪು ಮನೋಭಾವನೆ
- ಪಾಪದಲ್ಲಿ ಜೀವಿಸುತ್ತಿರುವುದು, ಅನೀತಿಯ ಜೀವನ
- ಅಪರಾಧ ಭಾವನೆ/ಖಂಡನೆ
- ನಂಬಿಕೆಯಲ್ಲಿ ಸ್ಥಿರವಾಗಿ ನಿಲ್ಲದೆ ಇರುವುದು

  ಇಬ್ರಿಯರಿಗೆ 1:27

  **ಅತ್ಯಂತ ಭಯದಿಂದ ಎದುರು ನೋಡತಕ್ಕ ನ್ಯಾಯತೀರ್ಪು ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವುವು**

## ಅಪರಾಧ ಭಾವನೆ / ಖಂಡನೆ




## ಮುಖ್ಯವಾದ ಕಂಠಪಾಠ ವಚನಗಳು

ಇಬ್ರಿಯರಿಗೆ 11:6

**ಆದರೆ ನಂಬಿಕೆಯಿಲ್ಲದ ದೇವರನ್ನು ಮೆಚ್ಚಿಸುವುದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ.**

ಮಾರ್ಕ 11:23

**ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ – ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದನ್ನು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು.**

# ಅನ್ವಯ

1. ನಂಬಿಕೆ ಅಂದರೆ ಏನು ? ನಿಮ್ಮ ಜೀವನದಲ್ಲಿ ನೀವು ಎಲ್ಲಿಯ ವರೆಗೆ (ಯಾವ ಎಲ್ಲೆಯವರೆಗೆ) ನಿಮ್ಮ ನಂಬಿಕೆಯನ್ನು ಪ್ರಯೋಗಿಸುತ್ತೀರಿ?

2. ನಿಮ್ಮ ನಂಬಿಕೆಗೆ ಇರುವ ಅಡ್ಡಿಗಳಾವುವು ? ಮತ್ತು ನೀವು ಈ ಅಡ್ಡಿಗಳನ್ನು ಹೇಗೆ ಜಯಿಸುವಿರಿ?

# 13

# ಆರ್ಥಿಕ ಮನೆವಾರ್ತೆಯವರು

(ದೇವರಿಗೆ ದಶಮಭಾಗವನ್ನೂ ಕಾಣಿಕೆಗಳನ್ನೂ ಇತರ ವಿಧದಲ್ಲಿಯೂ ಕೊಟ್ಟು ಆತನನ್ನು ಮಹಿಮೆ ಪಡಿಸುವುದರಲ್ಲಿ ನಮ್ಮ ಆರ್ಥಿಕ ಮನೆವಾರ್ತೆಯ ಮಹತ್ವವನ್ನು ನಮಗೆ ಬೋಧಿಸಲು ಈ ಪಾಠವನ್ನು ರಚಿಸಲಾಗಿದೆ ದಶಮ ಭಾಗವನ್ನು ಸ್ಥಳೀಯ ಸಭೆಗೆ ಕೊಡಬೇಕೋ? ನಿಮ್ಮ ಕೊಡುಗೆಗಳ ಮೂಲಕ ಇತರ ಸೇವೆಗಳಿಗೆ ನೆರವು ನೀಡುವುದು ಸರಿಯೇ? ಕೊರತೆಯಲ್ಲಿರುವ ಒಬ್ಬ ಸಹೋದರ/ಸಹೋದರಿಗೆ ನಾನು ಆರ್ಥಿಕ ನೆರವು ನೀಡಬೇಕೋ? ಬೋಧಕರು ನನ್ನನ್ನು ಆರ್ಥಿಕವಾಗಿ ಸಿಲುಕಿಸಿ ಬಳಸಿಕೊಳ್ಳದಂತೆ ನಾನು ಹೇಗೆ ಜಾಗರೂಕನಾಗಿರುವುದು?)

## ಮನೆವಾರ್ತೆಯವರು

### ದೇವರ ಮನೆವಾರ್ತೆಯವನಾಗಿರುವುದೆಂದರೇನು?

1 ಕೊರಿಂಥದವರಿಗೆ 4:1,2

**ಜನರು ನಮ್ಮನ್ನು ಕ್ರಿಸ್ತನ ಕೈಕೆಳಗಿನವರೆಂತಲೂ ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರೆಂತಲೂ ಎಣಿಸಬೇಕು ಹೀಗಿರಲಾಗಿ ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡು ಬರುವದು ಅವಶ್ಯವಲ್ಲವೆ.**

1 ಪೇತ್ರನು 4:10

**ನೀವೆಲ್ಲರು ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆಯವರಾಗಿದ್ದು ಪ್ರತಿಯೊಬ್ಬನು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೊಗಿಸಲಿ.**

ಮನೆವಾರ್ತೆಗೆ ಗ್ರೀಕ್ ನಲ್ಲಿ ಒಯ್ಕೊನೋಮೋಸ್ – ಒಂದು ಮನೆಯನ್ನು ಅಥವಾ ಆಸ್ತಿಯನ್ನು ನೋಡಿಕೊಳ್ಳುವ ಅಧಿಕಾರಿ, ಒಬ್ಬ ಪ್ರದೇಶಾಧಿಕಾರಿ, ಖಜಾಂಚಿ, ಅವನದಲ್ಲದ ವಿಷಯಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದ ಅಧಿಕಾರಿ...

ಮೇಲ್ವಿಚಾರ ಮಾಡುವ ಜವಾಬ್ದಾರಿ ನಿರ್ವಹಿಸಲ್ಪಟ್ಟ ಒಬ್ಬನು

ಒಯ್ಕೊಸ್ – ಮನೆ, ನೊಮೋಸ = ಒಂದು ಕಾಯ್ದೆ (ನಿಯಮ)

ಸ್ವಾಸ್ತವು ದೇವರದು, ಆದರೆ ಮನೆವಾರ್ತೆಯು ನಮಗೆ ಕೊಡಲ್ಪಟ್ಟಿದೆ

**ಮನೆವಾರ್ತೆ** ಗ್ರೀಕ್. ಒಯ್ಕೊನೋಮಿಯ = ಒಂದು ಮನೆಯ ಆಡಳಿತ

ಉಪಯೋಗಿಸಲ್ಪಟ್ಟಿರುವ ಭಾಗಗಳು

ಲೂಕ 16 : 2,3,4

**ಯಜಮಾನನು ಅವನನ್ನು ಕರೆದು – ಇದೇನು ನಾನು ನಿನ್ನ ವಿಷಯದಲ್ಲಿ ಕೇಳುವ ಸಂಗತಿ ? ನಿನ್ನ ಮನೆವಾರ್ತೆಯ ಲೆಕ್ಕವನ್ನು ಒಪ್ಪಿಸು; ನೀನು ಇನ್ನು ವಾರ್ತೆಯವನಾಗಿರುವುದಕ್ಕಾಗುವುದಿಲ್ಲ ಎಂದು ಹೇಳಿದನು, ಹೀಗಿರಲಾಗಿ ಆ ಮನೆವಾರ್ತೆಯವನು ನಾನೇನು ಮಾಡಲಿ? ನನ್ನ ಯಜಮಾನನು ನನ್ನಿಂದ ಈ ಮನೆವಾರ್ತೆ ಕೆಲಸವನ್ನು ತೆಗೆದು ಬಿಡುತ್ತಾನಲ್ಲಾ ಅಗೆಯುವದಕ್ಕೆ ನನಗೆ ಬಲವಿಲ್ಲ ಭಿಕ್ಷೆ ಬೇಡುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಈ ಮನೆವಾರ್ತೆ ಕೆಲಸದಿಂದ ನನ್ನನ್ನು ತೆಗೆದ ಮೇಲೆ ಜನರು ನನ್ನನ್ನು ತಮ್ಮ ಮನೆಗಳೊಳಗೆ ಸೇರಿಸಿಕೊಳ್ಳುವಂತೆ ನಾನು ಮಾಡಬೇಕಾದದ್ದು ಗೊತ್ತಾಯಿತು ಎಂದು ತನ್ನೊಳಗೆ ಅಂದುಕೊಂಡು....**

1 ಕೊರಿಂಥದವರಿಗೆ 9:17

**ನಾನು ಸ್ವಂತ ಇಷ್ಟದಿಂದ ಈ ಕೆಲಸವನ್ನು ಮಾಡಿದರೆ ನನಗೆ ಬಹುಮಾನ ದೊರೆಯುವುದು; ಮತ್ತೊಬ್ಬನ ಇಷ್ಟದಿಂದ ಮಾಡಿದರೆ ಮನೆವಾರ್ತೆಯು ನನ್ನ ವಶಕ್ಕೆ ಕೊಡಲ್ಪಟ್ಟಿದೆ**

ಕೊಲೊಸ್ಸೆಯವರಿಗೆ 1: 25

**ನಾನು ಸಭೆಗೆ ಸೇವಕನಾದೆನು ದೇವರು ತನ್ನ ವಾಕ್ಯವನ್ನು ಸಂಪೂರ್ಣವಾಗಿ ತಿಳಿಸುವ ಕೆಲಸವನ್ನು ನಿಮ್ಮ ಪ್ರಯೋಜನಕ್ಕೋಸ್ಕರ ನನಗೆ ದಯಪಾಲಿಸಿದನು.**

ಎಫೆಸದವರಿಗೆ 3: 2,9

**ನಿಮಗೋಸ್ಕರ ನಿರ್ವಹಿಸುವದಕ್ಕಾಗಿ ದೇವರು ನನಗೆ ಕೃಪೆಯಾಗಿ ಕೊಟ್ಟ ಕೆಲಸವನ್ನು ಇದುವರೆಗೆ ಗುಪ್ತವಾಗಿದ್ದ ಒಂದು ಸಂಗತಿ ದೈವಪ್ರಕಟಣೆಯಿಂದ ನನಗೆ ತಿಳಿಸಲ್ಪಟ್ಟಿತೆಂಬುದನ್ನೂ ನೀವು ಕೇಳಿದ್ದೀರಲ್ಲಾ ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭ ಸಮಾಚಾರವನ್ನು ಅನ್ಯಜನರಿಗೆ ಪ್ರಸಿದ್ಧಿ ಪಡಿಸುವ ಹಾಗೆಯೂ ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೇ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು.**

ಎಫೆಸದವರಿಗೆ 1:10
**ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದನು. ಅದೇನೆಂದರೆ ಭೂಪರಲೋಕಗಳಲ್ಲಿರುವ ಸಮಸ್ತವನ್ನು ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬುದೇ.**

1 ತಿಮೊಥೆಯನಿಗೆ 1:4
**ಕಲ್ಪನಾ ಕಥೆಗಳಗೂ ಕೊನೆಮೊದಲಿಲ್ಲ ವಂಶಾವಳಿಗಳಿಗೂ ಲಕ್ಷ್ಯಕೊಡಬಾರದೆಂತಲೂ ಆಜ್ಞಾಪಿಸಬೇಕೆಂಬುದಾಗಿ ನಿನಗೆ ಖಂಡಿತವಾಗಿ ಹೇಳಿದ ಪ್ರಕಾರ ಈಗಲೂ ಹೇಳುತ್ತೇನೆ. ಅಂಥಾ ಕಥೆಗಳೂ ವಂಶಾವಳಿಗಳೂ ವಿವಾದಕ್ಕೆ ಆಸ್ಪದವಾಗಿದೆಯೇ ಹೊರತು ದೇವರು ನಿರ್ವಹಿಸುವ ಕೆಲಸಕ್ಕೆ ಅನುಕೂಲವಾಗಿಲ್ಲ ಇದರಲ್ಲಿ ನಂಬಿಕೆಯೇ ಮುಖ್ಯವಾದದ್ದು.**

ಒಬ್ಬ ಮನೆವಾರ್ತೆಯವನು ಖಚಿತಪಡಿಸಿಕೊಳ್ಳಬೇಕಾದವುಗಳು

- ಯೋಗ್ಯವಾದ ರೀತಿಯಲ್ಲಿ ಕೆಲಸಗಳು ನಡೆಯುತ್ತವೆಯಾ
- ವಿಷಯಗಳು ಲಾಭದಾಯಕವಾಗಿವೆಯಾ
- ಪ್ರತಿಯೊಂದರ ಲೆಕ್ಕ ಪತ್ರವೂ ಇಡಲ್ಪಟಿದೆಯಾ

ರೋಮಾಪುರದವರಿಗೆ 16:23
**ನನಗೂ ಸಮಸ್ತ ಸಭೆಗೂ ಅತಿಥಿ ಸತ್ಕಾರವನ್ನು ಮಾಡುತ್ತಿರುವ ಗಾಯನು ನಿಮ್ಮನ್ನು ವಂದಿಸುತ್ತಾನೆ. ಈ ಪಟ್ಟಣದ ಖಜಾನೆಯ ಮೇಲ್ವಿಚಾರಕನಾಗಿರುವ ಎರಸ್ತನೂ ಸಹೋದರನಾದ ಕ್ವರ್ತನೂ ನಿಮಗೆ ವಂದನೆಗಳನ್ನು ಹೇಳುತ್ತಾರೆ.**

- ಅವನ ವಶಕ್ಕೆ ಕೊಟ್ಟದ್ದನ್ನು ರಕ್ಷಿಸಿ/ಸುರಕ್ಷಿತವಾಗಿ ಇಡಬೇಕು
- ಅದರ ಮುಂದುವರಿಕೆಯನ್ನು ಖಚಿತಪಡಿಸಬೇಕು, ಅಂದರೆ ಅವನ ಬಳಿಕ ಅದನ್ನು ಮುಂದುವರಿಸುವ ಒಬ್ಬನನ್ನು ತರಬೇತು ಗೊಳಿಸಬೇಕು.

ಗಲಾತ್ಯದವರಿಗೆ 4: 1, 2
**ಆದರೆ ನಾನು ಹೇಳುವುದೇನೆಂದರೆ ಬಾಧ್ಯನು ತಾನು ಆಸ್ತಿಗೆಲ್ಲಾ ಧನಿಯಾಗಿದ್ದರೂ ಬಾಲಕನಾಗಿರುವ ತನಕ ದಾಸನಂತೆ ಇರುವನೇ ಹೊರತು ಬೇರೆಯಿಲ್ಲ**

## ಒಬ್ಬ ಒಳ್ಳೆಯ ಮನೆವಾರ್ತೆಯವನ ಗುಣಲಕ್ಷಣಗಳು

- ನಂಬಿಗಸ್ತನು

1 ಕೊರಿಂಥದವರಿಗೆ 4: 1,2
**ಜನರು ನಮ್ಮನ್ನು ಕ್ರಿಸ್ತನ ಕೈಕೆಳಗಿನವರೆಂತಲೂ ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರೆಂತಲೂ ಎಣಿಸಬೇಕು ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ**

ಲೂಕ 16: 1–12
**ಯೇಸು ತನ್ನ ಶಿಷ್ಯರಿಗೂ ಹೇಳಿದ್ದೇನೆಂದರೆ – ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ ಒಬ್ಬ ಮನೆವಾರ್ತೆಯವನಿದ್ದನು – ಇವನ ವಿಷಯವಾಗಿ ಯಜಮಾನನ ಬಳಿಯಲ್ಲಿ ಇವನು ನಿನ್ನ ಆಸ್ತಿಯನ್ನು ಹಾಳು ಮಾಡುತ್ತಾ ಇದ್ದಾನೆ ಎಂದು ಯಾರೋ ದೂರು ಹೇಳಿರಲಾಗಿ ಯಜಮಾನನು ಅವನನ್ನು ಕರೆದು –ಇದೇನು ನಾನು ನಿನ್ನ ವಿಷಯದಲ್ಲಿ ಕೇಳುವ ಸಂಗತಿ? ನಿನ್ನ ಮನೆ ವಾರ್ತೆಯ ಲೆಕ್ಕವನ್ನು ಒಪ್ಪಿಸು; ನೀನು ಇನ್ನು ಮನೆವಾರ್ತೆಯವನಾಗಿರುವದಕ್ಕಾಗುವುದಿಲ್ಲ ಎಂದು ಹೇಳಿದನು. ಹೀಗಿರಲಾಗಿ ಆ ಮನೆ ವಾರ್ತೆಯವನು – ನಾನೇನು ಮಾಡಲಿ? ನನ್ನ ಯಜಮಾನನು ನನ್ನಿಂದ ಈ ಮನೆವಾರ್ತೆಯ ಕೆಲಸವನ್ನು ತೆಗೆದುಬಿಡುತ್ತಾನಲ್ಲಾ. ಅಗೆಯುವುದಕ್ಕೆ ನನಗೆ ಬಲವಿಲ್ಲ; ಭಿಕ್ಷಾ ಬೇಡುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಈ ಮನೆವಾರ್ತೆ ಕೆಲಸದಿಂದ ನನ್ನನ್ನು ತೆಗೆದ ಮೇಲೆ ಜನರು ನನ್ನನ್ನು ತಮ್ಮ ಮನೆಗಳೊಳಗೆ ಸೇರಿಸಿಕೊಳ್ಳುವಂತೆ ನಾನು ಮಾಡಬೇಕಾದದ್ದು ಗೊತ್ತಾಯಿತು ಎಂದು ತನ್ನೊಳಗೆ ಅಂದುಕೊಂಡು ತನ್ನ ಯಜಮಾನನ ಸಾಲಗಾರರಲ್ಲಿ ಪ್ರತಿಯೊಬ್ಬನನ್ನೂ ಕರೆದು ಮೊದಲನೆಯವನನ್ನು ನೀನು ನನ್ನ ಯಜಮಾನನಿಗೆ ಏನು ಕೊಡಬೇಕು ಎಂದು ಕೇಳಲು ಅವನು – ನೂರು ಬುದ್ದಲಿ ಎಣ್ಣೆ ಅಂದಾಗ ಅವನಿಗೆ ಈ ನಿನ್ನ ಪತ್ರವನ್ನು ತೆಗೆದುಕೊಂಡು ಬೇಗ ಕೂತುಕೊಂಡು ಐವತ್ತು ಬುದ್ದಲಿ ಅಂತ ಬರಿ ಎಂದು ಹೇಳಿದನು ಬಳಿಕ ಮತ್ತೊಬ್ಬನನ್ನು ನೀನು ಏನು ಕೊಡಬೇಕು ಎಂದು ಕೇಳಲು ಅವನು ನೂರು ಖಂಡಗ ಗೋದಿ ಅಂದಾಗ ಅವನಿಗೆ – ಈ ನಿನ್ನ ಪತ್ರವನ್ನು ತೆಗೆದು ಕೊಂಡು ಎಂಬತ್ತು ಖಂಡಗ ಅಂತ ಬರಿ ಎಂದು ಹೇಳಿದನು. ಯಜಮಾನನ್ನು ಇದನ್ನು ಕೇಳಿ ಅನ್ಯಾಯಗಾರನಾದ ಆ ಮನೆವಾರ್ತೆಯವನನ್ನು – ಇವನು ಜಾಣತನ ಮಾಡಿದನು ಎಂದು ಹೊಗಳಿದನು. ಯಾಕೆಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲು ಜಾಣರಾಗಿದ್ದಾರೆ. ಅನ್ಯಾಯದ ಧನದ ಮೂಲಕವಾಗಿ ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಿರಿ; ಹೀಗೆ ಮಾಡಿದರೆ ಅದು ನಿಮ್ಮ ಕೈಬಿಟ್ಟು ಹೋದಾಗ ಅವರು ನಿಮ್ಮನ್ನು ಶಾಶ್ವತವಾದ ನಿವಾಸಸ್ಥಾನಗಳಲ್ಲಿ ಸೇರಿಸಿಕೊಳ್ಳುವರು ಎಂದು ನಾನು ನಿಮಗೆ ಹೇಳುತ್ತೇನೆ ಸ್ವಲ್ಪವಾದದ್ದಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗುವನು; ಸ್ವಲ್ಪವಾದದ್ದಲ್ಲಿ ಅನ್ಯಾಯಗಾರನಾಗುವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು. ಹೀಗಿರುವಾಗ ಅನ್ಯಾಯದ ಧನದ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಜವಾದ ಧನವನ್ನು ನಿಮ್ಮ ವಶಕ್ಕೆ ಯಾರು ಕೊಟ್ಟಾರು? ಮತ್ತೊಬ್ಬನ ಸೊತ್ತಿನ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಮ್ಮದನ್ನು ಧನವನ್ನು ನಿಮಗೆ ಯಾರು ಕೊಟ್ಟಾರು ?**

1 ತಿಮೊಥೆಯನಿಗೆ 1:12
**ನನ್ನನ್ನು ಆತನು ನಂಬಿಗಸ್ತನೆಂದು ಎಣಿಸಿ ತನ್ನ ಸೇವೆಗೆ ನೇಮಿಸಿಕೊಂಡದ್ದಕ್ಕಾಗಿ ನಾನು ಆತನಿಗೆ ಸ್ತೋತ್ರ ಸಲ್ಲಿಸುತ್ತೇನೆ.**

- ಸಣ್ಣ ವಿಷಯಗಳಲ್ಲಿ ನಂಬಿಗಸ್ತನಾಗಿರು – ದೇವರು ನಿನ್ನನ್ನು ದೊಡ್ಡದಾದುವುಗಳ ಮೇಲೆ ಇಡುವನು.
- ಹಣದಲ್ಲಿ ನಂಬಿಗಸ್ತನಾಗಿರು – ದೇವರು ನಿನ್ನನ್ನು ನಿಜವಾದ ಐಶ್ವರ್ಯಕ್ಕೆ ಮೇಲಾಧಿಕಾರಿಯಾಗಿ ಇಡುವನು.
- ಇನ್ನೊಬ್ಬನ ವಿಷಯದಲ್ಲಿ ನಂಬಿಗಸ್ತನಾಗಿರು – ದೇವರು ನಿನಗೆ ಸ್ವಂತವಾದವುಗಳನ್ನು ಕೊಡುವನು.




- ಜ್ಞಾನಿಯು


ಲೂಕ 12:41-48

**ಆಗ ಪೇತ್ರನು - ಸ್ವಾಮೀ, ನೀನು ಈ ಸಾಮ್ಯವನ್ನು ನಮಗೆ ಮಾತ್ರ ಹೇಳುತ್ತೀಯೋ? ಎಲ್ಲರಿಗೂ ಹೇಳುತ್ತೀಯೋ ಎಂದು ಕೇಳಲು ಸ್ವಾಮಿ ಹೇಳಿದ್ದೇನಂದರೆ - ಹೊತ್ತು ಹೊತ್ತಿಗೆ ಅಶನಕ್ಕೆ ಬೇಕಾದದ್ದನ್ನು ಅಳೆದು ಕೊಡುವದಕ್ಕಾಗಿ ಯಜಮಾನನು ತನ್ನ ಮನೆಯವರ ಮೇಲೆ ನೇಮಿಸಿದ ನಂಬಿಗಸ್ತನೂ ವಿವೇಕಿಯೂ ಆಗಿರುವ ಮನೆವಾರ್ತೆಯವನು ಯಾರು? ಯಜಮಾನನು ಬಂದು ಯಾವ ಆಳು ಹೀಗೆ ಮಾಡುವದನ್ನು ಕಾಣುವನೋ ಆ ಆಳು ಧನ್ಯನು. ಅಂಥವನನ್ನು ಅವನು ತನ್ನ ಎಲ್ಲಾ ಆಸ್ತಿಯ ಮೇಲೆ ನೇಮಿಸುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ಆ ಆಳು ನನ್ನ ಯಜಮಾನನು ಬರುವುದಕ್ಕೆ ತಡಮಾಡುತ್ತಾನೆ ಎಂದು ತನ್ನ ಮನಸ್ಸಿಗೆ ಅಂದುಕೊಂಡು ಗಂಡಾಳು ಹೆಣ್ಣಾಳುಗಳನ್ನು ಹೊಡೆಯುವದಕ್ಕೂ ತಿಂದು ಕುಡಿದು ಅಮಲೇರುವುದಕ್ಕೂ ತೊಡಗಿದರೆ ಅವನು ನೆನಸದ ದಿನದಲ್ಲಿಯೂ ತಿಳಿಯದ ಗಳಿಗೆಯಲ್ಲಿಯೂ ಆ ಆಳಿನ ಯಜಮಾನನು ಬಂದು ಅವನನ್ನು ಕಠಿಣವಾಗಿ ಹೊಡಿಸಿ ಅಪನಂಬಿಸ್ತರಿಗೆ ಆಗತಕ್ಕ ಗತಿಯನ್ನು ಅವನಿಗೆ ನೇಮಿಸುವನು. ತನ್ನ ಯಜಮಾನನ ಚಿತ್ತವನ್ನು ತಿಳಿದ ಆಳು ಸಿದ್ಧ ಮಾಡದೆ ಹೋದರೆ ಅಥವಾ ಅವನ ಚಿತ್ತಕ್ಕನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟುತಿನ್ನುವನು ತಿಳಿಯದೇ ಪೆಟ್ಟುಗಳಿಗೆ ಯೋಗ್ಯವಾದದ್ದನ್ನು ನಡಿಸಿದನು ಸ್ವಲ್ಪಪೆಟ್ಟು ತಿನ್ನುವನು ಯಾವನಿಗೆ ಬಹಳವಾಗಿ ಕೊಡಲ್ಪಟ್ಟಿದೆಯೋ ಅವನ ಕಡೆಯಿಂದ ಬಹಳ ನಿರೀಕ್ಷಿಸಲ್ಪಡುವದು. ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು.**

ದೇವರು ನಮಗೆ ಕೊಟ್ಟ ಎಲ್ಲವುಗಳ ಮೇಲೆ ನಾವು ಮವೆವಾರ್ತೆಯವರಾಗಿದ್ದೇವೆ. ವೇಳೆ, ಬಲ, ಕೌಶಲ್ಯಗಳು/ ಸಾಮರ್ಥ್ಯಗಳು, ತಿಳುವಳಿಕೆ, ಸಂದರ್ಭಗಳು, ಹಣ/ಲೌಕಿಕ ಸೊತ್ತುಗಳು, ಮತ್ತಿತರ ಮೂಲವಸ್ತುಗಳು.

### ಆರ್ಥಿಕ ಮನೆವಾರ್ತೆಯವನಾಗಿರುವುದು :

ದೇವರು ನಮ್ಮನ್ನು ಲೌಕಿಕ ವಿಷಯಗಳಿಂದ ಆಶೀರ್ವಾದಿಸುತ್ತಾನೆ.




ಧರ್ಮೋಪದೇಶಕಾಂಡ8:18

**ಆದದುರಿಂದ ನಿಮ್ಮ ದೇವರಾದ ಯೆಹೋವನೇ ತಾನು ನಿಮ್ಮ ಪಿತೃಗಳಿಗೆ ಪ್ರಮಾಣಪೂರ್ವಕವಾಗಿ ಮಾಡಿದ ವಾಗ್ದಾನವನ್ನು ಈಗ ನಿಮ್ಮ ಅನುಭವಕ್ಕೆ ಬಂದ ರೀತಿಯಲ್ಲಿ ನೆರವೇರಿಸುವವನಾಗಿ ನಿಮಗೆ ಇಷ್ಟ ಭಾಗ್ಯವನ್ನು ಸಂಪಾದಿಸುವುದಕ್ಕೆ ಸಾಮರ್ಥ್ಯವನ್ನು ಕೊಟ್ಟವನೆಂದು ಜ್ಞಾಪಕಮಾಡಿಕೊಳ್ಳಿರಿ.**

ಕೀರ್ತನೆಗಳು 1:3

**ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತಾಲ್ಲಾ ಅದರ ಎಲೆಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು.**

ಕೀರ್ತನೆಗಳು 112:3

**ಅವನ ಮನೆಯಲ್ಲಿ ಧನೈಶ್ವರ್ಯಗಳಿರುವವು. ಅವನ ನೀತಿಯು ಸದಾ ಕಾಲವು ಫಲಿಸುತ್ತಿರುವದು.**

1 ತಿಮೊಥೆಯನಿಗೆ 6:17

**ಇಹಲೋಕದ ವಿಷಯದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ಥಿರವಾದ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡದೆ ನಮ್ಮ ಅನುಭೋಗಕ್ಕೋಸ್ಕರ ನಮಗೆ ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಬೇಕೆಂತಲೂ...**

ಇಹಲೋಕದ ಆಶೀರ್ವಾದಗಳು ನಮ್ಮನ್ನು ಬೇರೆಯವರಿಗಿಂತ ಉತ್ತಮರಾಗಿ ಮಾಡುವುದಿಲ್ಲ.

ನಾವು ಹೆಚ್ಚು ಐಶ್ವರ್ಯವಂತರಾದಷ್ಟು ನಮಗೆ ಕೊಡಲಾದ ಐಶ್ವರ್ಯದ ಮೇಲೆ ಉತ್ತಮ ಮನೆವಾರ್ತೆವರಾಗಿರಲು ಇನ್ನೂ ಹೆಚ್ಚು ಜವಾಬ್ದಾರಿಗಳು ಕೊಡಲ್ಪಟ್ಟಿವೆ. ಕೊಡುವುದು ನಮ್ಮ ಆರ್ಥಿಕ ಮನೆವಾರ್ತೆಯ ಒಂದು ಅಭಿವ್ಯಕ್ತತೆ.

## ನಾನು ದೇವರಿಗೆ ಯಾಕೆ ಕೊಡುವುದು?

ಆರಾಧನೆಯ ಒಂದು ಕ್ರಿಯೆಯಾಗಿ

ಕೀರ್ತನೆಗಳು 96:8

**ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ; ಕಾಣಿಕೆಯೊಡನೆ ಆತನ ಅಂಗಳಗಳಿಗೆ ಬನ್ನಿರಿ.**


ಜ್ಞಾನೋಕ್ತಿಗಳು 3:9,10

**ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮ ಫಲದಿಂದಲೂ ಯೆಹೋವನನ್ನು ಸನ್ಮಾನಿಸು. ಹೀಗೆ ಮಾಡಿದರೆ ನಿನ್ನ ಕಣಜಗಳು ಸಮೃದ್ಧಿಯಿಂದ ತುಂಬುವವು, ತೊಟ್ಟಿಗಳಲ್ಲಿ ದ್ರಾಕ್ಷಾರಸವು ತುಂಬಿ ತುಳುಕುವದು.**

1 ಪೂರ್ವಕಾಲವೃತ್ತಾಂತ 29:10-14,16

**ಅನಂತರ ದಾವೀದನು ನೆರೆದ ಸಭೆಯ ಮುಂದೆ ಯೆಹೋವನನ್ನು ಸ್ತುತಿಸಿ ಹೇಳಿದ್ದೇನೆಂದರೆ – ನಮ್ಮ ಪಿತೃವಾಗಿರುವ ಇಸ್ರಾಯೇಲನ ದೇವರೇ ಯೆಹೋವನೇ ಯುಗಯುಗಾಂತರಗಳಲ್ಲಿ ನಿನಗೆ ಕೊಂಡಾಟವಾಗಲಿ. ಯೆಹೋವಾ, ಮಹಿಮ ಪ್ರತಾಪ ವೈಭವ ಪರಾಕ್ರಮ ಪ್ರಭಾವಗಳು ನಿನ್ನವು; ಭೂಮ್ಯಾಕಾಶಗಳಲ್ಲಿರುವದೆಲ್ಲಾ ನಿನ್ನದೇ. ಯೆಹೋವನೇ ರಾಜ್ಯವು ನಿನ್ನದು; ನೀನು ಮಹೋನ್ನತವಾಗಿ ಸರ್ವವನ್ನೂ ಆಳುವವನಾಗಿರುತ್ತೀ. ಪ್ರಭಾವೈಶ್ವರ್ಯಗಳು ನಿನ್ನ ಸನ್ನಿಧಿಯಿಂದ ಬರುತ್ತವೆ. ನೀನು ಸರ್ವಾಧಿಕಾರಿಯು; ಬಲ ಪರಾಕ್ರಮಗಳು ನಿನ್ನ ಹಸ್ತದಲ್ಲಿರುತ್ತವೆ; ಎಲ್ಲಾ ದೊಡ್ಡಸ್ತಿಕೆಗು ಶಕ್ತಿಗೂ ನೀನೇ ಮೂಲನು ಆದದರಿಂದ ನಮ್ಮ ದೇವರೇ, ನಾವು ನಿನಗೆ ಕೃತಜ್ಞತಾಸ್ತುತಿ ಮಾಡುತ್ತಾ ನಿನ್ನ ಪ್ರಭಾವವುಳ್ಳ ನಾಮವನ್ನು ಕೀರ್ತಿಸುತ್ತೇವೆ. ನಾವು ಈ ಪ್ರಕಾರ ಸ್ವೇಚ್ಛೆಯಿಂದ ಕಾಣಿಕೆಗಳನ್ನು ಸಮರ್ಪಿಸಲು ಶಕ್ತಿ ಹೊಂದಿದ್ದಕ್ಕೆ ನಾನಾಗಲಿ ನನ್ನ ಪ್ರಜೆಗಳಾಗಳಿ ಎಷ್ಟರವರು? ಸಮಸ್ತವು ನಿನ್ನಿಂದಲೇ; ನೀನು ಕೊಟ್ಟದ್ದನ್ನೇ ನಿನಗೆ ಕೊಟ್ಟೆವು. ನಮ್ಮ ದೇವರಾದ ಯೇಹೋವನೇ, ನಿನ್ನ ಪರಿಶುದ್ಧ ನಾಮಕೊಸ್ಕರ ಆಲಯ ಕಟ್ಟಿಸಬೇಕೆಂದು ಸಂಗ್ರಹಿಸಿಟ್ಟಿರುವ ಈ ಎಲ್ಲಾ ವಸ್ತುಗಳು ನಿನ್ನಿಂದಲೇ ನಮಗೆ ದೊರೆಕಿದವು; ಇವೆಲ್ಲಾ ನಿನ್ನವೇ.**

ಕೊಡುವುದು ಆರಾಧನೆಯಾಗಿದೆ ಯಾಕೆಂದರೆ ನೀವು ನಿಮ್ಮ ಕಾಣಿಕೆಯನ್ನು ಸಮರ್ಪಿಸುವಾಗ ನೀವು "ದೇವರೇ, ನಾನು ನನ್ನನ್ನೇ ಮತ್ತು ನೀನು ನನಗೆ ಕೊಟ್ಟಿದ್ದನ್ನು ನಿನಗೆ ಸಮರ್ಪಿಸುತ್ತೇನೆ. (ವೇಳೆ; ಸಾಮರ್ಥ್ಯ) ನಿನಗೆ ಧನ್ಯವಾದಗಳು ಅದನ್ನು ನಿನ್ನ ಮಹಿಮೆಗಾಗಿ ಸ್ವೀಕರಿಸು; ಎಂದು ಹೇಳುತ್ತೇವೆ.




ಬೈಬಲ್ ನಲ್ಲಿ ಕಾಣಿಕೆಗಳ / ಕೊಡುವುದರ ಕುರಿತು ಹೇಳುವ ೩೦೦ಕ್ಕಿಂತಲೂ ಹೆಚ್ಚು ಉಲ್ಲೇಖಗಳಿವೆ. ಬೈಬಲ್ ನಲ್ಲಿ ಕೊಡುವುದು ಒಂದು ಪವಿತ್ರ ಆಚರಣೆ ಮತ್ತು ಆರಾಧನೆಯಾಗಿದ್ದು ತಮ್ಮನ್ನೇ ದೇವರಿಗೆ ಸಮರ್ಪಿಸಿಕೊಳ್ಳುವ ಒಂದು ಅದ್ಭುತಕರವೂ ಸಂತೋಷಕರವೂ ಆದ ಸಮಯವಾಗಿತ್ತು ದೇವರಿಗೆ ಕೊಡುವುದು ಒಂದು ಗೌರವ ಇಂದು ಪರಿಗಣಿಸಲಾಗಿತ್ತು. ಅದೊಂದು ಪವಿತ್ರ ಆರಾಧನೆಯಾಗಿತ್ತು.

ಕೊಡುವುದು ವಿಧೇಯತೆ ಮತ್ತು ಭರವಸೆಯ ಕ್ರಿಯೆಯಾಗಿದೆ

ಮಲಾಕಿಯ 3:9,10

**ದಶಮಾಂಶ ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ ಇವುಗಳನ್ನೇ ನೀವು ಅಂದರೆ ಈ ಜನಾಂಗದವರೆಲ್ಲಾ ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು ಆಹಾರ ಶೂನ್ಯವಾಗದಂತೆ ನೀವು ದಶಮಾಂಶ ಯಾವತ್ತನ್ನೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರಗಳನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ.**

ಲೂಕ 6:38

**ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರ ಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು.**

ಕೊಡುವುದು ಎಲ್ಲವುಗಳ ಮೇಲೆಯೂ ದೇವರ ಪ್ರಭುತ್ವವನ್ನು ಒಪ್ಪಿಕೊಳ್ಳುತ್ತದೆ; ನಿಮ್ಮ, ನಿಮ್ಮ ಹಣದ ಮತ್ತು ಎಲ್ಲವುಗಳ ಮೇಲೂ ನಮ್ಮ ಕಾಣಿಕೆಯೊಂದಿಗೆ ನಾವು ದೇವರನ್ನು ಸನ್ಮಾನಿಸುತ್ತೇವೆ.

ಕೊಡುವುದು ದೇವರು ನಿಮಗೆ ಒದಗಿಸುವಾತನೆಂದು ಆತನಲ್ಲಿ ನಿಮ್ಮ ಭರವಸೆಯನ್ನು ತೋರಿಸುತ್ತದೆ; ನೀವು ಎಲ್ಲವನ್ನೂ ಆತನಿಗೆ ಅಧೀನ ಪಡಿಸಲು ಒಪ್ಪುತ್ತೀರಿ. ಕೊಡುವುದು

ಒಂದು ಬಿತ್ತುವ ಕ್ರಿಯೆ/ಇತರರಿಗೆ ಆಶೀರ್ವಾದವನ್ನು ಬಿಡುಗಡೆ ಮಾಡುವುದು.

2 ಕೊರಿಂಥದವರಿಗೆ 9:6–8
**ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು; ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು ಎಂದು ತಿಳುಕೊಳ್ಳಿರಿ. ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ; ದುಃಖದಿಂದಾಗಲಿ ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು; ಯಾಕೆಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು. ದೇವರು ಸಕಲ ವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವದಕ್ಕೆ ಶಕ್ತನಾಗಿದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು.**

ಫಿಲಿಪ್ಪಿಯವರಿಗೆ 4: 15,16,19
**ಇದಲ್ಲದೆ ಫಿಲಿಪ್ಪಿಯವರೇ ನಾನು ಮೊದಲು ನಿಮ್ಮಲ್ಲಿ ಸುವಾರ್ತೆಯನ್ನು ಸಾರಿ ಮಕೆದೋನ್ಯದಿಂದ ಹೊರಟು ಹೋದಾಗ ಕೊಡುವ ಕೊಳ್ಳುವ ವಿಷಯದಲ್ಲಿ ನಿಮ್ಮ ಹೊರತು ಬೇರೆ ಯಾವ ಸಭೆಗೂ ನನಗೂ ಸಂಬಂಧವಿರಲಿಲ್ಲವೆಂದು ನೀವೂ ಬಲ್ಲಿರಿ. ನಾನು ಥೆಸಲೋನಿಕದಲ್ಲಿದ್ದಾಗಲೂ ನೀವು ಒಂದೆರಡು ಸಾರಿ ನನ್ನ ಕೊರತೆಯನ್ನು ನೀಗಿಸುವದಕ್ಕೆ ಕೊಟ್ಟು ಕಳುಹಿಸಿದಿರಲ್ಲಾ. ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು.**

ಇನ್ನೊಬ್ಬರಿಗೆ ಒಂದು ಆಶೀರ್ವಾದವಾಗಿದ್ದು ಅವರಿಗೆ ಒಳ್ಳೆಯದನ್ನು ಹಂಚುವ ನಮ್ಮ ಜವಾಬ್ದಾರಿಯನ್ನು ಕೊಡುವಿಕೆಯು ನೆರವೇರಿಸುತ್ತದೆ. ದೇವಜನರ ಕೊಡುವಿಕೆಯಿಂದ ಭೂಲೋಕದ ದೇವರ ಕೆಲಸವು ನಡೆಯಬೇಕಾಗಿದೆ ಇನ್ನೊಬ್ಬರಿಗೆ ಒಂದು ಆಶೀರ್ವಾದವಾಗಲು ನಾವು ಆಶೀರ್ವದಿಸಲ್ಪಟ್ಟಿದ್ದೇವೆ.

## ದಶಮಾಂಶ, ಕಾಣಿಕೆಗಳು, ದಾನಗಳು (ಧರ್ಮಕಾರ್ಯಗಳು)

ಆದಿಕಾಂಡ 14:20
**ಪರಾತ್ಪರನಾದ ದೇವರು ನಿನ್ನ ಶತ್ರುಗಳನ್ನು ನಿನ್ನ ಕೈಗೆ ಒಪ್ಪಿಸಿದ್ದಕ್ಕಾಗಿ ಆತನಿಗೆ ಸ್ತೋತ್ರ ಎಂದು ಹೇಳಿದನು ಅಬ್ರಾಮನು ತಾನು ಗೆದ್ದು ತಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಅವನಿಗೆ ಕೊಟ್ಟನು.**

ಅಬ್ರಹಾಮನು ಅವನ ದಶಮಾಂಶವನ್ನು ಕೊಟ್ಟನು – ಇದು 'ದಶಮಾಂಶ' ಎಂದು ಹೇಳಿರುವ ಮೊದಲ ಬಾರಿ

ದಶಮಾಂಶವು ಸರಳವಾಗಿ, ನೀನು ದೇವರಿಂದ ಪಡೆದವರ ಹತ್ತರಲ್ಲಿ ಒಂದು ಭಾಗವನ್ನು ಕೊಡುವುದು. ನಿಮ್ಮ ಎಲ್ಲಾ ಬೆಳೆಗಳ ಪ್ರಥಮ ಫಲ.

ಜ್ಞಾನೋಕ್ತಿಗಳು 3:9
**ನಿನ್ನ ಆದಾಯದಿಂದಲೂ ಬೆಳೆದು ಪ್ರಥಮ ಫಲದಿಂದಲೂ ಯೆಹೋವನನ್ನು ಸನ್ಮಾನಿಸು**

ಮಲಾಕಿಯ 3:8–11
**ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದು ಕೊಳ್ಳುತ್ತಿದ್ದೀರಿ ನಿನ್ನಿಂದ ಏನು ಕದ್ದು ಕೊಂಡಿದ್ದೇವೆ ಎಂದು ಕೊಳ್ಳುತ್ತೀರೋ? ದಶಮಾಂಶ ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ ನೀವು ಅಂದರೆ ಈ ಜನಾಂಗದವರೆಲ್ಲಾ ನಿನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು ಆಹಾರ ಶೂನ್ಯವಾಗದಂತೆ ನೀವು ದಶಮಾಂಶ ಯಾವತ್ತಾನ್ನೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟುಸುವರವನ್ನು ಸುರಿಸುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷೆಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ.**

ದೇವರು ಹಣವನ್ನೆತ್ತಲು ದಶಮಾಂಶವನ್ನು ಉಪಯೋಗಿಸುವುದಿಲ್ಲ, ಯಾಕೆಂದರೆ ಆತನಿಗೆ ಏನೂ ಬೇಕಾಗಿಲ್ಲ. ಆತನ ಮಕ್ಕಳು ಕರ್ತನಿಗಾಗಿ ಒಂದು ಭಾಗವನ್ನು ಪ್ರತ್ಯೇಕವಾಗಿರಬೇಕೆಂದು ಆತನು ಬೋಧಿಸುತ್ತಾನೆ. ಪ್ರತಿಯೊಬ್ಬರೂ, ದೇವರ ಸೇವಕರು ಕೂಡ ಹತ್ತರಲ್ಲಿ ಒಂದು ಪಾಲನ್ನು ದೇವರಿಗೆ ಕೊಡಬೇಕು!

**ದೇವರು ದಶಮಾಂಶದ ವಿಷಯದಲ್ಲಿ ಗಂಭೀರನಾಗಿದ್ದಾನೆ. ದಶಮಾಂಶ ಕೊಡದಿರುವುದು ದೇವರನ್ನು ಕದಿಯುವುದು**

ಅರಣ್ಯಕಾಂಡ 18:36
**ನೀನು ಲೇವಿಯರಿಗೆ ಹೀಗೆ ಆಜ್ಞಾಪಿಸಬೇಕು – ನಿಮ್ಮ ಸ್ವಂತಕ್ಕಾಗಿ ನಾನು ನೇಮಿಸಿರುವ ಹತ್ತನೆಯ ಪಾಲನ್ನು ನೀವು ಇಸ್ರೇಯೇಲ್ಯರಿಂದ ತೆಗೆದುಕೊಳ್ಳುವಾಗ ಅದರಲ್ಲಿ ಹತ್ತನೆಯ ಪಾಲನ್ನು ಪ್ರತ್ಯೇಕಿಸಿ ಯೆಹೋವನಿಗೆ ಸಮರ್ಪಿಸಬೇಕು.**

ದೇವರಲ್ಲಿ ನಮ್ಮ ಹಣದ ಅಗತ್ಯವಿಲ್ಲ  ಎಲ್ಲವೂ ಈಗಾಗಲೇ ಆತನವುಗಳೇ ಆಗಿವೆ. ಆದಾಗ್ಯೂ ದಶಮಾಂಶವನ್ನು ಕೊಡುವುದು ಹಣಕಾಸಿನ ವಿಷಯದಲ್ಲಿ ದೇವರಿಗೆ ನಮ್ಮ ಅಧೀನತೆಯನ್ನು ತೋರಿಸುವ ಒಂದು ವಿಧವಾಗಿದೆ.

**ದಶಮಾಂಶವನ್ನು ಕೊಡುವವನಿಗೆ ದೊರಕುವ ಆಶೀರ್ವಾದಗಳು:**

ವೈರಿಗೆ ನೀವು ದಶಮ ಭಾಗವನ್ನು ಕೊಡುವುದು ಬೇಡವಾಗಿದೆ, ಯಾಕೆಂದರೆ ದಶಮಾಂಶ ಕೊಡುವುದು ನೀವು ನಿಮ್ಮ ಹಣವನ್ನು ದೇವರೊಂದಿಗೆ ಒಡಂಬಡಿಕೆಯಲ್ಲಿ ಹಾಕುತ್ತೀರಿ.

ಒಡಂಬಡಿಕೆಯಲ್ಲಿ, ನೀವು ಆರ್ಥಿಕ ಒಡಂಬಡಿಕೆಯ ಸೂತ್ರಗಳೊಡನೆ ಕೆಲಸಮಾಡಿ ನ್ಯಾಯವಾಗಿ ನಿಮಗೆ ಸೇರಿದ ದೇವರ ವಾಗ್ದಾನಗಳನ್ನು ನೋಡುವ ನಿರೀಕ್ಷೆಯುಳ್ಳವರಾಗಿರಬೇಕು.

- ನಿಮ್ಮ ಹಣಕಾಸಿನಲ್ಲಿ ಒಡಂಬಡಿಕೆಯ ಆಶೀರ್ವಾದಗಳು
- ದಶಮಾಂಶವನ್ನು ಕೊಡುವುದು ನಿಮ್ಮ ಹಣಕಾಸಿನ ಮೇಲೆ ಪರಲೋಕದ ದ್ವಾರಗಳನ್ನು ತೆರೆಯುವುದು.
- ನಿಮ್ಮ ಹಣಕಾಸಿನ ವೈರಿಯಿಂದ ನಿಮ್ಮನ್ನು ರಕ್ಷಿಸಿತ್ತದೆ.
- ದಶಮಾಂಶ ಕೊಡುವುದು ಲೌಕಿಕ ಆಶೀರ್ವಾದಗಳನ್ನು ಬಿಡುಗಡೆ ಮಾಡುತ್ತದೆ.

## ಈಗ ಕೂಡ ನಾವು ದಶಮಾಂಶವನ್ನು ಕೊಡಬೇಕಾಗಿರುವುದಕ್ಕೆ ಕಾರಣ

- ಧರ್ಮಶಾಸ್ತ್ರವು ಬರುವ ಮೊದಲು ಕೂಡ ದಶಮಾಂಶವನ್ನು ಕೊಡುವ ಪದ್ಧತಿ ಇತ್ತು, ಆದುದರಿಂದ ಅದು ಧರ್ಮಶಾಸ್ತ್ರವು ಕೊಡಲ್ಪಟ್ಟದ್ದರ ಪರಿಣಾಮವಲ್ಲ.

ಆದಿಕಾಂಡ 14:20
**ಪರಾತ್ಪರನಾದ ದೇವರು ನಿನ್ನ ಶತ್ರುಗಳನ್ನು ನಿನ್ನ ಕೈಗೆ ಒಪ್ಪಿಸಿದ್ದಕ್ಕಾಗಿ ಆತನಿಗೆ ಸ್ತೋತ್ರ ಎಂದು ಹೇಳಿದನು.**

ಅಬ್ರಹಾಮನು ಮೋಶೆಗೂ ಧರ್ಮಶಾಸ್ತ್ರಕ್ಕೂ 400 ವರ್ಷಗಳ ಹಿಂದೆಯೇ ದಶಮಾಂಶವನ್ನು ಕೊಟ್ಟನು.

ಆದಿಕಾಂಡ 29:22
**ಆಗ ಲಾಬಾನನು ಆ ಸ್ಥಳದವರೆಲ್ಲರನ್ನು ಕರೆಸಿ ಔತಣವನ್ನು ಮಾಡಿಸಿದನು**

ಇಸಾಕನು ಮೋಶಗೂ ಧರ್ಮಶಾಸ್ತ್ರಕ್ಕೂ ಸುಮಾರು 350 ಹಿಂದೆಯೇ ದಶಮಾಂಸವನ್ನು ಕೊಟ್ಟನು.

ದಶಮಾಂಶವನ್ನು ಕೊಡುವ ಅಭ್ಯಾಸವು ಒಂದು ಒಡಂಬಡಿಕೆಯ ಸಂಬಂಧದ ಅಭಿವ್ಯಕ್ತತೆಯಾಗಿತ್ತು, ಅದು ಧರ್ಮಶಾಸ್ತ್ರದ ಒಂದು ಭಾಗವಾಗಿರಲಿಲ್ಲ. ನಮ್ಮ 'ಒಡಂಬಡಿಕೆ ಸಂಬಂದವು ಇನ್ನೂ ಅಸ್ತಿತ್ವದಲ್ಲಿದೆ, ಹೀಗಾಗಿ ದಶಮಾಂಶವನ್ನು ಕೊಡುವುದು ಅಗತ್ಯವಾಗಿದೆ.

- ದಶಮಾಂಶವನ್ನು ಕೊಡುವುದು ಶಿಲುಬೆಯಲ್ಲಿ ಅಂತ್ಯವಾಗಲಿಲ್ಲ.

ನಿಲ್ಲಿಸಲ್ಪಡುವ ಅಥವಾ ಬದಲಾವಣೆಯಾಗುವ ಪ್ರತಿಯೊಂದು ಘಟನೆಗೂ ಆ ಬದಲಾವಣೆಗಳನ್ನು ಗುರುತಿಸಿ ಹೇಳುವ ನಿರ್ದಿಷ್ಟ ಪರಿಶುದ್ಧಗ್ರಂಥ ಭಾಗಗಳು ಹೊಸ ಒಡಂಬಡಿಕೆಯಲ್ಲಿ ಇವೆ. ಹೊಸ ಒಡಂಬಡಿಕೆಯಲ್ಲಿ ನಿರ್ದಿಷ್ಟವಾಗಿ ಹೇಳದಿದ್ದರೆ – ಬದಲಾವಣೆಗೆ ಬೈಬಲ್ ನ ಆಧಾರವಿಲ್ಲ. ದಶಮಾಂಶದ ಕೊಡುವಿಕೆಯನ್ನು ನಿಲ್ಲಿಸುವ ಅಥವಾ ಬದಲಾಯಿಸುವ ಹೊಸ ಒಡಂಬಡಿಕೆಯ ಯಾವ ವಚನವೂ ಇಲ್ಲ. ದೇವರೊಂದಿಗೆ ಆರ್ಥಿಕ ಒಡಂಬಡಿಕೆಯ ಸಂಬಂಧವು ಬದಲಾಗಲಿಲ್ಲ. ನಾವು ಈಗಲೂ ನಮ್ಮ ದಶಮಾಂಶದೊಂದಿಗೆ ದೇವರನ್ನು ಪ್ರೀತಿಸಿ ಆರಾಧಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ.

- ದಶಮಾಂಶವನ್ನು ಕೊಡಬೇಕೆಂದು ಯೇಸು ಹೇಳಿದ್ದಾನೆ.

ಮತ್ತಾಯ 23:23
**ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಮರುಗ ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತೀರಿ ಸರಿ ಆದರೆ ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು, ಅಂದರೆ ನ್ಯಾಯವನ್ನು ಕರುಣೆಯನ್ನೂ ನಂಬಿಕೆಯನ್ನು ಬಿಟ್ಟು ಬಿಟ್ಟರಿ. ಇವುಗಳನ್ನು ಮಾಡಬೇಕಿತ್ತು; ಅವುಗಳನ್ನು ಬಿಡಬಾರದು.**

- ಹೊಸ ಒಡಂಬಡಿಕೆಯ ನಮ್ಮ ಮಹಾಯಾಜಕನಾದ ಯೇಸು ದಶಮಾಂಶವನ್ನು ಸ್ವೀಕರಿಸುತ್ತಾನೆ.

ಇಬ್ರಿಯರಿಗೆ 7:8
**ಇದಲ್ಲದೆ ಲೇವಿಯರ ಕ್ರಮವನ್ನು ನೋಡಿದರೆ ಸಾಯತಕ್ಕ ಮನುಷ್ಯರು ದಶಮಾಂಶಗಳನ್ನು ತಕ್ಕೊಳ್ಳುತ್ತಾರೆ; ಆದರೆ ಮೆಲ್ಕಿಜೆದೇಕನ ಕ್ರಮವನ್ನು ನೋಡಿದರೆ ಜೀವಿಸುತ್ತಿದ್ದಾನೆಂದು ಸಾಕ್ಷಿ ಹೊಂದಿರುವವನು ತಕ್ಕೊಳ್ಳುತ್ತಾನೆ. ದಶಮಾಂಶವನ್ನು ಕೊಡುವುದು ಈಗಲೂ ಪ್ರಚಾರದಲ್ಲಿ ಅದನ್ನು ಇಂದೂ ದೇವರಿಗೆ ಕೊಡತಕ್ಕದ್ದು.**

## ಕಾಣಿಕೆಗಳು

ಇದು ನೀವು ಉದಾರವಾಗಿ ಬಿತ್ತುವ ಬೀಜವಾಗಿದೆ.

2 ಕೊರಿಂಥದವರಿಗೆ 9:6-8

**ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು; ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು ಎಂದು ತಿಳುಕೊಳ್ಳಿರಿ. ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ; ದುಃಖದಿಂದಾಗಲಿ ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು, ಯಾಕೆಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು. ದೇವರು ಸಕಲ ವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವುದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು. ಉಪಕಾರಿಯ ವಿಷಯದಲ್ಲಿ - ಅವನು ಬಡವರಿಗೆ ಧಾರಾಳವಾಗಿ ಕೊಟ್ಟನು; ಅವನ ನೀತಿಯ ಫಲವು ಸದಾಕಾಲವು ಇರುವದು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.**

## ದಾನಗಳು ಮತ್ತು ಧರ್ಮಕಾಯಗಳು

ಮತ್ತಾಯ 6: 1-4

**ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ; ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತಿರ ನಿಮಗೆ ಫಲದೊರೆಯದು. ಆದ್ದರಿಂದ ನೀನು ಧರ್ಮಕೊಡುವಾಗ ನಿನ್ನ ಮುಂದೆ ಕೊಂಬೂದಿಸಬೇಡ; ಜನರಿಂದ ಹೊಗಳಿಸಿಕೊಳ್ಳಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದ್ದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೀನಾದರೆ ಧರ್ಮಕೊಡುವಾಗ ನೀನು ಧರ್ಮಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲ ಕೊಡುವನು.**

ಮತ್ತಾಯ 25:40

**ಅದಕ್ಕೆ ಅರಸನು - ಈ ನನ್ನ ಸಹೋದರರಲ್ಲಿ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು.**

ಯಾಕೋಬನು 1:27

**ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನು ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ.**

ಜ್ಞಾನೋಕ್ತಿಗಳು 19:17

**ಬಡವರಿಗೆ ದಯೆತೋರಿಸುವವನು ಯೆಹೋವನಿಗೆ ಸಾಲಕೊಡುವವನು; ಆ ಉಪಕಾರಕ್ಕೆ ಯೆಹೋವನೇ ಪ್ರತ್ಯುಪಕಾರ ಮಾಡುವನು.**

ಕೊರತೆಯಲ್ಲಿರುವ ನಂಬಿಕೆಯ ಮನೆಯವರಿಗೆ ಕೊಡುವುದು, ಅಥವಾ ಬಡವರಿಗೆ ಸಾಲಕೊಡುವುದು', ಬಡವರ ಮತ್ತು ಅಸಹಾಯಕ ಜನರ ಸಹಾಯದ ಉದ್ದೇಶವುಳ್ಳದ್ದು.

ಇದು ದಶಮ ಭಾಗ ಮತ್ತು ಕಾಣಿಕೆಗಳಲ್ಲದೆ ಹೆಚ್ಚಾಗಿ ಕೊಡುವುದು. ನಾವು ಈ ತ್ಯಾಗ ಮಾಡಲು ಆಯ್ಕೆ ಮಾಡುವುದು.

## ಕೊಡುವ ಸೇವೆ

ರೋಮಾಪುರದವರಿಗೆ 12:6-8

**ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸವರಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿ ಹೇಳುವವನು ಬುದ್ಧಿ ಹೇಳುವುದರಲ್ಲಿಯೂ ನಿರತನಾಗಿರಲಿ ದಾನ ಕೊಡುವವನು ಯಥಾರ್ಥ ಮನಸ್ಸಿನಿಂದ ಕೊಡಲಿ ಹಿರಿತನ ನಡಿಸುವವನು ಆಸಕ್ತಿಯಿಂದ ನಡಿಸಲಿ ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ**

ಕೆಲವು ವಿಶ್ವಾಸಿಗಳಿಗೆ ದೇವರು ಆತನ ರಾಜ್ಯದ ಸೇವೆಗಾಗಿ ಯಥೇಚ್ಛವಾಗಿ ಕೊಡುವುದಕ್ಕಾಗಿ ಕೃಪೆಯನ್ನು ಸಮೃದ್ಧಿಯಾದ ಐಶ್ವರ್ಯವನ್ನು ದಾನ ಮಾಡಿದ್ದಾನೆ. ಇದು ಅವರ ಸೇವೆ.

## ಸಾಮಾನ್ಯ ಪ್ರಶ್ನೆಗಳು ಮತ್ತು ಉತ್ತರಗಳು

- **ದಶಮಾಂಶವನ್ನು ಸ್ಥಳೀಯ ಸಭೆಗೆ ಕೊಡಬೇಕೋ?**

ಹೌದು, ನಿಮ್ಮ ದಶಮಾಂಶವನ್ನು ನಿಮ್ಮ ಸ್ಥಳೀಯ ಸಭೆಗೆ (ಭಂಡಾರಕ್ಕೆ) ಸೇರಿದ್ದೆಂದು ನಾವು ನಂಬುತ್ತೇವೆ. ಯಾಕೆಂದರೆ ನೀವು ಆತ್ಮಿಕ ಆಹಾರ, ಪೋಷಣೆ, ಪಾಲನೆ ಮತ್ತು ಸಹಾಯವನ್ನು ಇಲ್ಲಿ ಹೊಂದುವುದು. ಹಳೆ



ಒಡಂಬಡಿಕೆಯಲ್ಲಿ ಅದನ್ನು ದೇವರ ಆಲಯದ ಭಂಡಾರಕ್ಕೆ ತೆಗೆದುಕೊಡು ಹೋಗುವುದು ಪದ್ಧತಿಯಾಗಿತ್ತು. ಆದಾಗ್ಯೂ ಎಪಿಸಿ ಸಭೆಯಲ್ಲಿ ನಾವು ಕೊಡುವ ವಿಷಯದಲ್ಲಿ ಯಾವ ವ್ಯಕ್ತಿಯ ದಾಖಲೆಯನ್ನು ಇಟ್ಟುಕೊಳ್ಳುವುದಿಲ್ಲ. ಹೀಗಾಗಿ, ಈ ವಿಷಯದಲ್ಲಿ ನಿಮ್ಮ ಮನಸ್ಸಿಗೆ ತೋಚಿದಂತೆ ನೀವು ಮಾಡಬಹುದು.

- **ನೀವು ಇತರ ಕ್ರೈಸ್ತ ಸೇವೆಗಳಿಗೆ ಕೊಡುವುದು ಸರಿಯೋ?**

ಹೌದು, ನಿಮ್ಮ ದಶಮಾಂಶ ಮತ್ತು ಕಾಣಿಕೆಗಳನ್ನು ನಿಮ್ಮ ಸ್ಥಳೀಯ ಸಭೆಗೆ ಕೊಟ್ಟ ಬಳಿಕ, ಕರ್ತನು ನಿಮ್ಮ ಹೃದಯಗಳಲ್ಲಿ ಭಾರ ಇರಿಸಿದ ಪ್ರಕಾರ ನೀವು ಇತರ ಕ್ರೈಸ್ತ ಸೇವೆಗಳಿಗೆ ಸಹಾಯ ನೀಡುವುದು ಸ್ವಾಗತಾರ್ಹ!

- **ಅಗತ್ಯವುಳ್ಳ ಒಬ್ಬ ಸಹೋದರರಿಗೆ /ಸಹೋದರಿಗೆ ನಾನು ಆರ್ಥಿಕ ಸಹಾಯ ಕೊಡಬೇಕೋ?**

ಹೌದು, ಕರ್ತನು ನಿಮಗೆ ಅನುಕೂಲ ಕೊಟ್ಟಂತೆ ನಾವು ಒಬ್ಬರಿಗೊಬ್ಬರು ಸಹಾಯ ಮಾಡಬೇಕು.

> ಗಲಾತ್ಯದವರಿಗೆ 6:10
> **ಆದುದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ ಮಾಡೋಣ.**

ತಮ್ಮ ಸ್ವಂತ ಅಗತ್ಯಕ್ಕಾಗಿ 'ಕ್ರೈಸ್ತ' ಸಂಬಂಧಗಳನ್ನು ಶೋಷಿಸುವ ಜನರ ವಿಷಯದಲ್ಲಿ ಎಚ್ಚರವಾಗಿರ್ರಿ.

> 2 ಥೆಸಲೋನಿಕದವರಿಗೆ 3:6-13
> **ಸಹೋದರರೇ, ನಿಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ. ನೀವು ನಮ್ಮನ್ನು ಅನುಸರಿಸಿ ಹೇಗೆ ನಡೆಯಬೇಕೆಂದು ನೀವೇ ಬಲ್ಲಿರಿ; ನಾವು ನಿಮ್ಮಲ್ಲಿ ಅಕ್ರಮವಾಗಿ ನಡೆಯಲಿಲ್ಲ; ನಾವು ಹಣಕೊಡದೆ ಯಾರ ಬಳಿಯಲ್ಲಿಯೂ ಊಟ ಮಾಡಲಿಲ್ಲ; ನಿಮ್ಮಲ್ಲಿ ಒಬ್ಬರಿಗೂ ಭಾರವಾಗಬಾರದೆಂದು ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲು ದುಡಿದು ಜೀವನ ಮಾಡಿಕೊಂಡೆವು. ನಿಮ್ಮಿಂದ ಪೋಷಣೆ ಹೊಂದುವದಕ್ಕೆ ನಮಗೆ ಹಕ್ಕಿಲ್ಲವೆಂದು ಹಾಗೆ ಮಾಡಲಿಲ್ಲ, ನೀವು ನಮ್ಮನ್ನು ಅನುಸರಿಸುವುದಕ್ಕಾಗಿ ನಿಮಗೆ ಮಾದರಿಯಾಗಿ ಇರೋಣವೆಂದೇ ಮಾಡಿದೆವು. ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ ಕೆಲಸ ಮಾಡಲೊಲ್ಲದವನು ಊಟ ಮಾಡಬಾರದೆಂದು ನಿಮಗೆ ಆಜ್ಞಾಪಿಸಿದೆವಷ್ಟೆ. ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ. ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕೆಂದು ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಾವು ಪ್ರಬೋಧಿಸುತ್ತೇವೆ. ಸಹೋದರರೇ, ನೀವಾದರೂ ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳಬೇಡಿರಿ.**

ನಾನು ಸಾಲ ಕೊಡುವುದನ್ನು ತೆಗೆದುಕೊಳ್ಳುವುದನ್ನೂ ಪ್ರೋತ್ಸಾಹಿಸುವುದಿಲ್ಲ. ಸಭೆಯಲ್ಲಿ ನೀವು ಯಾರಿಗಾದರೂ ಸಾಲ ಕೊಡುವುದಾದರೆ, ನಿಮ್ಮ ಸ್ವಂತ ಬುದ್ಧಿಯನ್ನು ಪ್ರಯೋಗಿಸಿ ಕೊಡಿರಿ ಮತ್ತು ಸಭೆಯು ಇದಕ್ಕೆ ಜವಾಬ್ದಾರಿಯಲ್ಲ ಎಂದು ದಯವಿಟ್ಟು ಗಮನಿಸಿರಿ.

- **ಬೋಧಕರಿಂದ ನಾನು ಆರ್ಥಿಕವಾಗಿ ಉಪಯೋಗಿಸಿಕೊಂಡು ಸುಲಿಗೆಗೊಳಗಾಗದಂತೆ ಹೇಗೆ ನನ್ನನ್ನು ಕಾಪಾಡಿಕೊಳ್ಳಲಿ?**

ನಿಮ್ಮ ಕೊಡುವಿಕೆಯ ಒಂದು ಯೋಜನೆ ಹಾಕಿಕೊಳ್ಳಿರಿ – ಇದರಿಂದ ಮನೆಯಲ್ಲಿ ಥಕ್ಕನೆ ಕಾಣಿಸಿಕೊಳ್ಳುವ ಅಥವಾ ಪ್ರಸಂಗದಲ್ಲಿ ಕೇಳುವ ಬೋಧಕರಿಂದ ಮನೋಭಾವಿಕರಾಗಿ ಪ್ರೇರಿಸಲ್ಪಡುವುದರಿಂದ ತಪ್ಪಿಸಿಕೊಳ್ಳುವಿರಿ.

ದೇವರ ಆತ್ಮನಿಂದ ನಡಿಸಿಕೊಳ್ಳಿರಿ – ನಿಮ್ಮ ಮನೋಭಾವದಿಂದ ಮತ್ತು ಬೇಡಿಕೆಗಳಿಂದ ಅಥವಾ ನಿಮ್ಮ ಮುಂದಿಟ್ಟ ಅಗತ್ಯತೆಗಳಿಂದ ಕೂಡ ಅಲ್ಲ

ಒತ್ತಾಯಗಳಿಂದ ಅಥವಾ ಸುಳ್ಳು ವಾಗ್ದಾನಗಳಿಂದಾಗಿ ಕೊಡದಂತೆ ನಿರ್ಧರಿಸಿರಿ. 'ಆತ್ಮಿಕ ಆಶೀರ್ವಾದಕ್ಕಾಗಿ ಕೊಡಬೇಕೆಂದು ಒಬ್ಬ ಬೋಧಕರು ಕೇಳಿದೇ ಆದರೆ ನಿರೀಕ್ಷಿಸಿರಿ. ತಮ್ಮ ಸ್ವಂತ ಸೇವೆ ಮತ್ತು ಯೋಜನೆಗಳಿಗಾಗಿ ಜನರನ್ನು ಶೋಷಿಸುವವರ ಕುರಿತು ಎಚ್ಚರವಾಗಿರ್ರಿ.

- **ಹಣದ ಉಳಿತಾಯ ಮಾಡುವುದು/ಅಥವಾ ಆಸ್ತಿ ಕೊಂಡುಕೊಳ್ಳುವುದು/ಅಥವಾ ಆಸ್ತಿ ಕೊಂಡುಕೊಳ್ಳುವುದು ಸರಿಯೇ? ಹಾಗೂ ಸ್ಟಾಕ್ಸ್, ಬಾಂಡ್ಸ್ ಮ್ಯೂಚುವಲ್ ಫಂಡ್ ಇತ್ಯಾದಿಗಳಲ್ಲಿ ಅಥವ ಲಾಭ ಪಡೆಯಲು ಇತರ ಉಳಿತಾಯಗಳಲ್ಲಿ?**

ದೇವರು ನಮಗೆ ಕೊಟ್ಟದ್ದರಲ್ಲಿ ಒಂದು ಭಾಗವನ್ನು ಉಳಿತಾಯವಾಗಿ ಇರಿಸಿದರೆ, ಅದರ ಭದ್ರತೆಯ ಮೇಲೆ ನಾವು ಆಧರಿಸುವುದಿಲ್ಲ.

ನಮ್ಮ ಪೂರ್ಣ ಒದಗಿಸುವಿಕೆಗೆ ದೇವರೇ ನಮ್ಮ ಮೂಲ

> ಮತ್ತಾಯ 6:19-24
> **ಭೂ ಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳಬೇಡಿರಿ; ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬು ಹತ್ತಿ ಕೆಟ್ಟು ಹೋಗುವುದು; ಇಲ್ಲಿ ಕಳ್ಳರು ಕನ್ನ ಕೊರೆದು ಕದಿಯುವರು, ಆದರೆ ಪರಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು**

**ನುಸಿಹಿಡಿದು ಕಿಲುಬು ಹತ್ತಿ ಕೆಟ್ಟು ಹೋಗುವುದಿಲ್ಲ. ಅಲ್ಲಿ ಕಳ್ಳರು ಕನ್ನಾ ಕೊರೆಯುವದೂ ಇಲ್ಲ ಕದಿಯುವುದೂ ಇಲ್ಲ ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸು ಇರುವುದಷ್ಟೇ. ಕಣ್ಣು ದೇಹಕ್ಕೆ ದೀಪವಾಗಿದೆ; ಹೀಗಿರುವಲ್ಲಿ ನಿನ್ನ ಕಣ್ಣು ನೆಟ್ಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವುದು. ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ ನಿನ್ನ ದೇಹವೆಲ್ಲಾ ಕತ್ತಲಾಗಿರುವುದು. ಹಾಗಾದರೆ ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟನ್ನಬೇಕು! ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು ನೀವು ದೇವರನ್ನೂ ಧನವನ್ನು ಕೂಡ ಸೇವಿಸಲಾರಿರಿ.**

> ಜ್ಞಾನೋಕ್ತಿಗಳು 6:6 - 8
> **ಸೋಮಾರಿಯೇ ಇರುವೆಯ ಹತ್ತಿರ ಹೋಗಿ ಅದರೆ ನಡವಳಿಕೆಯನ್ನು ನೋಡಿ ಜ್ಞಾನವನ್ನು ತಂದುಕೋ ಅದಕ್ಕೆ ನಾಯಕ ಅಧಿಕಾರಿ ಪ್ರಭುಗಳಿಲ್ಲದಿದ್ದರೂ ಸುಗ್ಗಿಯಲ್ಲಿ ತನ್ನ ತೀನಿಯನ್ನು ಕೂಡಿಸಿಡುವದು, ಕೊಯ್ಲಿನ ಕಾಲದಲ್ಲಿ ತನಗೆ ಬೇಕಾದಷ್ಟು ಆಹಾರವನ್ನು ಸಂಗ್ರಹಿಸಿಟ್ಟುಕೊಳ್ಳುವದು.**

ಹಳೆ ಒಡಂಬಡಿಕೆಯಲ್ಲಿ ನಾವು ದುಬಾರಿ ಬಡ್ಡಿಗೆ ಸಾಲಕೊಡುವುದರ ಕುರಿತು ಎಚ್ಚರಿಸಲ್ಪಟ್ಟಿರುವಾಗ ಅದರ ಅರ್ಥ ಕಾನೂನು ಬಾಹಿರವಾದ ಅಥವಾ ಅತಿ ಬಡ್ಡಿ ಆಸಕ್ತಿ ಎಂದು ನೋಡುತ್ತೇವೆ.

ಕೆಲವು ಉದಾಹರಣೆಗಳು

> ಯಾಜಕ ಕಾಂಡ 25:37
> **ನೀವು ಅವನಿಗೆ ಸಾಲಕೊಟ್ಟರೆ ಬಡ್ಡಿಯನ್ನು ಕೇಳಬಾರದು, ದವಸ ಕೊಟ್ಟರೆ ಲಾಭವನ್ನು ಕೇಳಬಾರದು.**
>
> ಕೀರ್ತನೆಗಳು 15:5
> **ಅವನು ಸಾಲಕ್ಕೆ ಬಡ್ಡಿ ಕೇಳದವನೂ ನಿರಪರಾಧಿಯ ಕೇಡಿಗಾಗಿ ಲಂಚ ತೆಗೆದುಕೊಳ್ಳದವನೂ ಆಗಿರಬೇಕು ಇಂಥವನು ಎಂದಿಗೂ ಕದಲುವುದಿಲ್ಲ**
>
> ಜ್ಞಾನೋಕ್ತಿಗಳು 28;8
> **ಬಡ್ಡಿ ಬಾಚಿಗಳಿಂದ ವೃದ್ಧಿಯಾದ ಆಸ್ತಿಯು ಬಡವರಲ್ಲಿ ಕನಿಕರ ಪಡುವವನ ಪಾಲಾಗುವುದು.**

ಆದಾಗ್ಯೂ, ನ್ಯಾಯಬದ್ಧವಾಗಿ ಇನ್ನೊಬ್ಬನನ್ನು ಸುಲುಕೊಳ್ಳದೆ ಹೆಚ್ಚಿಸಿಕೊಳ್ಳುವ ಸಂಪತ್ತು ದೇವರ ಮುಂದೆ ಸ್ವೀಕೃತ ಎಂದು ನಾವು ನಂಬುತ್ತೇವೆ. ಉದಾಹರಣೆಗಾಗಿ, ಹಾಗಾದರೆ ನೀನು ನನ್ನ ಹಣವನ್ನು ಸಾಹುಕಾರನ ಕೈಯಲ್ಲಿ ಯಾಕೆ ಕೊಡಲಿಲ್ಲ? ಆ ಮೇಲೆ ನಾನು ಬಂದು ಅದನ್ನು ಬಡ್ಡಿಸಹಿತ ತೆಗೆದುಕೊಳ್ಳುತ್ತಿದ್ದೆನು ಎಂದು ಕರ್ತನಾದ ಯೇಸು ಆತನ ಉದಾಹರಣೆಯಲ್ಲಿ ಯಜಮಾನನು ಅನ್ನುವುದನ್ನು ಹೇಳುತ್ತಾನೆ. (ಲೂಕ 19:23)

ಇದರಲ್ಲಿ ನಿನ್ನ ಮನಸ್ಸಾಕ್ಷಿ ಹೇಳುವಂತೆ ನಡೆಯುವುದು ಸ್ವಾಗತಾರ್ಹ

### ಎಚ್ಚರವಾಗಿರಿ

- ಹಣದ ಮೇಲೆ ಪ್ರೀತಿ ಕುರಿತು + ದುರಾಶೆ

> ಜ್ಞಾನೋಕ್ತಿಗಳು 15:27
> **ಸೂರೆ ಮಾಡುವವನು ಸ್ವಂತ ಮನೆಯನ್ನು ಬಾಧಿಸುವನು. ಲಂಚವನ್ನೊಪ್ಪದವನು ಸುಖವಾಗಿ ಬಾಳುವನು.**
>
> 1 ತಿಮೊಥೆಯನಿಗೆ 6:10
> **ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತ ನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ.**

- ಸ್ವಭೋಗ ಮತ್ತು ಸ್ವಾರ್ಥಗಳ ಕುರಿತು

> ಲೂಕ 12:15-21
> **ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಧಾರವಾಗುವುದಿಲ್ಲ ಎಂದು ಹೇಳಿ ಒಂದು ಸಾಮ್ಯವನ್ನು ಹೇಳಿದನು. ಅದೇನೆಂದರೆ - ಒಬ್ಬಾನೊಬ್ಬ ಐಶ್ವರ್ಯವಂತನ ಭೂಮಿಯು ಚೆನ್ನಾಗಿ ಬೆಳೆಯಿತು. ಆಗ ಅವನು ತನ್ನೊಳಗೆ - ನಾನೇನು ಮಾಡಲಿ ? ನನ್ನ ಬೆಳೆಯನ್ನು ತುಂಬಿಡುವುದಕ್ಕೆ ನನಗೆ ಸ್ಥಳವಿಲ್ಲವಲ್ಲಾ ಎಂದು ಆಲೋಚಿಸಿ - ಒಂದು ಕೆಲಸಮಾಡುತ್ತೇನೆ; ನನ್ನ ಕಣಜಗಳನ್ನು ಕೀಳಿಸಿ ಅವುಗಳಿಗಿಂತ ದೊಡ್ಡ ಕಣಜಗಳನ್ನು ಕಟ್ಟಿಸುವೆನು. ಅಲ್ಲಿ ನನ್ನ ಎಲ್ಲಾ ದವಸದಾನ್ಯಗಳನ್ನು ಸರಕುಗಳನ್ನು ತುಂಬಿಟ್ಟು ನನ್ನ ಜೀವಾತ್ಮಕ್ಕೆ ಜೀವವೇ ಅನೇಕ ವರುಷಗಳಿಗೆ ಬೇಕಾದಷ್ಟು ಸರಕು ನಿನಗೆ ಬಿದ್ದದೆ; ವಿಶ್ರಮಿಸಿಕೋ, ಊಟಮಾಡು ಕುಡಿ, ಸುಖಪಡು ಎಂದು ಹೇಳುವೆನು ಅಂದುಕೊಂಡನು. ಆದರೆ ದೇವರು ಅವನಿಗೆ ಬುದ್ಧಿಹೀನನು ನೀನು ಈ ಹೊತ್ತು ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು; ಆಗ ನೀನು ಸಿದ್ಧ ಮಾಡಿಟ್ಟಿರುವದು ಯಾರಿಗಾಗುವದು ಎಂದು ಹೇಳಿದನು ತನಗೋಸ್ಕರ ದ್ರವ್ಯವನ್ನಿಟ್ಟುಕೊಂಡು ದೇವರ ವಿಷಯಗಳಲ್ಲಿ ಐಶ್ವರ್ಯವಂತನಾಗದೆ ಇರುವವನು ಅವನಂತೆಯೇ ಇದ್ದಾನೆ ಅಂದನು.**

- ಅಹಂಕಾರಿಗಳ ಕುರಿತು

  1 ತಿಮೊಥೆಯನಿಗೆ 6:17–19

  **ಇಹಲೋಕ ವಿಷಯದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ಥಿರವಾದ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡದೆ ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಬೇಕೆಂತಲೂ ವಾಸ್ತವವಾದ ಜೀವವನ್ನು ಹೊಂದುವದಕ್ಕೋಸ್ಕರ ಅವರು ಒಳ್ಳೇದನ್ನು ಮಾಡುವವರೂ ಸತ್ಕಾರ್ಯಗಳಲ್ಲಿ ಐಶ್ವರ್ಯವಂತರೂ ದಾನಧರ್ಮಗಳನ್ನು ಮಾಡುವವರೂ ಪರೋಪಕಾರ ಮಾಡುವವರೂ ಆಗಿದ್ದು ಮುಂದಿನ ಕಾಲಕ್ಕೆ ಒಳ್ಳೇ ಅಸ್ತಿವಾರವಾಗುವಂಥವುಗಳನ್ನು ತಮಗೆ ಕೂಡಿಸಿಟ್ಟುಕೊಳ್ಳಬೇಕೆಂತಲೂ ಅವರಿಗೆ ಆಜ್ಞಾಪಿಸು.**

- **ಸಣ್ಣ ವಿಷಯಗಳಲ್ಲಿ ನಂಬಿಗಸ್ತನಾಗಿರು – ದೇವರು ನಿನ್ನನ್ನು ಅನೇಕ ವಿಷಯಗಳ ಮೇಲೆ ಅಧಿಕಾರಿಯನ್ನಾಗಿ ಮಾಡುವನು**
- **ಹಣದ ವಿಷಯದಲ್ಲಿ ನಂಬಿಗಸ್ತನಾಗಿರು – ದೇವರು ನಿನ್ನ ವಶಕ್ಕೆ ನಿಜವಾದ ಐಶ್ವರ್ಯವನ್ನು ಕೊಡುವನು**
- **ಇನ್ನೊಬ್ಬನ ಸೊತ್ತುಗಳ ವಿಷಯದಲ್ಲಿ ನಂಬಿಗಸ್ತನಾಗಿರು – ದೇವರು ನಿನಗೆ ಸ್ವಂತ ಸೊತ್ತುಗಳನ್ನು ಕೊಡುವನು.**

## ಮುಖ್ಯ ಕಂಠಪಾಠ ವಚನಗಳು

ಜ್ಞಾನೋಕ್ತಿಗಳು 3:9

**ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮ ಫಲದಿಂದಲೂ ಯೆಹೋವನನ್ನು ಸನ್ಮಾನಿಸು.**

ಗಲಾತ್ಯದವರಿಗೆ 6:10

**ಆದದರಿಂದ ಸಮಯವಿರಲಾಗಿ ಎಲ್ಲರಿಗೂ ಒಳ್ಳೆಯದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ.**

# ಅನ್ವಯ

1. ದೇವರ ಒಳ್ಳೇ ಮನೆವಾರ್ತೆಯವನ ಗುಣಲಕ್ಷಣಗಳಾವುವು?

2. ನಾನು ಹೇಗೆ ದೇವರು ನನಗೆ ಕೊಟ್ಟ ಎಲ್ಲವುಗಳ ಮೇಲೆ ಒಬ್ಬ ಒಳ್ಳೆಯ ಆರ್ಥಿಕ ಮನೆವಾರ್ತೆಯವನಾಗಬಹುದು ?

# 14

# ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

(ನಮ್ಮಲ್ಲಿ ಪ್ರತಿಯೊಬ್ಬರ ಜೀವಿತಕ್ಕಾಗಿ ದೇವರ ಒಂದು ನಿರ್ದಿಷ್ಟ ಉದ್ದೇಶವಿದೆ ಎಂದು ಬೋಧಿಸಿ, ಅದನ್ನು ಕಂಡುಕೊಂಡು ಅನುಸರಿಸಿ ನೆರವೇರಿಸುವಂತೆ ನಮ್ಮನ್ನು ಪ್ರೋತ್ಸಾಹಿಸಲು ಈ ಪಾಠವು ರೂಪಿಸಲ್ಪಟ್ಟಿದೆ.

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು ಎಂಬ ಎಪಿಸಿಯ ಉಚಿತ ಪ್ರಕಟನೆಯನ್ನು ತೆಗೆದುಕೊಂಡು ಈ ವಿಷಯವನ್ನು ಸಂಪೂರ್ಣ ಅಧ್ಯಯನ ಮಾಡಿರಿ. ಇಲ್ಲಿಂದ  ಈ ಪಾಠದ ರೂಪುರೇಖೆಯು ಆ ಪುಸ್ತಕದ ಅಧ್ಯಾಯ 1 ರ ಆಧಾರದಲ್ಲಿದೆ.)

**ಪೀಠಿಕೆ**

ನಮ್ಮಲ್ಲಿ ಪ್ರತಿಯೊಬ್ಬರ ಜೀವನಕ್ಕೂ ದೇವರ  ಒಂದು ಯೋಜನೆಯಿದೆ ಮತ್ತು ನಾವು ಆ ಯೋಜನೆಗಳನ್ನು ನೆರವೇರಿಸಲು ಮುಂದುವರಿಯಬೇಕು. ಈ ಪಾಠವು ಮೊಟ್ಟ ಮೊದಲು ನಮಗೆ, ನಮ್ಮಲ್ಲಿ ಪ್ರತಿಯೊಬ್ಬರ ವಿಷಯದಲ್ಲಿ ದೇವರಿಗೆ ಒಂದು ವಿಶಿಷ್ಟ ಉದ್ದೇಶವಿದೆ ಎಂದು ಗ್ರಹಿಸಲು ಸಹಾಯ ಮಾಡುತ್ತದೆ. ಅದರ ಕುರಿತು ನಮಗೆ ಸ್ಪಷ್ಟವಾದಾಗ ನಾವು ಏನು ಬೆಲೆ ಕೊಡಬೇಕಾದರೂ ನಮ್ಮ ಜೀವನಗಳಿಗಾಗಿರುವ ಆತನ ಉದ್ದೇಶಗಳನ್ನು ನೆರವೇರಿಸಲು ಸಿದ್ಧವಾಗಿರಬೇಕು.

**ನಿಮ್ಮ ಜೀವಿತಕ್ಕೆ ದೇವರು ಒಂದು ಉದ್ದೇಶವನ್ನು ಹೊಂದಿದ್ದಾನೆ ಎಂದು ತಿಳಿಯುವುದು**

**ದೇವರು ಯೋಜನೆ, ಉದ್ದೇಶ, ರಚನೆ ಮತ್ತು ಉದ್ದಿಷ್ಟಗುರಿ ಹೊಂದಿದ ದೇವರಾಗಿದ್ದಾನೆ**

ದೇವರು ಯೋಜನೆ, ಉದ್ದೇಶ, ರಚನೆ ಮತ್ತು ಉದ್ದಿಷ್ಟಗುರಿ ಹೊಂದಿದ ದೇವರಾಗಿದ್ದಾನೆ ಗೊತ್ತು ಗುರಿಯಿಲ್ಲದೆ ಅಥವಾ ಸ್ವೇಚ್ಛಾನುಸಾರ ಕೆಲಸ ಮಾಡುವಾತನಲ್ಲ.

ಅಪೊಸ್ತಲರ ಕೃತ್ಯಗಳು 15:18

**ಆದಿಯಿಂದ ಕಾರ್ಯಗಳನ್ನು ತಿಳಿಯ ಪಡಿಸುವ ಕರ್ತನು ನುಡಿಯುತ್ತಾನೆ**

ಯೆರೆಮೀಯಾ 46:10

**ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ; ನನ್ನ ಸಂಕಲ್ಪವು ನಿಲ್ಲುವದು; ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನ ಕಾಲದಲ್ಲಿಯೇ ಅರುಹಿದ್ದೇನೆ**.

**ದೇವರ ಶ್ರೇಷ್ಟಯೋಜನೆಯು**

- ಜನರು ರಕ್ಷಿಸಲ್ಪಡುವುದು
- ಅವರನ್ನು ಸತ್ಯದ ಜ್ಞಾನಕ್ಕೆ ತರುವುದು
- ಅವರನ್ನು ಆತನ ಮಗನಾದ ಯೇಸು ಕ್ರಿಸ್ತನ ಸಾರೂಪ್ಯಕ್ಕೆ ತರುವುದು

**ದೇವರಿಗೆ ಆತನ ಉದ್ದೇಶವಿದೆ 'ಸಾಮಾನ್ಯ ಉದ್ದೇಶ' ಅಥವಾ' ಶ್ರೇಷ್ಠ ಯೋಜನೆ'**

ದೇವರಿಗೆ ಒಂದು 'ಶ್ರೇಷ್ಠ ಯೋಜನೆಯಿದೆ ಇಂದು ಭೂಮಿಯ ಮೇಲೆ ಪ್ರಕಟವಾಗುತ್ತಿರುವ ಮತ್ತು ಆತನು ಕಾರ್ಯರೂಪಕ್ಕೆ  ತರುತ್ತಿರುವ ಒಂದು ಶಾಶ್ವತ ಯೋಜನೆ.

**ದೇವರಿಗೆ ನಿಮ್ಮಲ್ಲಿ ಒಂದು ಉದ್ದೇಶವಿದೆ** "ಒಂದು ನಿರ್ದಿಷ್ಟಯೋಜನೆ".

**ನಿಮ್ಮ ಜೀವನಕ್ಕೆ ಆತನ ಒಂದು ನೀಲಿ ನಕ್ಷೆಯಿದೆ.**

**ನಿಮ್ಮ ಜೀವನಕ್ಕಾಗಿ ದೇವರ ಒಂದು ಕನಸಿದೆ.**

**ದೇವರು ನಿಮ್ಮನ್ನು ಒಂದು ಉದ್ದೇಶಕ್ಕಾಗಿ ಸೃಷ್ಟಿಸಿದನು.**

ನಿಮಗಾಗಿ ದೇವರು ಇಟ್ಟುಕೊಂಡಿದ್ದ ಯೋಜನೆಯನ್ನು ನೀವು ನೆರವೇರಿಸಲಾಗುವಂತೆ ಆತನು ನಿಮ್ಮನ್ನು ರೂಪಿಸಿದ್ದಾನೆ

ಕೀರ್ತನೆಗಳು 139: 16

**ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು ನನ್ನ ಆಯುಷ್ಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು.**

ಜ್ಞಾಪಕವಿಡಿರಿ ನಿಮಗಾಗಿ ದೇವರಿಗೆ ಒಂದು ಯೋಜನೆಯಿದೆ ನೀವು ಭೂಮಿಯ ಮೇಲೆ ನೆರವೇರಿಬೇಕೆಂದು ದೇವರು ಮೊದಲೇ ಯೋಜಿಸಿರುವ ಕಾರ್ಯಗಳು ನಿಮಗೆ ಇವೆ.

> ಎಫೆಸದವರಿಗೆ 2;10
> **ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು.**

ನೀವು ಹೋಗಬೇಕೆಂದು ದೇವರು ಅಪೇಕ್ಷಿಸಿರುವ ಸ್ಥಳಗಳಿವೆ; ನೀವು ಸ್ಪರ್ಶಿಸಬೇಕೆಂದು ಆತನು ಅಪೇಕ್ಷಿಸುವ ಜನರು, ನೀವು ಪ್ರಭಾವ ಬೀರಬೇಕೆಂದು ಅಪೇಕ್ಷಿಸುವ ಜೀವಗಳು, ನೀವು ಸಾಧಿಸಬೇಕೆಂದು ಆತನು ಅಪೇಕ್ಷಿಸುವ ವಿಷಯಗಳು, ಪರಿವರ್ತಿಸಬೇಕಾದ ನಗರಗಳು, ನೀವು ಅಲುಗಾಡಿಸಬೇಕೆಂದಿರುವ ರಾಷ್ಟ್ರಗಳು ಇವೆ.

### ಜೀವಿಸುವುದು ಸರಳ; ದೇವರು ನಿಮಗಾಗಿ ಮಾಡಿರುವ ಯೋಜನೆಯನ್ನು ಕಂಡುಕೊಂಡು ಅದರಲ್ಲಿ ನಡೆಯಿರಿ.

ನಮಗಾಗಿ ಇರುವ ಆತನ ನಿರ್ದಿಷ್ಟ ಯೋಜನೆಯು ಆತನ "ಪ್ರಮುಖ ಯೋಜನೆ" ಯ ಒಂದು ಭಾಗವಾಗಿದೆ. ನಿಮ್ಮ ಜೀವನಕ್ಕಾಗಿ ದೇವರ ನಿರ್ದಿಷ್ಟ ಉದ್ದೇಶವನ್ನು ನೀವು ನೆರವೇರಿಸುತ್ತಾ ಹೋಗುವಾಗ, ನೀವು ಭೂಮಿಯ ಮೇಲೆ ದೇವರ ಸಾಮಾನ್ಯ ಉದ್ದೇಶವನ್ನು ನೆರವೇರಿಸಲು ಸಹಾಯಮಾಡುತ್ತಿರುವಿರಿ.

### ನಮಗಾಗಿ ದೇವರ ಯೋಜನೆಯು ಯಾವಾಗಲೂ ಒಳ್ಳೆಯದು!

ನಿಮಗಾಗಿ ದೇವರ ಯೋಜನೆಯು ಒಳ್ಳೆಯದು ಎಂದು ಮನವರಿಕೆ ಮಾಡಿಕೊಳ್ಳಿರಿ! ದೇವರು ನಿಮ್ಮ ಪಕ್ಷದಲ್ಲಿದ್ದಾನೆ, ನಿಮಗೆ ವಿರೋಧವಾಗಿಲ್ಲ. ನಿಮಗಾಗಿ ಆತನ ಯೋಜನೆಗಳು ಯಾವಾಗಲೂ ನಿಮ್ಮ ಶಾಲೋಮ್‌ಗಾಗಿ (ಒಳ್ಳೆಯದು, ಆರೋಗ್ಯ, ಸಂಪತ್ತು, ಜಯ ಸಮಾಧಾನಗಳಿಗಾಗಿ) ನಿಮಗಾಗಿ ದೇವರ ಯೋಜನೆಗಿಂತ ಉತ್ತಮವಾದದ್ದು ಮತ್ತೊಂದಿಲ್ಲ!

> ಯೆರೆಮೀಯ 29;11
> **ಇವರಿಗೆ ಗತಿಯಾಗಲಿ, ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಆಲೋಚನೆಗಳಲ್ಲ, ಹಿತದ ಯೋಚನೆಗಳೇ**

> ರೋಮಾಪುರದವರಿಗೆ 8:28
> **ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.**

### ದೇವರ ಯೋಜನೆಯನ್ನು ನೆರವೇರಿಸಲು ನಾವು ಆತನೊಂದಿಗೆ ಸಹಕರಿಸಬೇಕು.

> 1 ಕೊರಿಂಥದವರಿಗೆ 3:9
> **ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವೂ, ದೇವರ ಕಟ್ಟಡವೂ ಆಗಿದ್ದೀರಿ.**

ನಮ್ಮ ಜೀವನಕ್ಕಾಗಿರುವ ದೇವರ ಯೋಜನೆಯು ತನ್ನಷ್ಟಕ್ಕೆ ತಾನೇ ನೆರವೇರುವುದಿಲ್ಲ ನಮ್ಮ ಜೀವನಗಳಿಗೆ ದೇವರ ಯೋಜನೆ ಮತ್ತು ಉದ್ದೇಶಗಳ ನೆರವೇರಿಕೆಯು ನಮ್ಮ ಮೇಲಿದೆ. ಕೆಲವರು ದೇವರ ಯೋಜನೆಯನ್ನು ಪ್ರಾರಂಭಿಸದೆ ಇರಬಹುದು, ಕೆಲವರು ಒಂದು ಅಲ್ಪ ಪ್ರಮಾಣದಲ್ಲಿ ಮಾತ್ರವೇ ಮಾಡಬಹುದು. "ತನ್ನ ಓಟವನ್ನು ಮುಗಿಸಿದ" (ಶ್ರೇಷ್ಠ ಹೋರಾಟವನ್ನು ಕೊನೆಗಾಣಿಸಿದ) ಅಪೊಸ್ತಲನಾದ ಪೌಲನ ಕುರಿತು ಬೈಬಲ್ ಹೇಳುತ್ತದೆ.

ದೇವರು ಆತನ ಚಿತ್ತವನ್ನು ಪರಲೋಕದಲ್ಲಿ ಅಭಿವ್ಯಕ್ತಗೊಳಿಸುತ್ತಾನೆ. ಆದರೆ ಅದನ್ನು ಭೂಮಿಯ ಮೇಲೆ ನೆರವೇರಿಸಲು ಆತನು ತನ್ನ ಜನರ ಕಡೆಗೆ ನೋಡುತ್ತಾನೆ.

### ನಮ್ಮ ಜೀವನಗಳಿಗೆ ದೇವರ ಯೋಜನೆಯನ್ನು ಕಂಡುಕೊಂಡು ಅದನ್ನು ಅನುಸರಿಸಬೇಕು.

ನಮ್ಮ ಜೀವನಗಳಿಗೆ ದೇವರ ಯೋಜನೆಯೂ ಉದ್ದೇಶವೂ ಒಂದು ರಹಸ್ಯವಾಗಿರಬೇಕಾಗಿಲ್ಲ! ಕೆಲವರು ದೇವರ ಚಿತ್ತವು ಬಹು ರಹಸ್ಯವಾಗಿದ್ದು ನಮಗೆ ಅದನ್ನು ತಿಳಿಯಲಾಗದು ಎಂದು ಅಭಿಪ್ರಾಯವುಳ್ಳವರಾಗಿದ್ದಾರೆ ! ಇದು ಸಂಪೂರ್ಣ ಅಸತ್ಯ!

ನಮ್ಮ ಜೀವನಗಳಿಗೆ ಆತನ ಯೋಜನೆ ಮತ್ತು ಉದ್ದೇಶಗಳನ್ನು ನಾವು ಅದನ್ನು ಕಂಡುಕೊಳ್ಳಲು ಸಿದ್ಧರಾಗಿದ್ದೇವೆ ಅಂದರೆ ಆತನು ಅತ್ಯಧಿಕವಾಗಿ ಅವುಗಳನ್ನು ಪ್ರಕಟಪಡಿಸುತ್ತಾನೆ.

ಒಂಬತ್ತು ಮಾರ್ಗದರ್ಶಕಗಳಿವೆ. "ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು" ಪುಸ್ತಕದ ಅಧ್ಯಾಯ 2ನ್ನು ನೋಡಿರಿ) ನಮ್ಮ ಜೀವನಗಳಿಗೆ "ದೇವರ ನಡಿಸುವಿಕೆ ಮತ್ತು ದಿಕ್ಕು"ಗಳನ್ನು ಸೂಕ್ಷ್ಮವೇದಿಗಳಾಗಿ ತಿಳುಕೊಳ್ಳಲು ಸಹಾಯ ಮಾಡುವುದು.

**ದೇವರು ತನ್ನ ಯೋಜನೆಯನ್ನು ಉದ್ದೇಶವನ್ನೂ ನೆರವೇರಿಸಲು ನಿಮ್ಮನ್ನು ಸಿದ್ಧಗೊಳಿಸುವನು.**

ನೀವು ಸಿದ್ಧತೆ ಮಾಡಿಕೊಂಡರೆ, ಜಯವು ನಿಮ್ಮದಾಗುವುದು. ಸಿದ್ಧತೆಯ ಕಾಲವು ಎಂದೂ ವ್ಯರ್ಥ ಮಾಡಿದ ಕಾಲವಲ್ಲ ಎಂದು ಜ್ಞಾಪಕವಿಡಿರಿ ಕರೆಯು ದೊಡ್ಡದಾದಷ್ಟು ಸಿದ್ಧತೆಯತೆಯ ಕಾಲವು ದೊಡ್ಡದು ಎಂದು ನೆನಪಿಡಿರಿ.

**ದೇವರು ಕುಂದಿಲ್ಲದ ಪರಿಪೂರ್ಣ ಪಾತ್ರೆಗಳನ್ನು ನೋಡುತ್ತಿರುವುದಿಲ್ಲ**
**ಆತನು ತನಗೆ ಅಧೀನರಾದ ಪಾತ್ರೆಗಳನ್ನು ನೋಡುತ್ತಿದ್ದಾನೆ.**

**ಹಿಂದಿನ ಸೋಲುಗಳನ್ನು ಜಯಿಸಲು ದೇವರು ಸಹಾಯ ಮಾಡುತ್ತಾನೆ.**

ನಾವು ತಪ್ಪು ಮಾಡಬಹುದು, ಆದರೆ ದೇವರು ನಮ್ಮ ಸೋಲುಗಳನ್ನು ಜಯಿಸಿ ಆತನ ಕರೆಯನ್ನು ಮುಗಿಸಲು ಸಹಾಯ ಮಾಡುವನು. ನೀವು ಜಯಿಸಲು ಯಾವುದಾದರು ಬಲಹೀನತೆ ನಿಮ್ಮಲ್ಲಿದ್ದರ ಅದನ್ನು ಸೈತಾನನು ನಿಮಗೆ ವಿರೋಧವಾಗಿ ಉಪಯೋಗಿಸುವನು.

ದೇವರು ಕಾಲಕ್ಕಿಂತಲು ದೊಡ್ಡವನು ದೇವರು ನಮ್ಮ ತಪ್ಪುಗಳಗಿಂತಲೂ ದೊಡ್ಡವನು.

> 2 ಕೊರಿಂಥದವರಿಗೆ 4:7
> **ಬಲಾಧಿಕ್ಯವು ದೇವರಂದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವುದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು.**

ಅದು ನಮ್ಮ ನಮ್ಮಲ್ಲಿ ಕೆಲಸ ನಡಿಸುತ್ತಿರುವ ದೇವರ ಬಲ. ನಾವು ಮಣ್ಣಿನ ಪಾತ್ರೆಗಳು.

**ದೇವರ ಉದ್ದೇಶಗಳನ್ನು ನೆರವೇರಿಸಲು ಸೈತಾನನು ನಮಗೆ ಅಡ್ಡಿಮಾಡುವನು.**

ದೇವರು ಕೊಟ್ಟ ಕನಸು ಯಾವಾಗಲು ದೆವ್ವದ ವಿರೋಧವನ್ನು ಎದುರಿಸಬೇಕಾಗಿದೆ.

ವಿಳಂಬಗಳು ಯಾವಾಗಲು ದೇವರಿಂದ ಬಂದವುಗಳಲ್ಲ (ದಾನಿಯೇಲನು 10:2 –14). ನಮಗೆ ಬರುವ ಅದ್ಭುತಗಳನ್ನು ಸೈತಾನನು ತಡಮಾಡಲು ಪ್ರಯತ್ನಸಿ ನೀವು ದೇವರ ಅತ್ಯುನ್ನತ ಮತ್ತು ಅತ್ಯುತ್ತಮವಾದದ್ದನ್ನು ಹೊಂದದಂತೆ ಮಾಡಬಹುದು.



**ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲ ಎಂದು ತೋರಿಸುವದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು**

**ದೇವರ ಅತ್ಯುನ್ನತ ಮತ್ತು ಅತ್ಯುತ್ತಮವಾದದನ್ನು ತಲುಪಿರಿ**



**ದೇವರ ಕರೆಯಮೇಲೆ ಕೇಂದ್ರೀಕರಿಸಿ ನಿಲ್ಲಬೇಕು**

ಗಮನ ಬೇರೆಡೆಗೆ – ಗಮನವು ಸ್ಥಿರವಾಗಿಲ್ಲದಲ್ಲಿ ಸಮಯ ಮತ್ತು ಶಕ್ತಿ ಹಾಳು

ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿಕೊಳ್ಳಬೇಡ" ಎಂದು ದೇವರು ಹೇಳಿದ್ದಾನೆ (ಜ್ಞಾನೋಕ್ತಿಗಳು 4:27

**ನಮಗೆ ತಾಳ್ಮೆಬೇಕು**

ವಿಜಯದ ರುಚಿಯು ನಿಮ್ಮ ಹೋರಾಟದ ನೆನಪನ್ನು ಮೀರುತ್ತದೆ (ಮೈಕ್ ಮರ್ಡೋಕ್)

ನಿಮ್ಮ ತಾಳ್ಮೆಯು ಸೈತಾನನ ಬಲಕುಂದಿಸುತ್ತದೆ (ಮೈಕ್ ಮರ್ಡೋಕ್)

## ಮುಖ್ಯ ಕಂಠಪಾಠ ವಚನಗಳು

ಎಫೆಸದವರಿಗೆ 2:10

**ನಾವು ಆತನ ನಿರ್ಮಾಣ, ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ಮಾಡಿ ಬದುಕುವವರಾಗಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು.**

ಯೆರೆಮೀಯ 29:11

**ಇವರಿಗೆ ಗತಿಯಾಗಲಿ, ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿ ಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ ಹಿತದ ಯೋಚನೆಗಳೇ.**

ರೋಮಾಪುರದವರಿಗೆ 8:28

**ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ ಎಂದು ನಿಮಗೆ ಗೊತ್ತದೆ**

ನೀವು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ದೇವರಿಂದ ರೂಪಿಸಲ್ಪಟ್ಟಿದ್ದೀರಿ ಎಂದು ನಂಬಿರಿ

ನಿಮ್ಮ ಜೀವನಕ್ಕೆ ಆತನ ಕನಸನ್ನು ನಿಮಗೆ ಪ್ರಕಟಿಸಬೇಕೆಂದು ದೇವರಿಗೆ ಪ್ರಾರ್ಥಿಸಿರಿ, ಕೇಳಿರಿ, ಕ್ರಮವಾಗಿ ವಿಷಯಗಳು ನಿಮಗೆ ಸ್ಪಷ್ಟವಾಗುವವು

ನಿಮ್ಮ ಜೀವನಕ್ಕಿರುವ ಆತನ ಉದ್ದೇಶಕ್ಕಾಗಿ ನೀವು ಜೀವಿಸುವಿರಿ, ಅಲ್ಲದೆ ಅದಕ್ಕಿಂತ ಕಡಿಮೆಯಾಗಿರುವ ಯಾವುದಕ್ಕೂ ಒಪ್ಪಲಾರಿರಿ ಎಂದು ನಿರ್ಧರಿಸಿರಿ.

## ಅನ್ವಯ

1. ನನ್ನ ಜೀವನದ ಈ ಘಟ್ಟದಲ್ಲಿ ನನ್ನ ಜೀವನಕ್ಕಾಗಿ ದೇವರ ಉದ್ದೇಶ ಮತ್ತು ಕನಸಿನ ಪ್ರಜ್ಞೆ ನನಗಿದೆಯೋ?

2. ನನ್ನ ಜೀವನಕ್ಕಾಗಿ ಇರುವ ದೇವರ ಉದ್ದೇಶ ವನ್ನು ನಾನು ಹೇಗೆ ಕಂಡುಕೊಳ್ಳಬಹುದು?

3. ನಿಮ್ಮ ಜೀವನದಲ್ಲಿ ನೀವು ನೆರವೇರಿಸಬೇಕೆಂದು ದೇವರು ಅಪೇಕ್ಷಿಸುವವುಗಳು ಯಾವುವೆಂದು ನಿಮಗನಿಸುತ್ತದೆಂದು ಕೆಳಗೆ ಬರೆಯಿರಿ.

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

ಕರ್ತನಾದ ಯೇಸುವು, ಪ್ರತಿಯೊಬ್ಬ ವಿಶ್ವಾಸಿಯು ಪ್ರೌಢತೆಯ ಹಂತಕ್ಕೆ ಬರಬೇಕೆಂಬುದಾಗಿ ನೋಡಲು ಅಪೇಕ್ಷಿಸುತ್ತಾನೆ ಮತ್ತು ಈ ಲೋಕದಲ್ಲಿ, ಕೆಲಸದ ಸ್ಥಳದಲ್ಲಿ ಅಥವಾ ಬೇರೆ ಯಾವುದೇ ಕ್ಷೇತ್ರದಲ್ಲಿ, ಅವರು ದೇವರ "ಸೇವಕರು"ಗಳಾಗಿರುವಂತೆ ಬಿಡುಗಡೆ ಹೊಂದಿದವರಾಗಿದ್ದಾರೆ. ನಮ್ಮ ಏ.ಪಿ.ಸಿ. ಸಭೆಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ದೇವರ ಸೇವಕ ಎಂಬುದಾಗಿ ನಂಬುತ್ತೇವೆ ಮತ್ತು ಈ ಪ್ರಪಂಚಕ್ಕೆ ಕ್ರಿಸ್ತನನ್ನು ಸತ್ಯವಾಗಿ ಪ್ರತಿಬಿಂಬಿಸಲು ಮತ್ತು ದೇವರ ಕೆಲಸಗಳ, ಕಾರ್ಯಗಳನ್ನು ಮಾಡಲು ಅಧಿಕಾರ ಹೊಂದಿದ್ದೇವೆ.

ಅಸ್ತಿವಾರಗಳು ಎಂಬ ಪುಸ್ತಕವು ನಿಮ್ಮನ್ನು ದೇವರ ವಾಕ್ಯದಲ್ಲಿ ಮತ್ತು ಆತ್ಮನಲ್ಲಿ ಬಲಗೊಳಿಸಲು ರಚಿಸಲ್ಪಟ್ಟಿದೆ. 2 ತಿಮೊಥೆಯನಿಗೆ 3:16,17ರಲ್ಲಿ ವಿಶ್ಲೇಷಿಸಿರುವ, ಎಲ್ಲಾ ಒಳ್ಳೆಯ ಕಾರ್ಯಗಳನ್ನು ಮಾಡಲು ಪೂರ್ಣವಾಗಿ ನೀವು ತರಬೇತಿ ಹೊಂದಬಹುದಾಗಿದೆ.

ಹೊಸದಾದ ವಿಶ್ವಾಸಿಗಳು ಯೇಸು ಕ್ರಿಸ್ತನ ಶಿಷ್ಯರಾಗಿ ಕಂಡು ಬರುವುದಕ್ಕಾಗಿ ಪಾಠಗಳ ಸರಣಿಯನ್ನು ಈ ಪುಸ್ತಕ ಭಾಗ –1 ರ ಕೈಪಿಡಿ ಒಳಗೊಂಡಿದೆ.

ಆಶಿಷ್ ರಾಯಚೂರ್

ಆಲ್ ಪೀಪಲ್ಸ್ ಚರ್ಚ್
& ವರ್ಲ್ಡ್ ಔಟ್‌ರೀಚ್